ಶೂದ್ರ

ಅಂಬೇಡ್ಕರ್

(ಒಂದು ಮರುಚಿಂತನೆ)

DEVU PATTAR
GUTTIPETH,
SHAHAPUR-585223

YOU CANNOT TRAVEL ON THE PATH BEFORE
YOU HAVE BECOME THE PATH ITSELF.

— BUDDHA

ಅತಿಥಿ ಸಂಪಾದಕರು :
ಡಾ|| ಎಸ್. ಚಂದ್ರಶೇಖರ್

ಶೂದ್ರ ಪ್ರಕಾಶನ, ಬೆಂಗಳೂರು

ಶೂದ್ರಕ್ಕೆ ಚಂದಾ ಕಳಿಸಿ. ಆಜೀವ ಚಂದಾ ಬಾಬ್ತು ಕಂತುಂಗಳಲ್ಲಿ ಕೊಡುವವ ಸ್ವಲ್ಪ ಜಾಗ್ರತೆ ಕೊಟ್ಟರೆ ಒಳಿತು. ಚಂದಾದ ರೀತಿಯಲ್ಲಿ ನಾಲ್ಕೈದು ವರ್ಷ ಕೊಟ್ಟ ನಿಜವಾಗಿಯೂ ತೊಂದರೆಯಾಗುತ್ತದೆ. ಶೂದ್ರ ಬರದಿದ್ದರೆ ಪತ್ರ ಬರೆಯಿರಿ. ಚಂದ ವನ್ನು ಎಂ. ಓ. ಮೂಲಕ ಕಳುಹಿಸುವವರು ದಯವಿಟ್ಟು ಕೌಂಟರ್ ಭಾಗದಲ್ಲಿ ವಿಳಾ ಬರೆಯಿರಿ. ಲೇಖನ ಮತ್ತು ಕವನ ಕಳುಹಿಸುವವರು ರಿಪ್ಲೈ ಕಾರ್ಡಿಡಿ. ಚೆ ಮೂಲಕ ಕಳುಹಿಸುವವರು 10 ರೂ. ಹೆಚ್ಚುವರಿ ತುಂಬಿ.

ಅರ್ಹ ದಂಪತಿಗಳ ಗಮನಕ್ಕೆ

ಜನಸಂಖ್ಯಾ ಸ್ಫೋಟ–ದೇಶದ ಎಲ್ಲ ಸಮಸ್ಯೆಗಳಿಗೆ ಮೂಲ! ಕುಟುಂಬ ಸೇ ಸೌಲಭ್ಯಗಳನ್ನು ಪಡೆದುಕೊಂಡ ಅರ್ಹ ದಂಪತಿಗಳಿಗೆ ದೊರೆಯುವ ಸೌಲಭ್ಯಗಳು :

ಸಂತಾನ ನಿರೋಧ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ :

ಪ್ರತಿಯೊಬ್ಬ ಪುರುಷನಿಗೆ	....	150 ರೂ. (ನಗದು)
ಪ್ರತಿಯೊಬ್ಬ ಮಹಿಳೆಗೆ	....	110 ರೂ. (ನಗದು)

ವಂಕಿಧಾರಣೆ ಮಾಡಿಸಿಕೊಂಡ ಪ್ರತಿಯೊಬ್ಬ ಮಹಿಳೆಗೆ :

ವೈದ್ಯಕೀಯ ಗರ್ಭ ನಿವಾರಣೆಯ ನಂತರ	....	11 ರೂ. (ನಗದು)
ಉಳಿದ ಸಂದರ್ಭಗಳಲ್ಲಿ	....	8 ರೂ. (ನಗದು)

ಪ್ರತಿಯೊಂದು ಜಿಲ್ಲೆಯಲ್ಲೂ :

ಕುಟುಂಬ ಕಲ್ಯಾಣ ಅದೃಷ್ಟ ಬಹುಮಾನ ಯೋಜನೆ

(ಸಂತಾನ ನಿರೋಧ ಶಸ್ತ್ರಚಿಕಿತ್ಸಾ ಫಲಾನುಭವಿಗಳಿಗೆ)

1ನೆಯ ಬಹುಮಾನ	....	(ಒಂದು) ರೂ. 5000
2ನೆಯ ಬಹುಮಾನ (ತಲಾ 3000 ರೂ.ಗಳು)	....	(ಎರಡು) ರೂ. 6000
3ನೆಯ ಬಹುಮಾನ (ತಲಾ 1000 ರೂ.ಗಳು)	....	(ನಾಲ್ಕು) ರೂ. 4000
ಒಟ್ಟು ಬಹುಮಾನಗಳು	...	(ಏಳು) ರೂ. 15000

ಈ ಸೌಲಭ್ಯಗಳನ್ನು ಅರ್ಹ ದಂಪತಿಗಳು ಪಡೆದುಕೊಳ್ಳಬೇಕಾಗಿ ಕೋರಿದೆ.

ಪ್ರಕಟಣೆ :

ಸಮೂಹ ಶಿಕ್ಷಣ ಮತ್ತು ಮಾಧ್ಯಮ ವಿಭಾಗ,

ರಾಜ್ಯ ಕುಟುಂಬ ಕಲ್ಯಾಣ ಕಾರ್ಯಾಲಯ, ಬೆಂಗಳೂರು–560 00

ಮುಕ್ತ ಚರ್ಚೆಗಾಗಿ 'ಶೂದ್ರ' ತಿಂಗಳ ಪತ್ರಿಕೆ

ಅಂಬೇಡ್ಕರ್ ವಿಶೇಷಾಂಕ

DEVU PATTAR
GUTTIPETH,
SHAHAPUR-585223

ಅರ್ಪಣೆ :

ಮನುಷ್ಯ-ಮನುಷ್ಯರ ನಡುವೆ ಸಾಮರಸ್ಯಕ್ಕಾಗಿ
ಹೋರಾಡುತ್ತಿರುವ ಗೆಳೆಯರಿಗೆ

ಂಚಿಕೆ : 10–11 ಏಪ್ರಿಲ್ – ಮೇ 1993 ಸಂಪುಟ : 19

ಹಾಯಕ ಸಂಪಾದಕರು : ಜರಗನಹಳ್ಳಿ ಶಿವಶಂಕರ್ – ಸರ್ವಮಂಗಳಾ ಶ್ರೀಧರ್
ಕೆ. ಎನ್. ಅರುಣ್ – ಎಲ್. ಎನ್. ಮುಕುಂದರಾಜ್
ಕರೀಗೌಡ ಬೀಚನಹಳ್ಳಿ – ಚಂದ್ರಶೇಖರ ಉಪಾಲ

ರ್ಷಿಕ ಚಂದಾ : 65-00 ರೂ. ಪುಸ್ತಕ ಭಂಡಾರಗಳಿಗೆ 70-00 ರೂ.
ಜೀವ ಚಂದಾ : 500-00 ರೂ. (ನಾಲ್ಕು ಕಂತುಗಳಲ್ಲಿ) 550–00 ರೂ.

ಲೆ : 5-00 ರೂ. ದೂರವಾಣಿ : 643337

'ಶೂದ್ರ'ದ ವಿಳಾಸ :

ಶೂದ್ರ ಶ್ರೀನಿವಾಸ್, ನಂ. 824, 7ನೇ ಮೈನ್, ಇಸ್ರೋ ಲೇಔಟ್
ಬೆಂಗಳೂರು–560 078

ಒಂದು ಮಾತು

ಭಾರತದ ರಾಜಕೀಯ ಮತ್ತು ಸಾಮಾಜಿಕ ಸಂದರ್ಭಕ್ಕೆ ಗಾಂಧಿ ಮತ್ತು ಅಂಬೇಡ್ಕರ್‌ರವರು ಹೊಸ ಆಯಾಮಗಳನ್ನು ತಂದುಕೊಟ್ಟವರು. ಇವರಿಬ್ಬರಲ್ಲಿ ಯಾರು ಹೆಚ್ಚು ಯಾರು ಕಮ್ಮಿ ಎಂದು ಯೋಚಿಸುವುದು ತಪ್ಪು. ಒಟ್ಟಾರೆ ಒಂದು ಜಡಸಮಾಜಕ್ಕೆ ಚಲನಶೀಲತೆಯನ್ನು ತಂದುಕೊಟ್ಟವರು. ಇವರಿಬ್ಬರ ಕೊಡುಗೆಯನ್ನು ನಾನಾ ರೀತಿಯಲ್ಲಿ ಚರ್ಚಿಸಬಹುದು. ಆದರೆ ನಮ್ಮ ಜನ ಚರ್ಚೆ ಮತ್ತು ಆಚರಣೆಯನ್ನು ನಂಬದವರು, ಅಥವಾ ನಂಬಲು ಬೇಕಾಗಿರುವ ಮಾನಸಿಕ ಶಕ್ತಿ ನಾಪತ್ತೆಯಾಗಿರಬಹುದು. ಇಂಥ ಸಮಯದಲ್ಲಿ ಕೃತಕ ಆರಾಧನೆ ಅಸ್ತಿತ್ವವನ್ನು ಪಡೆಯುತ್ತದೆ. ಒಟ್ಟಾರೆ ಈ ಮಹಾನ್ ಶಕ್ತಿಗಳನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸಲಿಲ್ಲ. ಒಂದು ದೃಷ್ಟಿಯಿಂದ ಪಂಡಿತರಾಗಿ ನೋಡಲು ಪ್ರಯತ್ನಿಸಿದ್ದೇವೆ. ಇದರಿಂದ ಮತೀಯ ವಾದಿಗಳಿಗೆ ಅನುಕೂಲವಾಗಿದೆ.

ಡಾ॥ ಎಸ್. ಚಂದ್ರಶೇಖರ್‌ರವರು ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಮುಖ್ಯಸ್ಥರು. 'ಇತಿಹಾಸ' ಎಂದರೆ ಏನು ಎಂಬುದನ್ನು ಗಂಭೀರವಾಗಿ ತಿಳಿದವರು. ಇವರು ಅಂಬೇಡ್ಕರ್‌ರವರನ್ನು ಮರುಚಿಂತನೆಗೆ ತೊಡಗಿಸುವ ರೀತಿಯಲ್ಲಿ ಸಂಪಾದಿಸಿಕೊಟ್ಟಿದ್ದಾರೆ. ಈ ದೃಷ್ಟಿಯಿಂದ ಚಂದ್ರಶೇಖರ್‌ರವರಿಗೆ ಮತ್ತು ಲೇಖನಗಳನ್ನು ಹಾಗೂ ಪ್ರಶ್ನೆಗಳಿಗೆ ಉತ್ತರಿಸಿದ ಎಲ್ಲ ಗಣ್ಯರಿಗೂ ಶೂದ್ರ ಋಣಿಯಾಗಿದೆ. ಜಾಹಿರಾತು ಕೊಡಿಸಿ ಸಹಕರಿಸಿದ ಗೆಳೆಯರನ್ನು ಇಲ್ಲಿ ನೆನಪು ಮಾಡಿಕೊಳ್ಳುತ್ತೇವೆ.

— ಶೂದ್ರ ಶ್ರೀನಿವಾಸ್

ಈ ಸಂಚಿಕೆಯ ಪುಟಗಳಲ್ಲಿ

ಮುನ್ನುಡಿ — ಡಾ|| ಎಸ್. ಚಂದ್ರಶೇಖರ್ iv

ಡಾ|| ಅಂಬೇಡ್ಕರ್ ಮತ್ತು ಮಹಾರಾಷ್ಟ್ರ, ಆಂಧ್ರ ಹಾಗೂ
ಕರ್ನಾಟಕಗಳಲ್ಲಿನ ದಲಿತ ಚಳುವಳಿ — ಡಾ|| ಗೈಲ್ ಒಮ್‌ವೆಡ್ತ್ 1

ಅಂಬೇಡ್ಕರ್ ಅವರ ರಾಷ್ಟ್ರೀಯತಾ ಪರಿಕಲ್ಪನೆ ಮತ್ತು
ಭಾರತ ರಾಷ್ಟ್ರೀಯ ಚಳವಳಿ — ಎಸ್. ಚಂದ್ರಶೇಖರ್ 31

ಡಾ|| ಅಂಬೇಡ್ಕರ್ ಮತ್ತು ಮುಲ್ಕ್‌ರಾಜ್ ಆನಂದ್ ಮಾತುಕತೆ
— ಗಂಗಾಧರಮೂರ್ತಿ 43

ಭಾರತದಲ್ಲಿ ಜಾತಿ, ಸಮಾಜ ಮತ್ತು ಸಾಮಾಜಿಕ ಪರಿವರ್ತನೆ–
ಗಾಂಧಿ, ಅಂಬೇಡ್ಕರ್ ಮತ್ತು ಭಾರತೀಯ ಕಮ್ಯುನಿಸ್ಟರ ನಿಲುವು :
— ವಲೇರಿಯನ್ ರೋಡ್ರಿಗ್ಸ್ 50

ಮಾನವೀಯ ಸಮಾಜವಾದ: ಅಂಬೇಡ್ಕರ್ ದೃಷ್ಟಿಕೋನ
— ಸಂದೀಪ್ ಶಾಸ್ತ್ರಿ 70

ಡಾ|| ಅಂಬೇಡ್ಕರ್ ಮತ್ತು ಅಸ್ಪೃಶ್ಯರ ರಾಜಕೀಯ ಸಂಘಟನೆ
— ಡಾ|| ಜೆ.ಎಸ್. ಸದಾನಂದ್ 78

ಪ್ರಶ್ನೋತ್ತರಗಳು :

ರಾಜಕೀಯ ಅಧಿಕಾರ ಮತ್ತು ದಲಿತ ಹೋರಾಟ — ಮರಿಸ್ವಾಮಿ 97

ದಲಿತರು ಹಾಗೂ ಎಡಪಕ್ಷಗಳು — ಡಾ|| ಕೆ. ಗೋಪಾಲನ್ ಕುಟ್ಟಿ 101

ಎಲ್ಲ ಪ್ರಶ್ನೆಗಳಿಗೂ ಒಂದೇ ಉತ್ತರ — ಡಿ.ಆರ್. ನಾಗರಾಜ್ 103

ನಾನು ಕಂಡ ಗಾಂಧಿ ಮತ್ತು ಅಂಬೇಡ್ಕರ್
— ಯು.ಆರ್. ಅನಂತಮೂರ್ತಿ 107

'ಜನಪಂಥೀಯ' ರಾಜಕಾರಣ ಬೇಕು
— ಬರಗೂರು ರಾಮಚಂದ್ರಪ್ಪ 108

ಕೂಡಿ ನಡೆಸಬೇಕಾದ ಹೋರಾಟ — ರಮೇಶ್ ಬಂದಗದ್ದೆ 111

ಹೋರಾಟ ಬಲಗೊಳ್ಳುವುದು ವಿವೇಕ ಮತ್ತು ಸಜ್ಜನಿಕೆಯಿಂದ
— ಪಿ. ಲಂಕೇಶ್ 114

ದಲಿತರ ಅಂತರಂಗದ ಸಂಘರ್ಷ — ಡಾ|| ಸಿದ್ದಲಿಂಗಯ್ಯ 116

ಮುನ್ನುಡಿ

ಇಪ್ಪತ್ತನೇ ಶತಮಾನದ ಭಾರತೀಯ ನಾಯಕರಲ್ಲಿ ಅಂಬೇಡ್ಕರ್ ಅವರದು ವಿಶಿಷ್ಟ ಶಕ್ತಿ. ಅವರ ಹೆಸರು ದಲಿತೋದ್ಧಾರದೊಂದಿಗೆ ಬೆಸೆದುಕೊಂಡಿದೆಯಾದರೂ ಅದಷ್ಟೇ ನಿಜವಲ್ಲ. ರಾಷ್ಟ್ರನಾಯಕರೆಂದು ಹೆಸರಿಸಬಹುದಾದ ಕೆಲವೇ ಕಾರಣಪುರುಷರಲ್ಲಿ ಅಂಬೇಡ್ಕರ್ ಒಬ್ಬರೆಂದು ಹೇಳಿದರೆ ಏನನ್ನೂ ಹೇಳಿದಂತಾಗುವುದಿಲ್ಲ.

ಆಧುನಿಕ ಭಾರತ ವಸಾಹತುಶಾಹಿಯ ಕಪಿಮುಷ್ಟಿಯಲ್ಲಿ ಸಿಲುಕಿ ಸಂವಿಧಾನಾತ್ಮಕ ಸುಧಾರಣೆಯ ಸುತ್ತ ಗಿರಕಿ ಹೊಡೆಯುತ್ತಾ ಒಂದು ರಾಷ್ಟ್ರವಾಗಲು ಹಾತೊರೆಯುತ್ತಿದ್ದ ಸಂದರ್ಭದಲ್ಲಿ, ಅಂಬೇಡ್ಕರ್ ಭಾರತದ ಸಮಾಜ ಮತ್ತು ರಾಜಕಾರಣಗಳ ದಿಗಂತದಲ್ಲಿ ಮೂಡಿದರು. ಆರ್ಥಿಕವಾಗಿ ಕೆಳ ಮಧ್ಯಮವರ್ಗಕ್ಕೆ ಸೇರಿದ ದಲಿತ ಕುಟುಂಬದಲ್ಲಿ ಜನಿಸಿ ಜಗತ್ತಿನಲ್ಲಿ ಲಭ್ಯವಿದ್ದ ಅತ್ಯುನ್ನತ ಶಿಕ್ಷಣ ಪಡೆದ ಅವರನ್ನು, ಹಿಂದೂ ಸಮಾಜ ನಡೆಸಿಕೊಂಡ ರೀತಿ, ಅದಕ್ಕೆ ಶೋಭೆ ತರುವಂಥದ್ದಾಗಿರಲಿಲ್ಲ. ಶಿಕ್ಷಣದ ಪ್ರಗತಿಯೊಂದಿಗೆ ಸಾಮಾಜಿಕ ಅಸಮತೆ, ಅಸ್ಪೃಶ್ಯತೆ ಅಳಿಸಿ ಹೋಗುತ್ತವೆಂದು ಸುಧಾರಕರ ನಂಬಿಕೆ ಹುಸಿಯಾಯಿತು. ಅಂಬೇಡ್ಕರರು, ಪಾಶ್ಚಾತ್ಯ ದೇಶಗಳಲ್ಲಿ ಉನ್ನತ ವಿದ್ಯಾಭ್ಯಾಸ ಪಡೆಯಲು, ಧನಸಹಾಯ ಮಾಡಿದ, ಬರೋಡ ಮಹಾರಾಜರು, ತಮ್ಮ ರಾಜಧಾನಿಯಲ್ಲಿ ಮತಾಂಧರ ವಿರೋಧವನ್ನು ಎದುರಿಸಿ ಅಂಬೇಡ್ಕರ್‌ಗೆ ವಸತಿಯೊಂದನ್ನು ಏರ್ಪಾಡು ಮಾಡಲಾಗದ ಅಸಹಾಯಕ ಸ್ಥಿತಿಯಿತ್ತೆಂದರೆ, ಹಿಂದೂ ಸಮಾಜದ ಜಾತಿ ಕಟ್ಟುಪಾಡು ಎಷ್ಟು ಭೀಕರವಾಗಿತ್ತೆಂದು ಮನವರಿಕೆಯಾಗುತ್ತದೆ.

ವಿದೇಶೀ ಪದವಿಗಳನ್ನು ಪಡೆದ ತನ್ನನ್ನು ಈ ಸಮಾಜ ನಡೆಸಿಕೊಂಡ ರೀತಿ, ರಾಜಕೀಯವಾಗಿ ದಾಪುಗಾಲು ಹಾಕುತ್ತಿದ್ದ ಭಾರತದಲ್ಲಿ, ತನ್ನ ಜನಾಂಗದ ಭವಿಷ್ಯ ಹೇಗಿರಬಹುದೆಂಬ ಚಿಂತೆ ಅಂಬೇಡ್ಕರರನ್ನು ತಲ್ಲಣಗೊಳಿಸಿದಂತೆ ಕಾಣುತ್ತದೆ. ಆದ್ದರಿಂದಲೇ ಅವರು ತಮಗೆ ಸುಲಭಸಾಧ್ಯವಿದ್ದ ಐಷಾರಾಮ ಜೀವನವನ್ನು ವರ್ಜಿಸಿ, ದೀನ ದಲಿತರ ಏಳಿಗೆಗೆ ಕಂಕಣಕಟ್ಟಿ ನಿಂತರು.

ಬ್ರಿಟಿಷರ ಜನಾಂಗೀಯ ನೀತಿಯನ್ನು ಟೀಕಿಸುತ್ತಾ, ಸಮಾನತೆ ಸ್ವಾತಂತ್ರ್ಯಗಳನ್ನು

ತ್ರಾಯಿಸಿ ರಾಷ್ಟ್ರೀಯ ನಾಯಕರೆಂದು ಬೀಗುತ್ತಿದ್ದವರನ್ನು, ಅಂಬೇಡ್ಕರ್ ತರಾಟೆಗೆ ಗೆದುಕೊಂಡರು. 'ಮನೆಯಲ್ಲಿ ಗೆದ್ದು ಮಂದಿಯಲ್ಲಿ ಹೋಗು' ಎನ್ನುವ ನಾಣ್ಣುಡಿ ರನ್ನು ಹಿಂದೂ ಮೇಲ್ಜಾತಿಯವರ ಗಮನಕ್ಕೆ ತಂದರು. ಅಸ್ಪೃಶ್ಯ-ಶೂದ್ರರನ್ನು ಗ್ಗಣ್ಣನಲ್ಲಿ ಕಾಣುವ ಮೇಲ್ಜಾತಿಗಳವರು ಮೊದಲು ಈ ವರ್ಗದವರನ್ನು ಸಮಾನರಂತೆ ಡೆಸಿಕೊಳ್ಳದೆ, ಆಳುವ ಬ್ರಿಟಿಷರು, ಭಾರತೀಯರನ್ನು ಸರಿಸಮಾನರೆಂದು ಕಾಣ ೇಕೆಂದು ಕೇಳುವುದರಲ್ಲಿ ವಿರೋಧಾಭಾಸವಿದೆ ಎಂದು ಎತ್ತಿ ತೋರಿಸಿದರು. ಸ್ವರಾಜ್ಯ, ಹೇಗೆ, ಮೇಲ್ಜಾತಿ ಹಿಂದೂವಿನೊಬ್ಬನ ಜನ್ಮಸಿದ್ಧ ಹಕ್ಕು ಹೇಗೋ, ಅದು ುಹರನ ಹಕ್ಕೂ ಹೌದು', ಆದರೆ ಅಸ್ಪೃಶ್ಯರು, ಏಕಕಾಲಕ್ಕೆ, ಬಲಾಢ್ಯರಾದ, ೇಲ್ಜಾತಿ ಪುರೋಹಿತಶಾಹಿ ಮತ್ತು ಬ್ರಿಟಿಷ್ ವಸಾಹತುಶಾಹಿಗಳ ವಿರುದ್ಧ ಹೋರಾಡುವುದು ಕಷ್ಟವೆಂದರು. ಭಾರತದಲ್ಲಿ ಸಮಸಮಾಜ ಸ್ಥಾಪಿಸುವ ಕಡೆ ತಮ್ಮ ಲವಿದೆ ಎಂದು ಸಾರಿದರು.

ಈ ಸಮಸಮಾಜ ಸ್ಥಾಪನೆಯಾಗದೆ, ಮೇಲುಕೀಳು-ಅಸ್ಪೃಶ್ಯತೆ ಹಾಗೆಯೇ ಉಳಿದು, ಅಧಿಕಾರ ಹಸ್ತಾಂತರವಾದಾಗ, ಆ ಅಧಿಕಾರ ಮೇಲ್ವರ್ಗದವರ-ಉಳ್ಳವರ ಅಧಿಕಾರ ಮಾತ್ರವಾಗಿ, ಕೆಳವರ್ಗ-ಅಸ್ಪೃಶ್ಯರು, ಮತ್ತಷ್ಟು ತುಳಿತಕ್ಕೆ, ಶೋಷಣೆಗೆ ಳಗಾಗಿಬಿಡಬಹುದೆಂಬ ಭಯ ಅವರನ್ನು ಕಾಡಿದ್ದು ಸಹಜ. ಆದ್ದರಿಂದಲೇ ಅವರು ವಸಾಹತುಶಾಹಿ ವಿರೋಧಿ ಚಳವಳಿಯಲ್ಲಿ ನೇರ ಭಾಗವಹಿಸದೆ, ಅದಕ್ಕೆ ಪೂರಕವಾಗ ಲ್ಲ ಅಸ್ಪೃಶ್ಯತಾ ವಿರೋಧಿ, ಪುರೋಹಿತಶಾಹಿ ವಿರೋಧಿ ಚಳವಳಿಯಲ್ಲಿ ತೊಡಗಿದರು.

ಹಾಗೆ ನೋಡಿದರೆ, ಭಾರತದ ರಾಷ್ಟ್ರೀಯ ಚಳವಳಿ ಎರಡು ಧಾರೆಗಳಲ್ಲಿ ಹರಿಯಿತು. ಆಗಾಗ ವಿರುದ್ಧ ದಿಕ್ಕಿನಲ್ಲಿ ಹರಿಯುತ್ತಿವೆಯೆಂಬ ಅನುಮಾನಕ್ಕೆ ಅವಕಾಶ ಮಾಡಿಕೊಟ್ಟರೂ, ವಾಸ್ತವವಾಗಿ ಆ ಎರಡೂ ಧಾರೆಗಳು ಸಮಾನತೆಯ ಆಧಾರದ ಮೇಲೆ ಭಾರತ ರಾಷ್ಟ್ರವನ್ನು ಕಟ್ಟುವ ಒಂದೇ ಆಶಯ ಹೊಂದಿದ್ದವು. ಜೋತಿರಾವ್ ಫುಲೆ ಸಾಮಾಜಿಕ ಸಮಾನತೆಯ ರಾಷ್ಟ್ರೀಯ ಧಾರೆಯ ಮೊದಲ ಹರಿಕಾರರಾದರೆ, ಅಂಬೇಡ್ಕರ್, ಆ ಧಾರೆಯನ್ನು ವಿಸ್ತೃತಗೊಳಿಸಿ ಅದಕ್ಕೆ ರಾಜಕೀಯ ಆಯಾಮವನ್ನು ದಗಿಸಿಕೊಟ್ಟರು. ಭಗವಾನ್ ಬುದ್ಧನನ್ನು ತನ್ನ ಸ್ವಾಮಿಯೆಂದು ಕರೆದ ಅಂಬೇಡ್ಕರ್ ಫುಲೆಯವರನ್ನು ತನ್ನ ಪ್ರಭಾವಿಸಿದ ಮಹಾನ್ ಸಾಮಾಜಿಕ ಕ್ರಾಂತಿಕಾರಿಯೆಂದು ಕರೆದರು.

ಸುಧಾರಣಾ ಧಾರೆಯ ಮುಂದಾಳತ್ವ ವಹಿಸಿದ ಅಂಬೇಡ್ಕರ್ ಅನುಭವಿಸ ಬೇಕಾಗಿ ಬಂದ ತೊಂದರೆಗಳು ಅಪಾರ. ವಿದ್ಯಾವಂತರೆನ್ನಿಸಿಕೊಂಡವರೆಲ್ಲಾ, ತಮ್ಮ ಸ್ವಾರ್ಥಕ್ಕಾಗಿ ಕಾಂಗ್ರೆಸ್ಸಿನ ಹಿಂಬಾಲಕರಾದರೆ, ಗಾಂಧೀಜಿಯ ಆಯಸ್ಕಾಂತದಂತ

ವ್ಯಕ್ತಿತ್ವಕ್ಕೆ ಅನಕ್ಷರಸ್ಥ ಕೆಳಜಾತಿಗಳವರು ಮಾರು ಹೋದರು. ಇಂಥ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ನೇತೃತ್ವದ ರಾಷ್ಟ್ರೀಯ ಧಾರೆಗೆ ಪರ್ಯಾಯವಾಗಿ ಸೆಣಸುವುದು, ಪ್ರವಾಸಕ್ಕೆ ಎದುರಾಗಿ ಈಜುವುದು ಸುಲಭ ಸಾಧ್ಯವಾಗಿರಲಿಲ್ಲ. ಆದರೆ ಕಾಂಗ್ರೆಸ್ ನೇತೃತ್ವದ ರಾಷ್ಟ್ರೀಯ ಧಾರೆಯ ನಾಯಕರು 'ಹೇಳುವುದೊಂದು ಮಾಡುವುದೊಂದು' ಎನ್ನುವುದಕ್ಕೆ ನಿದರ್ಶನದಂತೆ ವರ್ತಿಸುತ್ತಿದ್ದಾಗ, ತಮ್ಮ ಪಟ್ಟಭದ್ರ ಹಿತವನ್ನು ಕಾಪಾಡಿಕೊಂಡು, ಅಸ್ಪೃಶ್ಯ-ಶೂದ್ರರನ್ನು ಶೋಷಿಸುತ್ತಿದ್ದಾಗ, ಅಂಬೇಡ್ಕರ್ ಆ ಧಾರೆಯ ಜೊತೆ ತನ್ನನ್ನು ಗುರ್ತಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಆದನ್ನೇ ಅವರು ನೇರವಾಗಿ ಗಾಂಧೀಜಿಗೆ ಹೇಳಿದರು. ಈ ಕಾಂಗ್ರೆಸ್ ಸದಸ್ಯರಾಗಲು, ಖಾದಿ ಧರಿಸುವುದನ್ನು ಕಡ್ಡಾಯ ಮಾಡುವುದರ ಜೊತೆಗೆ, ಅಸ್ಪೃಶ್ಯನೊಬ್ಬನನ್ನು ತಮ್ಮ ಮನೆಗಳಲ್ಲಿರಲು ಅವಕಾಶ ಕೊಡುವುದನ್ನು ಕಡ್ಡಾಯಗೊಳಿಸಿದ್ದರ, ಕಾಂಗ್ರೆಸ್ಸಿಗರು, ಅಸ್ಪೃಶ್ಯತಾ ವಿರೋಧಿ ಚಳವಳಿಯನ್ನು ಬೆಂಬಲಿಸುತ್ತಿದ್ದರೆಂದು ಅವರು ಹೇಳಿದ್ದುಂಟು. ಮತ್ತು ಈ ಕಡ್ಡಾಯವಿದ್ದಿದ್ದರೆ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷನೊಬ್ಬ ಅಸ್ಪೃಶ್ಯರು ಮಹದ್ ಕೆರೆಯ ನೀರನ್ನು ಬಳಸುವ ಸಾರ್ವಜನಿಕ ಹಕ್ಕಿಗ ಪ್ರತಿಪಾದನೆಗಾಗಿ ನಡೆಸಿದ ಹೋರಾಟವನ್ನು ವಿರೋಧಿಸುವಂಥ ಅಮಾನವೀಯ ಕೃತ್ಯಕ್ಕೆ ಇಳಿಯುತ್ತಿರಲಿಲ್ಲವೆಂದು ಛೇಡಿಸಿದರು.

ಗಾಂಧಿ ರಾಷ್ಟ್ರೀಯ ಹೋರಾಟದ ಮಾವಟಿಗನಾಗಿದ್ದರೆ, ಅಂಬೇಡ್ಕರ್ ಆದರ ಅಂಕುಶದಂತಿದ್ದರು. ಭಾರತದ ರಾಷ್ಟ್ರೀಯ ಹೋರಾಟ ಬಹುಮುಖಿ-ಸ್ತರಗಳದ್ದು. ಅದನ್ನು ಒಗ್ಗೂಡಿಸಿಕೊಂಡು ನೇರದಾರಿಯಲ್ಲಿ ಕೊಂಡೊಯ್ಯುವುದು ಅತ್ಯಂತ ಕಠಿಣ ಕೆಲಸವಾಗಿದ್ದು. ಇದ್ದುದರಲ್ಲಿ ಗಾಂಧೀಜಿ ಆ ಕಾರ್ಯವನ್ನು ಚೆನ್ನಾಗಿಯೇ ನಿಭಾಯಿಸಿದರು. ಆದರೆ ಗಾಂಧೀಜಿಯವರ ಸಜ್ಜನಿಕೆ, ಸನ್ನಡತೆಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದವರು ಅನೇಕರಿದ್ದರು. ಇಂಥವರ ಸೋಗಲಾಡಿತನವನ್ನು ಅಂಬೇಡ್ಕರ್ ಸ್ಪಷ್ಟವಾಗಿ ಬಯಲು ಮಾಡುತ್ತಿದ್ದರು, ಖಂಡಿಸುತ್ತಿದ್ದರು. ಸೂಕ್ಷ್ಮವಾಗಿ ಗಮನಿಸಿದರೆ ಕಾಂಗ್ರೆಸ್ ಮತ್ತು ಅದರ ನೇತೃತ್ವದ ರಾಷ್ಟ್ರೀಯ ಚಳವಳಿಯ ಬಗ್ಗೆ ಅಂಬೇಡ್ಕರ್ ಮಾಡಿದ ಟೀಕೆಗಳು, ಗಾಂಧೀಜಿಯವರಿಗೆ ಸಹಾಯಕವಾದವೆಂದೇ ಹೇಳಬಹುದು. ಇಲ್ಲದಿದ್ದರೆ ಬಹುಶಃ ಕಾಂಗ್ರೆಸ್ ಅಸ್ಪೃಶ್ಯತಾ ನಿವಾರಣೆಯಂಥ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು ದುಸ್ತರವಿತ್ತು. ಗಾಂಧೀಜೀಯವರ ಕಳಕಳಿಯೊಂದೇ ಈ ಕೆಲಸಕ್ಕೆ ಸಾಕಾಗುತ್ತಿರಲಿಲ್ಲವೆನಿಸುತ್ತದೆ. ಈ ವಿಷಯದಲ್ಲಿ ಅಂಬೇಡ್ಕರ್ ಇಡೀ ರಾಷ್ಟ್ರೀಯ ಚಳವಳಿಯ ಅಂಕುಶ ಮಾತ್ರವಲ್ಲ, ಅದರ ಆತ್ಮದ ನಿಯಂತ್ರಕನಂತೆ ಕೆಲಸ ಮಾಡಿದರು. ಹಾಗಲ್ಲದಿದ್ದರೆ ಕಾಂಗ್ರೆಸ್ ಹುಟ್ಟಿ ಸುಮಾರು ನಾಲ್ಕು ದಶಕಗಳೇ

ಕಳೆದರೂ ಅಸ್ಪೃಶ್ಯರ ಬಗ್ಗೆ ತಲೆಕೆಡಿಸಿಕೊಳ್ಳದಿದ್ದ ಕಾಂಗ್ರೆಸ್ಸಿಗರು ನಂತರ ಆ ಬಗ್ಗೆ ಆಸಕ್ತಿ ಕಳೆದದ್ದಕ್ಕೆ ಕಾರಣ ಕೊಡುವುದು ಕಷ್ಟ.

ಹಿಂದೂ ಮಂತಾಂಧತೆ, ಪ್ರತಿಗಾಮಿ ತನದ ಪ್ರತೀಕದಂತಿದ್ದ ಮನುಧರ್ಮಶಾಸ್ತ್ರದ ಸುಡಿಮಿಕೆ, ಮತ್ತೀಯು ಹಿಂದೂ ಮನಸ್ಸನ್ನು ಕಲಕಿಬಿಟ್ಟಿತು. 'ಹಿಂದೂ ಆಗಿ ಸಾಯಲಾರೆ' ನೆಂಬ ಅವರ ಘೋಷಣೆ ಹಿಂದೂ ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಎಲ್ಲ ಶೋಷಣೆಯ ಮೇಲೆ ಮಾಡಿದ ಮರ್ಮಾಘಾತ. ಈ ಘಟನೆಗಳಿಗೂ, ಗಾಂಧೀಜೀ ಹಲವಾರು ಸಾಮಾಜಿಕ ಸಂಸ್ಥೆಗಳ ಬಗ್ಗೆ ಇರಿಸಿಕೊಂಡಿದ್ದ ನಿಲುವುಗಳ ಬದಲಾವಣೆ ಗಳಿಗೂ ಖಂಡಿತ ಸಂಬಂಧವಿದೆ. ಹಾಗೆಯೇ ಗಾಂಧೀಜೀ ಗಾಂಗ್ರೆಸ್ಸಿಗರ ಬಗ್ಗೆ ಮಾಡ ಲಾರಂಭಿಸಿದ ಟೀಕೆಗಳೂ ಅಂಬೇಡ್ಕರರಿಂದ ಪ್ರೇರಿತವಾದವೆನಿಸುತ್ತದೆ.

ಬಡತನವನ್ನು ವೈಭವೀಕರಿಸುತ್ತಿದ್ದ ಗಾಂಧೀಜಿಯನ್ನು ಅಂಬೇಡ್ಕರ್ ಖಂಡಿಸಿ ದರು. ಸಮಾನತೆ, ಸಮಾಜವಾದಗಳಿಗಾಗಿ ತುಡಿದ ಅಂಬೇಡ್ಕರ್, ಈ ಬಗ್ಗೆ ಗಾಂಧೀಜೀಯು ಮೇಲೆ ಪರೋಕ್ಷವಾಗಿಯಾದರೂ ಪ್ರಭಾವ ಬೀರಿದಂತೆ ಕಾಣುತ್ತದೆ. ಹಾಗಿಲ್ಲದಿದ್ದರೆ. ಬುದ್ಧಿಯನ್ನು ಉಪಯೋಗಿಸುವ ಭೂಮಾಲೀಕ ಗೇಣಿದಾರನಷ್ಟೇ ಶ್ರಮಿಕನೆಂದು ಹೇಳುತ್ತಿದ್ದ ಗಾಂಧಿಜೀ, ಗೇಣಿದಾರರು ಭೂಮಾಲಿಕರ, ಭೂಮಿಯನ್ನು ಆಕ್ರಮಿಸಿಕೊಳ್ಳಲು ಹೇಳುತ್ತೇವೆನ್ನುವ ಮಾತಿನ ಹಿನ್ನೆಲೆ ವಿವರಿಸುವುದು ಕಷ್ಟ ವಾಗುತ್ತದೆ.

ಭಾರತದಲ್ಲಿ ಜೀತಪದ್ಧತಿಯು ವಿಮುಕ್ತಿಗಾಗಿ ಹೋರಾಟ ಮಾಡಿದವರು ಅಂಬೇಡ್ಕರ್ ಮೊದಲಿಗರು – ಅವಮಾನುಷವಾದ 'ಖೋಟ್' ಮತ್ತು 'ವತನ್ ಪದ್ಧತಿಗಳ ರದ್ದತಿಗಾಗಿ, ರೈತಕಾರ್ಮಿಕರನ್ನು ಸಂಘಟಿಸಿದರು. ಈ ಹೋರಾಟಗಳು ಕೇವಲ ಪಾಳೆಗಾರಿ ಪದ್ಧತಿಯ ವಿರುದ್ಧದ ಹೋರಾಟಗಳು ಮಾತ್ರವಾಗಿರಲಿಲ್ಲ. ಅವು ಬ್ರಿಟಿಷ್ ಸಾಮ್ರಾಜ್ಯವಾದದ ವಿರುದ್ಧದ ಸವಾಲೂ ಹೌದು. ಈ ಪದ್ಧತಿಗಳ ರದ್ಧತಿ ಕೋರಿ ಅವರು ಒಂದು ಕರಡು ಶಾಸನ ತಯಾರಿಸಿ ಬಾಂಬೇ ಪ್ರಾಂತ್ಯ ವಿಧಾನಸಭೆಯಲ್ಲಿ ಮಂಡಿಸಿದರು. ಹಳ್ಳಿಹಳ್ಳಿಯನ್ನೂ ಸುತ್ತಿ, ಕೃಷಿ ಕೂಲಿಗಳನ್ನು, ಗೇಣಿದಾರರನ್ನೂ ಮತ್ತು ಅಸ್ಪೃಶ್ಯರನ್ನು ಸಂಘಟಿಸಿದರು. ಸರ್ಕಾರದ ಸಾಮೂಹಿಕ ಒತ್ತಡ ತರಲು ಬಾಂಬೆ ಪ್ರಾಂತ್ಯ ವಿಧಾನಸಭೆ ಸಮಾವೇಶಗೊಂಡಾಗ ರೈತ–ಕಾರ್ಮಿಕ ಜಾಥಾ ಹೊರಗೆ ಸಿದರು. ಕಮ್ಯುನಿಸ್ಟರು, ಸಮಾಜವಾದಿಗಳೂ ಪರಿಭಾವಿಸದಿದ್ದ 'ಜೀತವಿಮುಕ್ತಿ ಯನ್ನು ಒಂದು ಚಳುವಳಿಯಾಗಿ ರೂಪಿಸಿದ ಕೀರ್ತಿ ಅಂಬೇಡ್ಕರ್‌ಗೆ ಸಲ್ಲಬೇಕು, ಈ ಚಳವಳಿಯನ್ನು ವಿರೋಧಿಸಿದ ಕಾಂಗ್ರೆಸ್ಸನ್ನೂ ಅವರು ಎಂದಿಗೂ ಕ್ಷಮಿಸಲಿಲ್ಲ. ಹಾಗೆ

ನೋಡಿದರೆ 1960ರ ದಶಕದಲ್ಲಿ ಹುಟ್ಟಿ – ಬೆಳೆದ Non-Congressisms ಬೀಜಾಂಕುರವಾದದ್ದು ಅಂಬೇಡ್ಕರ್ ಅವರಿಂದ.

ಕಾಂಗ್ರೆಸ್ ಮತ್ತು ಗಾಂಧೀಜಿ ಬಗೆಗಿನ ಟೀಕೆಯನ್ನು, ರಾಷ್ಟ್ರವಿರೋಧಿ ಎಂದು ಬಹುತೇಕ ಜನ ಟೀಕಿಸಿದರು. ಆದರೆ ಗಾಂಧೀಜಿಗೆ ಈ ಬಗ್ಗೆ ಸ್ಪಷ್ಟ ಕಲ್ಪನೆಯಿತ್ತು. ಅಂಬೇಡ್ಕರ್ ಅಪ್ಪಟ ರಾಷ್ಟ್ರಪ್ರೇಮಿಯೆಂದು ಅವರಿಗೆ ತಿಳಿದಿತ್ತು. ಅದನ್ನು ಅವರು ಆಡಿಯೂ ತೋರಿಸಿದರು. ಅವರ ಸಮಕಾಲೀನರಲ್ಲಿ ಅಂಬೇಡ್ಕರರನ್ನು ಬಹುಮಟ್ಟಿಗೆ ಅರ್ಥಮಾಡಿಕೊಂಡವರೆಂಬದರೆ ಗಾಂಧೀಜಿ ಒಬ್ಬರೇ. ಆದರೂ ದಲಿತರಿಗಾಗಿ ಅಂಬೇಡ್ಕರ್ ಒತ್ತಾಯಿಸಿದ ಪ್ರತ್ಯೇಕ ಮತಗಟ್ಟೆಗಳನ್ನು ಗಾಂಧೀಜಿ ವಿರೋಧಿಸಿದರು. ಅದಕ್ಕೆ ಬಲವಾದ ಕಾರಣಗಳಿದ್ದವು. ಈ ಬೇಡಿಕೆಯ ಒಪ್ಪಿಗೆ, ಭಾರತದ ಹಳ್ಳಿಗಾಡನ್ನು ದಲಿತರ ಮೇಲಿನ ಹಿಂಸೆಗೆ ಪ್ರಚೋದಿಸುತ್ತವೆಂದು ಗಾಂಧೀಜೀ ತಿಳಿದಿದ್ದರು. ಜೊತೆಗೆ ಎಲ್ಲ ಕೋಮುಗಳವರೂ ಆಯಾ ಕೋಮಿನ ಹಿತವನ್ನು ರಕ್ಷಿಸುವ ಕಡೆ, ಪ್ರತ್ಯೇಕತೆಯನ್ನು ಒತ್ತಿಹೇಳುವುದರಲ್ಲೇ ಮಗ್ನರಾದರೆ, ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದಲ್ಲಿ ತೊಡಗಿ ಭಾರತದ ಹಿತರಕ್ಷಣೆ ಮಾಡುವವರು ಯಾರೆಂಬ ಪ್ರಶ್ನೆ ಗಾಂಧೀಜಿಯನ್ನು ಕಾಡುತ್ತಿತ್ತು. ಅಲ್ಲದೆ ಈ ಪ್ರತ್ಯೇಕತಾ ಬೇಡಿಕೆಗಳನ್ನು ನೆಪಮಾಡಿಕೊಂಡು ಬ್ರಿಟಿಷರು 'ಒಡೆದು ಆಳುವ' ತಮ್ಮ ನೀತಿಯನ್ನು ಮತ್ತಷ್ಟು ಬಿಗಿಗೊಳಿಸುತ್ತಾರೆಂದು ಗಾಂಧಿ ಹೆದರಿದರು.

ಆದರೆ ಇಲ್ಲಿ ಇನ್ನೊಂದು ಸಮಸ್ಯೆ ಇದೆ. ಜಿನ್ನಾರಂತೆ, ಸಾವರ್ಕರರಂತೆ ಅಂಬೇಡ್ಕರರ ಬೇಡಿಕೆ, ಹೋರಾಟಗಳು ಪಟ್ಟಭದ್ರ ಹಿತಾಶಕ್ತಿಗಳನ್ನು ರಕ್ಷಿಸಿಕೊಳ್ಳುವುದಕ್ಕಾಗಿರಲಿಲ್ಲ. ಆ ಬೇಡಿಕೆಗಳು ಕನಿಷ್ಠ ಮಾನವೀಯ ಹಕ್ಕುಗಳನ್ನು ಗಳಿಸಿಕೊಳ್ಳುವ ಬೇಡಿಕೆಗಳಾಗಿದ್ದವು. ಆದರೆ ವಸಾಹತುಶಾಹಿ ಸಂದರ್ಭದಲ್ಲಿ ಈ ಬೇಡಿಕೆಗಳು ಬ್ರಿಟಿಷರ ಕೈಲಿ, ರಾಷ್ಟ್ರೀಯ ಚಳವಳಿಯನ್ನು ಥಳಿಸುವ ಚಿತ್ರವಾಗಿದ್ದವು ನಿಜ. ಅಂಬೇಡ್ಕರ್‌ಗೆ ಈ ವಿಷಯ ತಿಳಿದಿರಲಿಲ್ಲವೆಂದಲ್ಲ. ಅವರು ಪ್ರತ್ಯೇಕ ಮತಗಟ್ಟೆಗಳ ಬೇಡಿಕೆಯನ್ನು ಬಿಟ್ಟುಕೊಟ್ಟರೆನ್ನಿಸುತ್ತದೆ.

ಸಮಾಜವಾದ, ಮಾರ್ಕ್ಸ್‌ವಾದ ಮತ್ತು ಬೌದ್ಧಧರ್ಮಗಳಿಂದ ಪ್ರಭಾವಿತರಾದ ಅಂಬೇಡ್ಕರ್ ಮೂಲತಃ ಧಾರ್ಮಿಕ–ಆಧ್ಯಾತ್ಮಿಕ ಮನಸ್ಸಿನವರು. ಕಬೀರ್, ಚೊಕಮೇಲ ಅವರ ಮೇಲೆ ಅಪಾರ ಪ್ರಭಾವ ಬೀರಿದ ಅನುಭಾವಿಗಳು; ಸಮಾಜ,–ರಾಜಕಾರಣ ನೈತಿಕತೆ ಮತ್ತು ಧಾರ್ಮಿಕ ತಳಹದಿ ಮೇಲೆಯೇ ರೂಪಿತವಾಗಬೇಕೆಂದು ಪದೇ ಪದೇ ಹೇಳುತ್ತಿದ್ದರು. 'ತಮ್ಮ ಆಲೋಚನೆಯ ಬೇರುಗಳು ಧರ್ಮದಲ್ಲಿವೆ, ರಾಜಕೀಯದಲ್ಲಿಲ್ಲವೆಂದು ಸಾರಿಸಾರಿ ಹೇಳಿದರು. ಆದ್ದರಿಂದಲೇ ಭಾರತೀಯವೇ ಆದ

ಬೌದ್ಧಧರ್ಮದಲ್ಲಿ ತಮ್ಮ ಮತ್ತು ಎಲ್ಲರ ವಿಶೇಷವಾಗಿ ದಲಿತರ ಸಮಾನತೆಯನ್ನು ಅರಸಿದರು. ಭಾರತೀಯ ಸಂಸ್ಕೃತಿ ಎಲ್ಲ ರಾಜಕೀಯ–ಸಾಮಾಜಿಕ ವೈರುಧ್ಯಗಳನ್ನು ಮೀರಿ, ಒಗ್ಗಟ್ಟನ್ನು ಬೆಳಸಬಲ್ಲ ಸತ್ವವನ್ನು ಪಡೆದಿದೆ ಎಂದೇ ನಂಬಿದ್ದರು.

ಅಂಬೇಡ್ಕರ್ ತಾವು ಬೌದ್ಧ ಧರ್ಮವನ್ನು ಸ್ವೀಕರಿಸಲು ಕೊಟ್ಟ ಕಾರಣ ಒಣ ವಿಚಾರವಾದಿಗಳನ್ನು ದಂಗು ಬಡಿಸಿತು. ಬೇರೆ ಧರ್ಮಗಳನ್ನು ಅವಲಂಬಿಸಿದರೆ ಅವು ಭಾರತೀಯರನ್ನು 'ರಾಷ್ಟ್ರೀಯತೆಯಿಂದ ದೂರ ಒಯ್ಯುತ್ತವೆ. ಭಾರತೀಯವೇ ಆದ ಸಿಖ್ ಅಥವಾ ಬೌದ್ಧಧರ್ಮವನ್ನು ಒಪ್ಪಿಕೊಂಡರೆ, ಹಿಂದೂಧರ್ಮದಿಂದ ಹೊರ ಹೋದರೂ ಅವರು ಭಾರತೀಯ ಸಂಸ್ಕೃತಿಯಲ್ಲಿಯೇ ಉಳಿಯುತ್ತಾರೆ' ಎಂದು ಅವರು ಹೇಳಿದರು. ಮುಂದುವರಿದು ಭಾರತೀಯವಾದ ಒಂದು ಧರ್ಮವನ್ನು ತಾವು ಆಯ್ಕೆ ಮಾಡಿಕೊಂಡಿದ್ದು ಹಿಂದೂಗಳ ಬಗ್ಗೆ ತಮಗಿರುವ ಒಂದು ಜವಾಬ್ದಾರಿಯನ್ನು ಪೂರೈಸುವುದಕ್ಕೆ ಎಂದೂ ಹೇಳಿಕೊಂಡರು.

ಅಂಬೇಡ್ಕರರ ಈ ನಿಲುವು ಹಿಂದೂ ಮತಾಂಧರಿಗೆ ಗ್ರಾಸ ಒದಗಿಸಿಕೊಟ್ಟಿದೆ. ಬಾಬಾ ಸಾಹೇಬರನ್ನು ಆರೆಸ್ಸೆಸ್ಸಿನಂಥ ಸಂಸ್ಥೆಗಳು 'ತಮ್ಮವ'ರನ್ನಾಗಿಸಿಕೊಳ್ಳಲು ಪ್ರಾರಂಭಿಸಿವೆ. ಇದು ಗಾಂಧೀಜಿ ಹಿಂದೂಧರ್ಮದ ಬಗ್ಗೆ ಇಟ್ಟುಕೊಂಡ ಶ್ರದ್ಧೆಯನ್ನು ಹಿಂದೂ ಮತಾಂಧರು ದುರುಪಯೋಗಪಡಿಸಿಕೊಂಡಂಥದ್ದೆ, ಬಹುಶಃ ಎಲ್ಲ ದೊಡ್ಡವರ ವಿಚಾರಗಳನ್ನು ಸಮಯ ಸಾಧಕರು ಹೇಗೆ ಬೇಕಾದರೂ ತಿರುಚಿ ಉಪಯೋಗಿಸಿಕೊಳ್ಳುತ್ತಾರೆ. ಆದರೆ ಅಂಬೇಡ್ಕರ್, ಮುಲಿತು ನಿಂತು ಅಸ್ಪೃಶ್ಯರನ್ನು ಅಮಾನುಷವಾಗಿ ನಡೆಸಿಕೊಳ್ಳುತ್ತಿದ್ದ ಹಿಂದೂ ಧರ್ಮದ ಬಗ್ಗೆ ಆಡಿರುವ ಮಾತುಗಳು ಉಲ್ಲೇಖನೀಯ. ಧರ್ಮದ ಬಗೆಗಿನ ಅವರ ಪ್ರಖರ ಪಾಂಡಿತ್ಯ, ಹಿಂದೂಧರ್ಮ ಶಾಸ್ತ್ರಗಳನ್ನು ಹುಡುಕಿ ಅರ್ಥೈಸಿ ಹೇಳಿದ್ದನ್ನು ಮತಾಂಧರು ತಿಳಿದಿರುವುದು ಒಳ್ಳೆಯದು. 'ಅಸಮತೆಯನ್ನು ಪ್ರತಿಪಾದಿಸಿ, ಬೆಳೆಸುವ ಹಿಂದೂ ಧರ್ಮವನ್ನು ಪೂರ್ಣ ನಾಶಮಾಡುವುದರಲ್ಲಿ ಯಾವ ಅಧರ್ಮವೂ ಇಲ್ಲ' ಎಂದು ಮತಾಂಧರು ಪವಿತ್ರವೆಂದು ಭಾವಿಸುವ ಮನುಧರ್ಮಶಾಸ್ತ್ರಕ್ಕೆ ಬೆಂಕಿ ಇಟ್ಟರು.

ಹಿಂದೂ–ಮುಸ್ಲಿಂ ಕೋಮುವಾದಿಗಳ ಬಗ್ಗೆ ಅಂಬೇಡ್ಕರ್‌ಗೆ ಕಂಡದಂಥ ಕೋಪ. ಭಾರತೀಯ ಸಾಂಸ್ಕೃತಿಕ ಏಕತೆಯಲ್ಲಿ ಅವರಿಗೆ ಅಪಾರ ನಂಬಿಕೆ. 'ಈ ಏಕತೆ ಎಲ್ಲ ರಾಜಕೀಯ, ಜನಾಂಗೀಯ ವೈಮನಸ್ಯಗಳನ್ನು ಮೀರಿ ನಿಲ್ಲುತ್ತದೆ, ಯಾವುದೇ ಚರ್ಚೆಯಲ್ಲಿ ಭಾರತದ ಮೂಲಭೂತ ಏಕತೆಯ ಅಂಶವನ್ನು ಕಡೆಗಣಿಸಲಾಗದು' ಎಂದೇ ಅಭಿಮತ. ಭಾರತದ ಭವಿತವ್ಯದಲ್ಲಿ ಧರ್ಮದ ಪಾತ್ರವನ್ನವರು ಒತ್ತಿಹೇಳಿ, ಯಾವ ಧರ್ಮವೂ ಭಾರತೀಯ ರಾಷ್ಟ್ರೀಯತೆ ಮತ್ತು ಜಾತ್ಯತೀತತೆಗೆ ಕುಂದುಂಟುಮಾಡ

ಬಾರದೆಂದು ಒತ್ತಿಹೇಳಿದರು. ಭಾರತದಲ್ಲಿ ರಾಷ್ಟ್ರೀಯತೆ ಮತ್ತು ಜಾತ್ಯಾತೀತತೆಯ ವಿರೋಧಿಗಳೆಂದರೆ ಹಿಂದೂ ಮಹಾಸಭೆ ಮತ್ತು ಮುಸ್ಲಿಂಲೀಗ್ ಎಂದು ಘೋಷಿಸಿದ ಅಂಬೇಡ್ಕರ್ ಆವೆರಡನ್ನೂ ಖಂಡಿಸುತ್ತಿದ್ದರು.

ಹಿಂದೂ ಮಹಾಸಭೆ, ಅಸ್ಪೃಶ್ಯರ ಮೇಲೆ ತನ್ನ ಹಕ್ಕಿದೆ ಎಂದು ಹೇಳಿಕೊಳ್ಳುತ್ತಿದ್ದುದನ್ನು ಅವರು ಅಲ್ಲಗಳೆದು 'ಅಸ್ಪೃಶ್ಯರ ಸಮಸ್ಯೆಯ ಬಗ್ಗೆ ಆಸಕ್ತಿ ತಳೆಯಲು ಪೂರ್ತಿಯಾಗಿ ಅನರ್ಹವಾದ ಸಂಸ್ಥೆ ಯಾವುದಾದರೂ ಇದ್ದರೆ ಅದೇ ಹಿಂದೂ ಮಹಾಸಭೆ' ಎಂದು ಘಂಟಾಘೋಷವಾಗಿ ಸಾರಿದರು. ಅಂಥ ಜಾತ್ಯಾತೀತ ಮನಸ್ಸು ಅಂಬೇಡ್ಕರವರದು.

ಅಂಬೇಡ್ಕರ್ ಮತ್ತು ವಸಾಹತು ಶಾಹಿಗಳ ನಡುವಿನ ಸಂಬಂಧದ ಚರ್ಚೆ ಹೆಚ್ಚು ಸಂಕೀರ್ಣ ಸ್ವರೂಪದ್ದು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಬಗ್ಗೆ ಅವರಿಗಿದ್ದದ್ದು ತಿರಸ್ಕಾರ ಮಾತ್ರ. ಮೊದಲದುಂಡು ಮೇಜಿನ ಪರಿಷತ್ತಿನ ಸಂದರ್ಭದಲ್ಲಿ ಅದು ಸ್ಫೋಟಗೊಂಡಿತು. ಅವರಲ್ಲಿನ ಉಗ್ರ ರಾಷ್ಟ್ರೀಯ ಪ್ರಜ್ಞೆ ಎಲ್ಲರಿಗೂ ಆಶ್ಚರ್ಯವಾಗುವಂತೆ ಸಿಡಿದೆದ್ದಿತು "ಬ್ರಿಟಿಷ್ ಪೂರ್ವ ಭಾರತದಲ್ಲಿದ್ದ ನಮ್ಮ (ಅಸ್ಪೃಶ್ಯರ) ಹೀನ ಸ್ಥಿತಿಯನ್ನು ಇಂದಿನ ಸ್ಥಿತಿಗೆ ಹೋಲಿಸಿದರೆ ನಮಗೆ ಕಾಣುವುದೇನು ? ಪ್ರಗತಿ ಪಥದಲ್ಲಿ ಮುಂದುವರಿಯುವ ಬದಲಿಗೆ ನಾವು ಕೇವಲ ದಿನಗಳನ್ನು ದೂಡುತ್ತಿದ್ದೇವೆ. ಬ್ರಿಟಿಷರ ಆಗಮನಕ್ಕೆ ಮುನ್ನ ನಾವು ಹೀನಸ್ಥಿತಿಯಲ್ಲಿದ್ದೆವು. ಅದನ್ನು ನಿವಾರಿಸಲು ಬ್ರಿಟಿಷ್ ಪ್ರಭುತ್ವ ಏನಾದರೂ ಕ್ರಮ ಕೈಗೊಂಡಿದೆಯೇ? ಬ್ರಿಟಿಷ್ ಸಾಮ್ರಾಜ್ಯ ಸ್ಥಾಪನೆಗೆ ಮುನ್ನ ನಮಗೆ ದೇವಾಲಯ ಪ್ರವೇಶವಿರಲಿಲ್ಲ. ಈಗ ಅದು ಸಾಧ್ಯವಿದೆಯೇ ? ಮುಂಚೆ ಸೈನ್ಯದಲ್ಲಿ ನಮಗೆ ಅವಕಾಶವಿರಲಿಲ್ಲ. ಈಗ ಅದು ಸಾಧ್ಯವಿದೆಯೇ? ಮುಂಚೆ ಪೋಲಿಸ್ ದಳಕ್ಕೆ ನಮ್ಮನ್ನು ಸೇರಿಸುತ್ತಿರಲಿಲ್ಲ. ಬ್ರಿಟಿಷ್ ಸರ್ಕಾರ ನಮ್ಮನ್ನು ಸೇರಿಸುತ್ತಿದೆಯೇ? ಈ ಯಾವ ಪ್ರಶ್ನೆಗೂ ನಾವು ಹೌದೆಂದು ಉತ್ತರ ಕೊಡುವ ಹಾಗಿಲ್ಲ. ನಮ್ಮ ಮೂಲಸ್ಥಿತಿಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ನಮ್ಮ ಸ್ಥಿತಿಗೆ ಸಂಬಂಧಿಸಿದಂತೆ, ಬ್ರಿಟಿಷ್ ಸರ್ಕಾರ ಹಿಂದಿನ ಸಾಮಾಜಿಕ ಏರ್ಪಾಡನ್ನು ಹಾಗೆಯೇ ಒಪ್ಪಿಕೊಂಡು ಅದಕ್ಕೆ ವಿಧೇಯವಾಗಿ ಮುಂದುವರಿಸುತ್ತಿದೆ." ಮುಂದುವರಿದು "ಬ್ರಿಟಿಷ್ ಸರ್ಕಾರ ಇದೇ ರೀತಿ ಮುಂದುವರೆಯುವವರೆಗೂ ರಾಜಕೀಯ ಅಧಿಕಾರದಲ್ಲಿ ನಮಗೆ ಯಾವ ಪಾಲೂ ಸಿಕ್ಕುವ ಸಾಧ್ಯತೆಯೇ ಇಲ್ಲವೇ ಇಲ್ಲ. ಸ್ವತಂತ್ರ ಸಂವಿಧಾನದಲ್ಲಿ ಮಾತ್ರ, ರಾಜಕೀಯ ಅಧಿಕಾರ ನಮ್ಮದಾಗಬಲ್ಲದು. ಅದಿಲ್ಲದೆ (ಸ್ವರಾಜ್ಯ ಸಂವಿಧಾನ) ನಮ್ಮ ಜನರ ವಿಮುಕ್ತಿ ಸಾಧ್ಯವಿಲ್ಲ" ಎಂದು ಅವರು ಗುಡುಗಿದರು.

ಅವರ ಈ ಮಾತುಗಳು ಯಾವುದೋ ಗೊತ್ತಾಗದ ಮೂಲೆಯಲ್ಲಿ ಆಡಿದವಲ್ಲ. ಬ್ರಿಟಿಷ್ ಚಕ್ರಾಧಿಪತ್ಯದ ಕೇಂದ್ರ ಲಂಡನ್ನಿನಲ್ಲಿ. ಅವರ ಪ್ರಧಾನಿ ಮತ್ತು ಸಂಪುಟದ ಸಹೋದ್ಯೋಗಿಗಳು ಮತ್ತು ಭಾರತೀಯ ನಾಯಕರ ಎದುರು. ಈ ಮಾತುಗಳು ಸಾಮ್ರಾಜ್ಯಶಾಹಿ ಬ್ರಿಟಿಷರ ಬಗ್ಗೆ ಮತ್ತು ರಾಷ್ಟ್ರೀಯತೆಯ ಬಗ್ಗೆ ಅಂಬೇಡ್ಕರ್‌ರ ಧೋರಣೆಯನ್ನು ಸ್ಪಷ್ಟಪಡಿಸುತ್ತವೆ. ಅನೇಕರು ತಿಳಿದಿರುವಂತೆ ಅವರು ಎಂದೂ ಬ್ರಿಟೀಷರ ಬಾಲಂಗೋಚಿಯಾಗಿರಲಿಲ್ಲ. ಅವರ ಜಾಯಮಾನ ಅಂಥದ್ದಾಗಿರಲಿಲ್ಲ.

ಸ್ನಾತಕೋತ್ತರ ತರಗತಿಗಳಲ್ಲಿ ನಾನು ಆಧುನಿಕ ಭಾರತೀಯ ಚರಿತ್ರೆಯ ವಿದ್ಯಾರ್ಥಿ. ಅದರಲ್ಲೂ ಸ್ವಾತಂತ್ರ್ಯ ಚಳುವಳಿ ಮತ್ತು ಆಧುನಿಕ ಭಾರತದ ಸಾಮಾಜಿಕ–ಆರ್ಥಿಕ ಚರಿತ್ರೆಯ ವಿಶೇಷವಾಗಿ ಅಭ್ಯಾಸ ಮಾಡಿದವನು. ಆದರೆ ಎಲ್ಲೂ, ತರಗತಿಯಲ್ಲಿನ ಪಾಠಗಳಲ್ಲಾಗಲಿ, ಗ್ರಂಥಾಲಯಗಳಲ್ಲಿದ್ದ ಪುಸ್ತಕಗಳಲ್ಲಾಗಲಿ, ಬೇರೆ ಮಾತುಕತೆಗಳಲ್ಲಾಗಲಿ ಅಂಬೇಡ್ಕರ್‌ರ ಚಿಂತನೆ–ಹೋರಾಟಗಳ ಬಗ್ಗೆಯಿರಲಿ, ಆ ವ್ಯಕ್ತಿಯ ಬಗ್ಗೆ ಪ್ರಸ್ತಾಪವೇ ಇರುತ್ತಿರಲಿಲ್ಲ! ಆದರೆ 1976ರಲ್ಲಿ ಇರಬೇಕು ಇದ್ದಕ್ಕಿದ್ದಂತೆ, ನಾನು ಅಂಬೇಡ್ಕರ್ ಕುರಿತಂತೆ, ಅದೇ ಸ್ನಾತಕೋತ್ತರ ತರಗತಿಗೆ ಪಾಠಮಾಡಬೇಕಾಗಿ ಬಂತು. ಪುಸ್ತಕಗಳಿಲ್ಲದೆ, ಪರದಾಡಿದೆ. ಆಗ ಲಭ್ಯವಾದದ್ದು ಧನಂಜಯಕೀರ್ ಬರೆದ 'ಅಂಬೇಡ್ಕರ್ ; ಜೀವನ ಮತ್ತು ಸಾಧನೆ; ಜೀನೆಟ್ ರಾಬಿನ್ಸ್‌ರ. ಅಂಬೇಡ್ಕರ್ ಮತ್ತು G.S. Lokhande ಯವರ, Dr. B. R. Ambedker A Study in Social Democracy. ಇವುಗಳಲ್ಲಿ ಎಲ್ಲರ ಬೈಬಲ್ ಎಂದರೆ ಧನಂಜಯಕೀರರ ಪುಸ್ತಕ. ಆದರೆ ಈ ಪುಸ್ತಕ ಅಂಬೇಡ್ಕರ ಜೀವನ ಸಾಧನೆಗಳನ್ನು ತಿರುಚಿಬಿಟ್ಟಿದೆ ಎನ್ನಿಸುತ್ತದೆ. ಮನುಧರ್ಮಶಾಸ್ತ್ರವನ್ನು ಸುಟ್ಟು, ಹಿಂದೂ ಮತಾಂಧತೆಯ ವಿರುದ್ಧ ಬಂಡೆದ್ದ ಬಾಬಾ ಸಾಹೇಬರನ್ನು ಈ ಪುಸ್ತಕ, ಅವರೊಬ್ಬ 'ಹಿಂದೂವಾದಿ' ಎಂಬಂತೆ ಚಿತ್ರಿಸುತ್ತದೆ. ಅಂಬೇಡ್ಕರರನ್ನು ಅಲ್ಲಿ ಹೋಲಿಸಿ ನೋಡಿರುವುದು ಹಿಂದೂ ಮತಾಂಧತೆಯ ವಿಷವನ್ನು ಬಿತ್ತಿದ ಸಾವರ್ಕರ್ ಜೊತೆಗೆ. ಅಂಬೇಡ್ಕರ್‌ಗೆ ಭಾರತೀಯ ಸಂಸ್ಕೃತಿಯಲ್ಲಿದ್ದ ಶ್ರದ್ಧೆಯನ್ನು 'ಹಿಂದೂ ಸಂಸ್ಕೃತಿಯಲ್ಲಿನ ಶ್ರದ್ಧೆಯೆಂದೇ ತಿರುಚಿ ವ್ಯಾಖ್ಯಾನಿಸಲಾಗಿದೆ. ಅವಕಾಶವಿದ್ದೆಡೆಯೆಲ್ಲಾ ಅಂಬೇಡ್ಕರ್ ಖಂಡಿಸುತ್ತಿದ್ದ ಹಿಂದೂ ಮತೀಯ ಸಂಸ್ಥೆ ಹಿಂದೂಮಹಾಸಭೆಯನ್ನು, ಮಹಾನ್ ಕ್ರಾಂತಿಕಾರಿ ಸಂಸ್ಥೆಯೆಂಬಂತೆ, ಅದರ ಮತಾಂಧ ನಾಯಕರನ್ನು ಭಾರತದ ಮಹಾನ್ ನಾಯಕರೆಂಬಂತೆ ಬಣ್ಣಿಸಲಾಗಿದೆ. ಇದು ಮತಾಂಧರು ಅಂಬೇಡ್ಕರರನ್ನು 'ತಮ್ಮವ'ರನ್ನಾಗಿಸಿಕೊಂಡು ಚಡ್ಡಿ ತೊಡಿಸಲು ಸಹಾಯಕವಾಗಿದೆ. ಆದರೆ ಇದೆಲ್ಲಾ ಎಷ್ಟು ಅಸಂಬದ್ಧವೆಂದು ಈಗಾಗಲೇ ವಿವರಿಸಲಾಗಿದೆ.

1980 ರವರೆಗೂ ಅಂಬೇಡ್ಕರ್ ಬಗ್ಗೆ ಚಕಾರವೆತ್ತದಿದ್ದ ರಾಜಕೀಯ ಪಕ್ಷ, ರಾಜಕಾರಣಗಳು, ಒಮ್ಮೆಲೆ ಅವರನ್ನು ಹಾಡಿ ಹೊಗಳುವ ಪರಿಪಾಠವಾಯಿತು. ಅಂದರೆ ಮೊದಲು ಪೂರ್ಣ ತಿರಸ್ಕಾರ, ನಂತರ ಒಮ್ಮೆಲೆ ಆರಾಧನೆ, ಈ ಎರಡೂ ಸರಿಯಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ಅಂಬೇಡ್ಕರರನ್ನು, ಅವರು ಬದುಕಿ ಹೋರಾಡಿದ ಚಾರಿತ್ರಿಕ ಸಂದರ್ಭದಲ್ಲಿಟ್ಟು ವಸ್ತುನಿಷ್ಠವಾಗಿ ವಿಶ್ಲೇಷಿಸುವ ಅಗತ್ಯವಿದೆ. ಎಚ್ಚೆತ್ತ ದಲಿತ ಸಂವೇದನೆಯ ಸಂಕೇತವಾಗಿ, ಭಾರತದ ಇಂದಿನ ಸಾಮಾಜಿಕ–ರಾಜಕೀಯ ಸಂದರ್ಭದಲ್ಲಿ, ಅವರ ಚಿಂತನೆ, ಹೋರಾಟಗಳು ನಮ್ಮ ಮುಂದಿವೆ.

'ಶೂದ್ರ'ದ ಅಂಬೇಡ್ಕರ್ ವಿಶೇಷ ಸಂಚಿಕೆ ನಿಮ್ಮ ಮುಂದಿದೆ. ಈ ಸಂಚಿಕೆ ಬಹಳ ಹಿಂದೆಯೇ ಬರಬೇಕಾಗಿತ್ತು. ಕಾರಣಾಂತರದಿಂದ ಅದು ಬರಲಿಲ್ಲ. ಈ ಸಂಚಿಕೆಯ ಹಿಂದೆ, ಅನೇಕ ಕೈಗಳು, ಮನಸ್ಸುಗಳು ಕೆಲಸ ಮಾಡಿವೆ. ಎಲ್ಲರಿಗಿಂತ ಮುಖ್ಯವಾಗಿ 'ಶೂದ್ರ' ಪತ್ರಿಕೆಯನ್ನು ನಿರಂತರವಾಗಿ ಹೊರತರುತ್ತಿರುವ ಅದರ ಸಂಪಾದಕ ಶೂದ್ರ ಶ್ರೀನಿವಾಸ್‌ರ ಶ್ರದ್ಧೆ ಈ ಸಂಚಿಕೆಯನ್ನು ನಿಮ್ಮ ಮುಂದಿಡಲು ಕಾರಣವಾಗಿದೆ. ನಾವು ಕೇಳಿದ ಲೇಖಕರೆಲ್ಲಾ ಸ್ವಲ್ಪ ತಡವಾಗಿಯಾದರೂ, ಲೇಖನಗಳನ್ನು, ಪ್ರಶ್ನೆಗಳಿಗೆ ಪ್ರತಿಕ್ರಿಯೆಗಳನ್ನು ಕಳಿಸಿಕೊಟ್ಟು ಉಪಕರಿಸಿದ್ದಾರೆ. ಇವರೆಲ್ಲರಿಗೂ ನಮ್ಮ ವಂದನೆಗಳು.

ಬೆಂಗಳೂರು — ಎಸ್. ಚಂದ್ರಶೇಖರ್

2–5–1993

ಡಾ|| ಅಂಬೇಡ್ಕರ್ ಮತ್ತು ಮಹಾರಾಷ್ಟ್ರ, ಆಂಧ್ರ ಹಾಗೂ ಕರ್ನಾಟಕಗಳಲ್ಲಿನ ದಲಿತ ಚಳುವಳಿ

— ಡಾ. ಗೈಲ್ ಒಮ್‌ವೆಡ್ಟ್

ಪೀಠಿಕೆ

ಭಾರತದ ಜಾತಿ ಆಧಾರಿತ ಸಾಮಾಜಿಕ ಸಂರಚನೆಯ ಮೇಲೆ ವಸಾಹತುಶಾಹಿಯು ಬೀರಿದ ಪ್ರಭಾವದ ಪರಿಣಾಮವಾಗಿ ರೂಪುಗೊಂಡ ಮತ್ತು 1917ರ ನಂತರದಲ್ಲಿ ಭಾರತೀಯ ಉಪಖಂಡದ ಬಹುತೇಕ ಭಾಗಗಳಲ್ಲಿ ತೀರ ವ್ಯವಸ್ಥಿತವಾದ ರೀತಿಯಲ್ಲಿ ಹುಟ್ಟಿಕೊಂಡ ದಲಿತ ಚಳುವಳಿಯ ಮಾದರಿಗಳನ್ನು ಗುರುತಿಸುವ ಪ್ರಯತ್ನ ಈ ಲೇಖನ. ಮಹಾರಾಷ್ಟ್ರ, ಆಂಧ್ರ ಮತ್ತು ಕರ್ನಾಟಕ–ಈ ಮೂರು ಭಾಷಾ ಪ್ರಾಂತ್ಯಗಳ ಅಧ್ಯಯನವನ್ನು ಆಧರಿಸಿ ಈ ಲೇಖನ ಬರೆಯಲಾಗಿದೆ. 1920ರ ದಶಕದಲ್ಲಿ ಈ ಚಳುವಳಿಯು ತನ್ನ ಪ್ರತ್ಯೇಕ ಉಗಮವನ್ನು ಹೊಂದಿದೆಯಾದರೂ 1930ರ ದಶಕದ ಮಧ್ಯಕಾಲದ ನಂತರ ಬಿ.ಆರ್. ಅಂಬೇಡ್ಕರ್‌ರ ನಾಯಕತ್ವದ ಪ್ರತ್ಯೇಕ ಚಳುವಳಿಯೆಂಬಂತೆ ಇದನ್ನು ಗುರುತಿಸಲಾಗಿದೆ. ಈ ದಲಿತ ಚಳುವಳಿಯು ಒಂದೆಡೆಗೆ ಸ್ಥೂಲಾರ್ಥದ ಬ್ರಾಹ್ಮಣೇತರ ಚಳುವಳಿಯೊಂದಿಗೆ – ಸಮಕಾಲೀನ ಚರಿತ್ರೆಯಲ್ಲಿದ್ದು ಜಾತಿ ವಿರೋಧಿ ಚಳುವಳಿಯಾಗಿ ಪ್ರತಿನಿಧೀಕರಣವನ್ನು ಪಡೆದಿದೆ–ಹೊಂದಿದ್ದ ಸಂಬಂಧಗಳೂ ಮತ್ತು ರಾಷ್ಟ್ರೀಯ ಚಳುವಳಿಯೊಂದಿಗೆ ಇದು ಹೊಂದಿದ್ದ ಅಂತಃಸಂಬಂಧಗಳೂ; ಮತ್ತೊಂದೆಡೆ ಕಮ್ಯುನಿಸ್ಟ್ ಮತ್ತು ಸಮಾಜವಾದೀ ನಾಯಕತ್ವದ ದುಡಿಯುವ ವರ್ಗ ಮತ್ತು ರೈತಚಳುವಳಿಗಳ ಜೊತೆಗಿನ ಇದರ ಸಂಬಂಧಗಳೂ ಸ್ವಾತಂತ್ರ್ಯಪೂರ್ವ ಸಂದರ್ಭದಲ್ಲಿನ ಸಾಮುದಾಯಿಕ ಮತ್ತು ರಾಷ್ಟ್ರೀಯ ಸಂಗ್ರಾಮಗಳ ಬೆಳವಣಿಗೆಯ ಹಿನ್ನೆಲೆಯಲ್ಲಿ ನಿರ್ಣಾಯಕ ಸ್ವರೂಪದ್ದಾಗಿದೆ. ಅಲ್ಲದೆ ಭಾರತದ ಸಂದರ್ಭದಲ್ಲಿನ ಮುಂದಿನ ಯಾವುದೇ ಕ್ರಾಂತಿಕಾರಕ ಬದಲಾವಣೆಗಳ ಸಂಬಂಧದಲ್ಲಿ ಕೂಡ ಇದು ನಿರ್ಣಾಯಕವಾದ ಅಂಶವಾದೀತೆಂದು ಕಾಣುತ್ತದೆ. ಈ ಹಿನ್ನೆಲೆಯಲ್ಲಿಯೇ ನಾವು ಅಂಬೇಡ್ಕರ್‌ರ ನಾಯಕತ್ವವನ್ನು ಮತ್ತು 'ಅಂಬೇಡ್ಕರ್‌ವಾದ', 'ಗಾಂಧೀವಾದ' ಹಾಗೂ ಮಾರ್ಕ್ಸ್‌ವಾದಗಳ [ಅದರ ಭಾರತೀಯ ಸ್ವರೂಪದ ಅರ್ಥದಲ್ಲಿ] ಅಧ್ಯಯನ ಮಾಡಬೇಕಾಗಿದೆ.

'ದಲಿತ ಚಳುವಳಿ' ಎಂಬುದನ್ನು ವ್ಯಾಖ್ಯಾನಿಸುವಾಗ ನಾವು (1) ಸಾಮಾಜಿಕ ಸುಧಾರಣಾ ಚಳುವಳಿಗೂ (2) ತೀವ್ರಗಾಮಿ ಜಾತಿ ಚಳುವಳಿಗೂ ಮತ್ತು (3) ಒಂದು ದಲಿತ ವಿಮೋಚನಾ ಚಳುವಳಿಗೂ ಇರುವ ವ್ಯತ್ಯಾಸಗಳನ್ನು ತಿಳಿಯಬಹುದು. ಮೊದಲನೆಯದು ಬದಲಾದ ಹಿಂದೂ ಸಾಮಾಜಿಕ ವ್ಯವಸ್ಥೆಯೊಳಗೆ ಕೆಳಜಾತಿಗಳನ್ನು ಸಮಾವೇಶಗೊಳಿಸುವ ಉದ್ದೇಶದ್ದಾಗಿದ್ದರೆ, ಎರಡನೆಯದು ಸ್ವಾಯತ್ತತೆಯನ್ನಾಧರಿಸಿದ್ದು ಸಮಾವೇಶತ್ವವನ್ನು ನಿರಾಕರಿಸುತ್ತದಲ್ಲದೆ ಹಿಂದೂಯೇತರ ಎಥ್ನಿಕ್-ಜನಾಂಗೀಯ ನೆಲೆಯಲ್ಲಿ ಜಾತಿಯ ಶ್ರೇಣೀಕರಣವನ್ನು ವಿರೋಧಿಸುತ್ತದೆ ಹಾಗೂ ಮುಸ್ಲಿಮರು ಮತ್ತು ಹಿಂದೂಯೇತರ ಗುಂಪುಗಳ ನಡುವೆ ಮೈತ್ರಿಯನ್ನು ಸಾಧಿಸಲೆತ್ನಿಸುತ್ತದೆ ಮತ್ತು ಕೊನೆಯದು ಕೂಡ ಸಮಾವೇಶತ್ವವನ್ನು ವಿರೋಧಿಸುತ್ತದೆಯಲ್ಲದೆ ದಲಿತರ ಸ್ವಾಯತ್ತ ಸಂಘಟನೆಯನ್ನೇ ಇದು ಆಧರಿಸಿದ್ದು ಆರ್ಥಿಕ ಶೋಷಣೆಯ ಮತ್ತು ಜಾತಿಯ ಶ್ರೇಣೀಕರಣದ ವಿರುದ್ಧ ಹೋರಾಡುತ್ತದೆ. ಹಾಗೆಯೇ ಮಧ್ಯಮ ಮತ್ತು ಕೆಳ ಹಿಂದೂ ಜಾತಿಗಳೊಂದಿಗೆ (ಬ್ರಾಹ್ಮಣೇತರ ಅಥವಾ ಬಹುಜನ ಸಮಾಜ) ಮತ್ತು ರೈತ ಕಾರ್ಮಿಕ ವರ್ಗಗಳೊಂದಿಗೆ ಸಹ ಮೈತ್ರಿಯನ್ನರಸುತ್ತದೆ.

ವಸಾಹತುಶಾಹಿ ಆಡಳಿತದ ಭಾರತದಲ್ಲಿ ಸಮಾವೇಶಕ ಸ್ವರೂಪಿಯಾದ ಸಾಮಾಜಿಕ ಸುಧಾರಣಾ ಪ್ರವೃತ್ತಿಯು ಗಾಂಧೀತತ್ವ (ಕಾಂಗ್ರೆಸ್) ಮತ್ತು ಹಿಂದೂ ಮಹಾಸಭಾ ಸಂಘಟನೆಗಳೆರಡರ ಒಳಗೂ ಕಾಣುತ್ತದೆ ಮತ್ತು ಜಗಜೀವನ್‌ರಾಂ, ನಾಗ್‌ಪುರದ ಜಿ. ಎ. ಗವಾಯ್ ಮತ್ತು ತಮಿಳುನಾಡಿನ ಎಂ.ಸಿ. ರಾಜಾ ಅಂತಹ ನಾಯಕರಲ್ಲಿ ಇದು ಪ್ರತಿನಿಧಿತವಾಗಿದೆ. ತೀವ್ರಗಾಮೀ ಜಾತಿ ಚಳುವಳಿಯ ನಿದರ್ಶನವು ಹೈದರಾಬಾದಿನ ದಲಿತ ಚಳುವಳಿಯ ಒಂದು ಗುಂಪಿನ ಪ್ರಯತ್ನಗಳಲ್ಲಿ (ಶ್ಯಾಮಸುಂದರ್ ಮೊದಲಾದವರು) ಕಾಣುತ್ತದಲ್ಲದೆ ಇಂದು ಬೆಂಗಳೂರಿನ ದಲಿತ್ ವಾಯ್ಸ್ ನಿಲುವಿನಲ್ಲೂ ಕಾಣಸುತ್ತದೆ. ಈ ನಿಟ್ಟಿನಲ್ಲಿ ದಲಿತ ವಿಮೋಚನಾ ಚಳುವಳಿಯ ಪ್ರಮುಖ ನಾಯಕರಾಗಿ ಅಂಬೇಡ್ಕರ್ ಅವರನ್ನು ಗಮನಿಸಬಹುದು. ಈ ಚಳುವಳಿಯು ಶೋಷಣೆಯ ವಿರುದ್ಧದ ಕ್ರಾಂತಿಕಾರಕ ಚಳುವಳಿಯಾಗಿದ್ದು 'ವರ್ಗ-ಜಾತಿ ತತ್ವ'ವನ್ನಾಧರಿಸಿದ ಮೊದಲ ಪ್ರಯತ್ನವಾಗಿದೆ. ಅಲ್ಲದೆ ಭಾರತೀಯ ಸಮಾಜದ ವಿಶಿಷ್ಟ ವಾಸ್ತವಗಳನ್ನು ಗ್ರಹಿಸುವಲ್ಲಿ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಸಮಾನತೆಗಳೆರಡಕ್ಕೂ ಹೋರಾಡುವಲ್ಲಿ ಈ ಚಳುವಳಿಯು ನಮ್ಮ ಸಾಂಪ್ರದಾಯಿಕ ಮಾರ್ಕ್ಸ್‌ವಾದ ಮತ್ತದರ ತತ್ವವಿಚಾರಗಳ ಮಿತಿಗಳನ್ನು ಗಮನಾರ್ಹವಾಗಿ ಮೀರಿದೆ.

ಈ ವಿಮೋಚನಾ ಮಾದರಿಯು 1930ರ ಅವಧಿಯ 'ಇಂಡಿಪೆಂಡೆಂಟ್ ಲೇಬರ್ ಪಾರ್ಟಿ'ಯಲ್ಲೇ ಸುಸ್ಪಷ್ಟವಾಗಿ ಕಾಣುತ್ತದೆ. ಈ ದಿನಗಳ ಅಂಬೇಡ್ಕರರ ರಾಜಕೀಯ

ನಿಲುವುಗಳು ಕಮ್ಯುನಿಸ್ಟ್–ಸೋಷಿಯಲಿಸ್ಟ್ ಎಡಪಂಥೀಯ ನಿಲುವುಗಳಿಗಿಂತ ಹೆಚ್ಚು ಸುಸಂಗತವಾಗಿದ್ದುವು ಮತ್ತು ಅವು ಕಾಂಗ್ರೆಸ್‌ನ ಬಾಲ ಭಾಗವಾಗಿ ಹೋದವು. ಐ.ಎಲ್.ಪಿ.ಯು ತನ್ನ ಬೆಳವಣಿಗೆಯಲ್ಲಿ ಸೋತದ್ದರ (ಈ ಸೋಲು ಇತರ ರಾಜಕೀಯ ಶಕ್ತಿಗಳ, ಅದರಲ್ಲೂ ಎಡಪಂಥೀಯ ಶಕ್ತಿಗಳ ಬೆಂಬಲದ ಅಭಾವದ ಪರಿಣಾಮ) ಪರಿಣಾಮವಾಗಿ ಅದೊಂದು ಕೇವಲ ದಲಿತ (ಅಖಿಲ ಭಾರತ) ಪರಿಶಿಷ್ಟ ಜಾತಿಯ ಫೆಡರೇಷನ್ ಮಾತ್ರವಾಗಿ ಉಳಿಯಿತು ಮತ್ತು ಇದು ವಿಮೋಚನೆಯ ಮಾದರಿಯಿಂದ ಕೊಂಚ ಭಿನ್ನವಾದ, ಸುಧಾರಣಾವಾದೀ ಮತ್ತು ತೀವ್ರಗಾಮಿ ಜಾತಿ ಚಳುವಳಿಗಳ ಮಿಶ್ರಣದಂತೆ ಕಾಣುವ, ಸರ್ಕಾರದಿಂದ ರಿಯಾಯಿತಿಗಳನ್ನು ಗಳಿಸುವತ್ತ ತನ್ನ ದೃಷ್ಟಿಯನ್ನು ಕೇಂದ್ರೀಕರಿಸಿದ ದಲಿತ ಚಳುವಳಿಯೊಂದಕ್ಕೆ ದಾರಿ ಮಾಡಿಕೊಟ್ಟಿತು. ಅಂಬೇಡ್ಕರರ ಜೀವಿತದ ಕೊನೆಯ ದಿನಗಳ ಘಟನೆಗಳಾದ ಸಂಯುಕ್ತ ಮಹಾರಾಷ್ಟ್ರ ಚಳುವಳಿ, ಬೌದ್ಧ ಧರ್ಮಕ್ಕೆ ಮತಾಂತರವಾದದ್ದು, ರಿಪಬ್ಲಿಕನ್ ಪಕ್ಷವನ್ನು ರೂಪಿಸಿದ್ದು – ಇವನ್ನು ಗಮನಿಸಿದರೆ ಮತ್ತೆ ವಿಮೋಚನೆಯ ಮಾದರಿಗೇ ಮರಳುವ ಯತ್ನವಿರುವುದು ಕಾಣುತ್ತದೆ. ಆದರೆ ಇದೊಂದು ಪ್ರಯತ್ನವಾಗಿತ್ತಷ್ಟೆ. ಹಾಗೆ ನೋಡಿದರೆ 'ಅಂಬೇಡ್ಕರ್‌ವಾದ'ದಲ್ಲೇ ಕೆಲವು ನ್ಯೂನತೆಗಳಿದ್ದುವು. ಈ ನ್ಯೂನತೆಗಳು ಮುಖ್ಯವಾಗಿ ಅವರು ನಂಬಿದ್ದ ಆದರ್ಶವಾದ (ಅವರು ಜಾತೀಯ ಶೋಷಣೆಯ ಬಹುಮುಖ್ಯ ಕಾರಣಗಳು ಹಿಂದೂ ಧರ್ಮದ ನೆಲೆಯಲ್ಲಿವೆಯೆಂದೇ ನಂಬಿದ್ದರು) ಮತ್ತು ರಾಜ್ಯತ್ವವಾದ (ದಾರಿದ್ರ್ಯ ಮತ್ತು ಆರ್ಥಿಕ ಶೋಷಣೆಯ ಪರಿಹಾರ ರಾಷ್ಟ್ರೀಯ ಸಮಾಜವಾದದಲ್ಲಿದೆಯೆಂಬ ನಂಬಿಕೆ)ಗಳ ಸಂಬಂಧವೇ ಆಗಿವೆ ಮತ್ತು ಇವು ಆ ಕಾಲಕ್ಕೆ ಪ್ರಭಾವಯುತವಾಗಿದ್ದ ಯಾಂತ್ರೀಕೃತ ಮಾರ್ಕ್ಸ್‌ವಾದವು ಅಂಬೇಡ್ಕರರ ಮೇಲೆ ಬೀರಿದ ಪ್ರಭಾವದ ಪರಿಣಾಮವಾಗಿ ಹುಟ್ಟಿದವುಗಳು. ಜಾತಿ ಸಂಬಂಧದ ಚರ್ಚೆಯೇ ಇರದ ವರ್ಗ ವಿಶ್ಲೇಷಣೆಯ ಕ್ಷುದ್ರ ಮೆಟೀರಿಯಲಿಸಂಗೆ ಪ್ರತಿಕ್ರಿಯಿಸುವಾಗ ಅಂಬೇಡ್ಕರ್ ಆದರ್ಶವಾದದತ್ತ ಹೋಗುತ್ತಾರೆ; ವೈಯಕ್ತಿಕ ಆಸ್ತಿಯ ಅವಕಾಶವೇ ಶೋಷಣೆಯ ಮೂಲವೆಂಬುದನ್ನು ಒಪ್ಪುವಾಗ ಆಸ್ತಿಯ ಮೇಲಿನ ರಾಜ್ಯದ ಒಡೆತನವನ್ನು ಅನುಮೋದಿಸುತ್ತಾರೆ. ಹೀಗೆ ಮಾಡುವಾಗ ಶೋಷಣೆಯಲ್ಲಿ ರಾಜ್ಯ ವಹಿಸುವ ಪಾತ್ರವನ್ನೂ, ರಾಜ್ಯ ಯಂತ್ರದ ಮೇಲಣ ಬ್ರಾಹ್ಮಣರ ಸ್ವಾಮ್ಯವನ್ನೂ ಅವರು ಮರೆಯುತ್ತಾರೆ. ಈ ಸಂಗತಿಗಳು ದಲಿತ ವಿಮೋಚನಾ ಚಳುವಳಿಗೆ ಇದ್ದ ಆಗತ್ಯವನ್ನು ಪೂರೈಸಲಾರದವು. ಹಾಗಾಗಿಯೇ ಆ ಚಳುವಳಿ ಸಮಾವೇಶತೆಗೂ ಕಾಂಗ್ರೆಸ್‌ನ ಪಿತೃತ್ವಪೂರ್ಣದ ದಯಾ ನೀತಿಗೂ ಬಲಿಯಾಗಬೇಕಾಯಿತು.

ಇದನ್ನು ಆ ಕಾಲದ ರಾಜಕೀಯ – ವಿಚಾರ ತತ್ವಗಳ ಸಂಘರ್ಷದ ನೆಲೆಯಲ್ಲೇ ಗ್ರಹಿಸಬೇಕು. ಸ್ಥೂಲವಾಗಿ 'ನೆಹರೂ ಮಾದರಿ'ಯನ್ನಾಧರಿಸಿ ಸಂರಚಿತವಾಗಿದ್ದ

ಕಾಂಗ್ರೆಸ್ಸಿನ ರಾಜಕೀಯ ತಂತ್ರೋಪಾಯಗಳನ್ನು ರೂಪಿಸುವಲ್ಲಿ ಗಾಂಧೀವಾದವು ಬಹು ಮುಖ್ಯ ಪಾತ್ರವನ್ನು ವಹಿಸಿತು. ಒಂದು ರೀತಿಯ ನೇರ ಪೋಷಕ ಪಿತೃವಿನ ಹೊಣೆ ಗಾರಿಕೆಯನ್ನು ತೋರಿಸಿಕೊಂಡುದರಲ್ಲಿ, 'ಹರಿಜನೋದ್ಧಾರದ'ದ ಉದ್ದೇಶದ ಜಾತಿ ಸುಧಾರಣೆಯ ಯತ್ನಗಳಲ್ಲಿ ಮಾತ್ರವಲ್ಲದೆ ಪರೋಕ್ಷವಾಗಿ ಜಗಜೀವನರಾಮ್‌ರಂಥ (ಅಂಬೇಡ್ಕರ್‌ಗೆ ಪರ್ಯಾಯವಾಗಿ ಜಗಜೀವನರಾಂ ಮತ್ತು ಅವರೊಂದಿಗೆ 'ದಮನಗೊಂಡ ವರ್ಗಗಳ ಲೀಗ್' ಮತ್ತು ಉಗ್ರಗಾಮಿ ರೈತ ಚಳುವಳಿಗೆ ಪರ್ಯಾಯವಾಗಿ 'ಬಿಹಾರ್ ಖೇತ್‌ಮಜ್ದೂರ್ ಸಂಘ') ನಾಯಕರನ್ನು ರೂಪಿಸಿದ್ದು-ಇವೆಲ್ಲ ಅಂಥ ತಂತ್ರೋಪಾಯಗಳ ಒಂದು ಭಾಗವೇ. ಈ ತಂತ್ರೋಪಾಯವು ಸ್ಪಷ್ಟವಾಗಿ ಮೇಲು ಜಾತಿ ಮತ್ತು ಕೆಳ ಜಾತಿಗಳ ಓಟುಗಳನ್ನು ಸೆಳೆಯಲು ತಕ್ಕ ನೆಲೆಗಟ್ಟನ್ನು ಮಧ್ಯಮ ವರ್ಗಕ್ಕೆ ವಿರುದ್ಧವಾಗಿ ರೂಪಿಸುವ 'ಹರಿಜನರು' ಇತ್ಯಾದಿಯಾಗಿ ಕರೆದುದಲ್ಲದೆ ಅವರ ಪ್ರಮುಖ ವೈರಿಯೆಂದರೆ ಹಿಂದುಳಿದ ಜಾತಿಗಳೇ ಎಂದು ಚಿತ್ರಿಸುವುದರಲ್ಲಿ ಇದು ಸ್ಪಷ್ಟವಿದೆ ಮತ್ತು ರೈತಾಪಿ ವರ್ಗದ ಸವಾಲುಗಳಿಗೆ ವಿರುದ್ಧವಾಗಿ ಗ್ರಾಮೀಣ ಬಡವರನ್ನು ಬೂರ್ಶ್ವಾಗಳೊಂದಿಗೆ ಒಗ್ಗೂಡಿಸುವ ಉದ್ದೇಶದ್ದು – ಇಂದಿರಾಗಾಂಧಿಯವರು 1967ರ ನಂತರದಲ್ಲಿ 'ಗರೀಬಿ ಹಟಾವೊ' ಘೋಷಣೆಯೊಂದಿಗೆ ಮಾಡಿದ್ದು ಇದನ್ನೇ. ಸಮಾಜವಾದಿತ್ವವನ್ನು ಆರೋಪಿಸಿಕೊಂಡ ಇಂಥ ತಂತ್ರೋಪಾಯಗಳಿಗೆ ದಲಿತ ಚಳುವಳಿ (ಬಹುಕಾಲದವರೆಗೆ) ಮತ್ತು ಮಾರ್ಕ್ಸ್‌ವಾದಿಗಳ ಒಂದು ದೊಡ್ಡ ವಲಯಗಳೆರಡೂ ಆಹುತಿಯಾದ ವೆನ್ನುವುದು ಸ್ಪಷ್ಟ ಮತ್ತು ಇದರ ಮೂಲ ನೆಲೆಗಳು 1930ರ ಸುಮಾರಿನ ದಲಿತ ಮತ್ತು ರೈತ ಚಳುವಳಿಗಳ ಸಂಬಂಧವಾಗಿರುವ ಕಾಂಗ್ರೆಸ್ಸಿನ ಪ್ರತಿಕ್ರಿಯೆಗಳಲ್ಲೇ ಇವೆ.

ಬೂರ್ಶ್ವಾ ಬ್ರಾಹ್ಮಣ ಕಾಂಗ್ರೆಸ್ ತಂತ್ರೋಪಾಯಗಳ ಗೆಲುವಿನ ಎದುರು ಮಾರ್ಕ್ಸ್‌ವಾದವು ಸೋಲೊಪ್ಪಿತಾದರೂ ಅದರ ಕಾರಣಗಳು ಒಟ್ಟಾರೆಯಾಗಿ ಎಡ ಪಂಥೀಯ ಚಳುವಳಿಯ ಒಳಗೆ ಇದ್ದ ಅತಿ ಯಾಂತ್ರಿಕಗೊಂಡ, ಸ್ಟೇಟಿಸ್ಟ್ ಸ್ವರೂಪದ ಚಾರಿತ್ರಿಕ ಮೆಟೀರಿಯಲಿಸಂನ ಪ್ರಾಬಲ್ಯ; ಜಾತಿ, ಲಿಂಗವೇ ಮೊದಲಾದವುಗಳ ಭಿನ್ನತೆ ಗಳನ್ನು ಗೌಣವಾಗಿ ಕಂಡ ವರ್ಗರಹಿತ ಸಂಗತಿಗಳೂ ಕಾರಣವಾಗಿವೆ. ಆದರೆ 1970ರ ನಂತರದಲ್ಲಿ ಭಾರತೀಯ ಕಮ್ಯುನಿಸ್ಟರಲ್ಲಾದ ವಿಭಜನೆಗಳು, ಅವರಲ್ಲಿನ ಗೊಂದಲಗಳು, ಭಾರತೀಯ ಸಮಾಜವಾದಿಗಳು ರಾಜಕೀಯವಾಗಿ ಪೂರ್ಣ ಕಣ್ಮರೆಯಾದುದು ಮತ್ತು 1980ರ ಸುಮಾರಿಗೆ ವ್ಯವಸ್ಥೆಯ ವಿರೋಧಿಯಾದ ಚಳುವಳಿಗಳ ಪ್ರಮುಖ ರೂಪ ವಾಗಲಿದ್ದ ಹೊಸ ಸಾಮಾಜಿಕ ಚಳುವಳಿಗಳ ಪ್ರಾರಂಭ–ಇವೆಲ್ಲದರ ಪರಿಣಾಮವಾಗಿ ಈ ಪ್ರಾಬಲ್ಯವು ಕೊನೆಯಾಗಬೇಕಾಯಿತು. ಇಷ್ಟಾಗಿ ಕೂಡ 'ಸಾಂಪ್ರದಾಯಿಕ ಮಾರ್ಕ್ಸ್‌ವಾದ'ಕ್ಕೆ ತಾತ್ವಿಕವಾದ ಮತ್ತು ಪ್ರಾಯೋಗಿಕವಾದ ಸವಾಲುಗಳು ಎಲ್ಲ

ನೆಲೆಗಳಲ್ಲೂ ಕಾಣಬರುತ್ತಿದ್ದರೂ ಅದರ ಸ್ಥಾನದಲ್ಲಿ ಅದಕ್ಕೆ ಪರ್ಯಾಯವಾಗಲಿಲ್ಲ. ಬೇರೊಂದು ತತ್ವದ ಅಥವಾ ತತ್ವಪ್ರಣಾಲಿಯು ಸ್ಪಷ್ಟವಾಗಿ ರೂಪುಗೊಳ್ಳಲಿಲ್ಲ. ಸ್ವಾತಂತ್ರ್ಯೋತ್ತರ ಅವಧಿಯ ದಲಿತ ಚಳುವಳಿಯು ಇಂಥ ಒಂದು ಹೊಸ ಸಾಮಾಜಿಕ ಚಳುವಳಿಯಾಗಿದ್ದರೂ, ಮಾರ್ಕ್ಸ್‌ವಾದವನ್ನು ಕುರಿತ ತನ್ನದೇ ಅಭಿಪ್ರಾಯಂಗಳನ್ನು ಹೊಂದಿಯೂ, ತನ್ನದೇ ಆದ ಕೊಡಂಗೆಗಳನ್ನು ನೀಡುವ ಸಾಧ್ಯತೆಗಳಿದ್ದಾಗಲೂ ಅಸ್ತಿತ್ವದಲ್ಲಿದ್ದ ಕೆಲವು ಗೋಂದಲಗಳ ಪರಿಣಾಮವಾಗಿ ಇದು ಸಾಧ್ಯವಾಗಲಿಲ್ಲ. ಹೀಗಾಗಿ 1967–75ರ ಅವಧಿಯು ಮೂಲತಃ ನೇತ್ಯಾತ್ಮಕವಾದುದು; ಸಂಕ್ರಮಣ ಶೀಲವಾದುದು; ಉಗ್ರಗಾಮೀ ದಲಿತ ಚಳುವಳಿಯೊಂದರ ಪುನರ್ ಪ್ರಾದುರ್ಭಾವ ದೊಂದಿಗೆ (ಪುನರ್ ಪ್ರಾದುರ್ಭವಿಸಿದ ಬ್ರಾಹ್ಮಣೇತರ ಅಥವಾ ಇತರ ಹಿಂದುಳಿದ ವರ್ಗ ಗಳ ಅವಧಿ 1975–1980) ಅಂಬೇಡ್ಕರರ ಪರಂಪರೆಯ ಜೊತೆ ಗುರುತಿಸಿಕೊಳ್ಳಲೆತ್ನಿಸುವ ಆದರೆ ಅಸ್ಪಷ್ಟ ಗುರಿಯನ್ನುಳ್ಳ, ಆ ಪರಂಪರೆಯ ಮಿತಿಗಳನ್ನು ಮೀರಲಾಗದ ಸ್ವರೂಪದ್ದು. ಬಹುಜನ ಸಮಾಜ ಪಕ್ಷ ಮತ್ತು ಪ್ರಕಾಶ್ ಅಂಬೇಡ್ಕರರ ಭಾರತೀಯ ರಿಪಬ್ಲಿಕನ್ ಪಕ್ಷಗಳಂತಹ ಹೊಸ ದಲಿತ ರಾಜಕೀಯ ಸಂಘಟನೆಗಳು ಕಾಣಿಸಿಕೊಂಡರೂ ಸಹ 1990ರ ಸ್ಥಿತಿ ಕೂಡ ಇನ್ನೂ ಅಸ್ಪಷ್ಟವಿದೆ; ಸ್ಥೂಲಾರ್ಥದ ಎಡಪಂಥೀಯ – ಬಹುಜನ–ದಲಿತ–ಶ್ರಮಿಕ–ರೈತ ಮೈತ್ರಿಯೊಂದು ಪುನರ್ನಿರ್ಮಾಣವಾಗುತ್ತಿದ್ದರೂ ಬಂಡವಾಳಶಾಹಿಯ ಸಂದಿಗ್ಧಗಳ ಪರಿಣಾಮವಾಗಿ ರೂಪುಗೊಳ್ಳುತ್ತಿರುವ ಚಳುವಳಿಯ ಸಂಕ್ರಮಣಕಾಲದ ಆಯಾಮವು ಏನಿದ್ದರೂ ಹೊಸ ಯುಗವೊಂದನ್ನು ಪ್ರವೇಶಿಸುವ ನೆಲೆಯಲ್ಲಿದೆಯಷ್ಟೆ.

ದಲಿತ ಚಳುವಳಿಯ ಚಾರಿತ್ರಿಕ ಮತ್ತು ಸಾಮಾಜಿಕ ಹಿನ್ನೆಲೆ :

ಜಾತಿ : ತತ್ವಮೀಮಾಂಸೆ :

ಜಾತಿ ವ್ಯವಸ್ಥೆಯ ಕುರಿತ ಬೂರ್ಶ್ವಾ ಅಥವಾ ಉದಾರವಾದೀ ತತ್ವಗಳು ಮಾಡಿದ ತಪ್ಪೇನೆಂದರೆ ಜಾತಿವ್ಯವಸ್ಥೆಯೊಳಗಿನ ಶೋಷಣೆಯನ್ನು ಮತ್ತು ವೈರುಧ್ಯ ಗಳನ್ನು ಗಮನಕ್ಕೆ ತೆಗೆದುಕೊಳ್ಳದೇ ಹೋದದ್ದು. ಹಾಗೆಯೇ ಜಾತಿವ್ಯವಸ್ಥೆಯ ಶ್ರೇಣೀಕೃತ ಮೌಲ್ಯಗಳು ಕೆಳಜಾತಿಗಳಿಂದ ಒಪ್ಪಿತವಾದುದನ್ನು ನಂಬುತ್ತಾ, ಜಾತಿ ಎಂಬುದನ್ನು ದಕ್ಷಿಣ ಏಷಿಯಾದ ಸಾಮಾಜಿಕ ಸಂರಚನೆಯೊಳಗೆ ಖಾಯಂ ಆದ, ಬದಲಾವಣೆಯಾಗದ ಸಂಗತಿಯೆಂದು ತಿಳಿದದ್ದು. ಅದೇ ರೀತಿ ಸಾಂಪ್ರದಾಯಿಕ ಮಾರ್ಕ್ಸ್‌ವಾದೀ ತತ್ವಗಳು ಸಮಾಜದ ವಾಸ್ತವದ ನೆಲೆಗಿಂತ ಅದರ ಭೌತಾತೀತ/ ಮೇಲುಸ್ತರದ ನೆಲೆಯ ಒಂದು ಭಾಗವಾಗಿ ಜಾತಿಯನ್ನು ನೋಡುವಲ್ಲಿ ಮತ್ತು ವರ್ಗ

(ಶೋಷಣೆಯನ್ನು) ವನ್ನು ಕುರಿತ ಅಸಮಗ್ರ ಪರಿಕಲ್ಪನೆಯನ್ನು ರೂಪಿಸುವಲ್ಲಿ ತಪ್ಪು ಮಾಡಿದರು. ಇಂತಹ ಮಿತಿಗಳನ್ನು ಮೀರುವ ಪ್ರಯತ್ನಗಳನ್ನು ಮಾಡಿದ ಶರದ್ ಪಾಟೀಲ್‌ರಂಥ ಹೊಸ ಮಾರ್ಕ್ಸ್‌ವಾದಿಗಳು ವರ್ಗ ಮತ್ತು ಜಾತಿಗಳನ್ನು ಯಾಂತ್ರಿಕ ವಾಗಿ ಸಮೀಕರಿಸುವವರ ಕಾರಣಕ್ಕಾಗಿ ಮತ್ತು ಸಾಂಪ್ರದಾಯಿಕ ಮಾರ್ಕ್ಸ್‌ವಾದದ 'ವರ್ಣತ್ವ'ವನ್ನು ವಿಮರ್ಶಿಸಲು ವಿಫಲವಾದದ್ದರ ಕಾರಣಕ್ಕಾಗಿ ಸೋತರು. ಯಂತ್ರ ಚಾರಿತ್ರಿಕ ಮೆಟೀರಿಯಲಿಸ್ಟ್ ವಾದವೊಂದು ಸಮಾಜದಲ್ಲಿನ ಶೋಷಣೆಯ ಪ್ರಕ್ರಿಯೆ ಯನ್ನು (ಉತ್ಪಾದನೆ, ಆಸ್ತಿಯ ಸ್ವಾಧೀನ ನಿರಾಕರಣೆ ಮತ್ತು ಅಧಿಕ ಶ್ರಮಿಕರ ಸಂಚಯದ ನೆಲೆಗಳಲ್ಲಿ) ವಿಶ್ಲೇಷಿಸಬೇಕು ಮತ್ತು ಅಂಥ ವಿಶ್ಲೇಷಣೆಯ ಆಧಾರದ ಮೇಲೆ ಶೋಷಕರು ಯಾರು, ಯಾರು ಶೋಷಿತರು ಮತ್ತು ಹೇಗೆ ಶೋಷಿತರು ತಮ್ಮ ವಿಮೋಚನೆಯ ದಿಕ್ಕಿನತ್ತ ಸಾಗಲು ಸಂಘಟಿತರಾಗಬಹುದು ಎಂಬುದನ್ನು ನಿರ್ಧರಿಸ ಬಹುದು. ಈ ನೆಲೆಯಿಂದ ಭಾರತೀಯ ಸಮಾಜವನ್ನು ವಿಶ್ಲೇಷಿಸುತ್ತಾ ಜಾತಿ ವ್ಯವಸ್ಥೆಯು ಚಾರಿತ್ರಿಕವಾಗಿ ಮೂರು ಸ್ತರದ ವ್ಯವಸ್ಥೆಯಾಗಿ (ನಾಲ್ಕು ವರ್ಣಗಳಲ್ಲಿ) ಬೆಳೆಯುತ್ತಿರುವುದನ್ನೂ, ಅವರೊಳಗೆ ಹೇಗೆ ಸ್ಥೂಲವಾದ ಎರಡು ವರ್ಗ/ಭಾಗಗಳಿವೆ ಯೆಂಬುದನ್ನೂ--ಶೋಷಿತರು; ಶ್ರಮಿಕರಾದ ಶೂದ್ರ ರೈತಾಪಿಗಳು ಮತ್ತು ಕುಶಲ ಕರ್ಮಿಗಳು ಹಾಗೂ ಅಶುದ್ಧರಾದ ಅತಿಶೂದ್ರರು ಅಥವಾ ದಲಿತರು; ಶೋಷಕರು : ದ್ವಿಜರಾದ ಬ್ರಾಹ್ಮಣರು, ಕ್ಷತ್ರಿಯರು (ನಿಜದಲ್ಲಿ ರಾಜಶಕ್ತಿಯನ್ನು ಹೊಂದಿದ ಇವರೇನೂ ಒಂದು ಜಾತಿಯೆಂದು ಗುರುತಿಸಲು ಬಾರದು) ಮತ್ತು ವೈಶ್ಯರು– ಗುರುತಿಸಬಹುದು. ವರ್ಣ ಅಥವಾ ವರ್ಣಾಶ್ರಮ ವ್ಯವಸ್ಥೆಯು ಜಾತಿಗಿಂತ ಮೊದಲಿಗೆ ಇದ್ದ ಸಾಮಾಜಿಕ ವ್ಯವಸ್ಥೆಯಲ್ಲ. ಜಾತಿ ಮತ್ತು ವರ್ಣಗಳೆರಡೂ ದಕ್ಷಿಣ ಏಷ್ಯಾದ ಆರ್ಯಪೂರ್ವ ಸಾಮಾಜಿಕ ಸಂರಚನೆಯಲ್ಲೇ ತಮ್ಮ ಬೇರುಗಳನ್ನು ಹೊಂದಿವೆ (ಅದರಲ್ಲೂ ದ್ರಾವಿಡ ಸಮಾಜಗಳಲ್ಲಿ). ಸಿಂಧೂ ಕಣಿವೆಯ ಸಂಸ್ಕೃತಿಯ ಪತನಾನಂತರದ ಅವಧಿಯಲ್ಲಿ ಮತ್ತು ಗಂಗಾ ಕಣಿವೆಯಲ್ಲಿ ಆರ್ಯರ ಆಗಮನ ಮತ್ತು ಅವರ ರಾಜ್ಯಗಳ ಉದಯದೊಂದಿಗೆ ಶೋಷಣೆಯು ಒಂದು ಸಾಮಾಜಿಕ ವ್ಯವಸ್ಥೆಯಾಗಿ ರೂಪು ಗೊಂಡಿದ್ದು ಮತ್ತು ಇವು ಸಾಮಾಜಿಕ ವ್ಯವಸ್ಥೆಯಾಗಿ ರೂಪುಗೊಂಡದ್ದು ಬುದ್ಧನ ನಂತರದ ಮನು ಮತ್ತು ಶಂಕರಾಚಾರ್ಯರಂಥ ಬ್ರಾಹ್ಮಣ ತಾತ್ವಿಕರುಗಳಿಂದ ಕ್ರಿ.ಶ. 6 ರಿಂದ 10ನೇ ಶತಮಾನದ ಅವಧಿಯ ಊಳಿಗಮಾನ್ಯ ಪದ್ಧತಿಯ ಬೆಳವಣಿಗೆಯು ರಾಜಶಕ್ತಿಯನ್ನು ಬಳಸುವ ಮೂಲಕ ಹಿಂದೂಧರ್ಮವು ಪ್ರಬಲ ಸ್ವರೂಪದ್ದಾಗಿ ಕ್ರೋಢೀಕರಣಗೊಳ್ಳಲು ಮತ್ತು ಇಂದಿನ ಜಾತಿ ವ್ಯವಸ್ಥೆಯ-ಗ್ರಾಮದ ಹೊರಗೆ ಬದುಕುವವರನ್ನು ಪ್ರತ್ಯೇಕವಾಗಿ 'ಅಸ್ಪೃಶ್ಯ' ಎಂದು ವಿವರಿಸುವ ಮೂಲಕ– ನೆಲೆಗೊಳ್ಳುವಿಕೆಗೆ ಕಾರಣವಾಯಿತು.

ಶೂದ್ರ

ಇನ್ನು ಮುಂದೆ ತೆಲುಗು, ಮರಾಠಿ ಮತ್ತು ಕನ್ನಡ ಮಾತನಾಡುವ ಜನರ ಪ್ರದೇಶಗಳ ವಿಶಿಷ್ಟ ಲಕ್ಷಣಗಳನ್ನೂ ಈ ಪ್ರದೇಶಗಳ 'ಮಧ್ಯಕಾಲೀನ [illegible]' ಏನೆಂಬುದನ್ನೂ ಪರಿಶೀಲಿಸಬಹುದು.

ಭೂ ಒಡೆತನದ ಸಂಬಂಧದಲ್ಲಿ ಈ ಪ್ರದೇಶಗಳ ಈ ನೆಲೆಯಲ್ಲಿ ಬ್ರಾಹ್ಮಣೇತರರು (ಮರಾಠ-ಕುಣ್ಬಿಗಳು, ಒಕ್ಕಲಿಗರು ಮತ್ತು ಲಿಂಗಾಯಿತರು, ಕಾಪುಗಳು-ರೆಡ್ಡಿಗಳು ಮತ್ತು ಕಮ್ಮ) ಮತ್ತು ದಲಿತ (ಮಹರ್‌ಗಳು, ಮಾಂಗ್ಸ್, ಮಲಸ್, ಮಾದಿಗರು ಮತ್ತು ಹೊಲೆಯರು) ಗುಂಪಿನ ಜಾತಿಗಳ ನಡುವೆ ಇರುವ ಗುರುತರ ಪ್ರಾದೇಶಿಕ ವ್ಯತ್ಯಾಸಗಳನ್ನು ಕಾಣಬಹುದು (ನೋಡಿ : ಕೋಷ್ಟಕ 1 ಮತ್ತು 2). ಸ್ಥೂಲವಾಗಿ ಹೇಳುವುದಾದರೆ, ಕರಾವಳಿ ಮತ್ತು ನದೀಮುಖಜ ಭೂಪ್ರದೇಶಗಳಿಗೆ – ಈ ಪ್ರದೇಶಗಳಲ್ಲಿ ಅತಿ ಹೆಚ್ಚು ಭೂ ಒಡೆತನ ಮತ್ತು ಭೂರಹಿತ್ಯತೆಯಿದೆ–ಖುಷ್ಕಿ (ಬರಡು) ಭೂಮಿಯ ಪ್ರದೇಶಗಳನ್ನು ಹೋಲಿಸಿದರೆ ಅಲ್ಲಿ ಹೆಚ್ಚು ಸಮಾನತೆಯನ್ನು ಕಾಣಬಹುದು. ಕರ್ನಾಟಕ (ಅದರಲ್ಲೂ ಹಳೆಯ ಮೈಸೂರು ಪ್ರಾಂತ್ಯ) ಮತ್ತು ಮಹಾರಾಷ್ಟ್ರಗಳಲ್ಲಿನ ದಲಿತರನ್ನು ಆಂಧ್ರದ ಮಧ್ಯಮ ಜಾತಿಗಳ ರೈತರಿಗೆ ಹೋಲಿಸಿದಾಗ ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿನ ದಲಿತರ ಸ್ಥಿತಿ ಇದ್ದುದರಲ್ಲಿ ಉತ್ತಮವಾಗಿದ್ದಿತೆನ್ನಬೇಕು. ಮಹಾರಾಷ್ಟ್ರದಲ್ಲಿ ಮುಂಬೈ ಮತ್ತು ನಾಗಪುರಗಳ ಬಟ್ಟೆ ಗಿರಣಿಗಳ ಉದ್ಯೋಗಾವಕಾಶಗಳು ಅಲ್ಲಿನ ದಲಿತರಿಗೆ ದೊರೆತವು. ಒಂದು ಅರ್ಥದಲ್ಲಿ ಇದ್ದುದರಲ್ಲಿ ಪ್ರಬಲ ದಲಿತ ಚಳುವಳಿಯೊಂದು ಮರಾಠಿ ಪ್ರದೇಶಗಳಲ್ಲಿ ರೂಪುಗೊಳ್ಳಲು ಇದು ಒಂದು ನೆಲೆಯನ್ನು ಒದಗಿಸಿತು.

ಕೋಷ್ಟಕ 1 :

ಭೂ ಒಡೆತನ, ಭೂರಹಿತ್ಯತೆ ಮತ್ತು ಅಸಮಾನತೆ, 1971

	'ಭೂರಾಹಿತ್ಯತೆ' ಭೂಮಿಯನ್ನು ಅನುಭವಿಸುತ್ತಿರದ ಗ್ರಾಮೀಣ ಕುಟುಂಬಗಳು ಶೇಕಡಾವಾರು	ಕುಟುಂಬಗಳ ಸರಾಸರಿ ಭೂಮಿ (ಎಕರೆಗಳಲ್ಲಿ)	Gini Co-efficient Ratio
ಆಂಧ್ರ	33.4 (10.28)*	3.43	0.7030
ನದೀಮುಖಜ ಪ್ರದೇಶಗಳು	49.31 (11.89)*	1.93	

* ಕಂಸದೊಳಗಿನ ಸಂಖ್ಯೆಗಳು ಭೂಮಿಯನ್ನು ಹೊಂದಿಲ್ಲದ ಕುಟುಂಬಗಳ ಶೇಕಡಾವಾರನ್ನು ಸೂಚಿಸುತ್ತವೆ.

ತೆಲಂಗಾಣ	27.14	(7.09)	4.83	
ರಾಯಲಸೀಮಾ	29.44	(9.20)	4.68	
ಕರ್ನಾಟಕ	**31.3**	**(15.09)**	5.43	0.6547
ಕರಾವಳಿ ಪ್ರದೇಶ	45.16	(40.26)	1.74	
ಒಳನಾಡು ಪ್ರದೇಶ	36.31	(23.57)	4.74	
ಮೈಸೂರು	25.07	(13.09)	3.44	
ಮುಂಬೈ ಕರ್ನಾಟಕ	31.45	(8.32)	8.00	
ಮಹಾರಾಷ್ಟ್ರ	**32.4**	**(15.24)**	6.51	0.6488
ಕೊಂಕಣ	28.75	(20.34)	3.18	
	26.19	(18.09)	6.01	
ಖಾಂದೇಶ್	36.25	(27.58)	6.24	
ಮರಾಠವಾಡ	34.94	(8.31)	9.53	
ವಿದರ್ಭ	36.92	(10.35)	7.76	
ಪೂರ್ವ	27.85	(9.79)	4.11	
ಇಂಡಿಯಾ (ಸರಾಸರಿ)	27.6	(9.31)	3.78	0.6551

ಮೂಲ : ಅಖಿಲ ಭಾರತ ಸಾಲ ಮತ್ತು ಬಂಡವಾಳ ಹೂಡಿಕೆ ಸಮೀಕ್ಷೆ (ಆರ್.ಬಿ.ಐ. – ಎನ್.ಎಸ್.ಎಸ್.) 1971–72

ಕೋಷ್ಟಕ 2 (ಎ) :

ಜಾತಿ ಮತ್ತು ಕೃಷಿ ಸಂಬಂಧಿ ವೃತ್ತಿ 1921 (ಪುರುಷ ಕೆಲಸಗಾರರು)

	ಒಟ್ಟು ಕೆಲಸಗಾರರು (ಸಂಖ್ಯೆ)	ಭೂಮಿ ಗೇಣಿ ಮೂಲಕ ಬಂದ ಆದಾಯ ಶೇಕಡಾವಾರು	ಉಳುಮೆದಾರರು ಶೇಕಡಾವಾರು	ಕೃಷಿ ಕಾರ್ಮಿಕರು ಶೇಕಡಾವಾರು
ಮೈಸೂರು ರಾಜ್ಯ (1921)				
ಬ್ರಾಹ್ಮಣ	51,221	17.13	21.79	0.35

ಲಿಂಗಾಯತ	1,42,366	3 15	79 43	2.62
ಒಕ್ಕಲಿಗ	2,46,329	0.44	89.83	2.08
ಹೊಲೆಯ	1,67,289	0 97	35.95	37,72
ಮಾದಿಗ	63,363	1.58	451.3	26.17
ಹೈದರಾಬಾದು ರಾಜ್ಯ (1921)				
ಬ್ರಾಹ್ಮಣ	79,345	7.37	17.52	0.32
ಮರಾಠ	5,00,638	6.99	60.90	16.33
ಲಿಂಗಾಯತ (ಅಂಗಡಿ ಮುಂಗಟ್ಟು ಹೊಂದಿರುವವರು)*	1,70,508	3.50	9.01	1.30
ಕಾಪು	2,91,130	1.60	51.56	26.15
ತೆಲಗ	1,46,230	1.01	61.22	15.68
ಮಹರ್/ಮಾಲ	1,30,008	3.79	8.40	8,25
(ಕೆಳದರ್ಜೆ ವೃತ್ತಿ)*				(65.33)*
ಮಾದಿಗ	2,03,492	0 65	10.28	10.16
(ಕೆಳದರ್ಜೆ ವೃತ್ತಿ)*				(83.54)*
ಚಂಭರ್	37,991	1.07	4 21	7.69
ಮದರಾಸು ಪ್ರಾಂತ್ಯ (1911)				
ಬ್ರಾಹ್ಮಣ, ತೆಲುಗು	27,029	34.53	32.37	0.29
ಬ್ರಾಹ್ಮಣ, ಕನ್ನಡ	10,647	13.96	71.89	0.08
ಹೊಲೆಯ	29,696	–	3.29	75.46
ಮಾಲ	1,96,259	0.18	14.78	71.89
ಮಾದಿಗ	79,924	1.17	10.71	54.71
ಕೇಂದ್ರೀಯ ಪ್ರಾಂತ್ಯಗಳು ಮತ್ತು ಬೆರರ್ (1921)				
ಬ್ರಾಹ್ಮಣ	1,49,193	3.22	36.67	6.22

ಮರಾಠ	65,520	4.29	46.00	27.78
ಕುಣ್ಬಿ	3,85,268	—	55.00	34.08
ಮಹರ್/ಮೆಹ್ರ	2,80,101	2.09	22.37	41.02
(ಹತ್ತಿ ಬಟ್ಟೆ ನೇಕಾರರು)*				(11.33)*
ಮಾಂಗ್	26,007	1.25	3.42	47.73
(ದೇಶೀ ಸಂಗೀತಗಾರರು)				(21,97)*
ಮುಂಬಯಿ ಆಡಳಿತ ಪ್ರಾಂತ್ಯ (1911)				
ಬ್ರಾಹ್ಮಣ, ಚಿತ್ಪಾವನ	10,407	17.00	2.47	0.13
ಬ್ರಾಹ್ಮಣ, ದೇಶಸ್ಥ	14,494	18.68	64.55	2.69
ಲಿಂಗಾಯಂತ	2,05,813	3.24	83.54	22.39
ಮರಾಠ	4,26,649	1.58	47.63	14.93
ಕುಣ್ಬಿ	3,19,813	1.59	66.88	20.67
ಮಹರ್, ಹೊಲೆಯ, ಧೇದ್	69,542	0.75	48.79	22,63
ಮಾಂಗ್, ಮಾದಿಗ	22,672	0.52	16.69	41,71

ಕೋಷ್ಟಕ 2 (ಬಿ) :

ಜಾತಿ ಮತ್ತು ಕೃಷಿ ಸಂಬಂಧಿ ವೃತ್ತಿ 1921 (ಸ್ತ್ರೀ ಕೆಲಸಗಾರರು)

	ಸ್ತ್ರೀ ಮತ್ತು ಪುರುಷ ಕೆಲಸಗಾರರ ಶೇಕಡಾವಾರು	ಭೂಮಿ ಗೇಣಿ ಮೂಲಕ ಬಂದ ಆದಾಯ	ಉಳುಮೆ ದಾರರು	ಕೃಷಿ ಕಾರ್ಮಿಕರು
ಮೈಸೂರು ರಾಜ್ಯ (1921)				
ಬ್ರಾಹ್ಮಣ	10.58	37.38	25.61	3.62
ಲಿಂಗಾಯಂತ	20.34	12.25	49.97	17.80
ಒಕ್ಕಲಿಗ	18.71	2.09	72,13	7.57
ಹೊಲೆಯ	35.22	1.26	11.35	61.63
ಮಾದಿಗ	31.51	1.96	13.12	56.36

ಶೂದ್ರ

ಹೈದರಾಬಾದು ರಾಜ್ಯ (1921)				
ಬ್ರಾಹ್ಮಣ	18.12	15 68	33 97	—
ಮರಾಠ	63.03	3 06	54 60	31.71
ಲಿಂಗಾಯತ	52.49	6.44	16.73	1.92
ಕಾಪು	50 95	1.21	70 07	19.75
ತೆಲಗ	75.22	1.08	57.26	20.87
ಮಹರ್/ಮಾಲ	98.83	2 66	13.90	34.40
(ಕೆಳದರ್ಜೆ ವೃತ್ತಿಗಳು)*				(37.24)*
ಮಾದಿಗ	84.63	1.00	7.86	38.94
(ಕೆಳದರ್ಜೆ ವೃತ್ತಿಗಳು)*				(73.55)*
ಚಂಭರ್	59.79	0.76	10.37	2,98
ಮದರಾಸು ಪ್ರೆಸಿಡೆನ್ಸಿ (1911)				
ಬ್ರಾಹ್ಮಣ, ತೆಲುಂಗು	25.69	54.60	34.74	0.11
ಬ್ರಾಹ್ಮಣ, ಕನ್ನಡ	28.10	14.74	69.25	0.40
ಹೊಲೆಯ	1,37.73	—	2.45	84.43
ಮಾಲ	85.53	0.16	8.48	87.55
ಮಾದಿಗ	70.69	3.98	2.89	82.31
ಕೇಂದ್ರೀಯ ಪ್ರಾಂತ್ಯಗಳು ಮತ್ತು ಬೆರಾರ್ (1921)				
ಬ್ರಾಹ್ಮಣ	34.58	2.71	45.61	15.40
ಮರಾಠ	51.23	2.55	21.97	58.00
ಕುಣ್ಬಿ	70.79	—	32.65	52.16
ಮಹರ್/ಮೆಹ್ರ	91.28	0.40	16.56	60.25
(ಹತ್ತಿ ಬಟ್ಟೆ ನೇಕಾರರು)*				(9.76)*
ಮಾಂಗ್	99.42	0.20	1.29	66.04
(ದೇಶೀ ಸಂಗೀತಗಾರರು)*				(2.41)

ಮುಂಬೈ ಪ್ರೆಸಿಡೆನ್ಸಿ (1911)				
ಬ್ರಾಹ್ಮಣ, ಚಿತ್ಪಾವನ	15.00	30.17	3.14	1.54
ಬ್ರಾಹ್ಮಣ, ದೇಶಸ್ಥ	11.09	40.08	22.77	2.43
ಲಿಂಗಾಯತ	56.15	3.49	25.41	46.24
ಮರಾಠ	68.53	1.57	47.67	30.84
ಕುಣ್ಬಿ	71.73	1.07	54.23	41.35
ಮಹರ್, ಹೊಲೆಯ, ಧೇದ್	76.63	0.34	43.50	41.58
ಮಾಂಗ್, ಮಾದಿಗ	79.13	0.55	6.33	66.79

* ಪಾರಂಪರಿಕ/ಸಾಂಪ್ರದಾಯಿಕ ವೃತ್ತಿಗಳನ್ನು ಸೂಚಿಸುತ್ತದೆ.

ಮೂಲ : ಇಂಡಿಯಾ ಜನಗಣತಿ, 1911, 1921

ವಸಾಹತುಶಾಹಿಯು ಜಾಗತಿಕ ಮಟ್ಟದಲ್ಲಿ ಬಂಡವಾಳದ ಸಂಚಯನವನ್ನು ಪ್ರತಿನಿಧಿಸಿತಾಗಿ ಭಾರತೀಯ ರೈತಾಪಿಗಳು, ಕುಶಲಕರ್ಮಿಗಳು ಮತ್ತು ದಲಿತರು ಶೋಷಣೆಯ ಪ್ರಕ್ರಿಯೆಯ ಒಂದು ಭಾಗವಾಗಿ ಹೋದರು. ಹೆಚ್ಚಿನ ಆದಾಯ ಸಂಗ್ರಹಣೆಗೆ 1930ರ ವರೆಗೂ ರೈತಾಪಿಗಳಿಂದ ಹೆಚ್ಚಿನ ಕಂದಾಯ ವಸೂಲಿಯೊಂದೇ ಶೀರ ಪ್ರಾಥಮಿಕವಾದ ಮಾರ್ಗವಾಗಿತ್ತು. ರೈತಾಪಿಗಳ ಪ್ರತಿಭಟನೆಯ ಮೂಲಕ ಇದು ಕೊನೆಗೊಂಡಿತು. ಸಾಲ ನೀಡುವವರು, ವರ್ತಕರು ಮತ್ತು ಜಮೀನ್ದಾರರು (ಫೂಲೆ ಹೇಳುವಂತೆ ಇಂಡಿಯಾದ ಆಡಳಿತಶಾಹಿ ಕೂಡ)ಗಳೆಲ್ಲರೂ ಮಧ್ಯವರ್ತಿಗಳಾದ ಶೋಷಕರು ಯುರೋಪಿನ ಕಾರ್ಖಾನೆಗಳಿಗೆ ಬೇಕಾದ ಸುಲಭ ಬೆಲೆಯ ಕಚ್ಚಾ ವಸ್ತುಗಳ ಅವಕಾಶವಿದ್ದುದು, ಯುರೋಪಿಯನ್ ಜನರಿಗೆ ಬೇಕಾದ ಸುಲಭ ಬೆಲೆಯ ಗ್ರಾಹಕ ವಸ್ತುಗಳು ಇಲ್ಲಿನ ತೀವ್ರ ಬಡತನಕ್ಕೆ/ದಾರಿದ್ರ್ಯಕ್ಕೆ, ಪರಿಸರದ ನಾಶ ಮತ್ತು ಅರಣ್ಯ ನಾಶಕ್ಕೆ ಕಾರಣವಾದವು. ಇಂಥದನ್ನು ವಿರೋಧಿಸಿದ ಎರಡು ಪಂಥಗಳು ಹುಟ್ಟಿದವು–ಒಂದು, ಮೇಲು ವರ್ಗದ (ಜಾತಿಯ) ಬ್ರಾಹ್ಮಣರ ಪ್ರಾಬಲ್ಯವಿದ್ದ ರಾಷ್ಟ್ರೀಯವಾದ (ಮತ್ತು ಅದರ ಜೊತೆಗಿನ ಸಮಾಜ ಸುಧಾರಣಾ ಚಳುವಳಿಗಳು); ಮತ್ತೊಂದು, ಇಂಡಿಯಾದ ಪುನರ್ ನಿರ್ಮಾಣದತ್ತಣ ಹೋರಾಟದ ಒಂದು ಭಾಗವಾಗಿ ಸಾಮ್ರಾಜ್ಯಶಾಹಿಯ ವಿರುದ್ಧದ ಸಂಗ್ರಾಮವನ್ನು ಕೈಗೆತ್ತಿಕೊಂಡ ಜನ ಸಮುದಾಯದ ನೆಲೆಯ ದಲಿತ ಮತ್ತು ಉಗ್ರಗಾಮೀ ಬ್ರಾಹ್ಮಣೇತರ ಚಳುವಳಿ (ಫೂಲೆಯುವರಿಂದ ಮೊದಲಾದ) ಮತ್ತು ರೈತ ಕಾರ್ಮಿಕರ ಹೋರಾಟಗಳು.

ದಲಿತ ಚಳುವಳಿಗಳ ಉಗಮ (1900-1035)

1917ರ ನಂತರದ ಅವಧಿಯಲ್ಲಿ ದಲಿತ ಚಳುವಳಿಗಳು ಇಂದಿನ ಮಹಾರಾಷ್ಟ್ರ, ಆಂಧ್ರ, ಕರ್ನಾಟಕಗಳ ಎಲ್ಲ ಭಾಗಗಳಲ್ಲಿಯೂ ಕಾಣಿಸಿಕೊಂಡವು. ಕೇಂದ್ರೀಯ ಪ್ರಾಂತ್ಯಗಳ ಮರಾಠಿ ಭಾಷಿಕ ಜಿಲ್ಲೆಗಳಲ್ಲಿ; ಹೈದರಾಬಾದು ನಿಜಾಮನ ಊಳಿಗಮಾನ್ಯ ಸ್ವರೂಪದ ಆಡಳಿತದಲ್ಲಿ; ಆಂಧ್ರ ಮತ್ತು ಮದರಾಸು ಆಧಿಪತ್ಯದ ಕೃಷಿ ಅಭಿವೃದ್ಧಿಯನ್ನು ಹೊಂದಿದ ಕರಾವಳಿ ಪ್ರದೇಶಗಳಲ್ಲಿ; ಇದ್ದುದರಲ್ಲಿ ಶ್ರೀಮಂತವಾದ, ಸುಧಾರಣವಾದೀ ಹಿಂದೂ ರಾಜ್ಯವಾದ ಮೈಸೂರು ರಾಜ್ಯದಲ್ಲಿ; ಮತ್ತು ಮರಾಠಿ ಭಾಷಿಕ ಮುಂಬೈ ಪ್ರಾಂತ್ಯದಲ್ಲಿ ಈ ಚಳುವಳಿಗಳು ಸ್ವತಂತ್ರವಾಗಿಯೇ ಬೆಳೆದವು (ಪಂಜಾಬಿನ ಅದ್-ಧರ್ಮ ಚಳುವಳಿ, ಉತ್ತರ ಪ್ರದೇಶದ ಪಶ್ಚಿಮ ಭಾಗದ ಆದಿಲ ಹಿಂದೂ ಚಳುವಳಿ, ಬಂಗಾಳದ ನಾಮಶೂದ್ರ ಮತ್ತು ತಮಿಳುನಾಡಿನ ಆದಿದ್ರಾವಿಡ ಚಳುವಳಿಗಳು–ಇಂಥ ಪ್ರಬಲ ಚಳುವಳಿಗಳನ್ನೂ ಇಲ್ಲಿ ಗಮನಿಸಬಹುದು; ಬಿಹಾರ್ ಮತ್ತು ಗುಜರಾತ್‌ನಂತಹ ಪ್ರಾಂತ್ಯಗಳು ಹೆಚ್ಚು ಸಂಸ್ಕೃತೀಕರಣದ ಮತ್ತು ಸಮಾವೇಶಕ ಪ್ರವೃತ್ತಿಗಳನ್ನು ತೋರಿಸುತ್ತವೆ.

ಈ ಚಳುವಳಿಗಳ ಕೆಲವು ಸಾಮಾನ್ಯ ಲಕ್ಷಣ ಸ್ವರೂಪಗಳು ಹೀಗಿವೆ :

1. ಇವೆಲ್ಲ ಚಳುವಳಿಗಳೂ ಸ್ಪಷ್ಟವಾಗಿ ಜಾತಿ ವಿರೋಧಿಗಳು; ಮತ್ತು ಕೇವಲ ಸುಧಾರಣವಾದೀ ಸ್ವರೂಪದವಲ್ಲ. ಶಿಕ್ಷಣ ಮತ್ತು ಉದ್ಯೋಗಾವಕಾಶ ಹಾಗೂ ರಾಜಕೀಯ ಸಂಘ ಸಂಸ್ಥೆಗಳಲ್ಲಿನ ಅವಕಾಶಗಳಿಗಾಗಿ ಒತ್ತಾಯಿಸುವುದರ ಜೊತೆಗೆ ಎಲ್ಲ ಕಡೆಯೂ ಒಳಗಿನ ಸುಧಾರಣೆಗಳು (ಉದಾ : ಮಾಂಸಾಹಾರ, ಮದ್ಯಪಾನಗಳನ್ನು ತ್ಯಜಿಸುವಿಕೆ ಮತ್ತು ಬ್ರಾಹ್ಮಣ್ಯದ ಶ್ರೇಣೀಕರಣದೊಳಗೆ ಜಾತಿಯನ್ನು ಅತ್ಯಂತ ನಿಕೃಷ್ಟವನ್ನಾಗಿಸಿದ ಆಚಾರಗಳ ತಿರಸ್ಕಾರ; ಒಳ ಜಾತಿಗಳಲ್ಲಿ ವಿವಾಹ ಸಂಬಂಧಗಳನ್ನು ಸ್ಥಾಪಿಸುವುದರ ಮೂಲಕ ಬೆಳೆಯುತ್ತ ಹೋದ ಸಮಗ್ರತೆ ಇತ್ಯಾದಿ) ಕಾಣಬರುತ್ತವೆ. ಇವಲ್ಲದೆ ಕೆಲ ಮಟ್ಟಿನ ಸಾಂಸ್ಕೃತಿಕವಾದ ತೀವ್ರ ಸುಧಾರಣೆಯ ಸಂಗತಿಯೂ, ಹಿಂದೂ ಅಲ್ಲದ ಸಂಗತಿಯ ಸಮರ್ಥನೆಯೂ ಇಲ್ಲಿದೆ. ಆಂಧ್ರದ ಕರಾವಳಿ ಪ್ರದೇಶ, ಹೈದರಾಬಾದು ಮತ್ತು ಮೈಸೂರುಗಳಲ್ಲಿದ್ದ 'ಆರ್ಯೇತರ' ಎಂಬ ತತ್ವದೊಳಗೆ ಸಮಾವೇಶಗೊಂಡಿದ್ದು ಈ ತತ್ವವು ದಲಿತರನ್ನು ಮೂಲನಿವಾಸಿಗಳಾಗಿಯೂ, ಆರ್ಯ-ಬ್ರಾಹ್ಮಣ-ಧಾಳಿಕಾರರಿಂದ ದಾಸ್ಯಕ್ಕೆ ಗುರಿಯಾದವರೆಂದೂ ಗುರುತಿಸುತ್ತವೆ. ದಲಿತರು 'ಆದಿ-ಆಂಧ್ರ', 'ಆದಿ-ಕರ್ನಾಟಕ', 'ಆದಿ-ಹಿಂದೂ' ತಮ್ಮನ್ನು ತಾವು ಗುರುತಿಸಿಕೊಂಡುದರ ನೆಲೆ ಕೂಡ ಇಲ್ಲಿನದೇ. ಫೂಲೆ ನಂತರ ಸತ್ಯಶೋಧಕ ಚಳುವಳಿಯು ಪ್ರಚುರತೆ

ಜೊಂದಿಗೆ ಮಹಾರಾಷ್ಟ್ರದಲ್ಲಿ ಕೂಡ ಈ ಸಂಗತಿ ಕಾಣಬರುತ್ತದೆ ಮತ್ತು ಪ್ರಾರಂಭದ ದಲಿತ ನಾಯಕರಾದ ಕಿಸಾನ್ ಫಾಗೂಜಿ ಬನ್‌ಸೋದೆ ಮತ್ತು ಗೋಪಾಲ್ ಬಾಬಾ ವಾಲಂಗ್‌ಕರ್ ಮೊದಲಾದವರ ಬರವಣಿಗೆಗಳಲ್ಲೂ ಇದು ಕಾಣುತ್ತದೆ. ಆದರೆ ಅಂಬೇಡ್ಕರ್ ಇದನ್ನೆಲ್ಲ ಒಪ್ಪಲು ತಿರಸ್ಕರಿಸಿದರು ಮತ್ತು ಈ ಸಂಗತಿಯು ಮಹಾರಾಷ್ಟ್ರದಲ್ಲಿನ ದಲಿತ ಚಳುವಳಿಯ ಕುರಿತಾದ ಬಹುಮುಖ್ಯ ಬರಹಗಳಲ್ಲಿ ದಾಖಲಾಗಿಲ್ಲ.

2. ಎಲ್ಲ ಕಡೆಯೂ ಶೋಷಿತ ಕೂಲಿಕಾರ್ಮಿಕರಾದ, ಕೃಷಿ ಕಾರ್ಮಿಕರಾದ ಮತ್ತು ರೈತಾಪಿಗಳಾದ ದಲಿತರು ಆರ್ಥಿಕ ಸಂಗತಿಗಳನ್ನು ಮುಖ್ಯವಾಗಿ ಗಮನಿಸುತ್ತ 1920ರ ನಂತರದಲ್ಲಿ ವರ್ಗದ ಪ್ರಶ್ನೆಗಳನ್ನು ಎತ್ತಿಕೊಂಡರು. ಅಂಥದರಲ್ಲಿ ತೀರ ಮುಖ್ಯವಾದವುಗಳು ಭೂಮಿಯ ಪ್ರಶ್ನೆ (ಮುಖ್ಯವಾಗಿ ವ್ಯವಸಾಯಕ್ಕಾಗಿ ನಿರುಪಯುಕ್ತವಾಗಿದ್ದ ಅರಣ್ಯ ಭೂಮಿಯ ಬೇಡಿಕೆ), ವೆತ್‌ಬೆಗರ್‌ನ ವಿರೋಧ (ಎಂದರೆ ಜಾತಿ ಶೋಷಣೆಯು ಉಳಿಗಮಾನ್ಯ ರೂಪವಿದು) –ಮಹಾರಾಷ್ಟ್ರದಲ್ಲಿನ 'ಮಾಹರ್ ವತನ್'ನ ವಿರೋಧವೂ ಸೇರಿದಂತೆ ಮತ್ತು 'ದುಡಿಯುವ ವರ್ಗದ ಹಕ್ಕು'ಗಳಿಗಾಗಿ ಮುಂದಿಟ್ಟ ಬೇಡಿಕೆಗಳು (ಬೆಂಗಳೂರು, ನಾಗ್‌ಪುರ ಮತ್ತು ಮುಂಬೈಗಳಲ್ಲಿ ನಡೆದ ಕಾರ್ಮಿಕ ಚಳುವಳಿಯ ಪ್ರಮುಖರಾಗಿದ್ದವರೆಲ್ಲ ದಲಿತ ಕಾರ್ಯಕರ್ತರೇ).

ಪ್ರಮುಖವಾದ ಪ್ರಾದೇಶಿಕ ಭಿನ್ನತೆಗಳನ್ನೂ ಇಲ್ಲಿ ಗಮನಿಸಬೇಕು. ಉದಾ : ಸ್ವಾಯತ್ತ ರಾಜಪ್ರಭುತ್ವದ ಅಸ್ತಿತ್ವವು (ಇದು ಒಂದೋ ಹೈದರಾಬಾದಿನಲ್ಲಿ ಹೆಚ್ಚು ಊಳಿಗಮಾನ್ಯ ಸ್ವರೂಪದ್ದು ಆಗಿದ್ದರೆ ಮೈಸೂರಿನಲ್ಲಿ ಮೇಲುಸ್ತರದ ಸುಧಾರಣಾವಾದಿಯಾಗಿ ಕಾಣುತ್ತದೆ) ದಲಿತ ಚಳುವಳಿಯ ಪ್ರಾದುರ್ಭಾವವು ತಡವಾಗುವಂತೆ ಅಥವಾ ಅದನ್ನು ಮೃದುಗೊಳಿಸುವಲ್ಲಿ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಿಗೆ ಸಂಬಂಧಿಸಿದಂತೆ ಮತ್ತು ಸಾಮುದಾಯಿಕ ಚಳುವಳಿಗಳೊಂದಿಗೆ ಬೆರೆಯುವಲ್ಲಿ ದಲಿತ ಮುಂದಾಳುಗಳು ನಿಧಾನಗತಿಯನ್ನು ಹಿಡಿದರು. ಇದು ಹೈದರಾಬಾದು ಮತ್ತು ಮೈಸೂರುಗಳೆರಡರ ವಿಷಯದಲ್ಲೂ ನಿಜ. ಮಹಾರಾಷ್ಟ್ರದಲ್ಲಿ ಕಾರ್ಮಿಕ ವರ್ಗವು ಪರಿಣಾಮಕಾರಿಯಾದ ದಲಿತ ಚಳುವಳಿಯೊಂದರ ಉಗಮಕ್ಕೆ ಸಹಕಾರಿಯಾಯಿತು. ಬೆಂಗಳೂರಿನ ಮತ್ತು ಕೆ.ಜಿ.ಎಫ್.ನ ಸಂಘಟನೆಗಳು ಮತ್ತು ಅವುಗಳ ತೀವ್ರಗಾಮಿತ್ವವು ಇದೇ ಮಟ್ಟದ ಪರಿಣಾಮವನ್ನೇನೂ ಬೀರಲಿಲ್ಲ. ಇದೇಕೆಂದರೆ ಇಲ್ಲಿನ ಬಹುಪಾಲು ಕಾರ್ಮಿಕರೆಲ್ಲ ತಮಿಳರೇ ಆಗಿದ್ದು, ಅವರ ತೀವ್ರತರ ಭಾವನೆಗಳು ಕನ್ನಡ ಭಾಷಿಕರಾದವರಿಗೆ ತಲುಪುವಲ್ಲಿ ಅವರ ನಡುವಿದ್ದ ಸಾಂಸ್ಕೃತಿಕ ಮತ್ತು

ಶೂದ್ರ

ಭಾಷಿಕ ಕಂದರಗಳು ಸಹಕಾರಿಯಾಗಿರಲಿಲ್ಲ. ಕೂಲಿ ಕಾರ್ಮಿಕರಾಗಿ ಮತ್ತು ರೈತಾಪಿಗಳಾಗಿ ದಲಿತರ ಸ್ಥಿತಿಗತಿಗಳಲ್ಲಿರುವ ಭಿನ್ನತೆಗಳು ಸಂಕೀರ್ಣವಾದುವಾದರೂ ಗಮನಾರ್ಹವಾಗಿವೆ. ಆಂಧ್ರದ ಕರಾವಳಿ ಪ್ರಾಂತ್ಯದಲ್ಲಿ (ಹೆಚ್ಚು ಪ್ರಮಾಣದ ಭೂರಾಹಿತ್ಯತೆಯಿಲ್ಲಿದೆ) ವಾಣಿಜ್ಯೀಕರಣ ಮತ್ತು ಸಂಚಲನಗಳು 'ಆದಿ-ಆಂಧ್ರ'ದಂತಹ ಚಳುವಳಿಯೊಂದನ್ನು ರೂಪಿಸಲು 1920ರ ವೇಳೆಗೆ ಕಾರಣವಾದುವಾದರೂ 1930ರ ಸುಮಾರಿಗೆ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷಗಳೊಳಗೆ ಇವೆಲ್ಲ ಸೇರಿಹೋದವು. ಆದರೆ ಮಹಾರಾಷ್ಟ್ರದಲ್ಲಿ ಇದ್ದುದರಲ್ಲಿ ಉತ್ತಮವೆನ್ನಬಹುದಾದ ಸ್ಥಿತಿಯ ದಲಿತರು (ಹೆಚ್ಚಾಗಿ ತೀರ ಚಿಕ್ಕ ಉಳುಮೆಗಾರರು) ಒಂದು ಶಕ್ತಿಶಾಲೀ ಸ್ವಾಯತ್ತ ಚಳುವಳಿಯನ್ನು ರೂಪಿಸಿದಂತೆ ಕಾಣುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ಮಹಾರಾಷ್ಟ್ರದಲ್ಲಿ ದಲಿತ ಚಳುವಳಿಯ ಪ್ರಾದುರ್ಭವಕ್ಕಿದ್ದ ಆಶಾದಾಯಕವಾದ ಸಂದರ್ಭಗಳು ಅಂಬೇಡ್ಕರ್ ಅವರು ಒಬ್ಬ ನಾಯಕನಾಗಿ ರೂಪುಗೊಳ್ಳಲು ಬೇಕಾದ ಹಿನ್ನೆಲೆಯೊಂದನ್ನು ಒದಗಿಸಿದವು. ಹಾಗೆಯೇ ಅಂಬೇಡ್ಕರರ ನಾಯಕತ್ವವು ರಾಷ್ಟ್ರವ್ಯಾಪೀ ದಲಿತ ಚಳುವಳಿಯೊಂದನ್ನು ರೂಪಿಸಿತು.

ಇಡಿಯಾಗಿ ಗಮನಿಸಿದಾಗ ಈ ದಲಿತ ಚಳುವಳಿಯ ಪ್ರಮುಖವಾದ ನಾಲ್ಕು ಅಂಶಗಳು ಕಾಣುತ್ತವೆ :

ಮೊದಲನೆಯದು, ಸಂಘಟನೆಯ ಸಾಮರ್ಥ್ಯ ಮತ್ತು ಆರ್ಥಿಕ ಸಂಪನ್ಮೂಲಗಳ ವಿಷಯದಲ್ಲಿ ಎಷ್ಟೇ ಅಶಕ್ತವಾಗಿದ್ದರೂ ಬ್ರಾಹ್ಮಣೇತರ ಚಳುವಳಿಯು ದುಡಿಯುವ/ಕಾರ್ಮಿಕ ವರ್ಗ ಮತ್ತು ರೈತಾಪಿ ವರ್ಗಗಳು ಸಂಘಟನೆಯ ರೂಪವನ್ನು ರೂಪಿಸಿಕೊಳ್ಳುತ್ತಿರುವ ಕಾಲಕ್ಕೆ ದಲಿತ ಚಳುವಳಿಯು ಒಂದು ರಾಜಕೀಯ ಶಕ್ತಿಯಾಗಿ ರೂಪುಗೊಂಡಿತು. ಬೇರೊಂದು ಮಾತಿನಲ್ಲಿ ಹೇಳುವುದಾದರೆ ದಲಿತರು ಮತ್ತು ಮಧ್ಯಮ ಜಾತಿಗಳು ಒಂದೊಂದು ಸಮುದಾಯಗಳಾಗಿ (ಬ್ರಾಹ್ಮಣೇತರರು, ಕಾರ್ಮಿಕರು/ದುಡಿಮೆಗಾರರು ಅಥವಾ ರೈತಾಪಿ ವರ್ಗದ ಹಾಗೆಯೇ) ರಾಜಕಾರಣಕ್ಕೆ ಕಾಲಿರಿಸಿದವು ಮತ್ತು ಕಾಂಗ್ರೆಸ್, ಹಿಂದೂ ಮಹಾಸಭಾ ಅಥವಾ ವಾಮಪಂಥೀಯರೊಂದಿಗೆ ಸವಾಲಾಗಿ ನಿಲ್ಲಬಲ್ಲ ಶಕ್ತಿಗಳಾಗಿ ತಮ್ಮ ಪ್ರವೇಶವನ್ನು ಕಂಡುಕೊಂಡವು.

ಎರಡನೆಯದು, ಪ್ರಬಲ ಶಕ್ತಿಯಾದ ಬ್ರಾಹ್ಮಣೇತರ ಚಳುವಳಿ, ಕಾರ್ಮಿಕ ವರ್ಗ ಮತ್ತು ರೈತಾಪಿ ಚಳುವಳಿಗಳು 1930ರ ಹೊತ್ತಿಗೆ ಕಾಂಗ್ರೆಸ್ಸಿ

ನೊಳಗೆ ರಾಜಕೀಯವಾಗಿ ಸಮ್ಮಿಳಿತವಾದದ್ದರ ಪರಿಣಾಮವಾಗಿ 1940ರ ವೇಳೆಗೆ ಕಾಂಗ್ರೆಸ್ ಸಾಮ್ರಾಜ್ಯಶಾಹಿಯ ವಿರೋಧಿಯಾದ ಸಂಯುಕ್ತ ವೇದಿಕೆಯ ರೂಪವನ್ನು ಪಡೆದುಬಿಟ್ಟಿತು. ಫುಲೆಯಂತಹವರು, ಪೆರಿಯಾರ್ ಅಂತಹವರು ಇಂತಹ ಸಮ್ಮಿಳಿತಕ್ಕೆ ತಮ್ಮ ವಿರೋಧವನ್ನು ಹೊಂದಿರುವಾಗಲೂ ಬ್ರಾಹ್ಮಣೇತರ ಚಳುವಳಿ; ಕಾರ್ಮಿಕ/ದುಡಿಯುವ ವರ್ಗ ಸತತವಾಗಿ ಬಿಕ್ಕಟ್ಟನ್ನು ಅನುಭವಿಸುತ್ತಿರುವಾಗಲೂ,ಅದರ ಹಿತಾಸಕ್ತಿಗಳಿಗೇ ಕಾಂಗ್ರೆಸ್ ವಿದ್ರೋಹವನ್ನು ಬಗೆದಿರುವಾಗಲೂ ಈ ದಾರಿಯನ್ನು ಹಿಡಿದದ್ದು ಬಹುಮಟ್ಟಿಗೆ ಕಮ್ಯುನಿಸ್ಟರು ಮತ್ತು ಸಮಾಜವಾದಿಗಳು ತೆಗೆದುಕೊಂಡ ರಾಜಕೀಯ ತೀರ್ಮಾನಗಳ ಕಾರಣದಿಂದಾಗಿಯೇ. ಆದರೆ ಇದು ದಲಿತ ಚಳುವಳಿಯ ವಿಷಯದಲ್ಲಿ ಆಗಲಿಲ್ಲ. ಬಹುಶಃ ಇದು ಸಂಪೂರ್ಣವಾಗಿ ಅಂಬೇಡ್ಕರರ ನಾಯಕತ್ವದ ಕಾರಣಕ್ಕೆ ಎನ್ನುವುದು ಚರಿತ್ರೆಯ ಒಳಗೆ ಒಬ್ಬ ವ್ಯಕ್ತಿಯ ಪಾತ್ರದ ಮಹತ್ವ ಎಂಥದೆಂಬುದನ್ನು ಸೂಚಿಸುತ್ತದೆ. 'ಬ್ರಾಹ್ಮಣ-ಬೂರ್ಶ್ವಾ' ಕಾಂಗ್ರೆಸ್ಸಿನೊಳಗೆ ಸಮಾವೇಶದ ಆಸಕ್ತಿಯ ಪ್ರವೃತ್ತಿಗಳನ್ನು ಹೊಂದಿದ್ದ ಕೆಲವು ದಲಿತ ನಾಯಕರ ವಿರುದ್ಧ ಬಹುವಾಗಿ ಹೋರಾಡಿದರು ಮತ್ತು ಇಂಥ ಹೋರಾಟದ ಮೂಲಕವೇ ದಲಿತ ಚಳುವಳಿಯನ್ನು ಒಂದು ಸ್ವತಂತ್ರ ಚಳುವಳಿಯಾಗಿ ಉಳಿಸಿದರು.

ಮೂರನೆಯದು, ಕಾಂಗ್ರೆಸ್ಸಿಗೆ ರಾಜಕೀಯವಾಗಿ ಪರ್ಯಾಯ ಸಾಧ್ಯತೆಯೊಂದನ್ನು ಅನ್ವೇಷಿಸುವಾಗ; ಬ್ರಾಹ್ಮಣೇತರರೊಂದಿಗೆ (ದಲಿತ–ಬಹುಜನ, ಅಥವಾ ಶೂದ್ರ–ಅತಿ ಶೂದ್ರರ) ಮೈತ್ರಿಯನ್ನು ಅರಸುವಾಗ; ಅಸ್ಪೃಶ್ಯತೆಯ ನಿರ್ಮೂಲನೆ ಮಾತ್ರವಲ್ಲದೆ ಜಾತಿ ವ್ಯವಸ್ಥೆಯ ನಾಶಕ್ಕೆ ಹೋರಾಡುವಾಗ ಅಂಬೇಡ್ಕರ್ ಸಾಮಾನ್ಯವಾಗಿ ಜ್ಯೋತಿಬಾ ಫುಲೆಯವರಿಂದ ಪ್ರಾರಂಭವಾದ ಪರಂಪರೆಯ ದಾರಿಯನ್ನೇ ಹಿಡಿಯುತ್ತಿದ್ದರು. ಶೋಷಣೆಯ ಪೂರ್ಣಾರ್ಥದ ಸಮಗ್ರ ತತ್ವ ಮತ್ತು ಭಾರತೀಯ ಸಂದರ್ಭದಲ್ಲಿ ಶೋಷಿತರ ವಿಮೋಚನೆಯ ಚಳುವಳಿಯೊಂದನ್ನು ಕಟ್ಟುವತ್ತಣ ಪ್ರಯತ್ನಗಳು ಅವರವು. ಈ ನಿಟ್ಟನಲ್ಲಿ ಅವರು ಯಶಸ್ವಿಯಾಗಲಿಲ್ಲ ಎನ್ನುವುದು ಬೇರೆಯ ಪ್ರಶ್ನೆ.

ನಾಲ್ಕನೆಯದು, ಆರ್ಯೇತರ ಎಂಬ ಅಂಶವನ್ನು ಒಪ್ಪದೆ ಅಂಬೇಡ್ಕರ್ ನಿರಾಕರಿಸಿದ್ದು ಸಂದರ್ಭದಲ್ಲಿ ದಲಿತರ ಶೋಷಣೆಯ ಸಂಬಂಧದಲ್ಲಿ ನೀಡಲಾಗುತ್ತಿದ್ದ ಜನಾಂಗೀಯ ವಿವರಣೆಯ ನಿರಾಕರಣೆಯೇ ಆಗಿರುವ ಕಾರಣಕ್ಕಾಗಿ ಅದು ಮಹತ್ವದ್ದಾಗಿದೆ. ಆದರೆ ಅವರೇನೂ ಇದಕ್ಕೆ ಭಿನ್ನವಾದ ಚಾರಿತ್ರಿಕ ವಿವರಣೆಯೊಂದನ್ನು ನೀಡುವಲ್ಲಿ ಯಶಸ್ವಿಯಾಗಲಿಲ್ಲ ಎನ್ನುವ ಮಾತು ಬೇರೆ.

1930ರಿಂದ 1935ರ ವರೆಗಿನ ಅವಧಿಯನ್ನು ಒಂದು ತಿರುವಿನ ಘಟ್ಟವೆಂದು ಕರೆಯಬಹುದು. ದುಂಡುಮೇಜಿನ ಪರಿಷತ್ತಿನ ಸಭೆ ಮತ್ತು ಪೂನಾ ಒಪ್ಪಂದಗಳ ಘಟನೆಗಳು 'ಗಾಂಧೀವಾದ'ವನ್ನು ಕುರಿತ ಅಂಬೇಡ್ಕರರ ನಿರಾಕರಣೆಯನ್ನೂ ಮಾರ್ಕ್ಸ್‌ವಾದದಿಂದ ಅವರು ದೂರ ಸರಿದುದನ್ನೂ ಸ್ಪಷ್ಟವಾಗಿ ಸೂಚಿಸಿದವು. ಇದರ ಪರಿಣಾಮವಾಗಿ ಹಿಂದೂ ಧರ್ಮಕ್ಕೆ ಪರ್ಯಾಯವಾದ ಧರ್ಮವೊಂದರ ಅನ್ವೇಷಣೆಗೆ (1935ರ ಅಕ್ಟೋಬರ್‌ನಲ್ಲಿ ಮತಾಂತರದ ಘೋಷಣೆಯಲ್ಲಿ ಸ್ಪಷ್ಟವಾದಂತೆ) ಮತ್ತು ತೀವ್ರಗಾಮೀ ವರ್ಗ-ಜಾತಿ ಆಧಾರಿತವಾದ ಒಂದು ಸ್ವಾಯತ್ತ ರಾಜಕೀಯ ಸಂಘಟನೆಯ ಅನ್ವೇಷಣೆಗೆ (1936ರ ಆಗಸ್ಟ್‌ನಲ್ಲಿ ಇಂಡಿಪೆಂಡೆಂಟ್ ಲೇಬರ್ ಪಾರ್ಟಿ ಅಥವಾ ಸ್ವತಂತ್ರ ಮಜ್ದೂರ್ ಪಕ್ಷದ ಸ್ಥಾಪನೆಯಲ್ಲಿದು ಸ್ಪಷ್ಟವಾಗಿ ಕಾಣುತ್ತದೆ) ಅಂಬೇಡ್ಕರರು ತೊಡಗಿದರು.

ಮುಂಬೈ ಪ್ರೆಸಿಡೆನ್ಸಿಯಲ್ಲಿ ತೀವ್ರಗಾಮೀ ಸುಧಾರಣೆಯ ವರ್ಷಗಳು (1936–1942)

ಇಂಡಿಯನ್ ಲೇಬರ್ ಪಾರ್ಟಿಯು ಮೂಲತಃ ದಲಿತರಿಂದಲೇ ಕೂಡಿದ ಒಂದು ತೀವ್ರಗಾಮೀ ಪಕ್ಷ. ಆದರೂ ರೈತ ಕಾರ್ಮಿಕರ ಉಪೇಕ್ಷಿತ ಹಿತಗಳನ್ನೊಳಗೊಂಡಿರುವುದರ ಜೊತೆಗೆ ಕಾಂಗ್ರೆಸ್‌ಗೆ ಪರ್ಯಾಯವಾಗಿ ದಲಿತರು, ಬ್ರಾಹ್ಮಣೇತರರು, ರೈತಾಪಿಗಳು ಮತ್ತು ಕಾರ್ಮಿಕರ/ಶ್ರಮಿಕರನ್ನೆಲ್ಲ ತನ್ನ ಕೆಂಬಾವುಟದ ಅಡಿಯಲ್ಲಿ ತರಲು (ಅಂಬೇಡ್ಕರರ 'ಜನತಾ' ವಾರಪತ್ರಿಕೆಯಲ್ಲಿ ಮತ್ತು ಚಳುವಳಿಯ ಗೀತೆಗಳಲ್ಲಿ ಈ ಸಂಗತಿಯ ವಿವರಗಳಿವೆ) ಪ್ರಯತ್ನಿಸಿತು. ಹಾಗೆ ನೋಡಿದರೆ 1937ರ ಚುನಾವಣೆಗಳಲ್ಲಿ ಈ ಪಕ್ಷ ಗಮನಾರ್ಹ ಯಶಸ್ಸನ್ನು ಸಾಧಿಸಿತು; 17 ಜನ ಅಭ್ಯರ್ಥಿಗಳಲ್ಲಿ (13 ಜನ ಪರಿಶಿಷ್ಟ ಜಾತಿಯವರು ಮತ್ತು ಇತರರು ನಾಲ್ಕು ಜನ) 11 ಮಂದಿ ಪರಿಶಿಷ್ಟ ಜಾತಿಯವರು ಮತ್ತು ಮೂರು ಮಂದಿ ಇತರರು ಜಯವನ್ನು ಗಳಿಸಿದರು. ಈ ಮೂರು ಮಂದಿ ಕೊಂಕಣದವರು. ಇಂಡಿಯನ್ ಲೇಬರ್ ಪಾರ್ಟಿಯು ರೈತ ಹೋರಾಟವನ್ನು ಸಂಘಟಿಸಿದ್ದು ಇಲ್ಲಿಯೇ.

ಇಂಡಿಯನ್ ಲೇಬರ್ ಪಾರ್ಟಿಯು ಕೊಂಕಣದಲ್ಲಿನ 'ಖೋಟಿ' ಜಮೀನ್ದಾರಿ ವ್ಯವಸ್ಥೆಯ ವಿರುದ್ಧ 20,000ಕ್ಕೂ ಹೆಚ್ಚು ರೈತಾಪಿ ಜನರು ಭಾಗವಹಿಸಿದ್ದ ಮಾರ್ಚ್ ಒಂದನ್ನು 1938ರ ಜನವರಿಯಲ್ಲಿ (ಇಂಥ ಸಂಘಟನೆಯ ಪ್ರಾರಂಭದ ಹೆಜ್ಜೆಗಳು 1930ರಲ್ಲಿ ಪ್ರಾರಂಭವಾಗಿದ್ದವು) ಕೊಂಕಣದಲ್ಲಿ ಸಂಘಟಿಸಿತು. ಇದರ ನಂತರ ಅಂಬೇಡ್ಕರ್ ಅವರ ನೇತೃತ್ವದಲ್ಲಿ ಕಮ್ಯುನಿಸ್ಟರ ಮೈತ್ರಿಯೊಂದಿಗೆ ಕಾರ್ಮಿಕ ಶ್ರಮಿಕ ವರ್ಗದ ವಿರೋಧಿಯಾದ ಕಪ್ಪು ಮಸೂದೆ (ಬ್ಲ್ಯಾಕ್ ಬಿಲ್) ವಿರೋಧಿಸಿ 1938ರ ಮಾರ್ಚ್ 7ರಂದು ಒಂದು ದಿನದ 'ಜವಳಿ ಕಾರ್ಮಿಕರ ಪೂರ್ಣ ಮುಷ್ಕರ'ವನ್ನು

ನಡೆಸಲಾಯಿತು. 1940-42ರ ವೇಳೆಗೆ ಫೆಡರೇಷನ್ ವಿಷಯವಾಗಿ ತೋರಿಸಬೇಕಿದ್ದ ರಿಯಾಯಿತಿಗಳನ್ನು ಬ್ರಿಟಿಷ್ ಸರ್ಕಾರವು ನಿರಾಕರಿಸಿದ್ದರ ಪರಿಣಾಮವಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಅಂಬೇಡ್ಕರರಿಗೆ ತೀವ್ರ ಅಸಮಾಧಾನವು ಮೂಡಿತು. ಈ ವೇಳೆಯಲ್ಲಿ ಅಂಬೇಡ್ಕರರು ಫೆಡರೇಷನ್ನಿನ ಪ್ರಸ್ತಾಪಗಳನ್ನು (ರಾಜಪ್ರಭುತ್ವವುಳ್ಳ ರಾಜ್ಯಗಳಿಗೆ ಕೆಲವು ರಿಯಾಯಿತಿಗಳನ್ನು ತೋರಿಸುವ) ಒಪ್ಪುವ ಮೂಲಕ ಬ್ರಿಟಿಷ್ ಸಾಮ್ರಾಜ್ಯಶಾಹಿಯೊಂದಿಗೆ ರಾಜಿ ಮಾಡಿಕೊಳ್ಳುತ್ತಿರುವುದಾಗಿ ವಾದಿಸಿದರು ಮತ್ತು ಫೆಡರೇಷನ್ನನ್ನು ಕಾಂಗ್ರೆಸ್ ವಿರೋಧಿಸುವುದಾದರೆ ಅದನ್ನು ಸೇರಲು ಇಚ್ಛಿಸುವುದಾಗಿಯೂ ಹೇಳಿದರು. ಅಂಬೇಡ್ಕರರಿಗೆ ಬ್ರಿಟಿಷ್ ಆಡಳಿತವೆನ್ನುವುದು ಬ್ರಾಹ್ಮಣ್ಯದ ಊಳಿಗಮಾನ್ಯತೆಗೆ ಹೋಲಿಸಿದರೆ ಗೌಣವಾದ (ಎರಡನೆಯ) ವೈರುಧ್ಯವಷ್ಟೆ ಎನ್ನುವುದನ್ನಿಲ್ಲಿ ಗಮನಿಸಬೇಕು. ಸತಾರ ಜಿಲ್ಲೆಯ ಕೊರೆಗಾವ್‌ನಲ್ಲಿ ಬ್ರಿಟಿಷ್ ಸೇನೆಯು ಪೇಶ್ವೆಗಳೊಂದಿಗೆ ಹೋರಾಡುತ್ತಿರುವಾಗ ಮಡಿದ ಭಾರತೀಯ ಸೈನಿಕರ-22 ಮಹರ್ ಮತ್ತು 10 ಕುಣ್ಬಿಗಳು ಮತ್ತು ಕೆಲವು ಮುಸ್ಲಿಮರು-ಸ್ಮಾರಕವಿತ್ತು- ಅವರು ನಡೆಸಿದ ಸಾರ್ವಜನಿಕ ಸಭೆಗಳ ವ್ಯಕ್ತವಾದ ವಿಚಾರಗಳಿಂದ ಅವರ ನಿಲುವುಗಳನ್ನು ನಾವು ತಿಳಿಯಬಹುದಾಗಿದೆ. ಬ್ರಿಟಿಷರನ್ನು ಅಧಿಕಾರಕ್ಕೆ ತಂದವರು ನಾವೇ; ಏಕೆಂದರೆ ನಾವು ಪೇಶ್ವೆಗಳನ್ನು ಬಗ್ಗುಬಡಿಯಬೇಕಿತ್ತು, ಅದಕ್ಕಾಗಿ. ಆದರೆ ಬ್ರಿಟಿಷ್ ಆಡಳಿತವನ್ನು ಕೊನೆಗೊಳಿಸಲಿರುವವರು ಕೂಡ ನಾವೆ. ಆದರೆ ಸ್ವಾತಂತ್ರ್ಯವೆನ್ನುವುದು ನಮಗೆ ಸಿಗುವ ಸ್ವಾತಂತ್ರ್ಯವಾಗಿರಬೇಕೇ ಹೊರತು ಪೇಶ್ವೆಗಳ ಉದ್ಧಾರಕ್ಕೆ ಕಾರಣವಾಗುವ ಬ್ರಾಹ್ಮಣ ಬೂರ್ಶ್ವಾಗಳದ್ದಾಗಬಾರದು.

ಈ ರೀತಿಯಲ್ಲಿ ಇಂಡಿಯನ್ ಲೇಬರ್ ಪಾರ್ಟಿಯು ಕಮ್ಯುನಿಸ್ಟರಿಂದ 1920ರ ಸುಮಾರಿಗೆ ಕರೆಸಿಕೊಂಡಂತೆ 'ಕಾರ್ಮಿಕ-ರೈತಾಪಿಗಳ ಪಕ್ಷ'ದ ಸ್ವರೂಪವನ್ನು ಪಡೆಯುತ್ತಿತ್ತು. 1920ರ ಸುಮಾರಿಗೆ ಕಮ್ಯುನಿಸ್ಟರು ಹೀಗೆ ಕರೆದರಾದರೂ 1930ರ ಸುಮಾರಿಗೆ ಸಿ.ಪಿ.ಐ. ತನ್ನ ಈ ನಿಲುವನ್ನೂ ಮತ್ತು ಸಾಮ್ರಾಜ್ಯಶಾಹೀ ವಿರೋಧಿಯಾದ ರಾಜಕೀಯ ಶಕ್ತಿಯೊಂದನ್ನು ಪರ್ಯಾಯವಾಗಿ ರೂಪಿಸುವ ನಿಟ್ಟಿನ ತನ್ನ ಪ್ರಯತ್ನದ ನಿಲುವನ್ನೂ ಬದಲಿಸಿಕೊಂಡಿತು; ಮಾತ್ರವಲ್ಲ ಕಾಂಗ್ರೆಸನ್ನೇ ಸಾಮ್ರಾಜ್ಯಶಾಹೀ ವಿರೋಧಿಯಾಗಿ ಕಾಣತೊಡಗಿತು. ಈ ಕಾರಣಕ್ಕಾಗಿ ಐ.ಎಲ್.ಪಿ ಮತ್ತು (ಇಂಥದೇ ಸಮಾನ ಧೋರಣೆಗಳ ಪಕ್ಷವಾದ ಬಂಗಾಳದ ಕೃಷಿಕ ಸಮಾಜದಂತಹ ಪಕ್ಷಗಳು) ವಾಮಪಂಥೀಯರಿಂದ 1930ರ ಹೊತ್ತಿಗೆ ದೂರಸರಿದವು. ಇಂಥ ಸನ್ನಿವೇಶದಲ್ಲಿ 1930ರ ದಶಕದ ಕೊನೆಯ ದಿನಗಳ ಇಡೀ ಅವಧಿಯಲ್ಲಿ ಅಂಬೇಡ್ಕರ್ 'ಬ್ರಾಹ್ಮಣತ್ವ ಮತ್ತು ಬಂಡವಾಳಶಾಹಿಯ' ವಿರುದ್ಧದ ಸ್ವತಂತ್ರ ಕಾರ್ಮಿಕ-ರೈತಾಪೀ

ಹೋರಾಟಗಳಿಂದಾಗಿ ಕಟ್ಟಲು ಮೈತ್ರಿಯ ಸಾಧ್ಯತೆಗಳನ್ನು ಅನ್ವೇಷಿಸುತ್ತಿದ್ದರು. ಈ ನಿಟ್ಟಿನಲ್ಲಿ ಅವರಿಗೆ ಕಂಡದ್ದು ಸ್ವತಂತ್ರ ರೈತಾಪಿ ನಾಯಕರುಗಳು ಬಿಹಾರಿನ ಸ್ವಾಮಿ ಸಹಜಾನಂದರಂಥವರು–1938ರಲ್ಲಿ ಇವರೊಂದಿಗೆ ಅಂಬೇಡ್ಕರ್ ಇಂತಹ ಸಾಧ್ಯತೆಗಳನ್ನು ಕುರಿತು ಚರ್ಚಿಸಿದರು) ಮತ್ತು ಬ್ರಾಹ್ಮಣೇತರ ಚಳುವಳಿಯ ನಾಯಕರುಗಳು. ಬ್ರಾಹ್ಮಣೇತರರಲ್ಲೇ 'ಪ್ರಭಾವಶಾಲಿ ಜಾತಿಗಳ ನಡುವಿನ ಬಿಕ್ಕಟ್ಟುಗಳಿರುವಾಗಲೂ ಅಂಬೇಡ್ಕರ್ ಪೆರಿಯಾರ್ ಮತ್ತು ಜಸ್ಟಿಸ್ ಪಾರ್ಟಿಯೊಂದಿಗೆ ಸ್ನೇಹ ಪ್ರವೃತ್ತಿಯನ್ನು ಮುಂದುವರಿಸಲು ಪ್ರಯತ್ನಿಸಿದರು. ಹಾಗೆಯೇ ಉನ್ನತಕ್ಕೆ ಮಹಾರಾಷ್ಟ್ರದ ಬ್ರಾಹ್ಮಣೇತರರು ಕಾಂಗ್ರೆಸ್ ಅನ್ನು ಸೇರದಿರಲು ಅವರ ಮನವನ್ನು ಒಲಿಸುವ ಎಲ್ಲ ಪ್ರಯತ್ನಗಳನ್ನೂ ಮಾಡಿದರು. 1942ರ ಅವರ ಹೇಳಿಕೆಯೊಂದರ ಮೂಲಕ ಅವರ ಈ ನಿಟ್ಟಿನ ದೃಷ್ಟಿಕೋನವೇನೆಂಬುದನ್ನು ತಿಳಿಯಬಹುದು.

"ಶೋಷಿತ ವರ್ಗಗಳ ಚಳುವಳಿಯು ಇತರ ಜಾತಿಗಳ ಶ್ರಮಿಕ ವರ್ಗಗಳ ಸೇರಿ ಸಮಾನ ವೇದಿಕೆಯೊಂದನ್ನು ನಿರ್ಮಿಸಬೇಕೆಂಬ ಬಗ್ಗೆ ನಾನು ಕುತೂಹಲಿತನಾಗಿದ್ದೇನೆ. ಈ ಉದ್ದೇಶದ ದೃಷ್ಟಿಯಿಂದಲೇ ನಾನು ಕಳೆದ ಹತ್ತು ವರ್ಷಗಳಿಂದಲೂ ಬ್ರಾಹ್ಮಣೇತರ ಪಕ್ಷದೊಂದಿಗೆ ಇದ್ದೇನೆ ಮತ್ತು ಹೀಗೆ ಮಾಡುವಲ್ಲಿ ಇಂದಲ್ಲ ನಾಳೆ ಇದು ತೊಳಲುತ್ತಿರುವ ಬ್ರಾಹ್ಮಣೇತರ ಸಮುದಾಯಗಳ ಹಿತಕ್ಕಾಗಿ ಹೋರಾಡುವ ಒಂದು ಮಹತ್ವದ ಸಂಸ್ಥೆಯಾಗುವ ಮಟ್ಟಕ್ಕೆ ಬೆಳೆಯುತ್ತದೆಯೆಂದು ನಂಬಿದ್ದೇನೆ. ಈ ಪಕ್ಷವು ಶ್ರೇಷ್ಠ ತತ್ವವಾದ ಪ್ರಜಾಪ್ರಭುತ್ವದ ಎಳೆಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿತ್ತು. ಆದರೆ ಇದರ ನಾಯಕರಿಗೆ ತಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳ ಸುಸ್ಪಷ್ಟ ಅರಿವಿಲ್ಲದಿರುವುದು ಒಂದು ವಿಪರ್ಯಾಸ ಮತ್ತು ಇದರಿಂದಾಗಿಯೇ ಪಕ್ಷವು ಒಂದೆಡೆಗೆ ಸರ್ಕಾರದ ಪ್ರಭಾವ ಮತ್ತು ಇನ್ನೊಂದೆಡೆಗೆ ಕಾಂಗ್ರೆಸ್ಸಿನ ಪೋಷಕ ನಿಲುವಿನಿಂದ ನುಚ್ಚು ನೂರಾಗುವ ಸಾಧ್ಯತೆಗಳುಂಟಾದವು."

ಆದರೆ ಬ್ರಾಹ್ಮಣೇತರರು ಕಾಂಗ್ರೆಸ್ಸನ್ನೇ ಸೇರಿದರು; ಕಮ್ಯುನಿಸ್ಟರು ಮತ್ತು ಸಮಾಜವಾದಿಗಳು ಕೂಡ ಕಾಂಗ್ರೆಸ್ಸಿನ ಜೊತೆಗಿದ್ದರು; ಅಂಬೇಡ್ಕರರ ಐಎಲ್‌ಪಿ ಮಾತ್ರ ಪ್ರತ್ಯೇಕವಾಗಿ ನಿಂತಿತು. ಹೀಗಾಗಿ 1942ರಲ್ಲಿ. ಸ್ವಾತಂತ್ರ್ಯದ ಸಾಧ್ಯತೆಗಳು ಸನ್ನಿಹಿತವಾಗುತ್ತಿರುವ ವಾಸ್ತವವನ್ನು ಕಂಡಾಗ ಅಂಬೇಡ್ಕರ್ ತೀವ್ರಗಾಮೀ ಕಾರ್ಮಿಕ-ರೈತಾಪಿಗಳ ಸಂಘಟನೆಯನ್ನು ಕೈಬಿಟ್ಟು, ದಲಿತರದ್ದೇ ಆದ ರಾಷ್ಟ್ರೀಯ ಮಟ್ಟದ ಪಕ್ಷ ಪರಿಶಿಷ್ಟ-ಹಿಂದುಳಿದ ಜಾತಿಗಳ ಫೆಡರೇಷನ್–ಸ್ಥಾಪಿಸಿದರು ಮತ್ತು ದಲಿತರು ಸ್ವಾತಂತ್ರ್ಯ ಬರುವುದರೊಂದಿಗೆ ಎಷ್ಟು ಸಾಧ್ಯವೋ ಅಷ್ಟು ರಿಯಾಯಿತಿಗಳನ್ನು ಪಡೆಯಲು ಸಾಧ್ಯವಾಗುವಂತೆ ಅದನ್ನು ರೂಪಿಸಿದರು.

ಅಂಬೇಡ್ಕರರ ಸಾಮಾಜಿಕ ಮತ್ತು ರಾಜಕೀಯ ಚಿಂತನೆಗಳ ಬೆಳವಣಿಗೆಯನ್ನು ನಾವು ನೋಡಬೇಕಾಗಿರುವುದು ಅವರು ತಮ್ಮ ಕಾಲದ (ಬ್ರಾಹ್ಮಣರ ಪ್ರಾಬಲ್ಯವನ್ನು ಹೊಂದಿದ ಒಂದು ಬಗೆಯ ಯಾಂತ್ರೀಕೃತ) ಮಾರ್ಕ್ಸ್‌ವಾದ ಮತ್ತು ಸಮಾಜವಾದೀ ಚಳುವಳಿಯೊಂದಿಗೆ ನಡೆಸಿದ ಮುಖಾಮುಖಿ ಸಂವಾದ/ಸಂಘರ್ಷದ ಹಿನ್ನೆಲೆಯಲ್ಲಿ. ಸಿಪಿಐ ನಾಯಕರ ಜೊತೆಗಿನ ವೇದಿಕೆಯಲ್ಲಿ 1938ರ ಜನವರಿಯಲ್ಲಿ ರೈತಮೋರ್ಚಾ ವನ್ನುದ್ದೇಶಿಸಿ ಹೇಳಿದಂತೆ :

"ನಿಜವಾಗಿ ನೋಡಿದರೆ ಜಗತ್ತಿನಲ್ಲಿರುವುದು ಎರಡೇ ಜಾತಿಗಳು. ಒಂದು ಶ್ರೀಮಂತರದು ಮತ್ತೊಂದು ಬಡವರದು. ನಮ್ಮ ಸಂಘಟನೆಯನ್ನು ಬಲಪಡಿಸುವ ಉದ್ದೇಶದಿಂದ ನಮ್ಮ ನಡುವಣ ಜಾತಿ ಭಿನ್ನತೆಗಳನ್ನು, ಧಾರ್ಮಿಕ ಭಿನ್ನತೆಗಳನ್ನು ಮರೆಯಬೇಕಾಗಿದೆ. ಕೊಂಕಣದ ಖೋಟರು ಹೆಚ್ಚೆಂದರೆ ಒಂದೋ ಎರಡೋ ಲಕ್ಷ ವಿದ್ದಾರು. ಆದರೆ ನಿಮ್ಮಂತಹ ಶ್ರಮಿಕರು ಸುಮಾರು 13 ಲಕ್ಷವಿದ್ದೀರಿ. ಇಂಥ ಭೂ ಒಡೆಯರಿಂದ ನೀವೆಲ್ಲ ಶೋಷಿತರಾಗುತ್ತಿದ್ದೀರಿ. ಕಾಂಗ್ರೆಸ್ ಕೂಡ ಇಂತಹ ಸಿರಿವಂತರನ್ನೇ ಬೆಂಬಲಿಸುತ್ತಿದೆಯೆಂಬುದನ್ನು ನೀವು ಗಮನದಲ್ಲಿಡಬೇಕು. ಈ ಜಾತಿ ವ್ಯವಸ್ಥೆಯ ಕಾರಣದಿಂದಲೇ ಶ್ರಮಿಕರ ಒಂದು ಪ್ರಬಲ ಸಂಘಟನೆಯನ್ನು ಕಟ್ಟಲಾಗು ತ್ತಿಲ್ಲ. ನಮ್ಮ ಎಲ್ಲ ಕಮ್ಯುನಿಸ್ಟ್ ನಾಯಕರುಗಳೂ ಒಟ್ಟು ಸೇರಿ ಓದಬಹುದಾದದ್ದ ಕ್ಕಿಂತ ಹೆಚ್ಚು ಗಂಭೀರವಾಗಿ ನಾನು ಕಮ್ಯುನಿಸ್ಟ್ ತತ್ವವನ್ನು ಕುರಿತ ಪುಸ್ತಕಗಳನ್ನು ಅಭ್ಯಸಿಸಿದ್ದೇನೆ. ಆ ಪುಸ್ತಕಗಳಲ್ಲಿ ಕಮ್ಯುನಿಸ್ಟ್ ತತ್ವವು ಎಷ್ಟೇ ಸುಂದರವಾಗಿ ಕಂಡರೂ ಅದು ಎಷ್ಟು ಉಪಯುಕ್ತವೆಂಬುದನ್ನು ಪ್ರಾಯೋಗಿಕವಾಗಿ ಅದನ್ನು ತೊಡಗಿಸಿ ನೋಡಬೇಕಾಗಿದೆ. ಇಂಥದೊಂದು ಯುಕ್ತ ದೃಷ್ಟಿಕೋನದಿಂದ ಕೆಲಸವನ್ನು ಪ್ರಾರಂಭಿಸಿದರೆ ನಮ್ಮ ಉದ್ದೇಶ ಸಾಧನೆಗೆ ರಷ್ಯಾದಲ್ಲಿ ಬೇಕಾದಷ್ಟು ಶ್ರಮವಾಗಲಿ, ಕಾಲವಾಗಲಿ ಬೇಕಾಗದು. ಆದುದರಿಂದಲೇ ಶ್ರಮಿಕರ ವರ್ಗ ಹೋರಾಟಕ್ಕೆ ಕಮ್ಯು ನಿಸ್ಟ್ ತತ್ವವು ಹೆಚ್ಚು ಹತ್ತಿರವಾದದ್ದೆಂದು ನಾನು ಭಾವಿಸಿದ್ದೇನೆ" (ಜನತಾ 15-1-1938).

ಆದರೆ ವಾಸ್ತವವಾಗಿ ಅಂಬೇಡ್ಕರ್ ಮತ್ತು ಮಾರ್ಕ್ಸ್‌ವಾದಿಗಳ ನಡುವೆ ಯಾವುದೇ ಸಂವಾದಗಳಾಗಲಿ, ತಾತ್ವಿಕ ದೃಷ್ಟಿಕೋನಗಳ ಪಾರಸ್ಪರಿಕ ಕೊಡುಕೊಳ್ಳೆ ಗಳಾಗಲಿ ಇಲ್ಲವೆನ್ನಬೇಕು. ಜಾತಿಯಂಥ ಸಂಗತಿಯ ಕುರಿತಾಗಿ ಸಮಾನವಾದ ವಿಶೇಷ ಒತ್ತು ಇರದೇವಾಗಲೂ ಶಕ್ತಿ ಮತ್ತು ಹಿಂಸೆಯ ಪಾತ್ರ ಚರಿತ್ರೆಯಲ್ಲಿ ವಾಸ್ತವಿಕ ಸಂಗತಿ ಯಾಗಿರುವ ಮತ್ತು ಶೋಷಣೆಯ ಪ್ರಕ್ರಿಯೆಯಲ್ಲಿ ಕೇಂದ್ರಸ್ಥವಾಗಿರುವ ರಾಜ್ಯಶಕ್ತಿ

ಶೂದ್ರ

ಮತ್ತು ಅಧಿಕಾರಶಾಹಿಯ ಸಂಬಂಧವಲ್ಲಿ ಪ್ರಾಲಿಯವರ ಪ್ರಾರಂಭದ ಬಾನೋಟಿ ಗಳೊಂದಿಗೆ ಅಂಬೇಡ್ಕರ್ ಮುಖಾಮುಖಿಯಾಗಲಿಲ್ಲ ಅಥವಾ ಅದನ್ನು ಬೆಳೆಸಲೂ ಇಲ್ಲ. ಹೀಗಿದ್ದೂ ಅಂಬೇಡ್ಕರ್ 'ಮೊದಲ ಜಾತಿ ತತ್ವ'ವನ್ನು ರೂಪಿಸಿವರೆನ್ನುವುದು ನಿಜವಾದರೂ ಅದು ತೀರ ಯಾಂತ್ರಿಕ ನೆಲೆಯದಾಗಿ ಮಾತ್ರ ಸಿಲ್ಲುತ್ತದೆ; ಸಾಂಪ್ರದಾಯಿಕ ಮಾರ್ಕ್ಸ್‌ವಾದದ 'ವರ್ಗ' ಪರಿಕಲ್ಪನೆ ಕುರಿತ ದೃಷ್ಟಿಕೋನದ ಹಾಗೆ.

ಇದರ ಪರಿಣಾಮರೂಪಿಯಾದ ಎರಡು ಸಂಗತಿಗಳಿವೆ: ಒಂದು, ಅಂಬೇಡ್ಕರ್ ಜಾತಿಯಂತಹ ವೈರುಧ್ಯಗಳಿಗೆ ಅವಕಾಶವನ್ನೇ ಹೊಂದಿಲ್ಲದ ಯಾಂತ್ರಿಕವಾದ ಮೆಟೀರಿಯಲಿಸಂ ಅನ್ನು ನಿರಾಕರಿಸುತ್ತ ಆದರ್ಶವಾದದತ್ತ ತಿರುಗಿದರು ಎನ್ನುವುದು. ಈ ಪ್ರಕ್ರಿಯೆಯು "ಆರ್ಥಿಕ ನೆಲೆಯನ್ನಾಧರಿಸಿದ ಚರಿತ್ರೆಯ ವ್ಯಾಖ್ಯಾನವನ್ನು" ಟೀಕಿಸುವ ಜನತಾ ಪತ್ರಿಕೆಯಲ್ಲಿನ ಅವರ ಒಂದು ಲೇಖನದಿಂದ ತಿಳಿಯುತ್ತದೆ. ನೆಲೆಗಟ್ಟು (base) ಮತ್ತು ಮೇಲುರಚನೆ (Superstructure) ಗಳ ಸಾಂಪ್ರದಾಯಿಕ ಕಲ್ಪನೆಗಳನ್ನು ವಿವರಿಸುತ್ತ ಅವರ ಲೇಖನದ ಕೆಲವು ಮಾತುಗಳು ಹೀಗಿವೆ:

"ಆದರೆ ತಳಪಾಯವೇ ಕಟ್ಟಡವಲ್ಲ. ಆರ್ಥಿಕ ಸಂಬಂಧಗಳ ಆಧಾರದ ಮೇಲೆ ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ಸಂಸ್ಥೆಗಳ ಕಟ್ಟಡವೊಂದನ್ನು ಕಟ್ಟಲಾಗಿದೆ. ಈ ಕಟ್ಟಡವೂ ಅದು ಆಧರಿಸಿರುವ ತಳಪಾಯದಷ್ಟೇ ಸತ್ಯ. ನಾವು ತಳಪಾಯವನ್ನು ಬದಲಿಸ ಹೊರಡುವುದಾದಲ್ಲಿ ಅವನ್ನಾಧರಿಸಿ ಕಟ್ಟಲಾದ ಕಟ್ಟಡವನ್ನು ಮೊದಲು ಹೊಡೆದು ಕೆಡವಬೇಕು. ಹಾಗೆಯೇ ಸಮಾಜವೊಂದರ ಆರ್ಥಿಕ ಸಂಬಂಧಗಳನ್ನು ನಾವು ಬದಲಿಸ ಹೊರಡುವುದಾದರೆ ಮೊದಲು ಅಸ್ತಿತ್ವದಲ್ಲಿರುವ ಸಾಮಾಜಿಕ, ರಾಜಕೀಯ ಮುಂತಾದ ಸಂಸ್ಥೆಗಳನ್ನು ಬದಲಿಸಬೇಕು (ಹಾಳುಗೆಡವಬೇಕು)" (ಜನತಾ, ಜೂನ್ 25, 1938).

ಸಾಮಾಜಿಕ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಆದ್ಯತೆಯನ್ನೀಯಲು ಹೀಗೆ ಅಂಬೇಡ್ಕರ್ ಯಾಂತ್ರೀಕೃತ ಮಾರ್ಕ್ಸ್‌ವಾದದಲ್ಲಿನ ಆದ್ಯತಾ ಕ್ರಮಗಳನ್ನು ತಿರುಗು ಮುರುಗು ಮಾಡಿದರು. ಆದ್ದರಿಂದಲೇ ಅವರ ನಂತರದ ಬರವಣಿಗೆಗಳಾದ 'ಶೂದ್ರರಾಗಿದ್ದ ಅಸ್ಪೃಶ್ಯರು' ಮತ್ತು ಪೂರ್ಣವಾಗದ ಬೃಹತ್ ಕೃತಿಯಾದ 'ಪ್ರಾಚೀನ ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿಕ್ರಾಂತಿ' ಎಂಬ ಪುಸ್ತಕದಲ್ಲಿ ಧಾರ್ಮಿಕ ಮತ್ತು ರಾಜಕೀಯ ಸಂಗತಿಗಳಿಗೆ ವ್ಯಾಖ್ಯಾನಾತ್ಮಕ ಅಂಶಗಳಿಗೆ ಹೆಚ್ಚಿನ ಆದ್ಯತೆಯನ್ನು (ಶೋಷಣೆಯ, ಉತ್ಪಾದನೆಯ ಮುಂತಾದ ಯಾವ ಸಂಬಂಧಗಳನ್ನೂ ಕಾಣಿಸದೆ) ನೀಡಿದ್ದಾರೆ. ಹೀಗಾಗಿ ಇವುಗಳು ಪ್ರಾಲಿಯವರ ಪ್ರಾರಂಭದ ಮೆಟೀರಿಯಲಿಸಂ ನೊಂದಿಗೆ ಹೋಲಿಸಿದರೆ ಹೆಚ್ಚು ವೈಚಾರಿಕವಾಗಿ ಕಾಣುತ್ತವೆ ಮತ್ತು ಅವರ

ಹಿಂದೂಯಿಸಂ ಕುರಿತಾದ ವಿಮರ್ಶೆ (ಶರದ್ ಪಾಟೀಲ್ ಗುರುತಿಸಿದಂತೆ ಕೂಡ) ಚಾರಿತ್ರಿಕ ಮಟೀರಿಯಲಿಸಂಗಿಂತ ಹೆಚ್ಚು ವೈಚಾರಿಕ ನೆಲೆಗಳನ್ನು ಹೊಂದಿದ್ದಾಗಿದೆ.

ಅದೇ ಸಂದರ್ಭದಲ್ಲಿ 'ವರ್ಗ' ಮತ್ತು 'ಶೋಷಣೆ'ಗೆ ಸಂಬಂಧಿಸಿದ ಹಾಗೆ ಯಾಂತ್ರೀಕೃತ ಮಾರ್ಕ್ಸ್‌ವಾದದ ಆಯಾಮಗಳನ್ನು ಒಪ್ಪುವಾಗ ಅಂಬೇಡ್ಕರ್ 'ವೈಯಕ್ತಿಯ ಆಸ್ತಿ'ಯ ಕಲ್ಪನೆಯೇ ಆರ್ಥಿಕ ಶೋಷಣೆಗೆ ಮೂಲವೆಂಬುದನ್ನು ಒಪ್ಪುತ್ತಾರೆ. (ಇದು ಬುದ್ಧ ಮತ್ತು ಮಾರ್ಕ್ಸ್ ಕುರಿತ ಅವರ ಕೊನೆಯ ಬರವಣಿಗೆಗಳಲ್ಲಿ ಕಾಣುತ್ತದೆ.) ಇದರಿಂದಾಗಿಯೇ ಅವರು ಕಮ್ಯುನಿಸ್ಟರು, ಪ್ರಗತಿಗಾಮೀ ಕಾಂಗ್ರೆಸಿಗರಲ್ಲೊಬ್ಬರಾದ ನೆಹರೂ ಅವರೂ ಸೇರಿದಂತೆ ಆ ಕಾಲದ ಇನ್ನಿತರರೂ ತಿಳಿದಂತೆ–ಶೋಷಣೆಗೆ ಇರುವ ಏಕೈಕ ಪರಿಹಾರವೆಂದರೆ ರಾಷ್ಟ್ರತ್ವವಾದವೇ, ರಾಜ್ಯತ್ವವಾದವೇ (ಕೈಗಾರಿಕೆಗಳ ರಾಷ್ಟ್ರೀಕರಣ ಮತ್ತು ಭೂಮಿಯ ಸಮಷ್ಟೀಕರಣವಿದು) ಎಂದು ನೋಡಿದರು. ಆದರೆ ಇಲ್ಲಿ 'ರಾಜ್ಯದ ನಿಯಂತ್ರಣ'ಕ್ಕೂ ಶ್ರಮಿಕ ವರ್ಗದ ನಿಯಂತ್ರಣಕ್ಕೂ ಯಾವುದೇ ವ್ಯತ್ಯಾಸವನ್ನಿಲ್ಲಿ ಗುರುತಿಸಲಾಗಿಲ್ಲ. ಹೀಗೆ ಅವರ 'ರಾಷ್ಟ್ರೀಯ ಸಮಾಜವಾದ'ದ ಪರಿಕಲ್ಪನೆಯು ವರ್ಗರಹಿತ ಮತ್ತು ಜಾತಿರಹಿತ ಸಮಾಜವಾದೀ ಸಮಾಜವೊಂದನ್ನು ರೂಪಿಸುವ ಅವರ ಗುರಿಯನ್ನು ಹೇಳುತ್ತದೆ. ಆದರೆ ಅದಕ್ಕೆ ಕೆಲವು ಮಿತಿಗಳು ಇವೆಯಾದರೂ, ಅದು ಅವರ ಕಾಲದಲ್ಲೇ ಇದ್ದ ಸಂಗತಿಗಳ ಕಾರಣವಾಗಿದೆ.

ಅಂಬೇಡ್ಕರ್ ಒಂದು ಸಮಗ್ರ ಸ್ವರೂಪದ ತಾತ್ವಿಕ ವಿಶ್ಲೇಷಣೆಯನ್ನು ಮಾಡುವಲ್ಲಿ ವಿಫಲರಾದರೆನ್ನುವುದು ನಿಜವಾದರೂ ಬ್ರಾಹ್ಮಣ ಮತ್ತು ಬಂಡವಾಳಶಾಹಿಯ ಪ್ರಮುಖ ವೇದಿಕೆಯಾದ ಕಾಂಗ್ರೆಸ್ಸಿಗೆ ವಿರುದ್ಧವಾಗಿ; ಹಿಂದೂ ಪುನರುತ್ಥಾನಕ್ಕೆ (ಆಗಿನ ಕಾಲಕ್ಕೆ ಹಿಂದೂ ಮಹಾಸಭಾ) ವಿರುದ್ಧವಾಗಿ ಶ್ರಮಿಕರ ಮತ್ತು ರೈತಾಪಿಗಳ, ದಲಿತರ ಮತ್ತು ಬಹುಜನ ಸಮಾಜವನ್ನೊಳಗೊಂಡ ಒಂದು ಸ್ವತಂತ್ರ ರಾಜಕೀಯ ವೇದಿಕೆಗಾಗಿ ಅವರು ಹೊಂದಿದ್ದ ಒತ್ತಾಯಗಳು ಮಹತ್ವದವು. ಕೇಂದ್ರೀಕೃತ ವಾದದ ಸಂಬಂಧದಲ್ಲಿ ಅವರು ತಾಳಿದ ನಿಲುವುಗಳೇನೇ ಇರಲಿ ಅವರು ಭಾಷಾವಾರು ಪ್ರಾಂತ್ಯಗಳ ಬೇಡಿಕೆಯನ್ನು ಬೆಂಬಲಿಸಿದರೆಂಬುದನ್ನು ಗಮನಿಸಬೇಕು. ಸ್ವಾತಂತ್ರ್ಯದ ಸಂದರ್ಭದಲ್ಲಿ ಅಲ್ಪಸಂಖ್ಯಾತ ವಾದವನ್ನು ಅವರು ಸ್ಪಷ್ಟವಾಗಿ ವಿರೋಧಿಸಿದರು. 'ದಲಿತ–ಮುಸ್ಲಿಂ ಏಕತೆ'ಯ ನೆಲೆಯಲ್ಲಿ ಹೈದರಾಬಾದಿನ ಕೆಲವು ದಲಿತರು ಹೊಂದಿದ್ದ ನಿಜಾಮನ ಪರವಾಗಿ ನಿಲ್ಲುವ ವಿಷಯಕ್ಕೆ ಸಂಬಂಧಿಸಿದಂತೆ 1947 ರಲ್ಲಿ ಹೀಗೆ ಹೇಳಿದರು: "ಪರಿಶಿಷ್ಟ ಜಾತಿಗಳಿಗೆ ಸ್ವಾತಂತ್ರ್ಯ ಬೇಕಾಗಿದೆ; ಅವರ ಇಡೀ ಚಳುವಳಿಯ ಉದ್ದೇಶವೂ ಅದೇ ಆಗಿದೆ. ಹೀಗಿರುವಾಗ ಅವರು ನಿಜಾಮನನ್ನು ಬೆಂಬಲಿಸಲಾಗದು."

ದಲಿತರ ಶೋಷಣೆಗಿರುವ ಪರಿಹಾರದ ಏಕೈಕ ಸಾಧ್ಯತೆಯೆಂದರೆ 'ಸ್ವತಂತ್ರ ಮಂತ್ರಿ ಪ್ರಜಾಸತ್ತೆಯ ಭಾರತ' ಎಂದು ಅವರು ಬಲವಾಗಿ ನಂಬಿದ್ದರು.

ಮೈಸೂರು, ಆಂಧ್ರದ ಕರಾವಳಿ ಮತ್ತು ಹೈದರಾಬಾದು, 1936-1956

ಅಂಬೇಡ್ಕರ್ ಮರಾಠಿ ಭಾಷಿಕ ಪ್ರದೇಶಗಳಲ್ಲಿ/ಭಾಗಗಳಲ್ಲಿ ತೀವ್ರಗಾಮೀ ದಲಿತ ಚಳುವಳಿಯ ನೇತೃತ್ವವನ್ನು ವಹಿಸುತ್ತಿದ್ದಾಗ, ದಲಿತರಿಗೆ ಸಾಮಾಜಿಕ ನ್ಯಾಯವೊದಗಿಸುವ ಕೆಲವು ಸೀಮಿತ ಬೇಡಿಕೆಗಳನ್ನಾಧರಿಸಿದ ಅಖಿಲ ಭಾರತ ಚಳುವಳಿಯೊಂದನ್ನು ಕ್ರಮೇಣ ವಾಗಿ ಕಟ್ಟುತ್ತಿರುವ ಸಂದರ್ಭದಲ್ಲಿ ಈ ವೈವಿಧ್ಯಮಯ ದಕ್ಷಿಣ ಪ್ರದೇಶಗಳಲ್ಲಿನ ದಲಿತ ಚಳುವಳಿಗಳೂ ವಿಭಿನ್ನ ಸ್ವರೂಪದವಾಗಿದ್ದವು.

ಮೈಸೂರಿನಲ್ಲಿ ರೂಪುಗೊಂಡ ದಲಿತ ಚಳುವಳಿ ತೀರ ಸೀಮಿತ ಪ್ರಮಾಣದ್ದು ಮತ್ತು ಸುಲಭ ಸಮನ್ವಯಕ ಸ್ವರೂಪದ್ದು. ಸುಧಾರಣಾವಾದಿ ರಾಜಪ್ರಭುತ್ವದ ಈ ರಾಜ್ಯವನ್ನು ಗಾಂಧಿಯವರೇ ತಮ್ಮ ಆದರ್ಶ 'ರಾಮರಾಜ್ಯ'ಕ್ಕೆ ತೀರ ಹತ್ತಿರ ವೆನ್ನಿಸುವ ನಿದರ್ಶನವೆಂದು ಕರೆದಿದ್ದಾರೆ. ಗಾಂಧಿಯವರ 'ಹರಿಜನ' ಕಲ್ಪನೆ ಗಮನಾರ್ಹವಾದ ನೆಲೆಯನ್ನು ಕಂಡುಕೊಂಡದ್ದು ಇಲ್ಲಿ; ಮಧ್ಯಮ ವರ್ಗಗಳಿಗೆ ಕೆಲವು ಸೀಮಿತ ರಿಯಾಯಿತಿಗಳನ್ನು (ಬ್ರಾಹ್ಮಣೇತರರು, ದಲಿತರಿಗೆ ಮೀಸಲಾತಿ ಮತ್ತು ಶೈಕ್ಷಣಿಕ ಸವಲತ್ತುಗಳು) ನೀಡಿದ್ದು; ರಾಜ್ಯದ ಸ್ವಾಮ್ಯದ ಕೈಗಾರಿಕಾ ಬೆಳವಣಿಗೆ ಯಂತ್ರಣ ಒಲವುಗಳು ಕಂಡುಬಂದದ್ದು ಇಲ್ಲಿ. 1950ರ ಸುಮಾರಿನಲ್ಲಿ ಲೋಹಿಯಾ ವಾದಿಗಳು ಜಾತಿಯ ವಿನಾಶವನ್ನು ಕೆಲವು ರೈತ ಚಳುವಳಿಯ ಬೆಳವಣಿಗೆಯ ಜೊತೆ ತಳುಕು ಹಾಕುವ ಪ್ರಯತ್ನವನ್ನು ಮಾಡಿದರಾದರೂ, ಇಲ್ಲಿ ಸಂಪೂರ್ಣವಾಗಿ ದಲಿತ ವಿಮೋಚನಾ ಚಳುವಳಿಯೊಂದರ ಬೆಳವಣಿಗೆಯೇ ನಡೆಯಲಿಲ್ಲ.

ಆಂಧ್ರದ ಕರಾವಳಿ ಪ್ರಾಂತ್ಯದಲ್ಲಿ ಮುಂಬೈ, ನಾಗಪುರ ಅಥವಾ ಬೆಂಗಳೂರುಗಳ ಜೊತೆ ಹೋಲಿಸಬಹುದಾದಂತಹ ಕೈಗಾರಿಕೀಕರಣದ ನೆಲೆಯೊಂದು ಇದ್ದಿರಲಿಲ್ಲವಾದರೂ ಅಭಿವೃದ್ಧಿಗೊಂಡ ವಾಣಿಜ್ಯ ಕೃಷಿ ಮತ್ತು ಹೆಚ್ಚಿನ ಪ್ರಮಾಣದ ಕೆಳಮಧ್ಯಮವರ್ಗದ ಜನತೆ ಮತ್ತು ದಲಿತ ಕೂಲಿಕಾರರ ಸಂಚಲನ-ಇವೆಲ್ಲ ಅಂಶಗಳ ಜೊತೆಗೆ ಗಮನಾರ್ಹವಾದ 'ಆದಿ ಆಂಧ್ರ' ಚಳುವಳಿಯೊಂದು 1920ರ ಹೊತ್ತಿಗೆ ಪ್ರಾರಂಭವಾಯಿತು. ಮಧ್ಯಮ ಜಾತಿಗಳು ಮತ್ತು ರೈತ ಚಳುವಳಿಯ ಸಂಬಂಧಗಳು crucial ಆಗಿದ್ದವು. ಕಾಂಗ್ರೆಸ್ (ಎಂ.ಜಿ. ರಂಗಾ ನೇತೃತ್ವದ ಕಿಸಾನ್ ಚಳುವಳಿಯ ಮೂಲಕ) ಮತ್ತು ಕಮ್ಯುನಿಸ್ಟರು ಎರಡೂ ಕಡೆ ದಲಿತರೊಂದಿಗೆ ಹೆಚ್ಚು ಕಡಿಮೆ ಸಮಾನ ರೀತಿಯ ಸಂಬಂಧಗಳಿದ್ದವು: ಎರಡೂ ಅವರನ್ನು 'ಹರಿಜನ'ರೆಂದೇ ಕರೆದವು:

ಆದರೆ ಎರಡೂ ಜಾತಿಯ ಸ್ವಾಯತ್ತತೆಯನ್ನು ಒಪ್ಪಲು ಮಾತ್ರ ನಿರಾಕರಿಸಿದವು. ಇದರ ಪರಿಣಾಮವಾಗಿ 1930ರ ಸುಮಾರಿನಲ್ಲಿ 'ಆದಿ-ಆಂಧ್ರ'ದಂತಹ ಸ್ವತಂತ್ರ ಚಳುವಳಿಯೊಂದು ಅವನತಿಯನ್ನು ಕಂಡಿತು. 1940ರ ಸುಮಾರಿಗೆ ಬಹುತೇಕ ದಲಿತರು ಕಮ್ಯುನಿಸ್ಟ್ ನೇತೃತ್ವದ ಕೃಷಿಕಾರ್ಮಿಕರ ಸಂಘಗಳಲ್ಲಿ ಸಂಘಟಿತರಾದರು ಮತ್ತು ಕೆಲ ಪ್ರಮುಖ ಸುಧಾರಣೆಗಳನ್ನೂ ಪಡೆದುಕೊಂಡರು. ಆದರೂ ಈ ಯಶಸ್ಸು ಎಡಪಂಥೀಯ ರಾಜಕೀಯ ಯಶಸ್ಸನ್ನು ಈ ಪ್ರಾಂತ್ಯದಲ್ಲಿ ಕಟ್ಟುವ ನೆಲೆಯಲ್ಲಿ ಸಾಧ್ಯವಾಗಲಿಲ್ಲ.

ಹೈದರಾಬಾದು ರಾಜ್ಯದಲ್ಲಿ ತೀವ್ರಗಾಮೀ ಪುಟ್ಟ ಬೂರ್ಶ್ವಾ ದಲಿತರ ಗುಂಪೊಂದು ಹೈದರಾಬಾದು ನಗರದಲ್ಲಿ ರೂಪುಗೊಂಡಿತು. ಮೊದಲಿಗೆ ಇದು 'ಆದಿ ಹಿಂದೂ' ಚಳುವಳಿಯ ಸ್ವರೂಪವನ್ನು ಹೊಂದಿದ್ದು ಕೆಲಮಟ್ಟಿಗೆ ಮರಾಠಿ ಮತ್ತು ತೆಲುಗು ಭಾಷಿಕರ ಗ್ರಾಮೀಣ ಭಾಗಗಳೊಂದಿಗೆ ಕೆಲಮಟ್ಟಿನ ಸಂಬಂಧವನ್ನು ಹೊಂದಿತ್ತು. ಹೈದರಾಬಾದಿನ ಗುಂಪಿನಲ್ಲಿ 1930 ಮತ್ತು 1940ರ ಸುಮಾರಿನಲ್ಲಿ ಮೂರು ಪಂಥಗಳಿದ್ದವು. ಒಂದು. ಹಿಂದೂ ಸುಧಾರಣಾವಾದಿ ಪಂಥ, ಆರ್ಯ ಸಮಾಜದಿಂದ ಪ್ರಭಾವಿತವಾದ ಈ ಗುಂಪು ಕಾಂಗ್ರೆಸ್ಸಿನಲ್ಲಿ ಸಮ್ಮಿಳಿತವಾಯಿತು; ಮುಸ್ಲಿಂ ಮತ್ತು ನಿಜಾಮನ ಪರವಾದ ಗುಂಪೊಂದು, ದಲಿತ-ಮುಸ್ಲಿಂ ಮೈತ್ರಿ ಮತ್ತು ಅದರ ಸ್ವಾಯತ್ತತೆಯನ್ನು ಎತ್ತಿ ಹಿಡಿದು ವಾದಿಸಿದ ಗುಂಪಿದು (ಬಿ.ಎಸ್. ವೆಂಕಟ ರಾವ್ ಮತ್ತು ಶ್ಯಾಮ್‌ಸುಂದರ್); ಮತ್ತೊಂದು ಅಂಬೇಡ್ಕರ್ ವಾದಿಗಳ ಪಂಥ, ಈ ಪುಟ್ಟ ಗುಂಪಿಗೆ 1936ರ ನಂತರ ಗಣನೀಯ ಜನ ಬೆಂಬಲ ದೊರೆಯಿತಾದರೂ ಒಬ್ಬ ಸಮರ್ಥ ನಾಯಕನನ್ನು ಪಡೆಯುವಲ್ಲಿ ಇದು ಯಶಸ್ವಿಯಾಗಲಿಲ್ಲ. ಈ ಗುಂಪು ಪ್ರಧಾನವಾಗಿ ತೆಲುಗು ಭಾಷಿಕರಿಂದಲೇ ಕೂಡಿದ್ದರೂ, ಕೆಲಮಟ್ಟಿನ ಗ್ರಾಮೀಣ ತೆಲಂಗಾಣದ ಸಂಪರ್ಕವನ್ನು ಹೊಂದಿದ್ದರೂ ಮರಾಠಿ ಭಾಷಿಕ ಪ್ರಾಂತ್ಯವಾದ ಮರಾಠವಾಡ ಪ್ರಾಂತ್ಯದ ನಾಯಕತ್ವ ಪಡೆಯುವುದಕ್ಕಾಗಿ ಇದರ ಮುಂದಾಳುಗಳು ಹೋರಾಡಿದರು. ತೆಲಂಗಾಣದಲ್ಲಿ ಕಮ್ಯುನಿಸ್ಟರು ತೆಲಂಗಾಣ ಕ್ರಾಂತಿಗೆ ಕಾರಣವಾದ ಜಮೀನ್ದಾರೀ ವಿರೋಧೀ, ದಲಿತ ಪರವಾದ ತೀವ್ರಗಾಮೀ ಚಟುವಟಿಕೆಗಳ ಒಳಗೆ ಬುಡು ನೆಲೆಯನ್ನು ಕಂಡುಕೊಂಡರು. ಜಾತಿ ಸಂಬಂಧಿ ವಿಷಯಗಳಲ್ಲಿ ಕಮ್ಯುನಿಸ್ಟರು ಸ್ಪಷ್ಟ, ನಿರ್ದಿಷ್ಟ ಕಾಳಜಿಗಳನ್ನು ಹೊಂದಿಲ್ಲದಿರುವಾಗಲೂ ದಲಿತರು ಮತ್ತು ಭೂರಹಿತರು ಒಂದು ಮಿಲಿಯನ್‌ನಷ್ಟು ನಿರುಪಯುಕ್ತ/ಅರಣ್ಯ ಭೂಮಿಯನ್ನು ವಶಪಡಿಸಿಕೊಳ್ಳುವಷ್ಟು ಲಾಭಮಾಡಿಕೊಂಡರು; ಜಮೀನ್ದಾರಿಯ ವಿರುದ್ಧ ದಲಿತ, ಮಧ್ಯಮ ಜಾತಿಗಳು ಹಾಗೂ ರೈತಾಪಿಗಳ ಒಗ್ಗಟ್ಟಿನ ಪರಂಪರೆಯನ್ನು ಕಾಪಾಡಿಕೊಂಡರು. ಇದಕ್ಕಿಂತ ಭಿನ್ನವಾಗಿ ಮರಾಠವಾಡದಲ್ಲಿ ಆರ್ಯ ಸಮಾಜದ ಪ್ರಾಬಲ್ಯ

ಪಿದ್ದ ಕಾಂಗ್ರೆಸ್ ಯಾವುದೇ ಆರ್ಥಿಕ ಕಾರ್ಯಕ್ರಮವನ್ನು ಎತ್ತಿಕೊಳ್ಳಲಿಲ್ಲ; ಬದಲಾಗಿ ಹಿಂದೂ-ಮುಸ್ಲಿಂ ಬಿಕ್ಕಟ್ಟು ಇನ್ನಷ್ಟು ತೀವ್ರತರವಾದದ್ದಾಗಿ ಮಾಡಿತು ಮತ್ತು ದಲಿತರನ್ನು ನಿಜಾಮನ ಪರವಾಗಿ ನಿಲ್ಲುವಂತೆ ಮಾಡಿತು. ಹೀಗಾಗಿ ಸ್ವಾತಂತ್ರ್ಯ ಸಂಗ್ರಾಮದ ಬಿರುಕುಗಳ ಸೂಚನೆಗಳಿಲ್ಲಿ ಕಾಣಸಿಕೊಂಡವು. ಹಿಂದೂ ಪುನರುಜ್ಜೀವನ ವಾದದಿಂದ ಪ್ರಭಾವಿತವಾದ ರೈತಾಪಿ ಸಮುದಾಯ ಮತ್ತು ಜಾತಿವಿರೋಧಿ ಹಿಂದೂ 'ಮುಸ್ಲಿಂ-ದಲಿತ ಪೈಕ್ಯತೆ'ಯ ನೆಲೆಗಳಿಂದ ಪ್ರಭಾವಿತವಾದ ಎಚ್ಚೆತ್ತ ತೀವ್ರಗಾಮೀ ದಲಿತ ಸಮುದಾಯಗಳೆರಡೂ ಭಿನ್ನವಾಗಿ ನಿಂತದ್ದು ಸುಸ್ಪಷ್ಟವಾಗಿದೆ. ಈ ಬಿಕ್ಕಟ್ಟು ಗಳ ಪರಂಪರೆ (ಇರಂಪಯುಕ್ತವಾಗಿದ್ದ ಭೂಮಿಯನ್ನು ದಲಿತರು ಉಳುವುದರ ಸಂಬಂಧದ ಅಸ್ಪಷ್ಟ ಬಿಕ್ಕಟ್ಟುಗಳೂ ಸೇರಿದಂತೆ) ಮುಂದುವರಿದು 1978–1979ರ ನಾಮಾಂತರದ ಸಂಬಂಧದ ಬೃಹತ್ ದೊಂಬಿಗೆ (ಮರಾಠವಾಡ ವಿಶ್ವವಿದ್ಯಾಲಯದ ಪುನರ್ ನಾಮಕರಣ) ಮತ್ತು 1980ರ ಕೊನೆಯ ದಿನಗಳಲ್ಲಿ ಶಿವಸೇನೆಯ ರೂಪು ಗೊಳ್ಳಲು ಕಾರಣವಾದವು.

ಒಟ್ಟಾರೆಯಾಗಿ ತೆಲುಗು ಪ್ರಾಂತ್ಯಗಳಲ್ಲಿ ಎದ್ದು ಕಾಣುವಂಥ ಉಗ್ರಗಾಮಿತ್ವ ವಿರದಾಗಲೂ ಮೈಸೂರು ಮತ್ತು ಮರಾಠಿ ಭಾಷಿಕ ಪ್ರದೇಶಗಳಲ್ಲಿನಂತೆಯೇ ಇಲ್ಲಿಯೂ ತನ್ನ ತಂತ್ರೋಪಾಯಗಳಲ್ಲಿ (ತೆಲಂಗಾಣ ಕ್ರಾಂತಿಯನ್ನು ನಿಗ್ರಹಿಸುವ ಸಂಬಂಧದಲ್ಲಿ) ಯಶಸ್ವಿಯಾಯಿತು. ತೆಲಂಗಾಣ ಮತ್ತು ಆಂಧ್ರದ ಕರಾವಳಿ ಪ್ರಾಂತ ಗಳಲ್ಲಿನ ವಾಮಪಂಥೀಯ ನಾಯಕತ್ವವಾಗಲಿ, ಮೈಸೂರು ಪ್ರಾಂತದಲ್ಲಿ ಪ್ರಾಬಲ್ಯ ಪಡೆದ ಗಾಂಧೀವಾದಿ ನಾಯಕತ್ವವಾಗಲಿ, ಮಹಾರಾಷ್ಟ್ರದಲ್ಲಿನ ತೀವ್ರಗಾಮಿ ಅಂಬೇ ಡ್ಕರ್ ವಾದಿಗಳಾಗಲಿ ತಮ್ಮದೇ ಆದ ರೀತಿಯಲ್ಲಿ ಮತ್ತು ಮಾರ್ಗಗಳಲ್ಲಿ ದಲಿತರಿಗೆ ಕೆಲವು ಲಾಭಗಳನ್ನೂ, ಕೆಲವು ಸುಧಾರಣೆಗಳನ್ನೂ ಸಾಧಿಸಿದವೆಂಬುದು ನಿಜ. ಆದರೂ ಜಾತಿ–ವರ್ಗ (ಮತ್ತು ಲಿಂಗಬೇಧ) ಆಧಾರಿತ ಸಾಮಾಜಿಕ ವ್ಯವಸ್ಥೆಯ ಶೋಷಕ ಸ್ವರೂಪ ಸ್ವಲ್ಪವೂ ಬದಲಾಗದೆ ಉಳಿಯಿತು.

ಸಮಾರೋಪ: ವಸಾಹತುಶಾಹಿ ನಂತರದ ದಿನಗಳಲ್ಲಿ ಜಾತಿ

ವಸಾಹತುಶಾಹಿ ಆಡಳಿತದ ನಂತರದ ದಿನಗಳಲ್ಲಿನ ಘಟನಾವಳಿಗಳ ಪೂರ್ವ ಸೂಚನೆಯಾಗಿ 1949ರಲ್ಲಿ ಅಂಬೇಡ್ಕರ್ ಸಂವಿಧಾನ ರಚನಾ ಸಮಿತಿಯನ್ನು ಉದ್ದೇಶಿಸಿ ಹೇಳಿದ ಕೆಲವು ಎಚ್ಚರಿಕೆಯ ಮಾತುಗಳನ್ನು ಗಮನಿಸಬಹುದು:

"1950ರ ಜನವರಿ 26ರಂದು ವೈರುಧ್ಯಗಳ ಬದುಕೊಂದನ್ನು ಪ್ರವೇಶಿಸ ಲಿದ್ದೇವೆ. ರಾಜಕಾರಣದಲ್ಲಿ ನಾವು ಸಮಾನತೆಯನ್ನು ಹೊಂದಲಿದ್ದೇವೆ ಮತ್ತು

ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಅಸಮಾನತೆಯನ್ನು ಹೊಂದಲಿದ್ದೇವೆ. ಈ ವಿರೋಧಾಭಾಸವನ್ನು ಸಾಧ್ಯವಾದಷ್ಟು ಬೇಗನೆ ನಿವಾರಿಸಬೇಕಾಗಿದೆ. ಇಲ್ಲವಾದಲ್ಲಿ ಅಸಮಾನತೆಯಿಂದ ನರಳಿದ ಜನ ನಾವಿಷ್ಟು ಶ್ರಮದಿಂದ ರೂಪಿಸಿದ ರಾಜಕೀಯ ಪ್ರಜಾಪ್ರಭುತ್ವದ ಸಂರಚನೆಯನ್ನು ನಾಶಪಡಿಸುತ್ತಾರೆ."

ಇಂಥ ಕೆಲಬಗೆಯ ಸ್ಫೋಟಗಳು ನಡೆಯುತ್ತಲೇ ಇವೆ. ಆದರೆ ಇವು ಜಾತಿಯನ್ನು ಭಾರತದ ಅಭಿವೃದ್ಧಿಯ ಒಂದು ಭಾಗವೆಂದು ನಂಬುವ ಬೂರ್ಶ್ವಾವಾದಿಗಳನ್ನು ಸುಳ್ಳಾಗಿಸಿರುವಂತೆಯೇ ಸಾಂಪ್ರದಾಯಿಕ ಮಾರ್ಕ್ಸ್‌ವಾದಿಗಳ 'ಜಾತಿ ಹೋರಾಟವು ವರ್ಗ ಹೋರಾಟವಾಗಿ ಮಾರ್ಪಾಟಾಗುವುದೆಂಬ' ನಂಬಿಕೆಯನ್ನೂ ಹೋಲುವುದಿಲ್ಲ. ಬದಲಾಗಿ, ವಸಾಹಾತುಶಾಹೀ ಆಡಳಿತಾನಂತರದ ಅವಧಿಯಲ್ಲಿನ ಶ್ರಮಿಕ-ರೈತಾಪಿಗಳ ಚಳುವಳಿಗಳು, ನವ ಸಾಮಾಜಿಕ ಚಳುವಳಿಗಳು ಮಹಿಳಾ, ದಲಿತ, ರೈತ, ಪರಿಸರವಾದೀ, ರಾಷ್ಟ್ರೀಯವಾದೀ ನೆಲೆಯ ಮೂಲಕ ಅಭಿವ್ಯಕ್ತಿಯನ್ನು ಪಡೆಯುತ್ತಿವೆ. ಅಂಥವುಗಳಲ್ಲೊಂದು ಹೊಸ ಅರ್ಥವನ್ನು ಪಡೆದ ಜಾತಿ ವಿರೋಧಿ ಚಳುವಳಿಯಾಗಿದೆ.

ಕಳೆದ ದಶಕದಲ್ಲಷ್ಟೆ ಜಾತಿಯ ಅರ್ಥ ಮತ್ತು ಅದರ ವಿಶ್ಲೇಷಣೆಯನ್ನು ಕುರಿತಂತೆ ನವಮಾರ್ಕ್ಸ್‌ವಾದೀ ಚರ್ಚೆಗಳು ಕಾಣಿಸಿಕೊಂಡಿವೆ. ಇದರ ಹಿನ್ನೆಲೆಗಿರುವ ಚೋದನೆ ದಲಿತ ಚಳುವಳಿಯೇ ಆಗಿದೆ. ಜಾತಿಯ ತಾತ್ವಿಕ ನೆಲೆಗಳನ್ನು ಕುರಿತ ಚರ್ಚೆಯ ಜೊತೆಗೆ ಬಂಡವಾಳಶಾಹಿಯ ಬೆಳವಣಿಗೆಯ ಬದಲಾದ ಸಂದರ್ಭದಲ್ಲಿ ಶ್ರೀಮಂತ ರೈತರು/ಮಧ್ಯಮ ಜಾತಿಗಳ ಶ್ರೀಮಂತರೇ ದಲಿತರ ನಿಜವಾದ ಶತ್ರುಗಳಾಗಿದ್ದಾರೆಯೇ ಅಥವಾ ಅಂಬೇಡ್ಕರರ ದಲಿತ–ಬಹುಜನ (ಕೃಷಿಕ-ಕಾರ್ಮಿಕ-ರೈತ-ಶ್ರಮಿಕ) ಮೈತ್ರಿಯ ಕರೆ ಇಂದಿಗೂ ನಿಲ್ಲುವಂಥದೇ ಎಂಬ ವಾಗ್ವಾದವೂ ನಡೆದಿದೆ.

ಸ್ಥೂಲವಾಗಿ ಹೇಳುವುದಾದರೆ ಅಂಕಿ ಸಂಖ್ಯೆಗಳು ತೋರಿಸುವ ಹಾಗೆ ಗ್ರಾಮೀಣ ಸಮಾಜದಲ್ಲಿ ಅಸಮಾನತೆಯು ಹೆಚ್ಚುತ್ತಿಲ್ಲವಾದರೂ ಅದೇನು ಕಡಿಮೆಯುಂತೂ ಆಗುತ್ತಿಲ್ಲ. ವಿಭಿನ್ನ ಜಾತಿಗಳ ನಡುವೆ ಇರುವ ಆರ್ಥಿಕವಾದ ತರತಮಗಳು ಸ್ಥೂಲವಾಗಿ ಆರ್ಥಿಕ ಸ್ಥಿತಿಗತಿ ಮತ್ತು ಜಾತಿಯ ಸಹ ಸಂಬಂಧಗಳನ್ನೇ ಆಧರಿಸಿವೆ (ಕೋಷ್ಟಕ 3ನ್ನು ನೋಡಿ). ಮತ್ತೊಂದು ಕಡೆ ದಲಿತ ಮತ್ತು ಬಹುಜನ ಜಾತಿ ಗುಂಪುಗಳೆರಡರಲ್ಲೂ ಕೃಷಿಕಾರ್ಮಿಕರಿದ್ದಾರೆ, ಬಡ ರೈತರಿದ್ದಾರೆ ಮತ್ತು ಶ್ರಮಿಕರಿದ್ದಾರೆ. ಹಾಗೆಯೇ ಸಾರ್ವಜನಿಕ ಸೇವೆಗಳಲ್ಲಿ ಮತ್ತು ಉದ್ಯೋಗದ ವಲಯದಲ್ಲಿನ ಮೀಸಲಾತಿ ಸವಲತ್ತುಗಳ ಪರಿಣಾಮವಾಗಿ ದಲಿತರಲ್ಲೇ ಮಧ್ಯಮ ವರ್ಗದ ಒಂದು ಭಾಗವು ನಿರ್ಮಾಣವಾಗಿದೆ.

ಕೋಷ್ಟಕ 3

ಜಾತಿ ಮತ್ತು ಕೃಷಿಕ ವೃತ್ತಿ*

	ಮೇಲ್ಜಾತಿ	ಮಧ್ಯಮ ಜಾತಿ	ಕೆಳಜಾತಿ	ಪರಿಶಿಷ್ಟ ಜಾತಿ	ಒಟ್ಟು
ಕೃಷಿ					
ರೈತರು	24.38	7.57	6.94	1.54	7.35
ಉಳುಮೆದಾರರು	43.91	53.30	41.79	27.05	41.35
ಶೇರು–ಬೆಳೆಗಾರರು	3.91	6.18	6.17	8.50	6.51
ಕೃಷಿ ಕಾರ್ಮಿಕರು	1.09	11.91	18.85	36.19	18.20
ಅರಣ್ಯ, ಮೀನುಗಾರಿಕೆ ಪ್ರಾಣಿ ಸಾಕಾಣಿಕೆ	0.62	1.38	3.31	2.35	2.45
ಕೃಷಿಯಲ್ಲಿ ಒಟ್ಟು	73.91	80.35	74.04	75.66	76.83
ಇತರರು	26.09	19.65	24.93	24.33	23.47
ಒಟ್ಟು	100.00	100.00	100.00	100.00	100.00

ಪಿ.ಸಿ. ಜೋಷಿ "ಪರ್ಸ್‌ಪೆಕ್ಟಿವ್ಸ್ ಆನ್ ಪಾವರ್ಟಿ ಅಂಡ್ ಸೋಷಿಯಲ್ ಚೇಂಜ್ ಇಪಿಡಬ್ಲ್ಯೂ ಅನಲ್ ನಂಬರ್, ಫೆಬ್ರುವರಿ 1979, ಪಿ. 363.

"ಮೇಲು ಜಾತಿಯವರೆಂದರೆ ಸಂಪ್ರದಾಯದ ಪ್ರಕಾರ ಪವಿತ್ರ ಜನಿವಾರವನ್ನು ಧರಿಸಿದವರು; ಮಧ್ಯಮ ಜಾತಿಯವರೆಂದರೆ ಯಾರಿಂದ ಬ್ರಾಹ್ಮಣರು ನೀರನ್ನು ಒಪ್ಪುವರೋ ಅವರು; ಕೆಳಜಾತಿಯವರೆಂದರೆ ಅಸ್ಪೃಶ್ಯರಲ್ಲದ ಇತರ ಜಾತಿಗಳ ಶೂದ್ರರು." ರೈತರೆಂದರೆ ತಮ್ಮದೇ ಆದ ಭೂಮಿಯನ್ನು ಹೊಂದಿ ಹೆಚ್ಚಾಗಿ ಕೂಲಿ ಕಾರ್ಮಿಕರನ್ನವಲಂಬಿಸಿದ–ಉಳುವವರು; ಉಳುಮೆದಾರರು-ಭಾಗಶಃ ಕೂಲಿ ಕಾರ್ಮಿಕರನ್ನವಲಂಬಿಸಿ–ತಮ್ಮ ಕುಟುಂಬದ ಸದಸ್ಯರೊಂದಿಗೆ ಉಳುವವರು; ಶೇರು ಬೆಳೆಗಾರರು: ಇತರರ ಭೂಮಿಯನ್ನು, ಬೆಳೆಯನ್ನು ಹಂಚಿಕೊಳ್ಳುವ ಆಧಾರದ ಮೇಲೆ ಉಳುವವರಾಗಿದ್ದು ಕೂಲಿ ಕಾರ್ಮಿಕರನ್ನು ಬಾಡಿಗೆ ಆಧಾರದ ಮೇಲೆ ಪಡೆಯುವುದಿಲ್ಲ; ಕೃಷಿಕಾರ್ಮಿಕರು: ಇತರರ ಭೂಮಿಯಲ್ಲಿ ಕೂಲಿಯ ಆಧಾರದ ಮೇಲೆಯೇ ದುಡಿಯುವವರು.

ಕೋಷ್ಟಕ 4

ಪರಿಶಿಷ್ಟ ಜಾತಿ ಮತ್ತು ವರ್ಗಗಳ ವೃತ್ತಿಗಳು, 1981

	ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ	ಇತರರು	ಒಟ್ಟು
ಸಂಖ್ಯೆಗಳು (ಲಕ್ಷಗಳಲ್ಲಿ) ಮತ್ತು ಶೇಕಡಾವಾರು				
1. ಕೃಷಿ ವಲಯ	289	192	999	1,480
	76.4	87.1	61.4	66.5
(ಎ+ಬಿ)	(19.5)	(13.0)	(67.5)	(100.0)
ಎ. ಉಳುಮೆದಾರರು	107	120	693	925
	28.2	54.4	42.9	41.5
	(11 6)	(13 0)	(75.5)	(100 0)
ಬಿ. ಕೃಷಿಕಾರ್ಮಿಕರು	182	72	30.1	555
	48.2	32.7	18.5	24.9
	(33 8)	(13.8)	(53 2)	(100.0)
2. ಕೃಷಿಯೇತರ	89	8	628	745
ವಲಯ	23 6	12.9	38 6	33 5
	(12 0)	(3.8)	(84.2)	(100 0)
ಒಟ್ಟು	378	220	1627	2225
	100 0	100.0	100 0	100.0
(1+2)	(7.0)	(10 0)	(73.0)	(100.0)

ವಿವರಗಳು ಸೆಂಟರ್ ಫಾರ್ ಮಾನೀಟರಿಂಗ್ ದಿ ಇಂಡಿಯನ್ ಇಕಾನಮಿ, ಬೇಸಿಕ್ ಸ್ಟ್ಯಾಟಿಸ್ಟಿಕ್ಸ್, 1985, ಕೋಷ್ಟಕ 1.8ಸಿ.

3ನೇ ಮತ್ತು 4ನೇ ದರ್ಜೆಯ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಯವರು ಅವರ ಜನಸಂಖ್ಯೆಗನುಗುಣವಾದ ಪ್ರಾತಿನಿಧ್ಯವನ್ನು ಪಡೆಯುವತ್ತಣ ದಾರಿಯಲ್ಲಿದ್ದಾರೆ. ಆದೆ 1ನೇ ಮತ್ತು 2ನೇ ದರ್ಜೆಯ ಹುದ್ದೆಗಳಲ್ಲಿ ಇನ್ನೂ ಬಹಳ ಹಿಂದೆ ಇದ್ದಾರೆ. ಮತ್ತು ಮಂಡಲ್ ಸಮಿತಿಯ ಚರ್ಚೆಗಳಲ್ಲಿ ಕಾಣುವಂತೆ ಇತರ ಹಿಂದುಳಿದ ವರ್ಗಗಳ (ಎಂದರೆ ಬಹು ದೊಡ್ಡ ವರ್ಗವಾದ ಶೂದ್ರರು) ಶೇ. 70ರಷ್ಟು ಸರ್ಕಾರಿ ಸೇವೆಗಳನ್ನು

ಹೊಂದಿರುವ ಮತ್ತು 90ರಷ್ಟು 1ನೇ ದರ್ಜೆಯ ಉದ್ಯೋಗಗಳನ್ನು ಹೊಂದಿರುವ ಮುಂದುವರಿದ ಜಾತಿಗಳಿಗೆ ಹೋಲಿಸಿದರೆ ಇನ್ನೂ ದುರ್ಬಲವಾದ ಸ್ಥಿತಿಯಲ್ಲಿರಬಹುದು. ಇಡೀ ಚಿತ್ರವನ್ನು ಸುಸ್ಪಷ್ಟ ಗ್ರಹಿಸಲು ನಗರ-ಗ್ರಾಮೀಣ ಪರಿಸ್ಥಿತಿಗಳ ನಡುವಣ ಕಂದರಗಳು ಹೆಚ್ಚಾಗುತ್ತಿರುವ: ಸಂಘಟಿತ ವಲಯ (ಖಾಸಗಿ ಮತ್ತು ಸಾರ್ವಜನಿಕ ವಲಯಗಳೆರಡರ ಉದ್ಯೋಗದ ಸ್ಥಿತಿಗಳೂ ಸೇರಿದಂತೆ) ಮತ್ತು ಅಸಂಘಟಿತ ವಲಯ (ಉಳುಮೆದಾರ ರೈತರು ಮತ್ತು ಗ್ರಾಮೀಣ ಹಾಗೂ ನಗರ ಪ್ರದೇಶಗಳ ಕೂಲಿ ಆಧಾರಿತ ಉದ್ಯೋಗಗಳು) ನಡುವೆ ಹೆಚ್ಚುತ್ತಿರುವ; ಪ್ರಾಥಮಿಕ ವಲಯಕ್ಕಿಂತ (ಉಳುಮೆದಾರರು, ಕೃಷಿಕಾರ್ಮಿಕರು ಮತ್ತು ಅರಣ್ಯಗಳು,ಮೀನುಗಾರಿಕೆ ಮತ್ತು ಪ್ರಾಣಿಸಾಕಣಿಕೆ ವಲಯಗಳಲ್ಲಿನ ಕೆಲಸಗಾರರು) ನಾಲ್ಕರಿಂದ ಐದು ಪಟ್ಟು ಹೆಚ್ಚಾಗಿರುವ ವಲಯದ (ಸರ್ಕಾರೀ ಸೇವೆಗಳು ಹೆಚ್ಚಾಗಿರುವಲ್ಲಿನ ಸೇವೆಗಳು) ಆದಾಯದ ಸಂಗತಿಗಳನ್ನೂ ಇಲ್ಲಿ ಗಮನಿಸಬೇಕಾಗಿದೆ.

1971ರ ನಂತರ ಜಾತಿ ವಿರೋಧೀ ಚಳುವಳಿಗಳು ಸ್ಪಷ್ಟವಾಗಿ ಆರ್ಥಿಕ ಅಸಮಾನತೆಗಳು ಮತ್ತು ಬೆಳೆಯುತ್ತಲೇ ಕೂಡ ಸಾಮಾಜಿಕ ಅಸಮಾನತೆಗಳ ಪರಿಣಾಮ ರೂಪಿಯಾದುವು. ದಲಿತ್ ಪ್ಯಾಂಥರ್ಸ್ (ಮಹಾರಾಷ್ಟ್ರ, 1972), ದಲಿತ ಸಂಘರ್ಷ ಸಮಿತಿ (ಕರ್ನಾಟಕ, 1974), ಆಂಧ್ರ ದಲಿತ ಮಹಾಸಭಾ (1984) ಹಾಗೂ ಭಾರತದಾದ್ಯಂತ 1970ರ ದಿನಗಳಲ್ಲಿ ಚಿಗುರಿಕೊಂಡಂತಹ ಇತರ ಸಂಘಟನೆಗಳು ಈ ಚಳುವಳಿಯ ನೇತೃತ್ವವನ್ನು ವಹಿಸಿದವು. ಬಿಹಾರ ಮತ್ತು ಆಂಧ್ರಗಳಲ್ಲಿನ 1970 ಮತ್ತು 1980ರ ದಿನಗಳ ದಲಿತರನ್ನೊಳಗೊಂಡ ನಕ್ಸಲೈಟ್ ಸಂಘಟನೆಗಳೂ ಈ ನೆಲೆಯಲ್ಲೇ ನೋಡಬೇಕಾದುವು. 1980ರ ದಿನಗಳಲ್ಲಿ ಮಂಡಲ್ ವರದಿಯ ಸಂಬಂಧದಲ್ಲಿ ಬಹುಜನ ಸಮಾಜದ ಮಧ್ಯಮ ಜಾತಿಗಳು ತೋರಿದ ಗಣನೀಯ ಅರಿವಿನ ಜಾಗೃತಿಯನ್ನು ನೋಡಬಹುದು. ಇಂತಹ ಅತ್ಯುತ್ಸಾಹಗಳು 1920ರ ಸುಮಾರಿಗೇ ಮೊದಲಾದ (ಅದಕ್ಕೂ ಹಿಂದೆ ಫೂಲೆಯವರಿಂದ ಪ್ರಾರಂಭವಾದ) ದಲಿತ ಚಳುವಳಿಯನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಮತ್ತು ಸಾಂಪ್ರದಾಯಿಕ ಮಾರ್ಕ್ಸ್‌ವಾದ ಮತ್ತು ಅಂಬೇಡ್ಕರ್ ವಾದಗಳನ್ನು ಕುರಿತು ಪುನರಾಲೋಚಿಸುವಲ್ಲಿ ಮತ್ತು ಭಾರತೀಯ ಸಂದರ್ಭಗಳಿಗೆ ಯುಕ್ತವಾಗಬಲ್ಲ ಚಾರಿತ್ರಿಕ ಮೆಟೀರಿಯಲಿಸಂ ಒಂದನ್ನು ರೂಪಿಸುವಲ್ಲಿ ಸವಾಲುಗಳಾಗಿ ಪರಿಣಮಿಸಿವೆ. ಎ. ಕೆ. ರಾಯ್ ಅವರ ಮಾತಿನಲ್ಲಿ ಹೇಳುವುದಾದರೆ,

"ಕಮ್ಯುನಿಸ್ಟರು ನ್ಯಾಷನಲ್ ಡೆಮಾಕ್ರಟಿಕ್ ರೆವಲ್ಯೂಷನ್, ಪೀಪಲ್ಸ್ ಡೆಮಾಕ್ರಟಿಕ್ ರೆವಲ್ಯೂಷನ್, ನ್ಯೂ ಡೆಮಾಕ್ರಟಿಕ್ ರೆವಲ್ಯೂಷನ್ ಇತ್ಯಾದಿಯಾದ

ಹಲವಾರು ನೀಲಿನಕಾಶೆಗಳನ್ನೇನೋ ತಯಾರಿಸಿದ್ದಾರೆ. ಆದರೆ ಹೀಗೆ ಮಾಡುವಾಗ ಅವರು ಬಳಸಿದ ನಿಗೂಢವಾದ ಪರಿಭಾಷೆಗಳು ಅವರಿಗೇ ಪೂರ್ಣ ಅರ್ಥವಾಗಿಲ್ಲದಂಥವು ಮತ್ತು ಅವರ ಅನುಯಾಯಿಗಳ ನೆನಪಿನಲ್ಲಿ ಕೂಡ ಉಳಿಯದಂಥವು. ಇನ್ನು ಮಿಲಿಯಾಂತರ ಶ್ರಮಿಕ ಸಾಮಾನ್ಯರ ಮಾತೇಕೆ! ಭಾರತದ ಸಂದರ್ಭಕ್ಕೆ ಇಂದು ಅಗತ್ಯವಿರುವುದು ಸರಳವಾದ ನವ ದಲಿತ ಕ್ರಾಂತಿ; ಸಾಮಾಜಿಕ ವಿಮೋಚನೆಯ ಹೋರಾಟವನ್ನು ಮತ್ತು ರಾಷ್ಟ್ರವನ್ನಾವರಿಸಿರುವ ಅಂತರ್ರಾಷ್ಟ್ರೀಯ ವಸಾಹತು ಶಾಹಿಯ ಭದ್ರಕೋಟೆಯನ್ನು ನಾಶಪಡಿಸಬಲ್ಲಂಥ, ಆರ್ಥಿಕ ಶೋಷಣೆಯ ವಿರುದ್ಧದ ಹೋರಾಟವನ್ನು ಬೆಸೆಯಬಲ್ಲಂಥ ಕೆಂಬಾವುಟ ಮತ್ತು ಹಸಿರು ಬಾವುಟಗಳ ನೀತಿ ಮಾತ್ರವೇ.

ಅನು: ಡಾ|| ಎಸ್.ಎಸ್. ರೇಣುಕಾರಾಧ್ಯ

●

ಅಂಬೇಡ್ಕರ್ ಅವರ ರಾಷ್ಟ್ರೀಯತಾ ಪರಿಕಲ್ಪನೆ ಮತ್ತು ಭಾರತ ರಾಷ್ಟ್ರೀಯ ಚಳವಳಿ

— ಎಸ್. ಚಂದ್ರಶೇಖರ್

ಭಾರತೀಯ ರಾಷ್ಟ್ರೀಯತೆ ಮತ್ತು ಭಾರತ ರಾಷ್ಟ್ರೀಯ ಚಳವಳಿಗಳನ್ನು ಕುರಿತ ಬರಹಗಳು ಹೇರಳವಾಗಿವೆ. ಹಾಗೆಯೇ ಅಂಬೇಡ್ಕರ್ ಮತ್ತು ಅವರ ಚಳವಳಿಯ ಬಗ್ಗೆ ಕೂಡ ಹಲವಾರು ಬರಹಗಳಿವೆ. ಆಶ್ಚರ್ಯವೆಂದರೆ ಈ ಸಮಕಾಲೀನ ಚಳವಳಿಗಳ ಬಗ್ಗೆ, ಅಂಬೇಡ್ಕರ್ ಮತ್ತು ರಾಷ್ಟ್ರೀಯ ಚಳವಳಿಯನ್ನು ಕುರಿತು ಯಾವ ಗಂಭೀರ ಬರಹ ಇರಲಿ, ಚರ್ಚೆಯೂ ನಡೆದಿಲ್ಲ. ಭಾರತ ರಾಷ್ಟ್ರೀಯ ಚಳವಳಿಯ ಬಗ್ಗೆ ಬರೆದಿರುವವರು ಅಂಬೇಡ್ಕರ್ ಮತ್ತು ಅವರ ಚಳವಳಿಯನ್ನು Sectarion ಮತ್ತು ಬ್ರಿಟಿಷರ ಪರವಾಗಿದ್ದವರು ಎಂದೋ ಅಥವಾ ಪೂರ್ಣ ಕಡೆಗಣಿಸಿಯೋ ಬರೆದುಬಿಡುತ್ತಾರೆ. ಈ ಲೇಖನದಲ್ಲಿ ಅಂಬೇಡ್ಕರರ ರಾಷ್ಟ್ರೀಯತಾ ಪರಿಕಲ್ಪನೆಗಳೇನು, ಅದು ಭಾರತೀಯ ರಾಷ್ಟ್ರೀಯ ಚಳವಳಿಯ ಕೇಂದ್ರ ಕಾಳಜಿಯ ಜೊತೆಗೆ ಹೇಗೆ ಹೊಂದಿಕೊಂಡಿತು ಅಥವಾ ಭಿನ್ನವಾಗಿತ್ತು ಎನ್ನುವ ಬಗ್ಗೆ ಚರ್ಚಿಸಲಾಗಿದೆ.

ಭಾರತ ರಾಷ್ಟ್ರೀಯ ಚಳವಳಿ ಉದಾರವಾದಿ ಜನತಾಂತ್ರಿಕ ತಾತ್ವಿಕತೆ ಮತ್ತು ಸಂಸ್ಥೆಗಳನ್ನು ಆಧರಿಸಿತ್ತು. ವಿಶಾಲಾರ್ಥದಲ್ಲಿ ಜಾತ್ಯಾತೀತ–ಜನತಾಂತ್ರಿಕ ಭಾರತ ರಾಷ್ಟ್ರ ಕಟ್ಟುವ ದಿಶೆಯಲ್ಲಿ ಅದು ಕೆಲಸ ಮಾಡಿತೆಂದು ಸಾಮಾನ್ಯವಾಗಿ ನಂಬಲಾಗಿದೆ. [1] ರಾಷ್ಟ್ರೀಯ ಚಳವಳಿಯ ಘೋಷಿತ ಉದ್ದೇಶ ಅದೇ ಆದರೂ ವಾಸ್ತವವಾಗಿ ಈ ಚಳವಳಿ ಬಹುತೇಕ ಆ ಉದ್ದೇಶದಲ್ಲಿ ಪೂರ್ಣ ನಂಬಿಕೆಯಿಲ್ಲದವರ ನಾಯಕತ್ವದಲ್ಲಿಯೇ ಉಳಿಯಿತು. ಈ ಇಬ್ಬಂದಿತನವನ್ನು ಅಂಬೇಡ್ಕರ್ 'ಬೂಟಾಟಿಕೆ' (hypocricy) ಎಂದು ಖಂಡಿಸುತ್ತಿದ್ದರು.

ಅಂಬೇಡ್ಕರ್‌ಗೆ ರಾಷ್ಟ್ರೀಯ ಚಳವಳಿಯ ಘೋಷಿತ ಉದ್ದೇಶಗಳಲ್ಲಿ ಪೂರ್ಣ ನಂಬಿಕೆಯಿತ್ತು. ಆದರೂ ಅವರು ಆ ಚಳವಳಿಯ ಜೊತೆ ಇರಲಿಲ್ಲ. ಅದಕ್ಕೆ ಕಾರಣವಾದರೂ ಏನು ? ಈ ಪ್ರಶ್ನೆಗೆ ಉತ್ತರ ಬೇಕಾದರೆ ನಾವು ಭಾರತೀಯ ಪುನರುಜ್ಜೀವನ ಚಳವಳಿ ಮತ್ತು ಆಧುನಿಕತೆಗಳ ಬೇರುಗಳನ್ನೇ ಕೆದಕಬೇಕು.

'ರಾಷ್ಟ್ರೀಯತೆ' ಪೂರ್ತಿಯಾಗಿ 'ಆಧುನಿಕ ಪರಿಕಲ್ಪನೆ' ಎಂದು ಸರಿಯಾಗಿ ಗ್ರಹಿಸಿದ ಕೆಲವೇ ಭಾರತೀಯರಲ್ಲಿ ಅಂಬೇಡ್ಕರ್ ಮುಖ್ಯರು. ಇಂಥ ಜನರನ್ನು

ವಿಶಾಲಾರ್ಥದಲ್ಲಿ ಎರಡು ಬಣಗಳಾಗಿ ವಿಂಗಡಿಸಬಹುದು. ಒಂದು ಗುಂಪು ಭಾರತ, ರಾಜಕೀಯವಾಗಿ-ಸಂವಿಧಾನಾತ್ಮಕವಾಗಿ ರಭಸದಿಂದ ಮುನ್ನುಗ್ಗಬೇಕು ಎಂದು ಬಯಸಿವರೆ, ಇನ್ನೊಂದು ಗುಂಪು ಭಾರತ, ಸಾಮಾಜಿಕ-ಜನತಾಂತ್ರಿಕ ಸುಧಾರಣೆಯ ಹಾದಿಯಲ್ಲಿ ಮುನ್ನಡೆಯಬೇಕೆಂದು ಬಯಸಿತು. ಆದರೆ ಈ ಎರಡು ಬಣಗಳ ನಡುವೆ ಪ್ರಾರಂಭದಲ್ಲಿ ತೀವ್ರತರ ತಾತ್ವಿಕ ಭಿನ್ನಾಭಿಪ್ರಾಯವಿರಲಿಲ್ಲ ಎನ್ನುವುದು ನಿಜ. ಮೊದಲ ಹಂತದಲ್ಲಿ ಅಂಬೇಡ್ಕರ್ ಮತ್ತು ರಾಷ್ಟ್ರೀಯ ಚಳವಳಿಯ ವಿಷಯದಲ್ಲೂ ಇದು ನಿಜ. ಎರಡು ಬಣಗಳೂ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಮುನ್ನಡೆಯ ಬೇಕೆಂದೇ ನಂಬಿದ್ದವು. ಆದರೆ 1885 ರಲ್ಲಿ ಭಾರತಿ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆ ಯಾದ ನಂತರ ಈ ಗುಂಪುಗಳ ಭಿನ್ನಾಭಿಪ್ರಾಯ ಗಂಭೀರ ರೂಪ ತಾಳಿತು. ಮೊದಲ ನೆಯ ಗುಂಪು ಭಾರತ, ಆಧುನಿಕ-ಜನತಾಂತ್ರಿಕ ಸಮಾಜ-ರಾಷ್ಟ್ರವಾಗಿ ಸಾಗಬೇಕಾದ ಹಾದಿಯಲ್ಲಿ ಅಡೆತಡೆಗಳಿವೆ, ಅವನ್ನು ನಿವಾರಿಸಿಕೊಳ್ಳುವ ತುರ್ತು ಇದೆ ಎನ್ನುವುದನ್ನು ಒಪ್ಪಲು ನಿರಾಕರಿಸಿಬಿಟ್ಟಿತು. ಅದು ಉದಾರವಾದ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲ. ಉದಾರವಾದಿ-ಮಾನವತಾವಾದದಿಂದ ರೋಮಾಂಚಿತವಾಗಿದ್ದ ಎರಡನೆಯ ಗುಂಪು ಭಾರತೀಯ ಸಾಮಾಜಿಕ ಸಂದರ್ಭವನ್ನು ಗ್ರಹಿಸಿದ್ದೇ ಭಿನ್ನರೀತಿಯಲ್ಲಿ. ಭಾರತ ಒಂದು ಆಧುನಿಕ ರಾಷ್ಟ್ರವಾಗುವ ಪೂರ್ವಭಾವಿಯಾಗಿ ಸಾಮಾಜಿಕ-ಧಾರ್ಮಿಕ-ಸಾಂಸ್ಕೃತಿಕ ಮಜಲನ್ನು ದಾಟಬೇಕು ಎಂದು ಅದು ಭಾವಿಸಿತು. ಹಾಗೆ ನೋಡಿದರೆ ಈ ಪುನರು ಜ್ಜೀವನವಾಗದೆ ಭಾರತ ಒಂದು ರಾಷ್ಟ್ರವಾಗುವುದೇ ಇಲ್ಲ ಎಂಬ ನಿಲುವು ಇವರದು. ಈ ಭಿನ್ನಾಭಿಪ್ರಾಯಗಳು 1890ರ ದಶಕದಲ್ಲಿ ಸ್ಫೋಟಗೊಂಡು ಈ ಗುಂಪುಗಳು ಬೇರೆ ಯಾದವು. ಮಹಾದೇವ ಗೋವಿಂದ ರಾನಡೆಯವರನ್ನು ಒಳಗೊಂಡ ಎರಡನೆಯ ಬಣ ವಸಾಹತುಶಾಹಿ ಸರ್ಕಾರದ ಮೊಸಳೆ ಕಣ್ಣೀರಿನ ಬೆಂಬಲವನ್ನೂ ಗಳಿಸಿಕೊಂಡಿತು. ಇಲ್ಲಿ ಕುತೂಹಲಕರ ಅಂಶವೆಂದರೆ 1930ರವರೆಗೂ ರಾಷ್ಟ್ರೀಯ ಚಳವಳಿಯನ್ನು ಅದರ ನಾಯಕರನ್ನು ಖಂಡಿಸದೆ ಇದ್ದ ಅಂಬೇಡ್ಕರ್ ನಂತರ ಅವನ್ನು ಹಿಗ್ಗಾಮುಗ್ಗ ಟೀಕಿಸಲಾರಂಭಿಸಿದ್ದು ಮತ್ತು ಆ ಮೂಲಕ ಪರೋಕ್ಷವಾಗಿಯಾದರೂ ವಸಾಹತುಶಾಹಿ ಶಕ್ತಿಯ ಹತ್ತಿರ ಸರಿಯುದ ಇದ್ದರೂ ಅದರ ಮೊಸಳೆ ಕಣ್ಣೀರಿನ ಬೆಂಬಲ ಪಡೆದದ್ದು ಮತ್ತು ಅದನ್ನು ಪೂರ್ಣವಾಗಿ ಎದುರು ಹಾಕಿಕೊಳ್ಳದ್ದು.

ಹತ್ತೊಂಬತ್ತನೇ ಶತಮಾನದ ಆದಿಭಾಗದಲ್ಲಿ ಆಧುನಿಕೀಕರಣದ ಪ್ರಕ್ರಿಯೆಗೆ ಪ್ರತಿಕ್ರಿಯಿಸಲು ಪ್ರಾರಂಭಿಸಿದ ಭಾರತದಲ್ಲಿ ಮೇಲುಗೈ ಪಡೆದವರು ಸಾಮಾಜಿಕ-ಧಾರ್ಮಿಕ ಸುಧಾರಣಾವಾದಿ ಉದಾರವಾದಿಗಳೇ. ಆದರೆ ಅದು ತನ್ನ ಗಂಭೀರ ತಾತ್ವಿಕ ಮಿತಿಗಳಿಂದಾಗಿ ಜನ ಬೆಂಬಲ ಪಡೆಯದೇ ಹೋಯಿತು. ಈ ಸುಧಾರಣಾ ತಾತ್ವಿಕತೆಯ ಬಹುಮುಖ್ಯ ಬಲಹೀನತೆಯೆಂದರೆ ಸಮಾಜ ಮತ್ತು ಭೂ ಒಡೆತನವೂ

ಶೂದ್ರ

ಸೇರಿದಂತೆ ಅರ್ಥವ್ಯವಸ್ಥೆಯ ನಡುವಿನ ಅವಿನಾಭಾವ ಸಂಬಂಧ (nexus) ವನ್ನು ಗ್ರಹಿಸದೆ ಹೋದದ್ದು. ಧಾರ್ಮಿಕ-ಸಾಮಾಜಿಕ ಕ್ಷೇತ್ರದಲ್ಲಿ ಬದಲಾವಣೆಯನ್ನು ಬಯಸಿದ ಈ ಗುಂಪು ಭಾರತದ ಆಂತರಿಕ ಉತ್ಪಾದನಾ ಸಂಬಂಧಗಳಲ್ಲಿ ಎಲ್ಲ ಬದಲಾವಣೆಗಳನ್ನೂ ವಿರೋಧಿಸಿತು.2

ಭಾರತೀಯ ಬಹುಮುಖೀ ಸಮಾಜದಲ್ಲಿ ವಸಾಹತುಶಾಹಿ ವ್ಯವಸ್ಥೆಯಿಂದ ಲಭ್ಯವಿದ್ದ ಸವಲತ್ತುಗಳನ್ನು ಪಡೆಯಲು ಸಾಧ್ಯವಿದ್ದದ್ದು ಮೇಲ್ಜಾತಿಗಳಿಗೆ ಮಾತ್ರ. ಹಾಗೆಯೇ ಅಂದಿನ ರಾಷ್ಟ್ರೀಯ ಚಳವಳಿಯ ಮೇಲೂ ಹಿಡಿತ ಹೊಂದಲು ಸಾಧ್ಯವಿದ್ದದ್ದೂ ಈ ಜಾತಿಗಳವರಿಗೇ. ಯಾಕೆಂದರೆ ರಾಷ್ಟ್ರೀಯ ಭಾವನೆ ಮೊಳಕೆಯೊಡೆದದ್ದೂ ಈ ಜಾತಿಗಳವರಲ್ಲೇ. ಈ ಜನಕ್ಕೆ ಸಾಮಾಜಿಕ-ಧಾರ್ಮಿಕ ಸುಧಾರಣೆಗಳಲ್ಲಿದ್ದ ಆಸಕ್ತಿ ಕೇವಲ ಅಕಾಡೆಮಿಕ್ ಆದದ್ದು, ಸಾಮಾಜಿಕ ಸಂಬಂಧಗಳನ್ನು ಉಗ್ರವಾಗಿ ಬದಲಾಯಿಸುವಂಥ ಸುಧಾರಣಾ ತಾತ್ವಿಕತೆ ಇದಲ್ಲ. ಆದ್ದರಿಂದಲೇ ರಾನಡೆ ಪಂಥದ ಸುಧಾರಣಾ ಪ್ರಗತಿ ಆಮೆಯ ವೇಗಕ್ಕೆ ಸೀಮಿತಗೊಂಡಿತು. ಜೊತೆಗೆ ವಸಾಹತುಶಾಹಿಗೆ ಯಾವ ರೀತಿಯಿಂದಲೂ ಧಕ್ಕೆ ತರದ ಈ ತಾತ್ವಿಕತೆಗೆ ಬ್ರಿಟಿಷ್ ಸರ್ಕಾರದ ಬೆಂಬಲ ಸಿಕ್ಕಿತು. ಆದರೆ ಈ 'ಬೆಂಬಲ' ವಿವಿಧ ಗುಂಪುಗಳ ಭಾರತೀಯರನ್ನು ಒಡೆದು ಆಳುವ ಸಾಮ್ರಾಜ್ಯಶಾಹಿ ನೀತಿಯ ಒಂದು ಮುಖವೆಂದು ಬಹುಮಂದಿ ಗ್ರಹಿಸದಾದರು. ಭಾರತ ವಿರೋಧಿ ಬ್ರಿಟಿಷ್ ಸರ್ಕಾರದ ಬೆಂಬಲ ಗಳಿಸಿಕೊಂಡ ಸುಧಾರಣಾ ಚಳವಳಿಗೆ ಸಹಜವಾಗಿಯೇ ಬ್ರಿಟಿಷ್ ವಿರೋಧಿ ಮನೋಭಾವದ ಮೇಲ್ ಜಾತಿ ಮಧ್ಯಮವರ್ಗಗಳ ಬೆಂಬಲ ದೊರೆಯಲಿಲ್ಲ. ಸಾಮಾಜಿಕ-ಧಾರ್ಮಿಕ ಸುಧಾರಣೆ-ಬದಲಾವಣೆ ಸಾಂಸ್ಕೃತಿಕವಾಗಿ ಮೇಲಿನ ಸ್ತರದಲ್ಲಿದ್ದವರ ಸೃಜಕಾಳಜಿಯಾಗಲು ಸಾಧ್ಯವಿಲ್ಲ ಮತ್ತು ಈ ವರ್ಗವೇ ಚಿಗುರೊಡೆಯುತ್ತಿದ್ದ ರಾಷ್ಟ್ರೀಯ ಚಳವಳಿಯ ತಳಹದಿಯಾಗಿತ್ತು. ರಾಜಕೀಯವಾಗಿ ವಿಚಾರವಾದಿಯಾಗಿದ್ದ ಗುಂಪಂತೂ ರಾಷ್ಟ್ರೀಯ ಚಳವಳಿಯ ಮೇಲಿನ ತನ್ನ ನಾಯಕತ್ವವನ್ನು ಉಳಿಸಿಕೊಳ್ಳಬೇಕಾದರೆ, ಚಳವಳಿಯ ತಳಹದಿಯಾದ ಮೇಲ್‌ಜಾತಿಯವರ ವಿರುದ್ಧ ಹೋಗಲು ಸಾಧ್ಯವಿರಲಿಲ್ಲ. ಆದ್ದರಿಂದಲೇ ಕ್ರಮವಾಗಿ ಸಮಾಜ ಸುಧಾರಣೆ ಮತ್ತು ರಾಜಕೀಯ ಪ್ರಗತಿಗಳಲ್ಲಿ ಒಲವಿದ್ದ ಇಂಡಿಯನ್ ಸೋಶಿಯಲ್ ಕಾನ್ಫರೆನ್ಸ್ ಮತ್ತು ರಾಷ್ಟ್ರೀಯ ಕಾಂಗ್ರೆಸ್ಸಿನ ನಡುವೆ ಬಿರುಕುಂಟಾಯಿತು.

ಅಸ್ಪೃಶ್ಯ ಜಾತಿಯಲ್ಲಿ ಹುಟ್ಟಿ, ಕಷ್ಟ ಕೋಟಲೆಗಳಲ್ಲೇ ಬೆಳೆದ ಅಂಬೇಡ್ಕರ್‌ಗೆ ಸಹಜವಾಗಿಯೇ ಸಮಾಜ ಸುಧಾರಣೆಯ ಸೆಳೆತ ತೀವ್ರವಾಗಿತ್ತು.3 ಸಮಾಜ ಸುಧಾರಣೆ ಕಡೆಗಣಿಸಿದ ಕಾಂಗ್ರೆಸ್ ನಾಯಕತ್ವವನ್ನು ಅಂಬೇಡ್ಕರ್ ಎಂದೂ ಕ್ಷಮಿಸಲಿಲ್ಲ. ಅವರ ಪ್ರಕಾರ ಕಾಂಗ್ರೆಸ್ಸಿಗರ ಈ ಅಸಡ್ಡೆ ಮಹಾಪರಾಧ ಮತ್ತು ಭಾರತ ದೇಶಕ್ಕೇ

ಆತ್ಮಹತ್ಯಾತ್ಮಕವಾದದ್ದು.[4] ಸಮಾಜ ಸುಧಾರಣೆಯ ಮುಂದಾಳತ್ವ ವಹಿಸಿದ್ದ ರಾನಡೆಯವರ ಉದಾರವಾದಿ ಪಕ್ಷದ ಅವನತಿ ಬಗ್ಗೆ ಅಂಬೇಡ್ಕರ್ ತಮ್ಮ ಖೇದ ವ್ಯಕ್ತಪಡಿಸುತ್ತಿದ್ದರು.[5] ಆದರೆ ರಾನಡೆಯವರ ಚಳವಳಿಯ ತಾತ್ವಿಕತೆಗೆ ಅಂಬೇಡ್ಕರ್ ತಮ್ಮನ್ನು ಕಟ್ಟಿಹಾಕಿಕೊಳ್ಳಲಿಲ್ಲ. ಆ ಸಂಪ್ರದಾಯವನ್ನು ಅವರು ಉತ್ತಮಪಡಿಸಿದರು. ಬ್ರಿಟಿಷ್ ವಿರೋಧಿ ನಿಲುವಿನ ಹಿನ್ನೆಲೆಯಲ್ಲೇ ಎಲ್ಲರ ಯೋಗ್ಯತೆ–ದೇಶಭಕ್ತಿಗಳನ್ನು ಅಳೆಯುತ್ತಿದ್ದ ಮತ್ತು ಸಮಾಜ ಸುಧಾರಕರೆಂದರೆ ದೇಶದ್ರೋಹಿಗಳೆಂಬಂತೆ ನಡೆಸಿಕೊಳ್ಳುತ್ತಿದ್ದ ಅಂದಿನ ಪರಿಸರದಲ್ಲಿ, ಸಾಮಾಜಿಕ–ಧಾರ್ಮಿಕ ಬದಲಾವಣೆಯ ಬಗ್ಗೆ ಮಾತನಾಡುವುದೆಂದರೆ ಅಪಾರ ಟೀಕೆ, ಮೂದಲಿಕೆ, ವಿರೋಧ ಎದುರಿಸಬೇಕಾಗುತ್ತದೆಂದು ಅಂಬೇಡ್ಕರ್‌ಗೆ ಗೊತ್ತಿತ್ತು. ಒಬ್ಬಂಟಿಯಾಗಿ ಆದರೂ ಸರಿ ಆ ಹಾದಿಯಲ್ಲೇ ನಡೆಯಲು ಅವರು ತೀರ್ಮಾನಿಸಿದರು. ಇಲ್ಲದಿದ್ದರೆ ಭಾರತೀಯ ರಾಷ್ಟ್ರೀಯತೆಯ ದೃಷ್ಟಿಯಿಂದಲೇ ಬಹುಮುಖ್ಯವಾದ ಅಸ್ಪೃಶ್ಯರ ಪ್ರಶ್ನೆ ಮೂಲೆಗುಂಪಾಗಿ ಅದು ಭಾರತೀಯ ಸಮಾಜಕ್ಕೇ ಉರುಳಾಗಬಹುದಾದ ಸಾಧ್ಯತೆಯಿದ್ದುದನ್ನು ತನ್ನ ಮುತ್ಸದ್ದಿತನದಿಂದ ಮನಗಂಡರು.

ಬ್ರಿಟಿಷ್ ಆಳರಸರು, ಬ್ರಾಹ್ಮಣಶಾಹಿ ಶೋಷಣೆ–ಕ್ರೌರ್ಯಗಳನ್ನು ಹಾಗೆಯೇ ಒಪ್ಪಿಕೊಂಡು ಅದಕ್ಕೆ ಒತ್ತಾಸೆಯಾಗಿದ್ದಾರೆಂದು ಅಂಬೇಡ್ಕರ್‌ಗೆ ತಿಳಿದಿತ್ತು ಮತ್ತು ಅದನ್ನು ಅವರು ಆಡಿಯೂ ತೋರಿಸಿದರು. ಅದರ ವಿರುದ್ಧ ಹೋರಾಟ ಮಾಡಬೇಕಾದ ಅವಶ್ಯಕತೆಯನ್ನು ಮನಗಂಡಿದ್ದ ಅವರು ಇಡೀ ಸಂದರ್ಭವನ್ನು ವ್ಯಾಖ್ಯಾನಿಸಿದ್ದು ಹೀಗೆ: "ಅಸ್ಪೃಶ್ಯರು ಒಂದು ಸಂದಿಗ್ಧದಲ್ಲಿ ಸಿಲುಕಿಕೊಂಡಿದ್ದಾರೆ. ಯಾಕೆಂದರೆ ಅವರು ಸರ್ಕಾರ ಮತ್ತು ಸವರ್ಣೀಯ ಹಿಂದೂಗಳು ಇಬ್ಬರ ವಿರುದ್ಧವೂ ಹೋರಾಡಬೇಕಾಗಿದೆ. ಕನಿಷ್ಟ ಮಾನವಿಕ ಹಕ್ಕುಗಳನ್ನು ನಿರಾಕರಿಸುವ ಸವರ್ಣೀಯರ ವಿರುದ್ಧದ ಹೋರಾಟಕ್ಕೆ ನಮ್ಮದು ಮೊದಲ ಆದ್ಯತೆ....ಅಲ್ಲಿಯವರೆಗೆ ನಾವು ಸರ್ಕಾರದ ವಿರುದ್ಧ ಕದನ ವಿರಾಮ ಘೋಷಿಸುತ್ತೇವೆ. ಈ ಸಾಮಾಜಿಕ ಹೋರಾಟ ತನ್ನ ಪ್ರಕ್ರಿಯೆಯಲ್ಲಿ ಅಸ್ಪೃಶ್ಯರ ಶೋಷಣೆಯನ್ನು (ಪರೋಕ್ಷವಾಗಿ) ಬೆಂಬಲಿಸುತ್ತಿರುವ ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟವಾಗಿ ಮಾರ್ಪಾಡಾಗುತ್ತದೆ."[6] ಇಲ್ಲಿ ದಲಿತರ ಸಂದಿಗ್ಧತೆಯೆಂದರೆ ಅಂಬೇಡ್ಕರ್‌ರ ಸಂದಿಗ್ಧತೆಯೇ. ಈ ಸಂದಿಗ್ಧತೆಯಿಂದ ಅಂಬೇಡ್ಕರ್ ಸ್ವತಂತ್ರ ಬರುವವರೆಗೂ ಹೊರಬರಲಾಗಲಿಲ್ಲ.

ರಾಷ್ಟ್ರೀಯ ಕಾಂಗ್ರೆಸ್ಸಿನ ನಾಯಕರಂತೆ ಅಂಬೇಡ್ಕರ್ ಆಂತರಿಕ–ಸಾಮಾಜಿಕ–ರಾಜಕೀಯ ಶೋಷಣೆ ಮತ್ತು ವಸಾಹತುಶಾಹಿ ಶೋಷಣೆಗಳ ನಡುವೆ ಅಂತರವಿದೆ ಎಂದು ಪರಿಗಣಿಸಿದರೂ, ಶೋಷಣೆ, ಶೋಷಣೆಯೇ. ಆದರಲ್ಲಿ ತಾರತಮ್ಯ ಮಾಡುವುದು ಸರಿಯಲ್ಲ, ದಲಿತರ ಶೋಷಣೆಯಂತೂ ಹೆಚ್ಚಾಗಿ ಭಾರತೀಯವಾದದ್ದು. ಆದ್ದರಿಂದ

ಶೂದ್ರ

ಶೋಷಣೆಯ ವಿರುದ್ಧದ ಹೋರಾಟ ಮುಖ್ಯವೇ ಹೊರತು, ಅದರ ಪ್ರಭೇದಗಳ ವಿರುದ್ಧವಲ್ಲವೆಂದು ತಿಳಿದಿದ್ದರು. ಅವರ ರಾಷ್ಟ್ರೀಯತಾ ಪರಿಕಲ್ಪನೆಯ ಒಂದು ಎಳೆ ನಮಗಿಲ್ಲಿ ಸಿಕ್ಕುತ್ತದೆ. ಅದು ಪೂರ್ಣ ಪ್ರಮಾಣದ ಮಾನವೀಯತೆ ಮಾತ್ರ ಭಾರತೀಯ ಪ್ರಜೆಗಳೆಲ್ಲರ ಘನತೆಯೊಂದಿಗೆ ತಳುಕುಹಾಕಿಕೊಂಡಿತ್ತು. ಎಲ್ಲ ರೀತಿಯ ಶೋಷಣೆಯ ವಿರುದ್ಧದ ಪ್ರತಿಭಟನೆ ಮತ್ತು ಹೋರಾಟಗಳೇ ಅವರ ರಾಷ್ಟ್ರೀಯತಾ ಮಾದರಿಯ ಪ್ರಾರಂಭಿಕ ಘಟ್ಟ. ಆಂತರಿಕ ಮತ್ತು ಬಾಹ್ಯ ಶೋಷಣೆಗಳೆರಡನ್ನು ತುಂಡರಿಸಬಲ್ಲ, ಎರಡೂ ಅಲುಗುಗಳೂ ಹರಿತವಾಗಿರುವ ಖಡ್ಗಕ್ಕೆ ಮಾತ್ರ ಅವರ ರಾಷ್ಟ್ರೀಯ ಹೋರಾಟದ ಪರಿಕಲ್ಪನೆಯನ್ನು ಹೋಲಿಸಬಹುದು. ಆದರೆ ಬಾಹ್ಯ ಶೋಷಣೆಯ ವಿರುದ್ಧ ಉಪಯೋಗಿಸಬೇಕಾದ ಅಲುಗು ಒಮ್ಮೊಮ್ಮೆ ಮೊಂಡಾಗಿದ್ದಂತೆ ಕಂಡರೆ ಅದಕ್ಕೆ ಬಹುತೇಕ ದಲಿತರ ನಿಕೃಷ್ಟ ಸ್ಥಿತಿ ಕಾರಣವೆನಿಸುತ್ತದೆ.

ಅಂಬೇಡ್ಕರ್ ದೃಷ್ಟಿಯಲ್ಲಿ ಸಾಮ್ರಾಜ್ಯಶಾಹಿ ಮತ್ತು ಎಲ್ಲ ರೀತಿಯ ಆಂತರಿಕ ಶೋಷಣೆಯಿಂದಲೂ ವಿಮುಕ್ತಿ ಪಡೆಯಲು ನಡೆಸುವ ಸಮಗ್ರ ಹೋರಾಟ ಮಾತ್ರ ನಿಜವಾದ ಸ್ವಾತಂತ್ರ್ಯ ಹೋರಾಟ, ಅದೇ ನಿಜವಾದ ರಾಷ್ಟ್ರೀಯತೆ. ತಮ್ಮ ರಾಷ್ಟ್ರೀಯ ಹೋರಾಟದ ಕಲ್ಪನೆಯನ್ನು ಅವರು ವಿವರಿಸಿದ್ದು ಹೀಗೆ: "ಎಲ್ಲ ವಿಧೇಯತೆ ಕೊನೆಗೊಂಡು, ಪ್ರತಿಭಟನೆ-ಹೋರಾಟ (resistance) ಪ್ರಾರಂಭವಾಗುತ್ತದೆ ಎಂದು ವಿವೇಚಿಸಬಲ್ಲ ಜನರ ಸರ್ಕಾರವಿದ್ದು, ಅಸಮಾನತೆಯ ತಳಹದಿಯ ಮೇಲೆ ನಿಂತಿರುವ ಈ ಸಾಮಾಜಿಕ-ಆರ್ಥಿಕ ಸಂಹಿತೆಯನ್ನು ಅದು ಅಳುಕದೆ ತಿದ್ದುವಂತಿರಬೇಕು, ಅಂಥ ಜನರ ಸರ್ಕಾರ ತುರ್ತಾಗಿ ಬೇಕಾಗಿದೆ. ಬ್ರಿಟಿಷ್ ಸರ್ಕಾರ ಎಂದಿಗೂ ಈ ಪಾತ್ರವನ್ನು ವಹಿಸಲು ಸಾಧ್ಯವಿಲ್ಲ. ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳದೇ ಆದ ಸರ್ಕಾರ ಮಾತ್ರ ಈ ಕೆಲಸವನ್ನು ಸಾಧ್ಯವಾಗಿಸಬಲ್ಲದು."7

ಅಂಬೇಡ್ಕರ್ ಬ್ರಿಟಿಷರು ಮತ್ತು ಸವರ್ಣೀಯ ಹಿಂದೂಗಳನ್ನು ಹೋಲಿಸಿದ್ದು ರಕ್ತಹೀರುವ ಜಿಗಣೆಗಳಿಗೆ. "ಬಹುಸಂಖ್ಯಾತ ಭಾರತೀಯರನ್ನು ಬ್ರಿಟಿಷರು ದೈಹಿಕವಾಗಿ ಗುಲಾಮರನ್ನಾಗಿಸಿದ್ದರೆ, ಬ್ರಾಹ್ಮಣರು ಮಾನಸಿಕ ದಾಸ್ಯಕ್ಕೆ ಒಳಪಡಿಸಿದ್ದಾರೆ. ಬ್ರಿಟಿಷರು ನಾಡಿನ ಸಂಪತ್ತನ್ನು ಹೀರುತ್ತಿದ್ದರೆ, ಬ್ರಾಹ್ಮಣರು ಜನತೆಯ ಘನತೆ ಮತ್ತು ಗೌರವಗಳನ್ನೇ ಹೀರುತ್ತಿದ್ದಾರೆ".8 ಇದು ಅವರ ವಿಶ್ಲೇಷಣೆ ಮತ್ತು ಅಚಲ ನಂಬಿಕೆ. ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ಪ್ರಜೆಗಳ ಸ್ವಾತಂತ್ರ್ಯ ಒಂದಕ್ಕೊಂದು ಪೂರಕವಾದವು. ಜನತೆಗಿಲ್ಲದ ರಾಷ್ಟ್ರೀಯ ಸ್ವಾತಂತ್ರ್ಯ, ಸ್ವಾತಂತ್ರ್ಯವೇ ಅಲ್ಲವೆಂದು ಅವರು ಘೋಷಿಸಿದರು. ಜನತೆಯ ಸ್ವಾತಂತ್ರ್ಯವನ್ನು ಕಡೆಗಣಿಸಿ, ಬರೀ ರಾಷ್ಟ್ರೀಯ ಸ್ವಾತಂತ್ರ್ಯದ ಬಗ್ಗೆ ಮಾತನಾಡುತ್ತಿದ್ದವರನ್ನು "ನೀವು ರಾಜಕೀಯವಾಗಿ ಉಗ್ರಗಾಮಿಗಳೂ, ಸಾಮಾಜಿಕ

ಶೂದ್ರ

ವಾಗಿ ಸಂಪ್ರದಾಯವಾದಿಗಳೂ ಆಗಿರಲು ಸಾಧ್ಯವಿಲ್ಲ, ಹೃದಯ ಮತ್ತು ಮಿದುಳು ಪರಸ್ಪರ ಜೊತೆಯಾಗಿಯೇ ಇರಬೇಕು"9 ಎಂದು ಛೇಡಿಸಿದರು.

ಅಂಬೇಡ್ಕರರನ್ನು ಒಹುತೇಕ ಎಲ್ಲರೂ ಅಪಾರ್ಥಮಾಡಿಕೊಂಡರು. 'ಬ್ರಿಟಿಷರ ಚೇಲ', 'ದೇಶದ್ರೋಹಿ' ಎಂದೆಲ್ಲಾ ಜರಿದಾಗ ಸಹಜವಾಗಿಯೇ ಅಂಬೇಡ್ಕರ್ ಕ್ರುದ್ಧರಾದರು. ಏಟಿಗೆ, ಎದಿರೇಟು ಕೊಡಲು ಪ್ರಾರಂಭಿಸಿದಾಗ, ಅವರ ಎದಿರೇಟಿನ ರಭಸಕ್ಕೆ ಸಿಕ್ಕಿದ್ದು ಮಾತ್ರ ಗಾಂಧಿ-ಯಾಕೆಂದರೆ ರಾಷ್ಟ್ರೀಯ ಚಳವಳಿಯ ದೈವದಂತಿದ್ದ ಗಾಂಧಿಯನ್ನು ಗುರಿಯಾಗಿಸಿದರೆ, ಇಡೀ ಕಾಂಗ್ರೆಸ್ಸಿನ ಪ್ರತಿಗಾಮಿತನಕ್ಕೇ ಹೊಡೆದಂತೆ ಎಂದು ಅಂಬೇಡ್ಕರ್ ಭಾವಿಸಿರಬೇಕು. ಹುಸಿ ದೇಶಭಕ್ತರ ಪಟ್ಟಭದ್ರತೆಯನ್ನು ಬಯಲಿಗೆಳೆದರು. ದಲಿತರ-ಅಲ್ಪಸಂಖ್ಯಾತರ ದೃಷ್ಟಿಕೋನವನ್ನು–ಆತಂಕಗಳನ್ನು ಸಮರ್ಥವಾಗಿ ಪ್ರತಿಪಾದಿಸಿದರು. "ಭಾರತೀಯ ಅಲ್ಪಸಂಖ್ಯಾತರ ದೌರ್ಭಾಗ್ಯವೆಂದರೆ, ರಾಷ್ಟ್ರೀಯತೆ ಹೊಸದೊಂದು ತತ್ವವನ್ನು ಹುಟ್ಟಿಹಾಕಿರುವುದು. ಈ ತಾತ್ವಿಕತೆಯನ್ನು, ಬಹುಸಂಖ್ಯಾತರು ತಮಗೆ ಇಷ್ಟಬಂದಂತೆ ಅಲ್ಪಸಂಖ್ಯಾತರನ್ನು ಆಳಬಹುದಾದ ದೈವದತ್ತ ಹಕ್ಕು ಎಂದು ಕರೆಯುಬಹುದು. ಅಲ್ಪಸಂಖ್ಯಾತರು ತಮಗೆ ಅಧಿಕಾರದಲ್ಲಿ ಪಾಲುಬೇಕೆಂದು ಕೇಳುವುದನ್ನು ಕೋಮುವಾದವೆಂದು ಜರಿಯಲಾಗುತ್ತಿದೆ. ಅಧಿಕಾರದ ಮೇಲಿನ ಬಹುಸಂಖ್ಯಾತರ ಏಕಸೌಮ್ಯವನ್ನು ರಾಷ್ಟ್ರೀಯತೆ ಎನ್ನಲಾಗುತ್ತಿದೆ"10 ಎಂದು ಅಲ್ಪಸಂಖ್ಯಾತರ–ದಲಿತರ ವಿರೋಧಿಗಳನ್ನು ತರಾಟೆಗೆ ತೆಗೆದುಕೊಂಡರು.

ರಾಷ್ಟ್ರೀಯ ಭಾವನೆಯಿಲ್ಲದ ರಾಷ್ಟ್ರಕತೆ (nationality) ಇರಬಲ್ಲದೆಂದು ಅಂಬೇಡ್ಕರ್ ಅಭಿಪ್ರಾಯ ಪಟ್ಟರು. ಒಂದು ದೇಶ ತನ್ನ ಎಲ್ಲ ಪ್ರಜೆಗಳಿಗೂ ರಾಜಕೀಯ ಸ್ವಾತಂತ್ರ್ಯದೊಂದಿಗೇ ಸಾಮಾಜಿಕ–ಆರ್ಥಿಕ ಸ್ವಾತಂತ್ರ್ಯ ಗಳಿಸಿಕೊಂಡಾಗ ಮಾತ್ರ ಅದು ಒಂದು ರಾಷ್ಟ್ರವೆಂದು ಮತ್ತು ಅದರ ಪ್ರಜೆಗಳೆಲ್ಲಾ ರಾಷ್ಟ್ರೀಯವಾದಿಗಳೆಂದು ಕರೆಸಿಕೊಳ್ಳಲು ಯೋಗ್ಯರಾಗುತ್ತಾರೆ. ಜರೂರಾಗಿ ಆಗಬೇಕಾಗಿರುವುದು ರಾಜಕೀಯ ಏಕತೆ ಒಂದೇ ಅಲ್ಲ, ಯಾಕೆಂದರೆ ಅದು ಖಾಯಂ ಆಗಿ ಇರುವಂಥದ್ದಲ್ಲ. ಅತ್ಯಗತ್ಯವಾದದ್ದು ಹೃದಯ–ಆತ್ಮಗಳ ಮಿಲನ, ಅಂದರೆ ಸಾಮಾಜಿಕ ಏಕತೆ, ನೈಜ ಏಕತೆ ವ್ಯಕ್ತವಾಗದ ರಾಜಕೀಯ ಏಕತೆ ಹುರುಳಿಲ್ಲದ್ದು."11 ಅಂಬೇಡ್ಕರರ ಈ ಮಾತುಗಳು ಎಲ್ಲ ಕಾಲಕ್ಕೂ ಅನ್ವಯವಾಗುವಂಥವು. ಜೊತೆಗೆ ಜಾತ್ಯಾಧಾರಿತ ಅಸಮಾನತೆ ತಾಂಡವವಾಡುತ್ತಿದ್ದ, ವಸಾಹತುಶಾಹಿ ವಿರೋಧಿ ಭಾರತದಲ್ಲಿ ಅವರ ಈ ಮಾತುಗಳು ಅರ್ಥಪೂರ್ಣ. ಒಬ್ಬ ಒಂದು ನಾಡಿಗೆ ಸೇರಿದವನಾಗಿದ್ದೂ ಆತನಲ್ಲಿ ರಾಷ್ಟ್ರೀಯತಾ ಭಾವನೆ ಇಲ್ಲದಿರಲು ಸಾಧ್ಯವೆನ್ನುವ ಮಾತು ಅಸಂಖ್ಯ ಅಲ್ಪಸಂಖ್ಯಾತರ-ಬಡವರ-ದಲಿತರ

ಭಾವನೆಗಳ ಪ್ರತಿರೂಪವಷ್ಟೇ. ಈ ಮಾತುಗಳನ್ನೇ ಅವರು ಗಾಂಧಿಯನ್ನು ಮೊದಲ ಬಾರಿಗೆ ಭೇಟಿಯಾದಾಗ ಹೇಳಿದರು. ತನ್ನ ನಾಡಿನಲ್ಲೇ ಪ್ರಾಣಿಗಳಿಗಿಂತಲೂ ಕೀಳಾಗಿ ಕಾಣಲ್ಪಟ್ಟ ಅಸ್ಪೃಶ್ಯನೊಬ್ಬ ಹೇಗೆ ಹೆಮ್ಮೆಯಿಂದ ತಾನು ಆ ನಾಡಿನ ಪ್ರೇಮಿ, ದೇಶಭಕ್ತನೆಂದು ಗರ್ವದಿಂದ ಹೇಳಿಕೊಳ್ಳಲು ಸಾಧ್ಯವೆನ್ನುವುದೇ ಅಂಬೇಡ್ಕರ್ ಮಾತಿನ ತಿರುಳು.

ಆದರೂ ಭಾರತೀಯ ಸಾಂಸ್ಕೃತಿಕ ಏಕತೆಯಲ್ಲಿ ಅಂಬೇಡ್ಕರ್‌ಗೆ ಅಪಾರ ನಂಬಿಕೆ, ಯಾಕೆಂದರೆ ಈ ಏಕತೆ "ಎಲ್ಲ ರಾಜಕೀಯ, ಜನಾಂಗೀಯ ವೈಮನಸ್ಯಗಳನ್ನೂ ಮೀರಿ ನಿಲ್ಲುತ್ತದೆ. ಯಾವುದೇ ಚರ್ಚೆಯಲ್ಲಿ ಭಾರತದ ಮೂಲಭೂತ ಏಕತೆಯ ಅಂಶ (ಅದೇ ನಿರ್ಣಯಕವೆಂದಲ್ಲದಿದ್ದರೂ) ವನ್ನು ಕಡೆಗಣಿಸಲಾಗದು."12 ಭಾರತೀಯರೆಲ್ಲಾ ರಾಷ್ಟ್ರೀಯ ಸಮಗ್ರತೆ-ಏಕತೆಯ ಬೆಳವಣಿಗೆಗಾಗಿ ಒಂದೇ ಭಾಷೆ–ಹಿಂದಿಯನ್ನು ಕಲಿಯಬೇಕೆಂದು ಅಂಬೇಡ್ಕರ್ ಅಭಿಪ್ರಾಯಪಟ್ಟರು. ಭಾರತದ ಭವಿತವ್ಯದಲ್ಲಿ ಧರ್ಮದ ಪಾತ್ರವನ್ನು ಒತ್ತಿಹೇಳಿದ ಅಂಬೇಡ್ಕರ್‌ಗೆ, ಈ ವಿಷಯದಲ್ಲಿ ಗಾಂಧೀಜಿಯೊಡನೆ ಸಹಮತವಿತ್ತು. ಹಾಗೆಯೇ ಯಾವ ಧರ್ಮವೂ ಭಾರತೀಯ ರಾಷ್ಟ್ರೀಯತೆ ಮತ್ತು ಜಾತ್ಯಾತೀತತೆಗೆ ಕುಂದುಂಟುಮಾಡಬಾರದೆಂದೂ ಅವರು ಹೇಳಿದರು. ಹಿಂದೂ ಮಹಾಸಭೆ ಮತ್ತು ಮುಸ್ಲಿಂ ಲೀಗ್‌ಗಳು ಭಾರತ ರಾಷ್ಟ್ರೀಯತೆ ಮತ್ತು ಜಾತ್ಯಾತೀತತೆಗಳ ವಿರೋಧಿಗಳೆಂದು ಅವರು ಖಂಡಿಸಿದರು. ಹಿಂದೂ ಮಹಾಸಭೆ ಅಸ್ಪೃಶ್ಯರ ಮೇಲೆ ತನ್ನ ಹಕ್ಕಿದೆ ಎಂದು ಹೇಳಿಕೊಳ್ಳುತ್ತಿದ್ದುದನ್ನು ಅವರು ಅಲ್ಲಗಳೆದು "ಅಸ್ಪೃಶ್ಯರ ಸಮಸ್ಯೆ ಬಗ್ಗೆ ಆಸಕ್ತಿ ತಳೆಯಲು ಪೂರ್ತಿಯಾಗಿ ಅನರ್ಹವಾದ ಸಂಸ್ಥೆ ಯಾವುದಾದರೂ ಇದ್ದರೆ ಅದೇ ಹಿಂದೂ ಮಹಾಸಭೆ"13 ಎಂದು ಘೋಷಿಸಿದರು. ಈ ಘೋಷಣೆ ಹಿಂದೂ ಮಹಾಸಭೆ, ಆರ್.ಎಸ್.ಎಸ್.ಗಳ ನಾಯಕರಾದ ಸಾವರ್ಕರ್, ಗೋಲ್ವಲ್ಕರ್, ಹೆಗಡೆವಾರ್‌ಗಳಿಗೆ ಮಾತ್ರ ಮುದಲಿಕೆಯಾಗಿರಲಿಲ್ಲ, ಗಾಂಧೀಜಿಗೆ ಕೂಡಾ. ಯಾಕೆಂದರೆ ಗಾಂಧೀ, ಅಸ್ಪೃಶ್ಯತಾ ನಿವಾರಣಾ ಕೆಲಸ ಮೂಲತಃ ಹಿಂದೂ ಮಹಾಸಭೆಯ ಕೆಲಸವೆಂದು ಒಂದು ಘಟ್ಟದಲ್ಲಿ ಹೇಳಿದ್ದರು.

ಈ ಹಿನ್ನೆಲೆಯಲ್ಲಿಯೇ ರಾಷ್ಟ್ರೀಯತೆಯ ಬಗೆಗಿನ ಅಂಬೇಡ್ಕರ್ ಧೋರಣೆಯನ್ನು ಅರ್ಥಮಾಡಿಕೊಳ್ಳುವುದು ಸೂಕ್ತ. ಅವರು ತಮ್ಮ ಸಮಕಾಲೀನರಾದ ಯಾವ ರಾಷ್ಟ್ರೀಯ ನಾಯಕರ ಚಟುವಟಿಕೆಯನ್ನು ಒಪ್ಪಲಿಲ್ಲ. ಅವರೆಲ್ಲರ ಹೋರಾಟಗಳೂ ಸ್ವಾರ್ಥಕ್ಕಾಗಿಯೆಂದೂ, ತನ್ನ ಪರಿಕಲ್ಪನೆಯ ರಾಷ್ಟ್ರೀಯತೆಗೆ ಸರಿಸಾಟಿಯಲ್ಲವೆಂದೂ ಅರ್ಥೈಸಿದರು. ಆಗ ಸಾಮ್ರಾಜ್ಯಶಾಹಿಯ ಜೊತೆಗೆ ಅಧಿಕಾರ ಹಂಚಿಕೊಂಡಿದ್ದ ಎರಡು ಜಾತಿಗಳೆಂದರೆ ಬ್ರಾಹ್ಮಣರು ಮತ್ತು ಬನಿಯಾಗಳು. ಕಾಂಗ್ರೆಸ್ ರಾಷ್ಟ್ರೀಯ

ವಾದಿಗಳು ಬಯಸಿದ ಸ್ವತಂತ್ರ ಭಾರತದಲ್ಲಿ ಜನಸಾಮಾನ್ಯರಿಗೆ ಸ್ವಾತಂತ್ರ್ಯವಿರುವುದಿಲ್ಲ, ಬ್ರಾಹ್ಮಣ-ಬನಿಯಾಗಳೇ ಅಧಿಕಾರದ ಗಂಟಿಗೆ ಹಿಡಿಯುತ್ತಾರೆಂದು ಅಂಬೇಡ್ಕರ್ ಹೇಳಿದ್ದರಲ್ಲಿ ಸತ್ಯವಿದೆ ಮತ್ತು ಈ ಆಳುವ ಜಾತಿಗಳು ತಮ್ಮ ವರ್ಗಗುಣಕ್ಕೆ ಅನು ಗುಣವಾಗಿ ಹಿಂದುಳಿದವರು ಅಧಿಕಾರದಲ್ಲಿ ಕೇಳುವ ಪಾಲನ್ನು ರಾಷ್ಟ್ರವಿರೋಧಿಯೆಂದು ಪರಿಗಣಿಸುತ್ತವೆಂದು ಅವರು ಹೇಳುತ್ತಿದ್ದ ಮಾತುಗಳೂ ಬಹುತೇಕ ಸಾಬೀತಾಗಿವೆ.

ಅಂಬೇಡ್ಕರ್ ಪರಿಕಲ್ಪನೆಯ ರಾಷ್ಟ್ರೀಯತೆಯನ್ನು ಆಳವಾಗಿ ಅಭ್ಯಸಿಸಿದಾಗ ಅವರು ಏಕೆ ಅಂದಿನ ರಾಷ್ಟ್ರೀಯ ಚಳವಳಿಯ ನಾಯಕತ್ವದ ಜೊತೆ ಸೇರಲಿಲ್ಲವೆಂದು ಸ್ಪಷ್ಟವಾಗುತ್ತದೆ. ವಸಾಹತುಶಾಹಿ ವಿರೋಧಿ, ಸಮಾಜವಾದಿ ಕ್ರಾಂತಿಗಳ ಪೂರ್ವ ಭಾವಿಯಾಗಿ ಅಲ್ಲದಿದ್ದರೂ, ಜೊತೆ ಜೊತೆಗೇ ಭಾರತದಲ್ಲಿ ಸಾಮಾಜಿಕ-ಆರ್ಥಿಕ ಕ್ರಾಂತಿಯಾಗಬೇಕೆಂದು ಅವರು ಹೇಳುತ್ತಿದ್ದರು. ಈ ರೀತಿಯ ಬೆಳವಣಿಗೆ ಮಾತ್ರ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳ ನೆಲೆಯ ಆಧುನಿಕ ಭಾರತ ರಾಷ್ಟ್ರದ ನಿರ್ಮಾಣಕ್ಕೆ ಸಹಾಯಕ, ಸಾಮಾಜಿಕ–ಆರ್ಥಿಕ ಸಮಾನತೆಯಿಲ್ಲದ ರಾಜಕೀಯ ವ್ಯವಸ್ಥೆ ನಾಜಿ–ಫ್ಯಾಸಿಸ್ಟ್ ಮಾದರಿಯ ವ್ಯವಸ್ಥೆ ಮಾತ್ರ ಆಗಬಲ್ಲದೆಂದು ಅಂಬೇಡ್ಕರ್ ಅಭಿಪ್ರಾಯ ಪಟ್ಟರು.14 ವಸಾಹತುಶಾಹಿ ವಿರೋಧಿ ಹೋರಾಟದಲ್ಲಿ ಅವರು ನೇರವಾಗಿ ಪಾಲ್ಗೊಳ್ಳಲಿಲ್ಲ ನಿಜ. ಆದರೆ ಆ ಹೋರಾಟದ ಬಗ್ಗೆ ಅವರಿಗೆ ಸಹಾನುಭೂತಿ, ಅದರಲ್ಲಿ ಪಾಲ್ಗೊಂಡು ಕಷ್ಟದಲ್ಲಿ ಸಿಲುಕಿದವರ ಬಗ್ಗೆ ಕಳಕಳಿ ಇತ್ತು. ಎಂಗಿಲಾಗಿ ಅವರು ಅನೇಕ ಸ್ವಾತಂತ್ರ್ಯ ಹೋರಾಟಗಾರರ ಪರವಾಗಿ ಕೋರ್ಟುಗಳಲ್ಲಿ ವಾದಿಸಿದರು.15

ಸಾಮ್ರಾಜ್ಯಶಾಹಿ ಬ್ರಿಟಿಷರ ವಿಷಯದಲ್ಲಿ ಅವರಿಗಿದ್ದದ್ದು ತಿರಸ್ಕಾರ ಮಾತ್ರ. ಸಮಯ ಒದಗಿ ಬಂದಾಗಲೆಲ್ಲಾ ಅಂಬೇಡ್ಕರ್ ವಸಾಹತುಶಾಹಿಯನ್ನು ಖಂಡತುಂಡ ವಾಗಿ ಖಂಡಿಸುತ್ತಿದ್ದರು. ಬ್ರಿಟಿಷ್ ಸರ್ಕಾರವನ್ನು ದುಂಡು ಮೇಜಿನ ಪರಿಷತ್ತಿನಲ್ಲಿ ಬ್ರಿಟಿಷ್ ಪ್ರಧಾನಿ ಮತ್ತುವರ ಸಹೋದ್ಯೋಗಿಗಳ ಸಮ್ಮುಖದಲ್ಲೇ ತರಾಟೆಗೆಕೊಂಡು ಸ್ವತಂತ್ರ ಭಾರತದ ಸಂವಿಧಾನದಲ್ಲಿ ಮಾತ್ರ ದಲಿತೋದ್ಧಾರ ಸಾಧ್ಯವೆಂದು ಗುಡುಗಿದ್ದು, ಅಂಬೇಡ್ಕರರ ರಾಷ್ಟ್ರೀಯ ಪ್ರಜ್ಞೆಗೆ, ವಸಾಹತುಶಾಹಿ ವಿರೋಧಕ್ಕೆ ಜ್ವಲಂತ ಸಾಕ್ಷಿ.16 ಆದರೂ ಅವರು ಕಾಂಗ್ರೆಸ್ ಮತ್ತು ಗಾಂಧಿವಾದದ ಮಹಾನ್ ಟೀಕಾಕಾರ.

ಗಾಂಧೀಜಿಯ ಚಟುವಟಿಕೆಗಳು, ಅಂಬೇಡ್ಕರರ ಬೇಡಿಕೆಗೆ ಅವರು ಒಡ್ಡಿದ ವಿರೋಧ ಮತ್ತು ಅಸ್ಪೃಶ್ಯ ನಾಯಕರಾಗಿ, ಉದ್ಧಾರಕರಾಗಿ ಗಾಂಧಿ ಪಡೆದ ಮಾನ್ಯತೆ, ದಲಿತ ಜಾತಿಯ ಮಹತ್ವಾಕಾಂಕ್ಷಿಗಳು ಅಂಬೇಡ್ಕರರನ್ನು ತೊರೆದು ಕಾಂಗ್ರೆಸ್ಸಿನ ಅನು ಯಾಯಿಗಳಾದದ್ದು, ಇವೆಲ್ಲ ಗಾಂಧಿಯ ಬಗ್ಗೆ ಅಂಬೇಡ್ಕರ್ ಕ್ರುದ್ಧರಾಗಲು ಕಾರಣ ವಾಗಿರಬೇಕು. ಗಾಂಧಿ, ಕಾಂಗ್ರೆಸ್ ಮತ್ತಿತರರೆಲ್ಲಾ ತಮ್ಮ ಮತ್ತು ದಲಿತರ ಮೇಲಿನ

ತಮ್ಮ ಪ್ರಭಾವದ ವಿರುದ್ಧ ಸಂಚುಮಾಡಿ ರಾಜಕೀಯವಾಗಿ ಬಲಹೀನಗೊಳಿಸು ತ್ತಿದ್ದಾರೆಂಬ ಅನುಮಾನವೂ ಅಂಬೇಡ್ಕರರನ್ನು ಕಾಡಿರಲು ಸಾಕು. ಈ ಶಂಕೆ ಅವರನ್ನು ಇನ್ನಷ್ಟು ರೊಚ್ಚಿಗೆಬ್ಬಿಸಿರಬಹುದು. ಅಂಬೇಡ್ಕರ್ ಕಲ್ಪನೆಯ ಸಮಾಜ ಮತ್ತು ರಾಷ್ಟ್ರ, ಗಾಂಧಿ ಕಲ್ಪನೆಯ ಸಮಾಜ-ರಾಷ್ಟ್ರಗಳಿಗಿಂತಲೂ ಭಿನ್ನವಾದದ್ದು. ಅಂಬೇಡ್ಕರ ರಿಗೆ ಸಮಾಜದಲ್ಲಿ ತೀರ ಕೆಳಹಂತದಲ್ಲಿರುವ ವ್ಯಕ್ತಿಗೂ ಸ್ವಾತಂತ್ರ್ಯ ಸವಿಯುವುದು ಸಾಧ್ಯ ವಾಗಿಸಬಲ್ಲದ್ದು ಮಾತ್ರ ರಾಷ್ಟ್ರೀಯತೆ. ಅದನ್ನೊಳಗೊಳ್ಳದ ರಾಷ್ಟ್ರೀಯತೆ ದಲಿತ-ಅಸ್ಪೃಶ್ಯರಿಗೆ ಏನೂ ಅಲ್ಲ. ಮಹಾ ಅಂದರೆ ಅದು ಹಕ್ಕುಗಳನ್ನು ಚಲಾಯಿಸುವ ಶಕ್ತಿಯಿರುವವರಿಗೆ ಮಾತ್ರ ಸ್ವಾತಂತ್ರ್ಯವಾಗುತ್ತದೆ. ತಮ್ಮ ರಾಷ್ಟ್ರೀಯತಾ ಮಾದ ರಿಯ ಬಗ್ಗೆ ಅವರಲ್ಲಿ ಸ್ಪಷ್ಟತೆಯಿತ್ತು. ಯಾಕೆಂದರೆ 1930 ರಲ್ಲಿಯೇ ಅವರು "ನಮ್ಮ ಜನರ (ಅಸ್ಪೃಶ್ಯರ) ಮುಕ್ತಿ ಸ್ವರಾಜ್ಯ ಸಂವಿಧಾನದಲ್ಲಿ ಮಾತ್ರ ಸಾಧ್ಯ. ಯಾಕೆಂದರೆ ಆಗ ಮಾತ್ರ ನಮ್ಮ ಕೈಗೆ ರಾಜಕೀಯ ಅಧಿಕಾರ ಬರಲು ಸಾಧ್ಯ"ವೆಂದು ಘಂಟಾ ಘೋಷವಾಗಿ ಸಾರಿದ್ದರು.[18]

ಅಂಬೇಡ್ಕರರ ಯಾವ ಚಟುವಟಿಕೆಯಾದರೂ ವಸಾಹತುಶಾಹಿಗೆ ಸಹಾಯಕ ವಾಗಿದ್ದರೆ, ಅದರ ಪೂರ್ಣಹೊಣೆ ಭಾರತ ರಾಷ್ಟ್ರೀಯ ಚಳವಳಿಯ ನಾಯಕತ್ವದ್ದೇ. ಯಾಕೆಂದರೆ ಈ ಜನ ಅಂಬೇಡ್ಕರರ–ಅಸ್ಪೃಶ್ಯ ಜನಾಂಗದ ನೋವು, ಖಿನ್ನತೆ, ಅಸ ಹಾಯಕತೆ ಮತ್ತು ಸಿಟ್ಟುಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಸಂಪೂರ್ಣ ವಿಫಲವಾದರು. ಅಲ್ಲದೆ ಅಂಬೇಡ್ಕರ್ ಮತ್ತು ದಲಿತ ಚಳವಳಿಯನ್ನು ಟೀಕಿಸಿ, ಏಕಾಂಗಿಯಾಗಿಸಿ ದೂರ ತಳ್ಳಿದರೆ ಆಗಬಹುದಾದ ಅನಾಹುತಗಳ ಬಗ್ಗೆಯೂ ಅದು ದಿವ್ಯ ನಿರ್ಲಕ್ಷ್ಯ ತಾಳಿತು. ಅಂಬೇಡ್ಕರ್ ಮತ್ತು ದಲಿತ ಚಳವಳಿ, ಮುಸ್ಲಿಂ ಲೀಗ್ ಮತ್ತು ಹಿಂದೂ ಮೂಲ ಭೂತವಾದಿಗಳಂತೆ, ವಸಾಹತುಶಾಹಿಯ ಬೆಂಬಲಕ್ಕೆ ನಿಲ್ಲದೆ ಸ್ವತಂತ್ರ ನಿಲುವು ತಗೆದು ಕೊಂಡದ್ದಕ್ಕೆ ಅಂಬೇಡ್ಕರರ ನಿರ್ಮಲ ಆತ್ಮಸಾಕ್ಷಿ ಮತ್ತು ಭಾರತದ ಮೇಲೆ ಆಗಬಹು ದಾದ ದುಷ್ಪರಿಣಾಮದ ಬಗೆಗಿನ ಸ್ಪಷ್ಟ ಅರಿವು ಕಾರಣ. ಅಂಬೇಡ್ಕರ್ ಬೇಷರತ್ತಾಗಿ ಕಾಂಗ್ರೆಸ್ ನಾಯಕತ್ವದ ರಾಷ್ಟ್ರೀಯ ಚಳವಳಿಯನ್ನು ಬೆಂಬಲಿಸಲಿಲ್ಲ ನಿಜ. ದಲಿತರ ಸ್ಥಿತಿಗತಿ ಮತ್ತು ಆ ಬಗ್ಗೆ ಕಾಂಗ್ರೆಸ್ ಧೋರಣೆಯ ಹಿನ್ನೆಲೆಯಲ್ಲಿ ಅದು ಸಾಧ್ಯವೂ ಇರಲಿಲ್ಲ. ಆದರೆ ಅವರು ಆ ಚಳವಳಿಯನ್ನು ವಿರೋಧಿಸಲಿಲ್ಲ ಅನ್ನುವುದೂ ಅಷ್ಟೇ ನಿಜ. ಈ ಬಗ್ಗೆ ಅವರ ನಿಲುವು ಸ್ಪಷ್ಟ. ಮತಾಂತರದಲ್ಲೂ ಭಾರತದ ಸಾಂಸ್ಕೃತಿಕ ಏಕತೆಯೇ ಅವರ ಪ್ರಮುಖ ಕಾಳಜಿಯಾಗಿತ್ತು. ಮತಾಂತರಕ್ಕೆ ಕಾರಣ ಕೊಡುತ್ತಾ, ಮತಾಂತರವಾದವರು ಹಿಂದೂ ಧರ್ಮದಿಂದ ಸಿಡಿದು ಹೋದರೂ "ಭಾರತೀಯ ಸಂಸ್ಕೃತಿ"ಯಲ್ಲೇ ಉಳಿಯುತ್ತಾರೆಂದು ವಿವರಿಸಿದರು.[19]

ಕೆಲವು ಘಟ್ಟಗಳ ಅವರ ನಿಲುವಿನಲ್ಲಿ ಅಸ್ಪಷ್ಟತೆಯಿದ್ದಂತೆ ಕಂಡರೆ ಅದಕ್ಕೆ ಕಾರಣಗಳನ್ನು ಅಂಬೇಡ್ಕರ್ ಕೈಗೆತ್ತಿಕೊಂಡ ದಲಿತರ ಸಮಸ್ಯೆ ಮತ್ತು ದಲಿತ ಸ್ಥಿತಿಗತಿಗಳಲ್ಲೇ ಹುಡುಕಬೇಕು. ಅವರ ತಾತ್ವಿಕತೆಯಲ್ಲಿದ್ದ ನ್ಯೂನತೆಗಳೂ ಅದಕ್ಕೆ ತಮ್ಮ ಅಲ್ಪ ಕೊಡುಗೆಯನ್ನು ಕೊಟ್ಟಿದ್ದವು. ರಾಷ್ಟ್ರೀಯ ಚಳವಳಿಯೊಂದಿಗೇ ಆಗಲಿ, ವಸಾಹತುಶಾಹಿಯೊಂದಿಗೇ ಆಗಲಿ ಸೆಣಸಲು ಅವರು ಆಯ್ಕೆ ಮಾಡಿಕೊಂಡ ಮಾರ್ಗ ಕೇವಲ ವಿರೋಧಿಸುವುದಾಗಿರಲಿಲ್ಲ. ದುಂಡುಮೇಜಿನ ಸಮ್ಮೇಳನಗಳಲ್ಲಿ ಮತ್ತು ಮೂವತ್ತರ ದಶಕದ ಕೊನೆ ವರ್ಷಗಳಲ್ಲಿ ಅವರು ಬ್ರಿಟಿಷರನ್ನು ಟೀಕಿಸಿ, ಹೋರಾಟ ಮಾಡಿದರೆ ನಂತರ ಒಂದು ರೀತಿಯ ಹೊಂದಾಣಿಕೆ ಮಾರ್ಗವನ್ನು ಅನುಸರಿಸಿದರು. ಅದೇ ರೀತಿ ಸವರ್ಣೀಯರು, ಕಾಂಗ್ರೆಸ್ ಮತ್ತು ರಾಷ್ಟ್ರೀಯ ಚಳವಳಿಯ ಮಹಾ ವಿಮರ್ಶಕರಾಗಿದ್ದುಕೊಂಡೇ, ನಿರ್ಣಾಯಕ ಘಟ್ಟಗಳಲ್ಲಿ, ದುಂಡುಮೇಜಿನ ಸಮ್ಮೇಳನ, ಪೂನಾ ಒಪ್ಪಂದ ಮತ್ತು ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರದ ಕೆಲವು ವರ್ಷಗಳಲ್ಲಿ, ಅವರೊಡನೆ ಸಂಧಾನ-ರಾಜಿಮಾಡಿಕೊಂಡರು. ಬಲಿಷ್ಠವಾದ ವಸಾಹತುಶಾಹಿ-ರಾಷ್ಟ್ರೀಯ ಚಳವಳಿ, ಶಕ್ತಿಗಳ ನಡುವೆ ಸೆಣಸಬೇಕಾದ ಅನಿವಾರ್ಯತೆಗೆ ಸಿಕ್ಕಿ, ದಲಿತೋದ್ಧಾರದಂಥ ಕ್ಲಿಷ್ಟಕರ ಸಮಸ್ಯೆಯನ್ನು ಕೈಗೆತ್ತಿಕೊಂಡ ಅಂಬೇಡ್ಕರ್‌ಗೆ ತಮ್ಮ ಆ ನಿಲುವೇ ಸೂಕ್ತವೆನಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಗಾಂಧೀಜಿ ಕೂಡಾ ಹಲವಾರು ಬಾರಿ ಸಂಧಾನ–ಒಪ್ಪಂದಗಳಲ್ಲಿ ತೊಡಗುತ್ತಿದ್ದರಲ್ಲವೇ. ವಸಾಹತು ಸಂದರ್ಭದಲ್ಲಿ ಅಂಬೇಡ್ಕರರ ಜೀವನದ ಮುಖ್ಯ ಉದ್ದೇಶ–ರಾಷ್ಟ್ರೀಯ ಚಳವಳಿಯನ್ನು ವಿರೋಧಿಸದೆ–ದೀನ ದಲಿತರಿಗೂ ಸ್ವಾತಂತ್ರ್ಯ, ಸಮಾನತೆಗಳನ್ನು ಗಳಿಸಿಕೊಡುವುದಾಗಿತ್ತು. ಈ ನಿಲುವು–ಚಟುವಟಿಕೆಗಳಲ್ಲೇ ಅಂಬೇಡ್ಕರರ ರಾಷ್ಟ್ರೀಯತಾ ಪರಿಕಲ್ಪನೆಗಳನ್ನು ಗ್ರಹಿಸಬೇಕಲ್ಲದೆ, ಅವರ ಗಾಂಧಿ–ಕಾಂಗ್ರೆಸ್ ವಿರುದ್ಧದ ಟೀಕೆಗಳಲ್ಲಲ್ಲ.

ಅಂಬೇಡ್ಕರರ ರಾಷ್ಟ್ರೀಯತಾ ಪರಿಕಲ್ಪನೆಗಳ ಮಾನದಂಡದಿಂದ ಅಳೆದಾಗ ಜಗತ್ತಿನ ಎಲ್ಲ ರಾಷ್ಟ್ರೀಯ ಚಳವಳಿಗಳೂ ಫೇಲಾಗುತ್ತವೆ. ಅವರ ದೃಷ್ಟಿಯ ರಾಷ್ಟ್ರೀಯತೆ ಕಿಂಚಿತ್ ತಾರತಮ್ಯವನ್ನು ಸಹಿಸಲಾರದ್ದು. ಅದು ದಾಸ್ಯದಲ್ಲಿದ್ದ ದೇಶಗಳ-ಜನರ ಸ್ವಾತಂತ್ರ್ಯಕ್ಕೆ ಸೀಮಿತಗೊಳ್ಳುವಂಥದ್ದಲ್ಲ. ಸ್ವತಂತ್ರ ದೇಶಗಳಲ್ಲಿ ತುಳಿತಕ್ಕೆ ಒಳಗಾಗಿದ್ದ ಅಭಾಗ್ಯರಿಗೂ ಸ್ವಾತಂತ್ರ್ಯ ಸಮಾನತೆಗಳನ್ನು ದೊರಕಿಸಿಕೊಡುವಂಥದ್ದು. ಅದನ್ನು ಕಾರ್ಲ್‌ಮಾರ್ಕ್ಸ್‌ನ 'ದುಡಿಯುವ ವರ್ಗದ ಅಂತರ್‌ರಾಷ್ಟ್ರೀಯತೆ'ಗೆ ಒಂದೆಡೆ ಹೋಲಿಸಬಹುದಾದರೆ, ಇನ್ನೊಂದೆಡೆಗೆ-ಅಂಬೇಡ್ಕರ್ ಒಪ್ಪದಿದ್ದ–ಗಾಂಧೀಜಿ ಕನಸಿದ 'ರಾಮರಾಜ್ಯ'ಕ್ಕೆ ಮಾತ್ರ ಅಂಬೇಡ್ಕರ್ ಕಲ್ಪನೆಯ ರಾಷ್ಟ್ರೀಯತೆಯನ್ನು ಹೋಲಿಸಬಹುದು.

ಅಡಿ ಟಿಪ್ಪಣಿಗಳು :

1. ವಿವರಗಳಿಗೆ ನೋಡಿ: ಬಿಪನ್‌ಚಂದ್ರ ಮತ್ತು ಇತರರು. India's Struggle for Freedom. ನವದೆಹಲಿ, 1988, ಪು. 13–30. ಆದರೆ ಬಿಪನ್‌ಚಂದ್ರ ಭಾರತ ರಾಷ್ಟ್ರೀಯ ಸಂಗ್ರಾಮದ ತಮ್ಮ ಬರಹಗಳಲ್ಲಿ ಅಂಬೇಡ್ಕರ್ ಮತ್ತು ದಲಿತ ಚಳವಳಿಯನ್ನು ಆ ಹೋರಾಟದ ಒಂದು ಅಂಗವೆಂದು ಪರಿಗಣಿಸುವಂತೆ ಕಾಣುವುದಿಲ್ಲ. ಬಿಪನ್‌ಚಂದ್ರರ ರಾಷ್ಟ್ರೀಯ ಕಲ್ಪನೆ–ಹೋರಾಟಗಳ ಪರಿಧಿಗೆ ದಲಿತ ಚಳವಳಿ ಬಹುಶಃ ಒಳಗೊಳ್ಳುವುದಿಲ್ಲ.
2. ಮಹದೇವ ಗೋವಿಂದ ರಾನಡೆ, ಭಾರತದ ಸಾಮಾಜಿಕ–ಧಾರ್ಮಿಕ ಸುಧಾರಣಾ ಚಳವಳಿಯ ಅಗ್ರಗಣ್ಯ ನಾಯಕರಲ್ಲಿ ಒಬ್ಬರು. ಅವರ ರಾಷ್ಟ್ರದ ಸಂಪತ್ತಿನ ಹಂಚಿಕೆ, ಅದರ ಮೇಲಿನ ಯಜಮಾನ್ಯವನ್ನು ಕುರಿತು ಹೀಗೆ ಹೇಳುತ್ತಾರೆ: "ಯಾವುದೇ ರಾಷ್ಟ್ರದಲ್ಲಿ ಆಸ್ತಿ, ಭೂಮಿಯಾಗಲಿ, ವಸ್ತುಗಳಾಗಲಿ ಬುದ್ಧಿವಂತರು ಮತ್ತು ದೂರದೃಷ್ಟಿಯುಳ್ಳ ಜನರ ಕೈಯಲ್ಲೇ ಇರಬೇಕು. ಅಮಾಯಕರು, ಅಯೋಗ್ಯರು, ದುಂದುಮಾಡುವವರು ತಮ್ಮ ಕಾಲ ಮೇಲೆ ನಿಲ್ಲಲಾರದವರ ಸಂಪತ್ತು ಕೂಡಾ ಬುದ್ಧಿವಂತರ ಕೈ ಸೇರಬೇಕು. ಇದು ವಿಧಿನಿಯಮ, ಯಾವುದೇ ಭಾವೋದ್ವೇಗಕ್ಕಾಗಿ ಈ ನಿಯಮವನ್ನು ನಾವು ಮುರಿಯಕೂಡದು." ಅಂದಿನ ಭಾರತೀಯ ಪರಿಸರದಲ್ಲಿ 'ಅಮಾಯಕರು' 'ಬುದ್ಧಿವಂತರು' ಯಾರು ಎಂಬುದನ್ನು ಯಾವ ಯಾವ ಜಾತಿಗಳಿಗೆ ಸೇರಿದವರೆಂದು ಬಿಡಿಸಿ ಹೇಳಬೇಕಾಗಿಲ್ಲ.
3. ರಾನಡೆ ಬಗ್ಗೆ, ಅಂಬೇಡ್ಕರರ ಮೆಚ್ಚುಗೆಯ ಮಾತುಗಳಿಗಾಗಿ ನೋಡಿ: ಅಂಬೇಡ್ಕರ್, ಬಿ. ಆರ್., ರಾನಡೆ, ಗಾಂಧಿ ಮತ್ತು ಜಿನ್ನಾ. ಜಲಂಧರ್, 1978. ಪು. 1–64.
4. ಅಂಬೇಡ್ಕರ್, ಬಿ.ಆರ್., What Gandhi and Congress Have Done to the Untouchables. ಮುಂಬಯಿ, 1945.
5. ಅಂಬೇಡ್ಕರ್ ಬಿ.ಆರ್., ರಾನಡೆ, ಗಾಂಧಿ ಮತ್ತು ಜಿನ್ನಾ. ಪು. 56.
6. ಅಂಬೇಡ್ಕರ್. ಬಿ.ಆರ್., Short Notes in 'Bhahishkrit Bharat' ಅವರ ನಿಯತಕಾಲಿಕ. (ಸಂ) ಆರ್. ಗಂಭೀರ್, Short Notes in Bhahishkrit Bharat. ಭೂಪಾಲ್. 1981, ಪು. 10–11 ಮತ್ತು ಪು. 185–186,

7. ಬ್ಯಾಲಿ (ಸಂ), Thus spoke Ambedkar. ಜಲಂಧರ್, ಪು. 8.

8. ಅಂಬೇಡ್ಕರ್, ಬಿ. ಆರ್. (ಸಂ) ಗಣವೀರ್, ಆರ್. Short Notes. ಪು. 133.

9. ಅಂಬೇಡ್ಕರ್, ಬಿ.ಆರ್., ರಾನಡೆ, ಗಾಂಧಿ ಮತ್ತು ಜಿನ್ನಾ, ಪು. 32.

10. ಅಂಬೇಡ್ಕರ್, ಬಿ.ಆರ್., States and Minorities. ಬಾಂಬೆ 1947. ಪು. 52.

11. ಅಂಬೇಡ್ಕರ್, ಬಿ.ಆರ್., Thus spoke Ambedkar. ಸಂ. 3. ಪು. 98, 180-181.

12. ಅಂಬೇಡ್ಕರ್, ಬಿ.ಆರ್., Pakistan or partition of India, ಬಾಂಬೆ, 1946, ಪು, 344.

13. ಅಂಬೇಡ್ಕರ್, ಬಿ.ಆರ್., What Congress and Gandhi...., ಪು. 6.

14. ಅಂಬೇಡ್ಕರ್, ಬಿ.ಆರ್., ಅದೇ ಪು. 6.

15. ಕುಬೇರ್ ಡಬ್ಲ್ಯು. ಎನ್., Dr. B.R. Ambedkar - a Critical Study, ನವದೆಹಲಿ, 1979, ಪು. 156

16 ವಿವರಗಳಿಗೆ ನೋಡಿ: ಭಗವಾನ್‌ದಾಸ್ (ಸಂ), Thus spoke Ambedkar, ಸಂ. 2, ಜಲಂಧರ್, 1977, ಪು. 17–29 ಮತ್ತು ಪು. 29–31

17. ರಾಘವನ್ ಅಯ್ಯರ್ (ಸಂ), The Moral and Political writings of Mahatma Gandhi, Vol. I, Civilization, politics and Religion, Oxford, 1986, ಪು. 226 ಮತ್ತು 399–400.

18. ಭಗವಾನ್‌ದಾಸ್ (ಸಂ), Thus spoke Ambedkar, Vol. I, ಪು. 23.

19. ವಿವರಗಳಿಗೆ ನೋಡಿ: ಕುಬೇರ್, ಡಬ್ಲ್ಯು. ಎನ್. ಮೇಲಿನದೇ, ಪು. 95.

ಡಾ|| ಅಂಬೇಡ್ಕರ್ ಮತ್ತು ಮುಲ್ಕ್‌ರಾಜ್ ಆನಂದ್ – ಮಾತುಕತೆ

ಕನ್ನಡಕ್ಕೆ : ಗಂಗಾಧರಮೂರ್ತಿ

ಆನಂದ್ : ನಮಸ್ಕಾರ, ಡಾ|| ಅಂಬೇಡ್ಕರ್.

ಅಂಬೇಡ್ಕರ್ : ಓಂ ಮಣಿ ಪದ್ಮಯೆ. ಬೌದ್ಧಮತದ ಪ್ರಕಾರ ಗೌರವ ಸೂಚಕವಾದ ಮಾತಿದು. ಕಮಲದ ಹೂಗಳು ಅರಳಲಿ ಎಂಬುದು ಇದರರ್ಥ. ನನಗೆ ಹೆಚ್ಚು ಪ್ರಿಯವಾದ್ದು.

ಆನಂದ್ : ನನ್ನ ಭಿನ್ನಾಭಿಪ್ರಾಯವೇನಿಲ್ಲ. ನೋಡಿ, ಮಾತಾಡುವಾಗ ನಮಗೆ ಪದಗಳ ಬಗ್ಗೆ ಎಚ್ಚರವೇ ಇರುವುದಿಲ್ಲ. ಅರ್ಥವನ್ನು ತಿಳಿದು ಕೊಳ್ಳುವ ಪ್ರಯತ್ನವೇ ಇರೋವುದಿಲ್ಲ. ಬಾಯಿಪಾಠಕ್ಕೆ ಬಲಿಯಾಗಿ ಬಿಡುತ್ತೇವೆ. ನಮಸ್ಕಾರ ಎಂದರೆ ಶರಣು ಎಂದರ್ಥ ತಾನೇ ?

ಅಂ : ಶರಣಾಗತ ಪರಿಸ್ಥಿತಿಯನ್ನು ಮುಂದುವರೆಸುವ ಭಾವನೆ ಈ ಪದ ದಲ್ಲಿದೆ. ಕಮಲದ ಹೂ ಅರಳಲಿ ಎಂಬುದರಲ್ಲಿ ಅರಿವಿನ ವಿಕಾಸ ಕುರಿತ ಭಾವನೆ ಇದೆ.

ಆನಂದ್ : ವಾಡಿಕೆಗಳಿಂದ ತಪ್ಪಿಸಿಕೊಳ್ಳುವುದು ಸುಲಭ ಸಾಧ್ಯವಲ್ಲ. ಆಲೋಚನೆ ಮಾಡದೆ ಅವುಗಳನ್ನು ಬಳಸುತ್ತಿರುತ್ತೇವೆ.

ಅಂ : ಹಲವಾರು ವಿಷಯಗಳಲ್ಲಿ ಇದು ನಿಜ.

ಆನಂದ್ : ಹಾಗೆ ನೋಡಿದರೆ ಹಿಂದೂ, ಮುಸ್ಲಿಂ ಅಥವಾ ಕ್ರಿಶ್ಚಿಯನ್ ಅಂಥ ಯಾರೂ ಮುಂದ್ರೆಹಾಕಿಕೊಂಡು ಹುಟ್ಟೋದಿಲ್ಲ. ತಂದೆ ತಾಯಿಗಳು ಹಿಂದೂಗಳಾಗಿದ್ರೆ ಪುರೋಹಿತನನ್ನ ಕರೆಸ್ತಾರೆ. ನಾಮಕರಣ ಅಂಥಾ ಮಾಡ್ತಾರೆ. ಹೆಸರು ಧಾರ್ಮಿಕವಾಗಿ ಮಾನ್ಯ ಆಗೋದು ಅವನು ಸಂಸ್ಕೃತ ಶ್ಲೋಕ ಹೇಳೋದ್ರಿಂದ. ಮಗೂಗೆ ಇವೆಲ್ಲಾ ಅರ್ಥ

ಆಗೋಲಂತಹದ್ದಲ್ಲ. ಅದರ ಮೈಗೆ ಜನಿವಾರ ಹಾಕ್ತಾರೆ. ತಕ್ಷಣ ಅದು ಹಿಂದೂ ಆಗಿಬಿಡುತ್ತೆ.

ಅಂ : ದಡ್ಡತನ ಅಷ್ಟೆ (ಈಡಿಯಂಸಿ).

ಆನಂದ್ : ಈಡಿಯಂಸಿ ಅನ್ನೋದಕ್ಕೆ ಗ್ರೀಕ್ ಭಾಷೆಯಲ್ಲಿ ಒಂದೇ ಗೂಟದ ಸಂತೃಪ್ತ ಸಂತೃಪ್ತಲೇ ಇರೋದು ಎಂದಾಗುತ್ತೆ.

ಅಂ : ಹಳೇ ವಿಚಾರಗಳನ್ನ, ಆಚಾರಗಳನ್ನ, ವಾಡಿಕೆಗಳನ್ನ ಪ್ರಶ್ನಿಸಬೇಕು. ಶಿಕ್ಷಣ ಕ್ಷೇತ್ರದಲ್ಲಿ ನಮ್ಮ ಹೊಸ ತಲೆಮಾರಿನ ಯುವಕರು ತಮ್ಮ ಉಪಾಧ್ಯಾಯರಿಗೆ ದಿನಕ್ಕೆ ಒಂದು ಪ್ರಶ್ನೆಯನ್ನಾದರೂ ಕೇಳುವಂತಹ ಪ್ರೋತ್ಸಾಹಕರ ವಾತಾವರಣ ನಿರ್ಮಾಣವಾಗಬೇಕು.

ಆನಂದ್ : ಹಾಗಾದಾಗ, ಪಾಠ ಹೇಳಿಕೊಡೋದು ಅಂದ್ರೆ ಏನು ಅಂತಾ ನಮ್ಮ ಉಪಾಧ್ಯಾಯರುಗಳಿಗೆ ಗೊತ್ತಾಗುತ್ತೆ. ಅವರ ಜ್ಞಾನ ಪಠ್ಯಪುಸ್ತಕ ದಲ್ಲಿ ಬರೆದಿರೊ ವಿಷಯಗಳಿಗೆ ಸೀಮಿತವಾಗಿರೋ ಅಂಥಾದ್ದು. ಎಷ್ಟೇ ತಿಳುವಳಿಕೆ ಇದ್ದರೂ ವ್ಯಕ್ತಿ ನಿಜವಾಗಿ ಬೆಳೆಯೋದು ಪ್ರಶ್ನೆ ಗಳ ಮುಖಾಂತರವೇ. ನನಗಿದರ ಅರಿವಾದದ್ದು ಹೆನ್ರಿ ಬರ್ಗ್‌ಸನ್‌ನ 'ಕ್ರಿಯೇಟಿವ್ ಇವಲ್ಯೂಷನ್' ಪುಸ್ತಕದಿಂದ. ಹೆಗಲ್, ಕಾಂಟ್ ಹಾಗೂ ಡೆಕಾರ್ಟ್ ಅವರುಗಳನ್ನು ಅಧ್ಯಯನ ಮಾಡಿದ ಬಳಿಕ ಹಲವಾರು ತಾತ್ವಿಕ ಸಮಸ್ಯೆಗಳಿಂದ ಬಿಡಿಸಿಕೊಳ್ಳಲಾರದ ತೊಳಲಾಟ ದಲ್ಲಿ ಸಿಕ್ಕಿಬಿದ್ದಿದ್ದೆ. 'ಯಾವುದೇ ತಾತ್ವಿಕ ನಿಲುವನ್ನು ಪ್ರಶ್ನಿಸದೆ ಪ್ರಜ್ಞೆಯ ವಿಕಾಸ ಅಸಾಧ್ಯ' ಎಂಬ ಸೂಚನೆ ದೊರೆತದ್ದು ಬರ್ಗ್‌ಸನ್‌ನಿಂದ.

ಅಂ : ಬ್ರಾಹ್ಮಣರ ಪ್ರತಿಯೊಂದು ನಂಬಿಕೆಗಳನ್ನು ಬುದ್ಧನೂ ಪ್ರಶ್ನಿಸ ತೊಡಗಿದ. ಜನಸಮುದಾಯಗಳನ್ನು ಅವರ್ಣೀಯರೆಂದು ಕರೆದು ಅವುಗಳನ್ನು ಮೂದಲಿಕೆಗೆ ಗುರಿಮಾಡಿದ್ದರು. ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರ ಎಂಬ ವರ್ಣವ್ಯವಸ್ಥೆಯು ಭಗವಂತನ ನಿಯಮ ಎನ್ನುತ್ತಿದ್ದರು. ಬುದ್ಧನು ಅವರಿಗೆ ಹಾಕಿದ ಪ್ರಶ್ನೆಗಳು ಮನುಷ್ಯನ ಬಗ್ಗೆ, ವ್ಯಕ್ತಿಯ ಬಗ್ಗೆ ಅವರ ವಿಚಾರಗಳನ್ನು ಕುರಿತಾಗಿತ್ತು. ಸತ್ತ ದನಗಳನ್ನು ಎಳೆದುಹಾಕುವ ಕುಟುಂಬದಲ್ಲಿ ಹುಟ್ಟುವ ವ್ಯಕ್ತಿ ಅಸ್ಪೃಶ್ಯನಾಗಿಬಿಡುತ್ತಾನೆ. ಆದಿವಾಸಿಗಳೆಂದರೆ ಹಿಂದೂಗಳ ದೃಷ್ಟಿ ಯಲ್ಲಿ ಕಾಡು ಪ್ರಾಣಿಗಳು....

ಶೂದ್ರ

ಆನಂದ್ : ಮೈಲಿಗೆಯೇ ಹೌದು.

ಅಂ : ದೈಹಿಕ ದುಡಿಮೆಯಿಂದ ಬದುಕುವವರು ಈಗಲೂ ಮೈಲಿಗೆಯಾಗಿಯೇ ದೂರ ನಿಲ್ಲಿಸಲ್ಪಟ್ಟಿದ್ದಾರೆ. ಚರ್ಮದ ಕೆಲಸಗಾರರು, ಮಲ ಹೊರುವವರು, ಬೆವರು ಸುರಿಸಿ ಬೆಳೆ ತೆಗೆಯುವವರು ಎಲ್ಲರೂ ಜೀತದಾಳುಗಳೇ–ಎಲ್ಲರಿಗೂ ಹಣೆಪಟ್ಟಿ. ಇದು ಇನ್ನೂ ಎಷ್ಟು ಕಾಲದವರೆಗೆ? ಐದು ಸಾವಿರ ವರ್ಷಗಳ ಈ ಪಿಡುಗು ಇನ್ನೂ ಹೆಚ್ಚುತ್ತಿದೆ. ಅಸೆಯಿಂದ ಮೈತೊಳೆದುಕೊಂಡು ಬಂದರೂ ಅಸ್ಪೃಶ್ಯನಿಗೆ ದೇವಾಲಯ ಪ್ರವೇಶ ದೊರಕದು. ಗ್ರಾಮದ ಬಾವಿಯಿಂದ ನೀರು ಸೇದುವಂತಿಲ್ಲ. ಅವನಿಗಿರುವುದು ಊರ ಹೊರಗಿನ ಕೆರೆಯ ಅಶುದ್ಧ ನೀರು. ಭೂಮಾಲಿಕನ ಪಾಳು ಜಾಗದಲ್ಲೂ ಅವನು ತನ್ನ ದನಗಳನ್ನು ಮೇಯಿಸುವಂತಿಲ್ಲ. ಹೊಲಸು ನಿವಾರಿಸುವ ಇವನು ಹೊಲೆಯನಾಗಿರಬೇಕಾಗಿದೆ. ಯಾವಾಗಲೂ ಇವನು ಮೈಲಿಗೆಯೇ, ಪ್ರಾಣಿಗಳನ್ನು ಮುಟ್ಟುತ್ತೇವೆ ಆದರೆ ಇವನನ್ನು ಮುಟ್ಟಿಸಿಕೊಳ್ಳುವುದಿಲ್ಲ.

ಆನಂದ್ : ಉಪ ವಿಧಾಯಕ ಸಭೆಯ ಸದಸ್ಯರಾಗಿ ವ್ಯಕ್ತಿಯ ಹಕ್ಕುಗಳನ್ನು ಸಮರ್ಥಿಸಲು ನೀವು ಮಾಡಿದ ಪ್ರಯತ್ನಗಳ ಬಗ್ಗೆ ಒಂದಿಷ್ಟು ಹೇಳಿ. ನಿಮ್ಮ ಆಯೋಗವು ಮೂಲಭೂತ ಹಕ್ಕುಗಳನ್ನು ನೀಡಿದೆ, ಸ್ವತಂತ್ರವಾಗಿ ಬದುಕುವ ಹಕ್ಕು ವ್ಯಕ್ತಿಗಿರಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿರದು. ಆದರೆ ಆಸ್ತಿಯ ಹಕ್ಕು ಮೂಲಭೂತ ಹಕ್ಕು ಎಂಬ ನಿಲುವಿಗೆ ಸಮ್ಮತಿಸಿದ್ದೀರಿ. ಆಸ್ತಿಯ ಹಕ್ಕು ಆಸ್ತಿವಂತರಿಗೆ ಕಲ್ಪಿಸಿಕೊಡುವ ಅನುಕೂಲಗಳು ನಿರ್ಣಾಯಕ ರೀತಿಯವು ಎನ್ನಿಸುವುದಿಲ್ಲವೇ? ಬಡವರಲ್ಲಿ ಬಡವರಾದ ಅಸ್ಪೃಶ್ಯರು ಇದರಿಂದಾಗಿ ಸದಾ ಪ್ರತಿಕೂಲ ಸ್ಥಿತಿಯಲ್ಲೇ ಉಳಿಯಬೇಕಾಗುವುದಿಲ್ಲವೇ?

ಅಂ : ನಮ್ಮ ಸಂವಿಧಾನವು ಜಾತ್ಯತೀತ, ಸಮಾಜವಾದಿ, ಪ್ರಜಾಪ್ರಭುತ್ವದ ಆದರ್ಶಗಳನ್ನು ಸಮರ್ಥಿಸುವಂತಹುದ್ದು. ಉಳುಮೆಯ ಹಕ್ಕನ್ನು ಪ್ರಭುತ್ವವು ಎಲ್ಲರಿಗೂ ನೀಡುವುದಾದಲ್ಲಿ ಸಾಗುವಳಿಯ ಹಕ್ಕುಗಳ ಮತ್ತು ಸಮತೆಯ ಸವಲತ್ತುಗಳ ಭರವಸೆ ಈಡೇರಬಹುದು. ಶೋಷಣೆಯು ಅನಿವಾರ್ಯ ಎಂಬ ಸ್ಥಿತಿ ಇರಬೇಕಾಗಿಲ್ಲ. ಅಸ್ಪೃಶ್ಯರ ಬಗ್ಗೆ–ಸವರ್ಣೀಯ ಹಿಂದೂ ಬಹುಸಂಖ್ಯಾತರು ಮತ್ತು ಮುಸ್ಲಿಮರೂ ಸೇರಿದಂತೆ–ಹೇಳುವುದಾದರೆ ಇವರಾರಿಗೂ

ಶೂದ್ರ

ಆನಂದ್ : ಜೀವಿಸುವ ಹಕ್ಕು, ಸ್ವಾತಂತ್ರ್ಯ ಮತ್ತು ನೆಮ್ಮದಿಯ ಭರವಸೆ ನೀಡುವ ಮೂಲಭೂತ ಹಕ್ಕುಗಳು ಇನ್ನೂ ಕನಸಾಗಿಯೇ ಉಳಿದಿವೆ.

ಅಂ : ಹೊಸ ಪೀಳಿಗೆಯ ಯುವಕರು ಹೋರಾಟವನ್ನು ಮುಂದುವರೆಸ ಬೇಕು, ಸಂವಿಧಾನವನ್ನು ಬದಲಿಸುವ ಸಾಧ್ಯತೆ ಇರುವುದು ಕೂಡ ಅವರಿಗೆ ಮಾತ್ರವೇ.

ಆನಂದ್ : 1789ರ ಫ್ರೆಂಚ್ ಕ್ರಾಂತಿಯಂತಹ ಹೋರಾಟವಿಲ್ಲದೆ ಇದು ಸಾಧ್ಯ ವಾಗಲಾರದೆನಿಸುತ್ತದೆ.

ಅಂ : ಈ ಅಭಿಪ್ರಾಯವನ್ನು ನೀವು ಸೂಚಿಸುತ್ತಿರುವುದು ನನಗೆ ಆಶ್ಚರ್ಯ ಕರವಾಗಿದೆ. ನಿಮ್ಮ ಕಾದಂಬರಿಯಲ್ಲಿ ಅಸ್ಪೃಶ್ಯರ ವಿಮೋಚನೆಯು ಗಾಂಧಿಯಿಂದ ಸಾಧ್ಯ ಎಂದು ಸೂಚಿಸಿದ್ದೀರಿ. ನೀವು ಅಹಿಂಸಾವಾದಿ ಗಳೆಂದು ನನ್ನ ತಿಳುವಳಿಕೆಯಾಗಿತ್ತು.

ಆನಂದ್ : ಮಹಾತ್ಮನ ಆದರ್ಶಗಳು ನನಗೆ ಎಟುಕಲಾರದಂತಹವು. ಹಿಟ್ಲರ್ ಮತ್ತು ಮುಸೋಲಿನಿಯವರ ಆಕ್ರಮಣವನ್ನು ಎದುರಿಸಲೇಬೇಕಿತ್ತು. ನಾನು ಸ್ಪೈಯಿನ್‌ಗೆ ಹೋಗಿ ಅಂತರ್‌ರಾಷ್ಟ್ರೀಯ ಸೇನಾಪಡೆಗಳನ್ನು ಸೇರಿಕೊಂಡೆ. ಆಸ್ಪತ್ರೆಯೊಂದರಲ್ಲಿದ್ದಾಗ ಗಾಯಾಳುಗಳ ಮೈಯಿಂದ ಹರಿಯುತ್ತಿದ್ದ ರಕ್ತ ನೋಡುವುದು ನನ್ನಿಂದಾಗುತ್ತಿರಲಿಲ್ಲ. ಒಮ್ಮೆ ಮೂರ್ಛೆ ಬಿದ್ದೆ. ಹಿಂಸಾಕಾಂಡದ ಈ ದೃಶ್ಯವನ್ನು ಸಹಿಸಲು ಸಾಧ್ಯವಿಲ್ಲವೆಂದಾದರೆ ವಾಪಸ್ಸು ಹೋಗಬಹುದೆಂದೂ ಸೂಚನೆ ಬಂತು. ಆದರೆ ಎರಡನೆ ಮಹಾಯುದ್ಧದ ಆ ಸಂದರ್ಭದಲ್ಲಿ ನಾವು ಯಾವುದಾದರೂ ಒಂದು ಪಕ್ಷದ ಕಡೆ ನಿಲ್ಲುವುದು ಅನಿವಾರ್ಯವಾಗಿ ಬಿಟ್ಟಿತ್ತು. ಫ್ಯಾಸಿಸಂ ವಿರುದ್ಧ ಪ್ರಜಾಪ್ರಭುತ್ವವಾದಿ ರಾಷ್ಟ್ರಗಳು ಹೂಡಿದ ಸ್ವಾತಂತ್ರ್ಯಸಮರ ಎಂದು ಕರೆಯಲಾದ ಈ ಸಮರವನ್ನು ಒಬ್ಬ ಕವಿ 'ದೊಡ್ಡಸುಳ್ಳಿನ' ವಿರುದ್ಧ ಹೂಡಿರುವ 'ಅರ್ಧಸುಳ್ಳಿನ' ಯುದ್ಧವೆಂದೂ ಕರೆದಿದ್ದ.

ಅಂ : ಮಹಾತ್ಮ ಹರಿಜನರಿಗಾಗಿ ಬಹಳಷ್ಟು ಮಾಡಿದರು ಎನ್ನಬಹು ದಾದರೂ ಭಗವದ್ಗೀತೆಯಲ್ಲಿ ಉಕ್ತವಾಗಿರುವ ವರ್ಣಾಶ್ರಮದ ಬಗೆಗೆ ಅಚಲ ವಿಶ್ವಾಸವುಳ್ಳವರಾಗಿದ್ದರು. ಹರಿಯ ಜನ ಎಂದು ಸಂಬೋಧಿಸುವ ಮೂಲಕ ಅವರನ್ನು ಉದ್ಧಾರ ಮಾಡುತ್ತೇನೆ

ಎಂದು ಭಾವಿಸಿದರು. ಆದರೆ ವಾಸ್ತವದಲ್ಲಿ ಅವರನ್ನು ಕೆಳಸ್ತರದಲ್ಲೇ ಉಳಿಸಿದರು.

ಆನಂದ್ : ನೀವು ಬೌದ್ಧಮತವನ್ನು ಸ್ವೀಕರಿಸಲು ಇದೇ ಕಾರಣವಾಗಿರಬಹುದೇ?

ಅಂ : ಇದೇ ಪ್ರಮುಖವಾದ ಕಾರಣ ಎನ್ನಬಹುದೇನೋ. ಅಲ್ಲದೆ ಪರಿಶಿಷ್ಟ ಜಾತಿಯು ನಾಗರಿಕನಾಗಿ ಉಳಿಯುವುದೆಂದರೆ ಪಂಚಮನ ಕೀಳುಸ್ಥಾನವನ್ನು ಒಪ್ಪಿಕೊಳ್ಳುವುದೇ ಆಗಿದೆ. ಹಿಂದೂ ದೈವವಾದ ಬ್ರಹ್ಮನನ್ನು ತಿರಸ್ಕರಿಸುವ ಮತ್ತು ಬೌದ್ಧಧರ್ಮವನ್ನು ಸ್ವೀಕರಿಸುವ ಮೂಲಕ ಕುರುಡು ನಂಬಿಕೆಗಳು, ಪುರಾಣ ಮತ್ತು ದಂತಕತೆಗಳ ಕಗ್ಗಟ್ಟಿನಿಂದ ಹೊರಬಂದು ಮನುಷ್ಯನಾಗಿ ಬದುಕುವುದು ಸಾಧ್ಯ ಎನಿಸಿತು. ಜ್ಞಾನಾರ್ಜನೆಗೆ ಬೌದ್ಧಧರ್ಮದಲ್ಲಿ ನಿಷೇಧವಿಲ್ಲ. ಹಿಂದೂಗಳ ಜಾತಿವಾದಿ ನಾಯಕತ್ವವನ್ನು ವಹಿಸಿದ ರಾಮನಂತಹವನನ್ನು ಅವತಾರಪುರುಷನೆನ್ನುವಂತಹ ಹಿಂದೂಮತದ ಹಲವಾರು ಭಾವಾತಿರೇಕಗಳನ್ನು ನಿವಾರಿಸಿಕೊಳ್ಳುವುದು ಸಾಧ್ಯವಾಯಿತು.

ಆನಂದ್ : ನಿಜ ಬೌದ್ಧಮತದ ಭಾವಲೋಕವು ಬ್ರಾಹ್ಮಣರು ಸೃಷ್ಟಿಸಿದ ಭ್ರಮಾಲೋಕಕ್ಕಿಂತಾ ಮೇಲೆಂದು ತೋರುತ್ತದೆ. ಬುದ್ಧ ವಿಶ್ವದ ಮೊದಲ ಅಸ್ತಿತ್ವವಾದಿ. ದುಃಖ ದುಃಖ ದುಃಖ ಎಂದು ಎಚ್ಚರಿಸಿದ. ಆದರೆ ಹಿಂದೂಗಳದ್ದು ಮೋಡಿಯಾಟ: ದೈವವೇ ಆನಂದ ಎಂದರು. ಪುರೋಹಿತರ ಮೂಲಕ ದೇವರಿಗೆ ಹಣ್ಣು ಹೂವುಗಳ, ಲಂಚವನ್ನು ಅರ್ಪಿಸಿ ತಮ್ಮ ಒಡೆಯರ ಕೃಪಾಶ್ರಯದಲ್ಲಿ ಬದುಕುವ ಸಮಾಧಾನಕರ ಬಹುಮಾನವನ್ನು ನಿರ್ಗತಿಕರಿಗೆ ಕೊಟ್ಟರು.

ಅಂ : ಬಹಳಷ್ಟು ಮಂದಿ ಪುರೋಹಿತರಿಗೆ ಬೊಜ್ಜು ಇರೋದು ಇದರಿಂದಾನೇ ಇರಬಹುದು!

ಆನಂದ್ : ತಿರಸ್ಕಾರಕ್ಕೊಳಗಾದವರಿಗೆ ನಿಮ್ಮ ಸಂದೇಶ ಏನು ?

ಅಂ : ಅಸ್ಪೃಶ್ಯನಿಗೆ ನಾನು ಹೇಳುವುದಿಷ್ಟೆ: ಹಿಂದೂಗಳು ಕಾಳಿದೇವತೆಗೆ ಕುರಿಗಳನ್ನು ಬಲಿಕೊಡುತ್ತಾರೆ. ನೀನು ಸಿಂಹವಾಗಬೇಕು! ನಿನ್ನ ಬೆಳಕು ನೀನೇ: ಅಟ್ಟ ದಿಪಾಭಾವ್!

ಆನಂದ್ : ಆನಂದನಿಗೆ ಬುದ್ಧ ಹೇಳಿದ್ದು ಇದನ್ನೇ–ನೀನಗೆ ನೀನೇ ಬೆಳಕು.

○

ಭಾರತದಲ್ಲಿ ಜಾತಿ, ಸಮಾಜ ಮತ್ತು ಸಾಮಾಜಿಕ ಪರಿವರ್ತನೆ– ಗಾಂಧಿ, ಅಂಬೇಡ್ಕರ್ ಮತ್ತು ಭಾರತೀಯ ಕಮ್ಯುನಿಸ್ಟರ ನಿಲುವು :

— ವಲೇರಿಯನ್ ರೋಡ್ರಿಗ್ಸ್

ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯನ್ನು ಅನುಸರಿಸಿ ದೇಶದಲ್ಲಿ ತೀವ್ರ ರೀತಿಯ ಬದಲಾವಣೆಯುಂಟಾಗಬೇಕೆಂದು ಗಾಂಧಿ, ಅಂಬೇಡ್ಕರ್ ಮತ್ತು ಭಾರತೀಯ ಕಮ್ಯುನಿಸ್ಟ್ ಪಾರ್ಟಿಯ ಅಡಿಯಲ್ಲಿ ಸಂಘಟನೆಗೊಂಡ ಕಮ್ಯುನಿಸ್ಟರು ಬಲವಾಗಿ ನಂಬಿದ್ದರು ಮತ್ತು ಆ ದಿಶೆಯಲ್ಲಿ ಶ್ರಮಿಸಿದರು. ಈ ಮೂಲಭೂತ ಪರಿವರ್ತನೆಯ ಬಗ್ಗೆ ಅಥವಾ ಸ್ವತಂತ್ರ ಭಾರತದ ಸ್ವರೂಪದ ಬಗ್ಗೆ ಅವರಲ್ಲಿ ಏಕಾಭಿಪ್ರಾಯವಿಲ್ಲದೆ ಹೋಗಿರಬಹುದು; ಇಂತಹ ಪರಿವರ್ತನೆಯನ್ನು ತರಬಲ್ಲ ಒಂದು ಸಮಾನ ತಂತ್ರದಲ್ಲಿ ಅವರಿಗೆ ನಂಬಿಕೆಯಿಲ್ಲದೆ ಹೋಗಿರಬಹುದು. ಭಾರತದಲ್ಲಿದ್ದ ಬ್ರಿಟಿಷ್ ಅಧಿಕಾರದ ಬಗೆಗಿನ ಅವರ ಧೋರಣೆಗಳಲ್ಲಿ ವ್ಯತ್ಯಾಸವಿದ್ದಿರಬಹುದು ಅಥವಾ ಕಾಲದಿಂದ ಕಾಲಕ್ಕೆ ಹಾಗೂ ಪರಿಸ್ಥಿತಿಗೆ ಅನುಗುಣವಾಗಿ ಅವು ಬದಲಾಗುತ್ತಲೂ ಹೋಗಿರಬಹುದು. ಆದರೆ ಭಾರತದ ಜನತೆಯೊಂದಿಗೆ ಇಂಗ್ಲಿಷ್ ಸಾಮ್ರಾಜ್ಯಶಾಹಿ ಮೂಲಭೂತ ವಿರೋಧ ಹೊಂದಿದೆ ಎಂಬ ಬಗ್ಗೆ, ಮತ್ತು ಬ್ರಿಟಿಷರನ್ನು ಅಧಿಕಾರದಿಂದ ಉಚ್ಚಾಟಿಸಿ, ಜನಪ್ರಿಯ ಪ್ರಜಾಪ್ರಭುತ್ವದ ಆಧಾರದ ಮೇಲೆ ಭಾರತೀಯ ರಾಜ್ಯಾಡಳಿತ ಕ್ರಮವನ್ನು ಪುನರ್ ರೂಪಿಸಬೇಕೆಂಬ ಬಗ್ಗೆ ಅವರಲ್ಲಿ ಒಮ್ಮತವಿತ್ತು.

ಹಲವಾರು ವಿಷಯಗಳಲ್ಲಿ ಅವರ ನಡುವೆ ಆಳವಾದ ವ್ಯತ್ಯಾಸಗಳಿದ್ದವು. ಇಂತಹ ವ್ಯತ್ಯಾಸಗಳ ಪೈಕಿ ಬಹು ಮುಖ್ಯವಾದುದು ಬಹುಶಃ ಜಾತಿಪದ್ಧತಿಯನ್ನು ಮತ್ತು ಭಾರತೀಯ ಸಮಾಜದಲ್ಲಿ ಜಾತಿಪದ್ಧತಿಯ ಪಾತ್ರ ಮತ್ತು ಸ್ಥಾನವನ್ನು ಅವರು ಅರ್ಥೈಸಿರುವ ರೀತಿ, ಭಾರತದ ಸಂದರ್ಭದಲ್ಲಿ ಈ ವಿವಾದಾತ್ಮಕ ವಿಷಯದೊಂದಿಗೆ ಹೇಗೆ ಒಪ್ಪಂದ ಮಾಡಿಕೊಳ್ಳಬೇಕು ಮತ್ತು ರಾಷ್ಟ್ರೀಯ ಜನಪ್ರಿಯ ಸಂಕಲ್ಪವೊಂದನ್ನು ಹೇಗೆ ರೂಪಿಸಿಕೊಳ್ಳಬೇಕು ಎಂಬ ಬಗ್ಗೆ ಅವರಲ್ಲಿ ಆಳವಾದ ಭಿನ್ನಾಭಿಪ್ರಾಯಗಳಿದ್ದವು.

DEVU PATTAR
GUTTIPETH,
SHAHAPUR-585223

ತಮ್ಮ ಕ್ರಿಯಾತ್ಮಕ ಸಾರ್ವಜನಿಕ ಜೀವನದುದ್ದಕ್ಕೂ ಗಾಂಧೀಜಿಯವರನ್ನು ಕಾಡಿದ್ದು ಜಾತಿಸಮಸ್ಯೆ. ಅದರ ಧಾರ್ಮಿಕ ಒಳಾರ್ಥಗಳು ಮತ್ತು ರಾಷ್ಟ್ರೀಯ ತಾದಾತ್ಮ್ಯಭಾವದ ಬೆಳವಣಿಗೆಯ ಮೇಲೆ ಜಾತಿಸಮಸ್ಯೆ ಬೀರಿದ ಪ್ರಭಾವ–ಈ ದ್ವಿಮುಖ ಆಯಾಮಗಳನ್ನು ಒಳಗೊಂಡ ದೃಷ್ಟಿಕೋನ ಗಾಂಧೀಜಿಯದಾಗಿತ್ತು. ಅಸ್ಪೃಶ್ಯತೆಯ ಸಮಸ್ಯೆ ಮತ್ತು ಅಸ್ಪೃಶ್ಯರ ಸ್ಥಿತಿಗತಿಗಳು ಅವರ ಮುಖ್ಯ ಕಾಳಜಿಯ ವಿಷಯಗಳಾಗಿದ್ದವು.

ಜಾತಿಪದ್ಧತಿಯನ್ನು ವರ್ಣಾಶ್ರಮದೊಂದಿಗೆ ಸಮೀಕರಿಸಿದ ಗಾಂಧಿ, ವರ್ಣಾಶ್ರಮ ಧರ್ಮ ಹಿಂದೂಧರ್ಮದ ಅವಿಭಾಜ್ಯ ಅಂಗವೆಂದು ಸಾರಿದರು[1] ತಮ್ಮನ್ನು "ಹಿಂದೂ" ಎಂದು ಪರಿಗಣಿಸಿಕೊಂಡು, ಆ ಬಗ್ಗೆ ಹೆಮ್ಮೆಯನ್ನೂ ತಳೆದರು. ವರ್ಣಾಶ್ರಮಧರ್ಮವನ್ನು ಪ್ರಶ್ನಿಸಿದರೆ, ಆಳದಲ್ಲಿ ಹಿಂದೂಧರ್ಮವನ್ನು ಪ್ರಶ್ನಿಸಿದಂತೆಯೇ ಎಂದು ಬಗೆದರು. ತಾವೇ ನೀಡಿದ ನಿರ್ದಿಷ್ಟ ಧಾರ್ಮಿಕ ಅಥವಾ ಸೈದ್ಧಾಂತಿಕ ವ್ಯಾಖ್ಯಾನದ ರೂಪದಲ್ಲಿ ಹಿಂದೂಧರ್ಮಕ್ಕೆ ಬಲವಾಗಿ ಅಂಟಿಕೊಂಡಿದ್ದರೂ, ಅದನ್ನು ಒಂದು ಸಾಮಾಜಿಕ ವ್ಯವಸ್ಥೆಯಾಗಿ ನೋಡುವಾಗ, ಅದನ್ನು ಕುರಿತಂತೆ ತಮ್ಮ ಮಾತು ಮತ್ತು ಕ್ರಿಯೆ ಎರಡರಲ್ಲೂ ಆಳವಾದ ಪ್ರಶ್ನೆಗಳನ್ನೆತ್ತಿದರು. ಮೂಲತಃ ಅವರು ವರ್ಣಾಶ್ರಮದಲ್ಲಿ ಅಂತರ್ಗತವಾಗಿರುವ ಶ್ರಮವಿಭಜನೆಯನ್ನು ತೀವ್ರವಾಗಿ ಪ್ರಶ್ನಿಸಿದರು. ಶಾಸ್ತ್ರಗಳನ್ನು ಅರ್ಥೈಸುವ ಹಕ್ಕು ತಮಗಿದೆಯೆಂದು ಭಾವಿಸಿ, ಅಂತೆಯೇ ಅರ್ಥೈಸಿದರು. ಬ್ರಾಹ್ಮಣವಾದಿಗಳ ಮಡಿವಂತಿಕೆಗೆ ಕಟ್ಟುಬೀಳಲು ಅವರು ಸಿದ್ಧರಿರಲಿಲ್ಲ. ಅವರ ಪ್ರಕಾರ ಧರ್ಮ ಮತ್ತು ರಾಜಕೀಯಗಳು ನಿರ್ದಿಷ್ಟ ಜಾತಿಗಳ ಪ್ರಾಬಲ್ಯ ಮತ್ತು ಅಧಿಕಾರಗಳ ಸೊತ್ತಾಗಿರದೆ, ಒಂದಕ್ಕೊಂದು ಹೆಣೆದುಕೊಂಡು ಅಖಂಡವಾಗಿ ಇರಬೇಕಾದವು. ವರ್ಣಾಶ್ರಮಧರ್ಮ ಅತ್ಯಂತ ನಿಷ್ಠೆಯಿಂದ ಎತ್ತಿ ಹಿಡಿದ ಮಾನಸಿಕ ಮತ್ತು ದೈಹಿಕ ಶ್ರಮವಿಭಜನೆಯನ್ನು ತೊಡೆದುಹಾಕಲು ಗಾಂಧಿ ಪ್ರಯತ್ನಿಸಿದರು. ನೂಲುವ ಚಟುವಟಿಕೆ ಈ ಅಡ್ಡಗೋಡೆಯನ್ನು ಇಲ್ಲವಾಗಿಸುವ ಒಂದು ಯತ್ನವಾಯಿತು ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಎಲ್ಲ ಸದಸ್ಯರಿಗೂ ಅದೊಂದು ಕಡ್ಡಾಯವಾದ ದೈನಿಕ ಕರ್ಮವಾಯಿತು. ಸಮಾಜದ ಅಂಚಿಗೆ ನೂಕಲಾಗಿದ್ದ ಮಂದಿಗೆ ಸೀಮಿತವಾಗಿದ್ದ ಅತ್ಯಂತ ಉಪೇಕ್ಷಿತ ಕಸುಬುಗಳು, ಎಲ್ಲರೂ ನಿರ್ವಹಿಸಲೇಬೇಕಾದ ಕರ್ತವ್ಯಗಳಾದವು. ವರ್ಣಾಶ್ರಮಧರ್ಮದ ಆಚರಣೆಗಳಿಂದ ಗಾಂಧಿ ದೂರವಾಗಿದ್ದರು. ಅವರು ಅಂತರ್ಜಾತೀಯ ವಿವಾಹಗಳು ಮತ್ತು ಅಂತರ್ಜಾತೀಯ ಭೋಜನಕೂಟಗಳ ಪರವಾಗಿ ಇರಲಿಲ್ಲವೆಂಬುದು ದಿಟವಾದರೂ, ವರ್ಣಾಶ್ರಮ ಧರ್ಮವನ್ನು ಕುರಿತ ಅವರ ಆಳವಾದ ಪುನರ್‌ವ್ಯಾಖ್ಯಾನದಲ್ಲಿ ಈ

ವಿವರಗಳು ತೀರ ಅಮುಖ್ಯವೆನಿಸಿದವು. ಆ ಮಟ್ಟಿಗೆ ಜಾತಿಪದ್ಧತಿಯನ್ನು ಸಾಮಾಜಿಕ ವ್ಯವಸ್ಥೆಯು ಮಟ್ಟದಿಂದ ವೈಯಕ್ತಿಕ ಮತ್ತು ಕೌಟುಂಬಿಕ ಕ್ಷೇತ್ರಕ್ಕೆ ಹಿಂತಳ್ಳುವುದರಲ್ಲಿ ಗಾಂಧೀಜಿ ಸಫಲರಾದರು. ಕಸುಬುಗಳು ಮತ್ತು ವೃತ್ತಿಗಳು ತಮ್ಮ ಧಾರ್ಮಿಕ ಲಕ್ಷಣಗಳನ್ನು ಕಳೆದುಕೊಂಡವು. ತಮ್ಮ ಘನತೆ ಮತ್ತು ಯೋಗ್ಯತೆಗಳ ಬಗ್ಗೆ ಪ್ರಜ್ಞೆಯುಳ್ಳ ಜನಗಳ ಸಾರ್ವಜನಿಕ ವಲಯವೊಂದು ನಿರ್ಮಾಣವಾಯಿತು. ಹಾಗೆಯೇ, ಎಲ್ಲ ಪ್ರಜೆಗಳನ್ನೂ-ಅವರು ಯಾವುದೇ ವರ್ಗದವರಾಗಿರಲಿ-ಈ ಪ್ರಜ್ಞಾವಂತ ಸಾರ್ವಜನಿಕ ವಲಯದ ಆವರಣದಲ್ಲೇ ಇಟ್ಟು ನೋಡಬೇಕೆಂಬ ತತ್ವವೂ ಬೆಳೆದು ಬಂದಿತು.

ಅಸ್ಪೃಶ್ಯತೆಯು ಹಿಂದೆ ಯಾವುದೇ ಶಾಸ್ತ್ರಸಮ್ಮತಿ ಇದೆ ಎಂಬ ವಿಷಯವನ್ನು ಗಾಂಧೀಜಿ ಅಲ್ಲಗಳೆದರು[2] ಮತ್ತು ಈ ಬಗ್ಗೆ ಅವರು ಯಾರೊಂದಿಗಾದರೂ ಸೆಣಸಾಡಲು ಸಿದ್ಧರಿದ್ದರು. ಅಸ್ಪೃಶ್ಯತೆಯನ್ನು ಎತ್ತಿ ಹಿಡಿಯುವ ಆಧಾರಗ್ರಂಥ ಇದೆಯೆಂದು ಯಾರಾದರೂ ತೋರಿಸಿಕೊಟ್ಟರೂ, ಅದರ ವಿರುದ್ಧ ಪ್ರತಿಭಟಿಸುವುದಾಗಿ ಸಾರಿದರು.[3] ಅಸ್ಪೃಶ್ಯತೆ ಹಿಂದೂ-ಧರ್ಮದ ಅಂಗವಾಗಿರಲು ಸಾಧ್ಯವೇ ಇಲ್ಲ. ಏಕೆಂದರೆ ಅದು ತಿಳಿವಳಿಕೆ, ವಿವೇಚನಾಶಕ್ತಿಗಳಿಗೆ ಪ್ರತಿಕೂಲವಾಗಿದ್ದು, ಹಿಂದೂಧರ್ಮದಲ್ಲಿರುವ ಎಲ್ಲ ಉನ್ನತ ಹಾಗೂ ಉತ್ತಮ ಮೌಲ್ಯಗಳಿಗೆ ವಿರುದ್ಧವಾಗಿದೆ ಎಂದರು.[4] ಈ ಕಾರಣಕ್ಕಾಗಿ, ಅವರ ಪಾಲಿಗೆ ಅಸ್ಪೃಶ್ಯತೆ ಹಿಂದೂಧರ್ಮಕ್ಕೆ ಅತ್ಯಂತ ಅನುಚಿತವಾದ ವ್ಯವಸ್ಥೆಯೆನಿಸಿತು. ಅಥವಾ ಹೆಚ್ಚೆಂದರೆ ಹಿಂದೂಧರ್ಮವನ್ನು ಕುರಿತಂತೆ ಒಂದು ವಿಕಲ, ಅವನತ ವ್ಯಾಖ್ಯಾನವೆನಿಸಿತು. ಈ ದುಷ್ಟ ಆಚರಣೆಯಲ್ಲಿ ತೊಡಗಿದ ಯಾರೇ ಆಗಲಿ, ಅದನ್ನು ಅಲ್ಲಗಳೆಯುವ ಮತ್ತು ಅದಕ್ಕೆ ಸೂಕ್ತ ಪರಿಹಾರ ಒದಗಿಸುವ ಹೊಣೆ ಹೊತ್ತುಕೊಳ್ಳಬೇಕು. ಆದ್ದರಿಂದ ಅಸ್ಪೃಶ್ಯತೆಯು ನಿವಾರಣೆ ಕುಲೀನ ಹಿಂದೂಗಳ ಪಾಲಿನ ಜವಾಬ್ದಾರಿ ಎಂಬುದು ಅವರ ವಾದವಾಯಿತು. ಈ ಸಾಮಾಜಿಕ ಅನ್ಯಾಯದ ಬಗ್ಗೆ ಅವರಲ್ಲಿ ಅರಿವು ಮೂಡಿಸಿ ಅವರಿಂದಾದ ತಪ್ಪನ್ನು ಸರಿಪಡಿಸುವ ನಿಟ್ಟಿನಲ್ಲಿ ಸಾಮೂಹಿಕ ಕ್ರಮಗಳನ್ನು ಕೈಗೊಳ್ಳುವಂತೆ ಮಾಡಬೇಕೆಂಬುದು ಗಾಂಧಿಯವರ ನಿಲುವಾಗಿತ್ತು.

ಸಾಮಾಜಿಕ ರಚನೆಯಲ್ಲಿ ಹಿಂದೂ ಜಾತಿವಾದಿಗಳು ಅಸ್ಪೃಶ್ಯರನ್ನು ಒಪ್ಪಿಕೊಂಡರೆ, ಅವರ ಸಾಮಾಜಿಕ ಸ್ಥಾನ ಏನಾಗಬಹುದು? ಗಾಂಧಿಗೆ ಈ ಸಮಸ್ಯೆ ಉದ್ಭವಿಸಲೇ ಇಲ್ಲ. ಹಿಂದೆಯೇ ಹೇಳಿದಂತೆ ಅವರು ಜಾತಿಪದ್ಧತಿಯ ಶ್ರೇಣೀಕೃತ ಕಲ್ಪನೆಯನ್ನು ಅಲ್ಲಗಳೆದರು. ಹಿಂದೂಧರ್ಮದ ಅವಿಭಾಜ್ಯ ಅಂಗವೆಂದು ಸ್ವೀಕರಿಸಲಾದ ಅಸ್ಪೃಶ್ಯರು ಸಾರ್ವಜನಿಕ ವಲಯದಲ್ಲೂ ಅದೇ ಸ್ಥಾನವನ್ನು ಅಲಂಕರಿಸುವರು, ತಮ್ಮ

ವೈಯಕ್ತಿಕ ಮತ್ತು ಕೌಟುಂಬಿಕ ವಲಯದಲ್ಲಿ ತಮ್ಮ ಧಾರ್ಮಿಕ ಮತ್ತು ಸಾಮಾಜಿಕ ಆಚರಣೆಗಳನ್ನು ಮುಂದುವರಿಸುವರು ಎಂಬುದು ಗಾಂಧಿ ತಳೆದ ನಿಲುವು.

ಅಸ್ಪೃಶ್ಯರ ಕುಂದುಕೊರತೆಗಳ ನಿವಾರಣೆಗಾಗಿ ಹೋರಾಡುವ ಅಂಬೇಡ್ಕರರ ತಂತ್ರ ಪ್ರತಿಗಾಮಿಯಾಗಿದ್ದು, ಕಟ್ಟಕಡೆಯಲ್ಲಿ ಅಸ್ಪೃಶ್ಯರ ಹಿತಾಸಕ್ತಿಗಳಿಗೇ ಕೆಡುಕುಂಟು ಮಾಡುತ್ತದೆಂದು ಗಾಂಧೀಜಿ ಭಾವಿಸಿದರು. ಜಾತಿವಾದಿ ಬ್ರಾಹ್ಮಣರನ್ನು ದೂಷಿಸುವುದು, ಅವರಿಗೆ ಬೆದರಿಕೆ ಒಡ್ಡುವುದು ಇತ್ಯಾದಿಗಳನ್ನು ನಂಬಿದ ಅಂಬೇಡ್ಕರರ ನಿಲುವು ಬೇಲಿಗಳನ್ನು ಸೃಷ್ಟಿಸಿ, ಹಗೆತನವನ್ನು ಹೆಚ್ಚಿಸುತ್ತದೆಂದು ಗಾಂಧಿ ಅಭಿಪ್ರಾಯ ಪಟ್ಟರು. ಅಂತಹ ಸಂದರ್ಭದಲ್ಲಿ, ಗರಿಷ್ಠ ಸಂಖ್ಯೆಯಲ್ಲಿರುವ ಜಾತಿವಾದಿ ಹಿಂದೂಗಳಿಗೆ ಅಸ್ಪೃಶ್ಯರ ಮೇಲೆ ನಿರ್ಣಾಯಕವಾಗಿ ಮೇಲುಗೈ ಸಾಧಿಸಲು ಸಾಧ್ಯವಾಗುತ್ತದೆ. ವಿವಾದಾಂಶಗಳನ್ನು ಈ ರೀತಿ ಬೆಳೆಯಗೊಡುವುದು ಒಂದು ಹಿನ್ನಡೆಯ ಹೆಜ್ಜೆಯಾಗಿ ಪರಿಣಮಿಸಿ ಅಸ್ಪೃಶ್ಯರ ಸ್ಥಿತಿಗತಿಗಳನ್ನು ಸುಧಾರಿಸಲು ಅದರಿಂದ ಯಾವುದೇ ಸಹಾಯ ದೊರೆಯುವುದಿಲ್ಲ. ಜಾತಿವಾದಿ ಹಿಂದೂಗಳಿಗೂ ತಮ್ಮ ರೀತಿನೀತಿಗಳನ್ನು ಬದಲಾಯಿಸಿ ಕೊಳ್ಳಲು ಮತ್ತು ಅಸ್ಪೃಶ್ಯರ ಮೇಲೆ ತಾವು ನಡೆಸಿದ ಚಾರಿತ್ರಿಕ ಅನ್ಯಾಯಗಳನ್ನು ಸರಿಪಡಿಸಲು ಯಾವುದೇ ಅವಕಾಶವನ್ನು ಒದಗಿಸಿದಂತಾಗುವುದಿಲ್ಲ. ಅಲ್ಪ ಸಂಖ್ಯಾತರ, ಅದರಲ್ಲೂ ದುರ್ಬಲರಾದ ಮತ್ತು ಶತಶತಮಾನಗಳಿಂದ ಅವಹೇಳನಕ್ಕೆ ಒಳಗಾದ ಅಲ್ಪ ಸಂಖ್ಯಾತರ ವರ್ಗವೊಂದು, ಬಲಿಷ್ಠ ಬಹುಸಂಖ್ಯಾತ ವರ್ಗವೊಂದರ ವಿರುದ್ಧ ನಡೆಸಿದ ಹೋರಾಟವಾಗಿ ಇದು ಪರಿಣಮಿಸುತ್ತದೆ. ಅಂಬೇಡ್ಕರ್ ಇದೇ ತಂತ್ರವನ್ನು ಮುಂದುವರಿಸಿದಲ್ಲಿ, ಹಿಂದೂಗಳು ಅಸ್ಪೃಶ್ಯರ ವಿರುದ್ಧ ಒಗ್ಗೂಡಿದ ಘಟಕವಾಗಿ ತಮ್ಮನ್ನು ರೂಪಿಸಿಕೊಳ್ಳುತ್ತಾರೆ ಎಂದು ಅವರು ಭಾವಿಸಿದರು. ಅದೇ ಸಮಯ ದಲ್ಲಿ, ಜಾತಿವಾದಿ ಹಿಂದೂಗಳ ಸಂದರ್ಭದಲ್ಲಿ ಅಂತಹ ತಂತ್ರ ಮತ್ತು ಅಭಿಗಮನದ ಅಗತ್ಯವಿಲ್ಲವೆಂದೂ ಅವರು ಭಾವಿಸಿದರು. "ಹಿಂದೂಧರ್ಮದ ತಿರುಳನ್ನು ಬಗೆದು ತಿನ್ನುತ್ತಿರುವ ಈ ಹುಣ್ಣಿನ" ಬಗ್ಗೆ ಜಾತಿವಾದಿ ಹಿಂದೂಗಳ ಪ್ರಜ್ಞೆಯನ್ನು ಎಚ್ಚರಿಸಿ,[5] ಜಾತಿವಾದಿ ಹಿಂದೂಗಳು ಮತ್ತು ಅಸ್ಪೃಶ್ಯರ ನಡುವಣ ಸಂಬಂಧದಲ್ಲಿ ಪರಿವರ್ತನೆ ಯುಂಟುಮಾಡಬಹುದೆಂದು ತಿಳಿದರು. ಮನವೊಲಿಸುವ ಮೂಲಕ ಮತ್ತು ಹೃದಯ ಪರಿವರ್ತನೆಯ ಮೂಲಕ ಅಂತಹ ಮಾರ್ಪಾಟನ್ನು ಉಂಟುಮಾಡಬಹುದೆಂಬ ಬಗ್ಗೆ ಗಾಂಧಿಯವರು ನಂಬಿಕೆ ಕಳೆದುಕೊಳ್ಳುವವರಾಗಿರಲಿಲ್ಲ. ಅಸ್ಪೃಶ್ಯತೆಯ ಸಮಸ್ಯೆ ಯನ್ನು ನಿವಾರಿಸುವ ಹಾದಿಯಲ್ಲಿ, ಈ ಸಮಸ್ಯೆಯಿಂದ ಬಾಧಿತರಾದವರನ್ನು ಜಾತಿವಾದಿ ಹಿಂದೂಗಳ ಪೈಕಿ ಪ್ರಜ್ಞಾವಂತ ಎಚ್ಚೆತ್ತ ಮಂದಿಯೊಂದಿಗೆ ಒಗ್ಗೂಡಿಸಲು ಗಾಂಧಿ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಆದರೆ ಮುಂದೆ ಬ್ರಿಟಿಷ್ ಸಾಮ್ರಾಜ್ಯಶಾಹಿಯು

ವಿರುದ್ಧದ ತಮ್ಮ ಹೋರಾಟದಲ್ಲಿ ಈ ತಂತ್ರವನ್ನು ಗಾಂಧಿ ಅಳವಡಿಸಿದರು
ಸಾಮಾಜಿಕ ಪ್ರಶ್ನೆಗೆ ಸಂಬಂಧಿಸಿದಂತೆ, ಯಥಾಸ್ಥಿತಿಯನ್ನು ಉಳಿಸಿಕೊಳ್ಳುವುದು
ಅಂಬೇಡ್ಕರ್‌ಗೆ ಸೋಗಿನ ಬೂಟಾಟಿಕೆಯಲ್ಲದಿದ್ದರೂ, ಜಾಣತನದಿಂದ ಕೂಡಿದ ಒಂದು
ತಂತ್ರವೆನಿಸಿತು. ಗಾಂಧಿಯವರ ಅಸ್ಪೃಶ್ಯತಾ ನಿವಾರಣಾ ತಂತ್ರ ಜಾತಿವಾದಿ ಹಿಂದೂ
ಗಳ ಸದ್ಭಾವನೆಯ ಮೇಲೆ ಅವಲಂಬಿತವಾಗಿದ್ದಂತೆ ಅವರಿಗೆ ಭಾಸವಾಯಿತು. ಇದು
ತತ್ವಪ್ರಾಂಗದನ್ನು ಜಾತಿವಾದಿ ಹಿಂದೂಗಳ ಮನೋಸ್ವೇಚ್ಛೆಗೆ ಅಡಮಾನಗೊಳಿಸುವ
ಬೂಟಾಟಿಕೆಯ ಸಂದರ್ಭವಾಗಿ ಅವರಿಗೆ ತೋರಿತು.

ಅಸ್ಪೃಶ್ಯತೆಯ ಸಾಮಾಜಿಕ ರೋಗನಿದಾನವನ್ನು ಕುರಿತಂತೆ ಅಂಬೇಡ್ಕರ್ ಮತ್ತು
ಗಾಂಧಿಯವರ ನಿರ್ಣಯಗಳಲ್ಲಿ ಸಾಮ್ಯಗಳು ಕಂಡುಬಂದರೂ, ಸಂಬಂಧಿತ ಸಮಸ್ಯೆಗಳ
ಬಗ್ಗೆ ಮತ್ತು ಅವುಗಳ ತೀವ್ರತೆಯನ್ನು ಕುರಿತಂತೆ, ಅಂಬೇಡ್ಕರರಲ್ಲಿ ಹೆಚ್ಚಿನ
ಪ್ರಾಯೋಗಿಕ ಅರಿವು ಕಂಡುಬರುತ್ತದೆ. ಅಸ್ಪೃಶ್ಯರ ಮೇಲೆ ಹೇರಲಾದ ಸಾಮಾಜಿಕ
ಮತ್ತು ಆರ್ಥಿಕ ಅಸಮಾನತೆಗಳು ಧಾರ್ಮಿಕ ಮೂಲದಿಂದ ಬಂದವಲ್ಲ ಆದರೆ ಶಾಸ್ತ್ರ
ಗಳನ್ನು ಮತ್ತು ಧಾರ್ಮಿಕ ಪ್ರಮಾಣಗ್ರಂಥಗಳನ್ನು ಅರ್ಥೈಸಿರುವ ರೀತಿಯಿಂದ
ಬಂದವು ಎಂಬುದು ಅಂಬೇಡ್ಕರರ ಅಭಿಪ್ರಾಯವಾಗಿತ್ತು. ಅಸ್ಪೃಶ್ಯತೆಯ ಮೂಲ
ವನ್ನು ಕುರಿತಂತೆ ಅಂಬೇಡ್ಕರರ ಚಾರಿತ್ರಿಕ ಪುನರ್ ನಿರ್ಮಾಣದ ಸರಿತಪ್ಪುಗಳ ಜಿಜ್ಞಾಸೆ
ನಮಗಿಲ್ಲಿ ಅಪ್ರಕೃತ. ಅಸ್ಪೃಶ್ಯತೆ ಒಂದು ಚಾರಿತ್ರಿಕ ಫಲವೇ ಆಗಿದ್ದು, ಅದನ್ನು
ಚಾರಿತ್ರಿಕವಾಗಿ ಪರಿಹರಿಸಬಹುದು ಎಂಬುದು ಅವರ ವಾದದ ತಿರುಳು. ಆದರೆ
ಅವರು ಇಲ್ಲಿ ಗಾಂಧಿಗಿಂತ ಭಿನ್ನ ನಿಲುವು ತಳೆಯುತ್ತಾರೆ. ಈ ಅನಿಷ್ಟವನ್ನು ಪರಿಹರಿ
ಸುವಲ್ಲಿ ಅಂಬೇಡ್ಕರ್ ಬಳಸುವ ತಂತ್ರ ಗಾಂಧೀಜಿಯ ತಂತ್ರಕ್ಕಿಂತ ತೀರ ಭಿನ್ನವಾದುದು.

ಅಸ್ಪೃಶ್ಯರ ಸ್ಥಿತಿಗತಿಗಳ ಸುಧಾರಣೆ ಜಾತಿವಾದಿ ಹಿಂದೂಗಳ ಕೃಪಾಭಿಕ್ಷೆಗಾಗಿ
ಕಾದುಕುಳಿತಿರಲು ಸಾಧ್ಯವಿಲ್ಲ ಎಂದು ಅಂಬೇಡ್ಕರ್ ವಾದಿಸಿದರು. ನಿಮ್ನ ವರ್ಗದವರು
ಎಚ್ಚರಗೊಳ್ಳಬೇಕಾದರೆ ತಮ್ಮ ಸ್ಥಿತಿಗತಿಗಳ ಬಗ್ಗೆ ಅವರಲ್ಲಿ ಅರಿವು ಮೂಡಬೇಕು.
ತಮ್ಮ ಅಸಾಮರ್ಥ್ಯವನ್ನು ಹೋಗಲಾಡಿಸಿಕೊಳ್ಳಲು, ತಮ್ಮ ಹೋರಾಟವನ್ನು ತಾವೇ
ರೂಪಿಸಿಕೊಳ್ಳಲು ಅವರಿಗೆ ಸಾಧ್ಯವಾಗುವಂತೆ ಮಾಡಬೇಕೆಂದು ಅವರು ಒತ್ತಾಯಿಸಿ
ದರು. ವಿಮೋಚನೆಯೆಂಬುದು ಅವರಿಗೆ ಮೂಲತಃ ಆತ್ಮ ವಿಮೋಚನೆಯಾಗಿತ್ತು.
ಪ್ರಾರಂಭದಲ್ಲಿ, ಹಿಂದೂಧರ್ಮದ ಒಳಗಿನಿಂದಲೇ ಈ ಸಮಸ್ಯೆಗೆ ಪರಿಹಾರ ಕಂಡು
ಕೊಳ್ಳುವ ಸಾಧ್ಯತೆಯನ್ನು ಅವರು ತಳ್ಳಿ ಹಾಕಲಿಲ್ಲ. ಅಂತಹ ಪರಿಹಾರವೊಂದು
ಕಾರ್ಯಸಾಧುವಾಗಬೇಕಾದರೆ, ಹಿಂದೂಧರ್ಮ ತನ್ನ ಜಾತಿಯ ತಳಹದಿಯನ್ನು ಬುಡ
ಸಮೇತ ಅಲುಗಾಡಿಸಿ, ತನ್ನನ್ನು ಪುನರ್ ವ್ಯಾಖ್ಯೆಗೆ ಒಳಪಡಿಸಿಕೊಳ್ಳಬೇಕಾಗುತ್ತದೆಂದು

ಶೂದ್ರ

ಹಿಸಿದರು. ಹಿಂದೂಧರ್ಮ ಅಸ್ಪೃಶ್ಯತೆಯ ಅನಿಷ್ಟದಿಂದ ಬಿಡುಗಡೆ ಹೊಂದುತ್ತ, ಅದೇ ಸಮಯದಲ್ಲಿ ಜಾತಿಪದ್ಧತಿಯ ಬಗ್ಗೆ ದೃಢನಿಷ್ಠೆಯನ್ನೂ ಉಳಿಸಿಕೊಳ್ಳುವುದು ಅಸಾಧ್ಯ ಎಂಬುದು ಅವರ ಅನಿಸಿಕೆಯಾಗಿತ್ತು. ಗಾಂಧಿ ಅಂತಹ ಅಸಾಧ್ಯ ಪರಿಹಾರದ ಸಂಕೇತವಾಗಿ ಆಗಾಗ ತೋರಿದರು. ಅಂತಹ ಪರಿಹಾರ ಅಸಾಧ್ಯವೆನಿಸಿದ ಕಾರಣ, ಅಂಬೇಡ್ಕರರ ದೃಷ್ಟಿಗೆ ಗಾಂಧಿಯು ತುಂಬ ಮೂಲತಃ ಯಥಾಸ್ಥಿತಿಯ ರಕ್ಷಣೆಯಾಗಿಯೂ, ಅಸ್ಪೃಶ್ಯತೆ ಆ ಯಥಾಸ್ಥಿತಿಯ ಅವಿಭಾಜ್ಯ ಅಂಗವಾಗಿಯೂ ತೋರಿದವು. ಆದರೆ ಗಾಂಧೀಜಿಯವರ ಜಾತಿಪದ್ಧತಿಗೆ ದೊರೆತ ತೀವ್ರರೀತಿಯ ಪುನರ್‌ವ್ಯಾಖ್ಯೆಗೆ ಅಂಬೇಡ್ಕರ್ ಹೆಚ್ಚಿನದೇನನ್ನೂ ಸೇರಿಸಲಿಲ್ಲ.

ಮಹಾಡ್ ಸತ್ಯಾಗ್ರಹ ಮತ್ತು ನಾಸಿಕ್ ಗುಡಿ ಪ್ರವೇಶ ಚಳವಳಿ ಇಂತಹ ಪ್ರಯೋಗಗಳು, ಸದ್ಯದಲ್ಲಿರುವ ಹಿಂದೂಧರ್ಮದ ರಚನೆಯಲ್ಲಿ, ಅಸ್ಪೃಶ್ಯತೆಯ ಅನಿಷ್ಟಕ್ಕೆ ಪರಿಹಾರವನ್ನು ಕಂಡುಕೊಳ್ಳುವುದು ಕಾರ್ಯಸಾಧ್ಯವಲ್ಲ ಎಂಬುದನ್ನು ಅಂಬೇಡ್ಕರರಿಗೆ ಮನವರಿಕೆ ಮಾಡಿಸಿದವು. ಜಾತಿವಾದಿ ಹಿಂದೂಗಳು ತಮ್ಮ ರೀತಿ ನೀತಿಗಳನ್ನು ಬದಲಾಯಿಸಿಕೊಳ್ಳುವ ಮತ್ತು ತಮ್ಮ ನಿಯಂತ್ರಣವನ್ನು ಸಡಿಲಗೊಳಿಸುವ ಪ್ರವೃತ್ತಿಯನ್ನು ಕೊಂಚವೂ ತೋರದಿದ್ದುದರಿಂದ, ಗಾಂಧಿಯ ಪರಿಹಾರ ಕಾರ್ಯ ಸಾಧುವಲ್ಲ ಎಂಬುದನ್ನು ಅವರಿಗೇ ಆಚರಣೆಯಲ್ಲಿ ತೋರಿಸಿಕೊಟ್ಟಂತಾಯಿತು ಎಂದು ಅಂಬೇಡ್ಕರ್ ಬಗೆದರು. ಗಾಂಧಿಯವರು ಸೂಚಿಸಿದಂತಹ ಜಾತಿವಾದಿ ಹಿಂದೂಗಳ ಹೃದಯ ಪರಿವರ್ತನೆಯ ಮಾರ್ಗ ಆಚರಣೆಯಲ್ಲಿ ಅಸಾಧ್ಯವೆಂಬುದು ಸಾಬೀತಾಯಿತು. ಅಂತಹ ಪರಿವರ್ತನೆಯನ್ನು ತರುವಲ್ಲಿ ಹಿಂದೂಧರ್ಮದ ಅತಿನಿಷ್ಠೆ ಅಡ್ಡಿಯಾಗಿತ್ತು. ತಮ್ಮ ಅನುಭವಾತ್ಮಕ ವಾದಕ್ಕೆ ಆಧಾರವೊದಗಿಸಲು ಅಂಬೇಡ್ಕರ್ ಚರಿತ್ರೆಯ ಮೊರೆ ಹೋದರು. ಇತಿಹಾಸದುದ್ದಕ್ಕೂ, ಅಸ್ಪೃಶ್ಯತೆಯನ್ನು ಖಂಡಿಸಿ, ಅದನ್ನು ತ್ಯಜಿಸು ಎಂತ ಹಿಂದೂಗಳಿಗೆ ಕರೆನೀಡಿ, ತಮ್ಮ ಸ್ವಂತ ಬದುಕಿನಲ್ಲೂ ಅಸ್ಪೃಶ್ಯತೆಯನ್ನು ನಿರಾಕರಿಸಿದ ಹಲವಾರು ಮಹಾತ್ಮರು ಬಂದು ಹೋಗಿದ್ದಾರೆ. ತಮ್ಮ ಮೇಲೆ ಹೇರಲಾದ ಅನ್ಯಾಯಗಳ ವಿರುದ್ಧ ಅಸ್ಪೃಶ್ಯರ ಕಡೆಯಿಂದಲೇ ಅನೇಕ ಚಳವಳಿಗಳು ನಡೆದು ಹೋಗಿವೆ. ಅನೇಕ ಮಹಾತ್ಮರು ಬಂದು ಹೋಗಿದ್ದಾರೆ, ಸುಧಾರಣಾ ಚಳವಳಿಗಳು ಒಂದಾದ ಮೇಲೊಂದರಂತೆ ನಿರಂತರವಾಗಿ ನಡೆದಿವೆ. ಆದರೆ ಅಸ್ಪೃಶ್ಯತೆ ಉಳಿದೇಬಿಟ್ಟಿದೆ. ಪರಿಸ್ಥಿತಿ ಹೀಗಿರುವಾಗ, ಅಸ್ಪೃಶ್ಯರ ಚಳವಳಿಯ ಉದ್ದೇಶವನ್ನು ಮಾರ್ಪಾಡುಗೊಳಿಸಬೇಕಾದ ಮತ್ತು ನಿಷ್ಕೃಷ್ಟಗೊಳಿಸಬೇಕಾದ ಅಗತ್ಯವಿದೆ. ಜಾತಿವಾದಿ ಹಿಂದೂಗಳಲ್ಲಿ ಪರಿವರ್ತನೆ ತರುವುದಾಗಲೀ, ಅವರಿಂದ ಉಪಕಾರಗಳನ್ನು ಕೇಳಿ ಪಡೆದುಕೊಳ್ಳುವುದಾಗಲೀ ಈ ಚಳವಳಿಯ ಉದ್ದೇಶವಾಗಬಾರದು, ಇದರ ಪರಮಗುರಿ

ರಾಜಕೀಯ ಅಧಿಕಾರವನ್ನು ಹೊಂದುವತ್ತ ಇರಬೇಕು. "ಕಾನೂನು ರಚಿಸುವ ಅಧಿಕಾರವನ್ನು ನೀವೀಗ ವಶಪಡಿಸಿಕೊಳ್ಳಿ. ಉಪವಾಸ, ಪೂಜೆ ಮತ್ತು ಜಪಗಳಿಂದ ನಿಮ್ಮ ಗಮನವನ್ನು ಬದಲಾಯಿಸಿ, ಕಾನೂನು ರಚನಾಶಕ್ತಿಯನ್ನು ಗಳಿಸಿಕೊಳ್ಳುವತ್ತ ನಿಮ್ಮ ಶಕ್ತಿಯನ್ನು ಕೇಂದ್ರೀಕರಿಸಿ. ಆ ಮಾರ್ಗ ನಿಮ್ಮ ಹಸಿವನ್ನು ಹಿಂಗಿಸುತ್ತದೆ"[6] ಎಂದು ಅವರು ತಮ್ಮ ಎಲ್ಲ ಸಭೆಗಳಲ್ಲೂ ಒತ್ತಾಯಿಸತೊಡಗಿದರು. ಸಾಧಾರಣೆಯ ಕ್ಷೇತ್ರಕ್ಕೆ ಅಡಿಯಿಟ್ಟ ಹೊಸದರಲ್ಲಿ ಇದು ಅವರ ಪ್ರಧಾನ ದೃಷ್ಟಿಕೋನವಾಗಿದ್ದರೂ, ಅವರು ತಮ್ಮ ಆಯ್ಕೆಗಳ ಬಗ್ಗೆ ತೆರೆದ ಮನಸ್ಸಿನವರಾಗಿದ್ದರು. ಅಂತಿಮವಾಗಿ ಬೌದ್ಧಧರ್ಮವನ್ನು ಅಪ್ಪಿಕೊಳ್ಳುವವರೆಗೂ ಅದೇ ಮನಃಸ್ಥಿತಿಯನ್ನು ಉಳಿಸಿಕೊಂಡಿದ್ದರು.

ಜಾತಿವಾದಿ ಹಿಂದೂಗಳು ಘನತೆ ಮತ್ತು ಸಮಾನತೆಯ ಭಾವದಿಂದ ಅಸ್ಪೃಶ್ಯರನ್ನು ಹಿಂದೂಧರ್ಮದ ವಲಯದಲ್ಲಿ ಒಪ್ಪಿಕೊಳ್ಳುವುದಿಲ್ಲವೆಂಬ ತಮ್ಮ ಪ್ರಧಾನ ವಾದವನ್ನೇ ಮುಂದುವರಿಸಿ, ಅಸ್ಪೃಶ್ಯರು ಹಿಂದೂ ಧರ್ಮದ ಅಂಗವೇ ಅಲ್ಲ ಎಂಬುದಾಗಿ ಅಂಬೇಡ್ಕರ್ ವಾದಿಸತೊಡಗಿದರು. ಮೂಲತಃ ಅವರು ಎರಡು ವಾದಗಳನ್ನು ಮುಂದೊಡ್ಡಿದರು. ಅಸ್ಪೃಶ್ಯರು ಹಿಂದೂ ಧರ್ಮದ ಭಾಗವೇ ಆಗಿದ್ದರೆ ಹಿಂದೂಗಳು ಅವರನ್ನು ಆ ರೀತಿ ನಡೆಸಿಕೊಳ್ಳುತ್ತಿರಲಿಲ್ಲ. ಜಾತಿವಾದಿ ಹಿಂದೂಗಳು ಮುಸಲ್ಮಾನರಿಗೆ, ಕ್ರಿಶ್ಚಿಯನ್ನರಿಗೆ, ಅಷ್ಟೇಕೆ ನಾಯಿ ಹಸುಗಳಿಗೆ ಕೂಡ ಹೆಚ್ಚಿನ ಗೌರವವನ್ನು ತೋರಿದ್ದರು. ಅಸ್ಪೃಶ್ಯರು ತಮ್ಮ ಸಹಧರ್ಮಿಗಳಿಂದಲೇ ಈ ರೀತಿಯ ದುರ್ನಡತೆಯನ್ನು ಸಹಿಸುವುದಾದರೂ ಹೇಗೆ? ಅವರ ಎರಡನೆಯ ವಾದವನ್ನು ಎತ್ತಿ ಹಿಡಿಯಲು ಅಂಬೇಡ್ಕರ್ ಚರಿತ್ರೆಯ ಒಳಹೊಕ್ಕು ಆಧಾರ ಕಂಡುಕೊಂಡರು. ನಿಮ್ನ ವರ್ಗದವರು ಬ್ರಾಹ್ಮಣ ಧರ್ಮಕ್ಕೆ ಸೇರಿದವರೇ ಅಲ್ಲ. ಚಾರಿತ್ರಿಕ ಗತಕಾಲದ ವಿವಿಧ ಯುದ್ಧನಿರತ ಶತ್ರು ಗುಂಪುಗಳ ನಡುವೆ ಈ ಅಸ್ಪೃಶ್ಯರ ಮೂಲವನ್ನು ಹುಡುಕಬೇಕಾಗುತ್ತದೆ. ವೇದಧರ್ಮಕ್ಕೆ ಅಂಟಿಕೊಂಡ ಗುಂಪುಗಳು ಕೆಲವು ವರ್ಗಗಳನ್ನು ಒದಿಗೊತ್ತಿ ಕಾಲಕ್ರಮೇಣ ಮೇಲುಗೈ ಸಾಧಿಸಿದವು. ಇನ್ನೂ ಮುಂದುವರಿದು, ಅಸ್ಪೃಶ್ಯತೆಯ ಮೂಲವನ್ನು ಬೌದ್ಧಧರ್ಮ ಮತ್ತು ಬ್ರಾಹ್ಮಣ ಧರ್ಮದ ನಡುವಿನ ಮಹಾಯುದ್ಧದಲ್ಲಿ ಗುರುತಿಸಬಹುದೆಂದು ಅಂಬೇಡ್ಕರ್ ವಾದಿಸಿದರು. ಬ್ರಾಹಣರಿಂದ ಸೋಲಿಗೆ ಗುರಿಯಾದ ಬೌದ್ಧರಿಂದ ಹುಟ್ಟಿ ಬಂದವರು ಶೂದ್ರರು ಎಂದು ಗುರುತಿಸಿದರು. ಇಂತಹ ನಿರ್ದಿಷ್ಟ ಅನನ್ಯತೆಯನ್ನು ಸ್ಥಾಪಿಸಿದ ಕೂಡಲೆ, ತಮ್ಮನ್ನು ತಾವು ನಚ್ಚಿ ಮೇಲೇಳಬೇಕಾದ ಅಗತ್ಯ ಅಸ್ಪೃಶ್ಯರ ಹೆಗಲ ಮೇಲೆ ಬಿತ್ತು. ಆದ್ದರಿಂದಲೇ ಅಂಬೇಡ್ಕರ್, ಅಸ್ಪೃಶ್ಯರು ತಮ್ಮ ಕಾಲ ಮೇಲೆ ತಾವೇ ನಿಲ್ಲುವಂತಾಗಬೇಕು ಮತ್ತು ತಮ್ಮ

ಶೂದ್ರ

ಸ್ವ-ಅಭಿವೃದ್ಧಿಗಾಗಿ ತಮ್ಮನ್ನು ತಾವೇ ನೆಚ್ಚಿ ಹೋರಾಡುವಂತಾಗಬೇಕೆಂದರು. ಅಂತಹ ಬೆಳವಣಿಗೆಯನ್ನು ಸಾಧಿಸಿದಾಗ ಮಾತ್ರ ಅವರು ಜಾತಿವಾದಿಗಳ ಆಕ್ರಮಣವನ್ನು ಎದುರಿಸಿ ನಿಲ್ಲಲು ಸಾಧ್ಯ ಎಂಬುದು ಅಂಬೇಡ್ಕರ್ ವಾದ.

ಸಮಾಜದಲ್ಲಿ ಘನತೆ ಮತ್ತು ಸಮಾನತೆಗಳನ್ನು ಹೊಂದುವುದು ಮತ್ತು ರಾಜಕೀಯ ಅಧಿಕಾರದ ಪಾಲುದಾರರಾಗಲು ಸಂಘಟನೆಗೊಳ್ಳುವುದು, ಅಂಬೇಡ್ಕರರ ಮುಂದಿನ ಯೋಜನೆಯ ಜಂಟಿ ಗುರಿಗಳಾದವು. ಅವೆರಡೂ ಒಂದಕ್ಕೊಂದು ಪೂರಕವಾಗಿದ್ದವು. ಭಾರತದ 1/5 ಭಾಗ ಭಾರತೀಯರನ್ನು ಕಡೆಗಣಿಸಿ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನೊಂದಿಗೆ ಬ್ರಿಟಿಷರು ಯಾವ ಒಪ್ಪಂದವನ್ನೂ ಮಾಡಿಕೊಳ್ಳುವಂತಿಲ್ಲ ಎಂಬುದಾಗಿ ಅವರು ಪಟ್ಟು ಹಿಡಿದರು. ಈ ವರ್ಗವನ್ನು ಪ್ರತಿನಿಧಿಸಲು ಗಾಂಧಿ ಮತ್ತು ಕಾಂಗ್ರೆಸ್‌ಗಿರುವ ಹಕ್ಕನ್ನು ಅವರು ಪ್ರಶ್ನಿಸಿದರು. ಹಾಗಿದ್ದರೂ, ಅಸ್ಪೃಶ್ಯರು ಮತ್ತು ಜಾತಿವಾದಿ ಹಿಂದೂಗಳ ನಡುವಣ ಅಧಿಕಾರ-ಹಂಚಿಕೆಯಲ್ಲಿದ್ದ ಸಮಸ್ಯೆಗಳು ಅವರ ಅರಿವಿಗೆ ಬಂದಿದ್ದವು. ಜಾತಿವಾದಿ ಹಿಂದೂಗಳ ಗುಂಪು ನಿಮ್ನ ವರ್ಗಗಳ ಹಿತಾಸಕ್ತಿಗೆ ವಿರುದ್ಧವಾದ ಒಂದು ಬಲಿಷ್ಠ ಗುಂಪೆಂದು ಗಾಂಧಿಯಂತೆ ಇವರೂ ಗುರುತಿಸಿದರು. ಬಹುಸಂಖ್ಯಾತ ಶಕ್ತಿಯೊಂದಿಗೆ ಹೋರಾಡಬೇಕಾದ ಸಂದರ್ಭದಲ್ಲಿ ಅಲ್ಪಸಂಖ್ಯಾತ ವರ್ಗವೊಂದಕ್ಕಿದ್ದ ಸಮಸ್ಯೆಗಳ ಅರಿವು ಅವರಿಗಿತ್ತು. ತಾತ್ಕಾಲಿಕ ಸೇತುವೆಗಳನ್ನೇರ್ಪಡಿಸಲು ಅವರು ಯತ್ನಿಸಿದರು. ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿಯ ಪ್ರಭಾವ ಮತ್ತು ಅದು ತಂದ ಶೋಷಣೆಯ ಪೂರ್ಣತಿಳಿವಿದ್ದೂ, ಬರಬರುತ್ತ ಬ್ರಿಟಿಷ್ ಅಧಿಕಾರ ಇಲ್ಲವಾಗುತ್ತದೆ, ಆದರೆ ಜಾತಿವಾದಿ ಹಿಂದೂಗಳು ಉಳಿದೇ ಬಿಡುತ್ತಾರೆ ಎಂಬುದು ಅವರ ಆತಂಕವಾಗಿತ್ತು. ಭಾರತದಲ್ಲಿ ನೆಲಸಿದ್ದ ಬ್ರಿಟಿಷರಿಂದ ಅಸ್ಪೃಶ್ಯರ ಸ್ಥಿತಿಗತಿಗಳಲ್ಲಿ ಯಾವುದೇ ರೀತಿಯ ಸುಧಾರಣೆಯಾಗಿದ ಎಂದು ಅವರು ಭಾವಿಸಲಿಲ್ಲ. ಆದರೆ ಬ್ರಿಟಿಷರೊಂದಿಗೆ ಒಂದು ತಾತ್ಕಾಲಿಕ ಮೈತ್ರಿಯೇರ್ಪಡಿಸಿಕೊಂಡು, ನಿಮ್ನ ವರ್ಗಗಳ ಸ್ಥಿತಿಗತಿಗಳನ್ನು ಉತ್ತಮಗೊಳಿಸುವಂಥ ಒಪ್ಪಂದ ಮಾಡಿಕೊಳ್ಳುವುದು ಅವರ ಆಲೋಚನೆಯಾಗಿತ್ತು. ಅಸ್ಪೃಶ್ಯರ ಸ್ಥಿತಿ 'ಅತ್ತ ದರಿ ಇತ್ತ' ಪುಲಿ ಎಂಬಂತೆ ಅವರಿಗೆ ತೋರಿತು. ಮುಸ್ಲಿಂ ಲೀಗ್ ಪ್ರಚುರಪಡಿಸಿದ ಪ್ರತ್ಯೇಕ ಮತದಾರ ಸಮುದಾಯದ ಪರಿಕಲ್ಪನೆಯೇ ರಾಷ್ಟ್ರೀಯತೆ ಮತ್ತು ಪೌರತ್ವದ ಮೂಲ ಭಾವನೆಗೆ ಧಕ್ಕೆ ಉಂಟುಮಾಡುತ್ತದೆ ಎಂಬುದು ಅವರ ಭಾವನೆಯಾಗಿತ್ತು. ಈ ಬಗ್ಗೆ ಸ್ಪಷ್ಟ ತಿಳಿವಳಿಕೆ ಹೊಂದಿದ್ದ ಬ್ರಿಟಿಷರೂ ಕೂಡ ಈ ಅಂಶವನ್ನು ಗುರುತಿಸಿದ್ದರು ಎಂಬುದು ಮಾಂಟ್‌ಫೋರ್ಡ್ ವರದಿಯಿಂದ ಅಂಬೇಡ್ಕರರಿಗೆ ಸ್ಪಷ್ಟವಾಗಿತ್ತು.

ಪ್ರತ್ಯೇಕ ಮತದಾರರ ಗುಂಪಿನ ಆಧಾರದ ಮೇಲೆ ಪ್ರಾತಿನಿಧ್ಯ ಬೇಡುವ

ಶೂದ್ರ

ಬಗ್ಗೆ ಅವರಿಗೆ ಆಕ್ಷೇಪಗಳಿದ್ದರೂ, ದುಂಡು ಮೇಜಿನ ಸಭೆಯಲ್ಲಿ ಅವರು ಅಲ್ಪಸಂಖ್ಯಾತರೊಂದಿಗೆ ಒಂದಾಗಿ, ಅಸ್ಪೃಶ್ಯರಿಗೆ ಪ್ರತ್ಯೇಕ ಮತದಾನದ ಹಕ್ಕನ್ನು ಬೇಡುತ್ತಲೇ ಅಲ್ಪಸಂಖ್ಯಾತರ ಬೇಡಿಕೆಯನ್ನು ಅಂಗೀಕರಿಸಿದರು.7 ಬೌದ್ಧಿಕ ಸಂದಿಗ್ಧತೆಗಳಲ್ಲಿ ಸಿಲುಕಿ ತನ್ನ ಪ್ರೌಢ ವಿಶ್ಲೇಷಣೆಗೆ ಸರಿದೂಗದಂತಹ ಪರ್ಯಾಯಗಳನ್ನು ಆಯ್ಕೆ ಮಾಡಬೇಕಾದ ಒತ್ತಡಕ್ಕೆ ಅವರು ಗುರಿಯಾಗಿದ್ದನ್ನು ಕಾಣಬಹುದಾಗಿದೆ. ಮೇಲ್ನೋಟಕ್ಕೆ ಅವರ ನಿಲುವುಗಳು ಒಂದು ತುದಿಯಿಂದ ಇನ್ನೊಂದು ತುದಿಗೆ ಬದಲಾಗುತ್ತ ಇದ್ದಂತೆ ಕಂಡುಬರುತ್ತಿತ್ತು. ಅಲೆಗೆ ವಿರುದ್ಧವಾಗಿ ಈಜುತ್ತಿದ್ದೇನೆಂದು ಅನಿಸಿದರೂ, ಆಗ ಲಭ್ಯವಿದ್ದ ಸಾಧನಗಳನ್ನೇ ಬಳಸಿಕೊಂಡು ಮುಂದುವರಿಯುವುದು ಅಂಬೇಡ್ಕರ್‌ಗೆ ಅನಿವಾರ್ಯವಾಗಿತ್ತು. ಚಾರಿತ್ರಿಕವಾಗಿ ಲಭ್ಯವಿದ್ದ ಯಾವ ಆಯ್ಕೆಗಳೂ ನಿಮ್ನ ವರ್ಗಗಳ ಬೇಡಿಕೆಗಳನ್ನು ಪೂರೈಸುವ ಅಥವಾ ನೈಜ ಸಂಘಟಿತ ವ್ಯವಸ್ಥೆಯೊಂದಕ್ಕೆ ಬುನಾದಿ ಹಾಕುವ ಸಾಮರ್ಥ್ಯ ಹೊಂದಿಲ್ಲ ಎಂದು ಅವರಿಗೆ ತೋರಿತು.

ಉದಾಹರಣೆಗೆ, ದುಂಡು ಮೇಜಿನ ಪರಿಷತ್ತಿಗೆ ಮುನ್ನ ವಿಧಾನಮಂಡಲದಲ್ಲಿ ನಿಮ್ನ ವರ್ಗಗಳ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ಅವರಿಗೆ ಲಭ್ಯವಿದ್ದ ಸಮಕಾಲೀನ ಆಯ್ಕೆಗಳನ್ನು ಇಲ್ಲಿ ಪ್ರಸ್ತಾಪಿಸಬಹುದು:

1) ನಿಮ್ನ ವರ್ಗಗಳಿಗೆ ಶಾಸಕಾಂಗ ಮತ್ತು ಕಾರ್ಯನಿರ್ವಾಹಕ ಸಂಸ್ಥೆಗಳಲ್ಲಿ ತಮ್ಮ ತಮ್ಮ ಮಟ್ಟಗಳಲ್ಲಿ ಪ್ರಾತಿನಿಧ್ಯ ದೊರಕಿಸಿಕೊಡುವ ಸಲುವಾಗಿ, ಪ್ರಾಂತಗಳಲ್ಲಿ ಗವರ್ನರ್ ಮತ್ತು ಕೇಂದ್ರದಲ್ಲಿ ಗವರ್ನರ್ ಜನರಲ್‌ನಿಂದ ಪ್ರತಿನಿಧಿಗಳ ನಾಮನಿರ್ದೇಶನ.
2) ನಿಮ್ನ ವರ್ಗಗಳಿಗೆ ಪ್ರತ್ಯೇಕ ಮತದಾರ ಸಮುದಾಯ.
3) ನಿಮ್ನ ವರ್ಗಗಳಿಗೆ ಸ್ಥಾನಗಳ ಮೀಸಲಾತಿಯೊಂದಿಗೆ ಜಂಟಿ ಮತದಾರ ಸಮುದಾಯ.

ಮೊದಲ ಪರಿಹಾರ ಅವರಿಗೆ ಒಪ್ಪಿತವಾಗಲಿಲ್ಲ. ನಿಮ್ನ ವರ್ಗಗಳು ತಮ್ಮ ಧ್ವನಿಯೆತ್ತಲು ಅವಕಾಶವಿಲ್ಲದಂತೆ ಮಾಡಿ, ಅವರ ರಾಜಕೀಯ ಶಿಕ್ಷಣ ಮತ್ತು ರಾಜಕೀಯ ಜವಾಬ್ದಾರಿಗಳ ನಿರ್ವಹಣೆಗೆ ಈ ಪರಿಹಾರ ಅಡ್ಡಿಯುಂಟು ಮಾಡುತ್ತದೆ ಎಂದು ಅಂಬೇಡ್ಕರ್‌ಗೆ ತೋರಿತು. ಇದರಿಂದಾಗಿ ಪಿತೃಪ್ರಧಾನ ಸರ್ಕಾರವೊಂದರ ಕರುಣೆಯಲ್ಲಿ ಬಾಳಬೇಕಾದ ಸ್ಥಿತಿಯೇರ್ಪಡುತ್ತಿತ್ತು. ಸರ್ಕಾರದ ನೇಮಿತ ಸದಸ್ಯರಾಗಿ ಮಾರ್ಗದರ್ಶನಕ್ಕಾಗಿ ಸರ್ಕಾರದತ್ತಲೇ ನೋಡುವಂತಹ ಪ್ರತಿನಿಧಿಗಳನ್ನು ಸರ್ಕಾರ ನೇಮಕ ಮಾಡುವ ಸಂಭವವಿತ್ತೇ ವಿನಃ ತಾವು ಪ್ರತಿನಿಧಿಸುತ್ತಿದ್ದ ಜನಗಳ ಹಿತಾಸಕ್ತಿಗಳನ್ನು ಕಾಯುವ ಜನರನ್ನಲ್ಲ. ಎರಡನೆಯ ಪರಿಹಾರವಾದ ಪ್ರತ್ಯೇಕ ಮತದಾರರ ಸಮುದಾಯ, ವಿವಿಧ ವರ್ಗಗಳಿಗೆ ಭೇದಾತ್ಮಕ ನೀತಿ ಪಾಲಿಸುತ್ತ, ರಾಷ್ಟ್ರೀಯತೆ

ಮತ್ತು ಪೌರತ್ವದ ಪರಿಕಲ್ಪನೆಗೆ ಧಕ್ಕೆ ತರುವಂಥದಾಗಿತ್ತು. ಸಮಾನತೆಯೊಂದಿಗೆ ಪ್ರತಿಯ ಸಂಬಂಧ ನೇರವಾಗಿರದೆ ಜಾತಿ ಮತಗಳು ನಡುವೆ ಪ್ರವೇಶ ಮಾಡಲು ಅವಕಾಶ ಕೊಡುವಂತಹುದಾಗಿತ್ತು. ಪ್ರಜಾಪ್ರಭುತ್ವದ ಪ್ರಾಚೀನ ಪರಿಕಲ್ಪನೆಗೆ ಹೋಲಿಸಿದರೆ ನಿಗಮಗಳು ಮತ್ತು ಎಸ್ಟೇಟುಗಳ ಆಧಾರದ ಮೇಲೆ ರಚಿಸಲಾದ ಪ್ರಾತಿನಿಧ್ಯ ಅಂಬೇಡ್ಕರ್‌ಗೆ ಬರಿಯ ಹಿಂಚಲನೆಯಾಗಿ ತೋರಿತು. ನಿಮ್ನ ವರ್ಗಗಳಿಗೆ ವಿಶೇಷ ಪ್ರಾತಿನಿಧ್ಯದೊಂದಿಗೆ ಜಂಟಿ ಮತದಾರ ಸಮುದಾಯದ ವ್ಯವಸ್ಥೆಯೂ ಅವರಿಗೆ ಅತೃಪ್ತಿಕರವೆನಿಸಿತು. ಏಕೆಂದರೆ ಅಲ್ಲಿ ಚುನಾಯಿತರಾಗಲಿದ್ದ ಪ್ರತಿನಿಧಿಗಳು ಬಹುಸಂಖ್ಯಾತ ಜಾತಿವಾದಿ ಹಿಂದೂಗಳನ್ನೇ ಅವಲಂಬಿಸಬೇಕಾಗುತ್ತಿತ್ತು. ಈ ಕಾರಣದಿಂದ ನಿಮ್ನ ವರ್ಗಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಮತ್ತು ನಿರ್ಭಯದಿಂದ ಅವರ ಪರವಾಗಿ ವಾದಿಸುವ ಬದಲು, ಜಾತಿವಾದಿ ಹಿಂದೂಗಳ ಕೃಪಾ ಕಟಾಕ್ಷದಲ್ಲಿರಲು ನಡೆಸುವ ಪ್ರಯತ್ನಗಳೇ ಮುಖ್ಯವಾಗುವ ಸಂಭವ ಹೆಚ್ಚಾಗುತ್ತಿತ್ತು.

ಹೀಗಾಗಿ ನಿಮ್ನ ವರ್ಗಗಳ ಸಲುವಾಗಿ ಸೂಕ್ತ ರಾಜಕೀಯ ಪರ್ಯಾಯವೊಂದನ್ನು ರೂಪಿಸುವಲ್ಲಿ ಅಂಬೇಡ್ಕರ್‌ಗೆ ಹೆಚ್ಚು ಹೆಚ್ಚು ಕೈಕಟ್ಟಿದ ಅನುಭವವಾಯಿತು. ರಾಜಕೀಯ ಅಧಿಕಾರವೇ ನಿಮ್ನ ವರ್ಗಗಳ ವಿಮೋಚನೆಗೆ ಕೀಲಿಕೈ ಎಂಬ ಸ್ಪಷ್ಟ ಅರಿವು ಅವರಿಗೆ ಲಭಿಸಿತ್ತು. ಆದರೆ ಅದನ್ನು ದಕ್ಕಿಸಿಕೊಳ್ಳುವುದು ಹೇಗೆ? ತಾವೂ ಒಬ್ಬ ಮುಖ್ಯ ನೇತಾರರಾಗಿ ರೂಪಿಸಿದ ಪೂನಾ ಒಪ್ಪಂದ, ನಂತರದಲ್ಲಿ ಅವರಿಗೊಂದು ಕಪಟ ತಂತ್ರವಾಗಿ ತೋರಿತು. ವಿಶೇಷ ಮೀಸಲಾತಿಯೊಂದಿಗೆ ಜಂಟಿ ಮತದಾರ ಸಮುದಾಯವನ್ನು ತಳ್ಳಿಹಾಕಿದ ಕಾರಣಗಳಿಗಾಗಿಯೇ ಇದನ್ನೂ ಅವರು ನಿರಾಕರಿಸಿದ್ದರು. ಮುಸ್ಲಿಂ ಲೀಗ್‌ನವರು ನೀಡಲು ತಯಾರಿದ್ದ ಒಂದು ತಾತ್ಕಾಲಿಕ ಉಪಶಮನವೇ ಹೊರತು, ಅದೊಂದು ಶಾಶ್ವತ ಪರಿಹಾರವಾಗುವುದು ಸಾಧ್ಯವಿರಲಿಲ್ಲ. ಈ ಪರಿಸ್ಥಿತಿಯಲ್ಲಿ ಸಿಲುಕಿಕೊಂಡ ಅಂಬೇಡ್ಕರರು ಚಳುವಳಿಯೊಂದನ್ನು ಸಂಘಟಿಸಲು ಯತ್ನಿಸಿದರು.

ದೇಶದಾದ್ಯಂತ ಹರಡಿರುವ ಅಸ್ಪೃಶ್ಯರನ್ನು ಸಂಘಟಿಸಲು ಎಷ್ಟು ಸಾಧ್ಯವೋ ಅಷ್ಟರಮಟ್ಟಿನ ಉದ್ಧಾರಕ್ಕಾಗಿ ಅಂಬೇಡ್ಕರ್ ತಮ್ಮ ಶಕ್ತಿಯನ್ನು ಕೇಂದ್ರೀಕರಿಸಿದರು. ಶಿಕ್ಷಣ ಪಡೆದು ವೈಯಕ್ತಿಕ ಬೆಳವಣಿಗೆ ಸಾಧಿಸುವಂತೆ ಅಸ್ಪೃಶ್ಯರನ್ನು ಪ್ರಚೋದಿಸಿದರು. ನಿಮ್ನ ವರ್ಗಗಳಿಗೆ ಪ್ರತ್ಯೇಕ ಮತದಾನದ ಪರಿಕಲ್ಪನೆಯನ್ನು ತಾತ್ವಿಕವಾಗಿ ಹಿಂದೆ ವಿರೋಧಿಸಿದ್ದರೂ, ಆ ಸಮಯದಲ್ಲಿ ಕೆಲಕಾಲ ಅದನ್ನು ಸಮರ್ಥಿಸಿದರು, ಯಾವ ಕಾಂಗ್ರೆಸ್ಸನ್ನು ತಾವು ಹೀಗಳೆದಿದ್ದರೋ, ನಿಮ್ನ ವರ್ಗಗಳನ್ನು ಪ್ರತಿನಿಧಿಸುವಲ್ಲಿ ಯಾವ ಕಾಂಗ್ರೆಸ್ಸಿನ ಅಧಿಕಾರವನ್ನು ಅವರು ಪ್ರಶ್ನಿಸಿದ್ದರೋ, ಅದೇ ಕಾಂಗ್ರೆಸ್ ಅವರನ್ನು ಸರ್ಕಾರದಲ್ಲಿ ಭಾಗವಹಿಸುವಂತೆ ಆಹ್ವಾನಿಸಿದಾಗ, ಅವರು ಹಿಂತೆಗೆಯಲಿಲ್ಲ.

ಅಸ್ಪೃಶ್ಯರ ಸಮಸ್ಯೆಗೆ ಸಂವಿಧಾನದಲ್ಲಿ ಕಾನೂನಿಕ ಪರ್ಯಾಯವೊಂದನ್ನು ಹುಡುಕ ತೊಡಗಿದರು. ಆದರೆ ಸಾಮಾಜಿಕ ಪರಿವರ್ತನೆ ಉಂಟುಮಾಡುವಲ್ಲಿ ಕಾನೂನಿಕ ಸಂವಿಧಾನಾತ್ಮಕ ದಸ್ತಾವೇಜಿಗಿದ್ದ ಮಿತಿಗಳನ್ನು ಅವರು ಚೆನ್ನಾಗಿ ಬಲ್ಲವರಾಗಿದ್ದರು. ಸಂವಿಧಾನದ ಶಬ್ದಾರ್ಥಕ್ಕೆ ಅಂಟಿಕೊಂಡಿದ್ದಂತೆಯೇ ತಮಗೆ ಅನುಕೂಲರಾಗಿಯೂ, ವಿಧೇಯರಾಗಿಯೂ ಇರುವ ಮಂದಿಯನ್ನು ಮಾತ್ರ ಜಾತಿವಾದಿ ಹಿಂದೂಗಳು ಪ್ರೋತ್ಸಾಹಿಸುತ್ತಾರೆ ಎಂಬ ಅವರ ನಂಬಿಕೆ ಚುನಾವಣಾ ಸಮರಗಳಲ್ಲಿ ತಮಗುಂಟಾದ ಸತತ ಪರಾಭವಗಳಿಂದಾಗಿ ದೃಢವಾಯಿತು. ತಮ್ಮ ಮುಂದಿದ್ದ ಸಮಸ್ಯೆಗೆ ರಾಜಕೀಯ ಪರಿಹಾರವೊಂದು ದೊರೆಯದೆ ಹೋದಾಗ, ಹಿಂದೂಧರ್ಮದ ವಲಯದಾಚೆ ತಮ್ಮನ್ನು ತಾವು ಗುರುತಿಸಿಕೊಳ್ಳಲು ನಿಮ್ನ ವರ್ಗಗಳಿಗೆ ಸಾಧ್ಯವಾಗುವಂತೆ, ಅಂಬೇಡ್ಕರ್ ಸ್ವತಃ ಬೌದ್ಧ ಧರ್ಮವನ್ನು ಸ್ವೀಕರಿಸಿದರು, ತಮ್ಮ ಅನುಯಾಯಿಗಳನ್ನೂ ಪ್ರೇರೇಪಿಸಿದರು. ಈ ಹೆಜ್ಜೆಯೊಂದಿಗೆ ವಿಮೋಚನೆಗಾಗಿ ನಡೆಯುತ್ತಿದ್ದ ಮಹತ್ತರ ಚಳವಳಿಯೊಂದು ತನ್ನ ನೆಲೆಯನ್ನು 'ಬುದ್ಧಂ ಶರಣಂ ಗಚ್ಛಾಮಿ'ಯಲ್ಲಿ, ಧರ್ಮವೊಂದರಲ್ಲಿ ಕಂಡುಕೊಳ್ಳ ತೊಡಗಿತು. ಸಾಮಾಜಿಕ ವೈರುಧ್ಯಗಳಿಗೆ ಸೆಕ್ಯುಲರ್ ಪರಿಹಾರಗಳು ದೊರೆಯದೇ ಹೋದಾಗ, ಧಾರ್ಮಿಕ ಪರಿಹಾರಗಳ ಮೂಲಕ ಅವುಗಳನ್ನು ಹತ್ತಿಕ್ಕುವ ಪ್ರಯತ್ನ ನಡೆಸಲಾಯಿತು.

ತಮ್ಮ ಮುಂದಿದ್ದ ಗುರಿಯನ್ನು ತಲುಪಲು ಅಂಬೇಡ್ಕರರಿಗೆ ಬೇರಾವ ಪರ್ಯಾಯ ಮಾರ್ಗಗಳೂ ಇರಲಿಲ್ಲವೇ ? ಆಗ ಎರಡೇ ಎರಡು ಪರ್ಯಾಯಗಳು ಲಭ್ಯವಿದ್ದವು. ಮೊದಲನೆಯದು, ಜಾತಿವಾದಿ ಹಿಂದೂಗಳ ಒಂದು ಪ್ರವರ್ಗವನ್ನು ಇನ್ನೊಂದು ಪ್ರವರ್ಗದ ವಿರುದ್ಧ ಎತ್ತಿಕಟ್ಟುವ ಮೂಲಕ, ಜಾತ್ಯಾಧಾರಿತ ಗುಂಪುಗಾರಿಕೆಯನ್ನು ಪ್ರಯೋಗಿಸುವ ಯತ್ನ. ಈ ತಂತ್ರವನ್ನು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಯಿತು. ಎರಡನೆಯ ಮಾರ್ಗ, ನಿಮ್ನ ವರ್ಗಗಳ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಪರಿಹರಿಸುವ ಸಲುವಾಗಿ ಭಾರತೀಯ ಆರ್ಥಿಕತಜ್ಞರು ನೀಡಿದ ವಿಶ್ಲೇಷಣೆಯನ್ನು ಆಧಾರವಾಗಿ ಇಟ್ಟುಕೊಂಡಂಥದ್ದು. ಆ ವಾದದ ಸಾರಾಂಶ ಹೀಗಿದೆ. ಅಸ್ಪೃಶ್ಯರ ಸಮಸ್ಯೆಗೆ ಅಂಬೇಡ್ಕರ್ ಜಾತೀಯ ಪರ್ಯಾಯದ ಮೊರೆ ಹೋಗಲಿಲ್ಲ. ಅವರು ಅರಸಿದ ಪರ್ಯಾಯಗಳು ಸುಧಾರಿತ ಮತ್ತು ಪುನರ್‌ರೂಪಿತ ಹಿಂದೂಧರ್ಮದಲ್ಲಿದ್ದವು. ಅದು ಕೈಗೆಟುಕುವುದು ಅಸಾಧ್ಯ ಎಂದು ಅವರಿಗೆ ಮನವರಿಕೆಯಾದಾಗ, ಎಷ್ಟೇ ಅಸ್ಪಷ್ಟವಾಗಿದ್ದರೂ ರಾಜಕೀಯ ಪರ್ಯಾಯವೊಂದನ್ನು ಅರಸಿದರು. ಅವೆರಡೂ ದಕ್ಕದೆ ಹೋದಾಗ, ತಾವು ಪ್ರತಿನಿಧಿಸುತ್ತಿದ್ದ ಮೌಲ್ಯಗಳನ್ನು ಒಳಗೊಂಡಿದೆ ಎನಿಸಿದಂಥ ಧರ್ಮವನ್ನು ಅನುಸರಿಸಿದರು. ಬ್ರಿಟಿಷ್ ಸರ್ಕಾರ ಮತ್ತು ಅಲ್ಪಸಂಖ್ಯಾತರ ನಿಲುವಿನ ಬಗ್ಗೆ ತಾತ್ವಿಕವಾಗಿ ಏನೇ ಆಕ್ಷೇಪಗಳಿ

ದ್ದರೂ ಅವರೊಡನೆ ಸಹಯೋಗಾಯಿದ ಸ್ನೇಹಸಂಬಂಧ ಬೆಳೆಸಲು ಅಂಬೇಡ್ಕರ್ ಅವರಿಗೆ ಸಾಧ್ಯವಾಗಿತ್ತು. ಈ ಸಾಧ್ಯತೆಯನ್ನು ಬೇರೆ ಜಾತಿಯವರೊಡನೆ ಒಂದು ಒಪ್ಪಂದಕ್ಕೆ ಬರುವ ಉಪಾಯಮಾರ್ಗವಾಗಿ ಕಂಡುಕೊಳ್ಳಲು ಅಂಬೇಡ್ಕರ್‌ಗೆ ಅಡ್ಡಿಯೇನೂ ಇರಲಿಲ್ಲ. ಆದರೆ ಹಾಗೆ ಮಾಡದಿರಲು ಕಾರಣ ಅಂಬೇಡ್ಕರ್ [illegible] ನಂಬಿದ್ದ ಉದಾರವಾದಿ ತತ್ವ ಎಂಬ ನೆಪವನ್ನು ನಾವೇನೂ ಒಪ್ಪಬೇಕಾಗಿಲ್ಲ. ಅವರ ಲಿಬರಲ್ ದರ್ಶನ ಬ್ರಿಟಿಷರೊಡನೆ ಯಾವುದೇ ರೀತಿಯಲ್ಲಿ ಸೇರುವುದರ ಅಥವಾ ಪ್ರತ್ಯೇಕ ಮತದಾರ ಸಮೂಹಕ್ಕೆ ಬೇಡಿಕೆ [illegible] ವಿರೋಧವಿದ್ದರೂ, ತಂತ್ರ ರೂಪವಾಗಿ ಇವುಗಳನ್ನು ಕೈಗೊಂಡರು. ಈ [illegible] ಅವರ ಮನಸ್ಸಿಗೆ ಒಪ್ಪಿಸ [illegible] ಕಾರಣಗಳನ್ನು [illegible]. ಮೊದಲನೆಯದಾಗಿ ಅವರು ಎಲ್ಲ ಜಾತಿವಾದಿಗಳನ್ನು ಒಂದೇ ಬುಟ್ಟಿಯಲ್ಲಿರಿಸಿ, ಅವರ ಮತ್ತು ಅಸ್ಪೃಶ್ಯರ ನಡುವೆ ದಾಟಲಾಗದ ಬೇಲಿಯೊಂದನ್ನು ನಿರ್ಮಿಸಿದರು. ಹಿಂದೂಧರ್ಮವನ್ನು ಕುರಿತ ಅವರ ತಾತ್ವಿಕ ಪರಿಕಲ್ಪನೆಯೇ ಅವರ ಆಲೋಚನಾ ವ್ಯಾಪ್ತಿಗೆ ಒಂದು ಮಿತಿಯನ್ನು ನಿರ್ಮಿಸಿತು. ಎರಡನೆಯದಾಗಿ ಜಾತಿ [illegible] ನಿರ್ಮಾಣ, ಒಟ್ಟಾರೆ ವ್ಯವಸ್ಥೆಯೊಳಗೆ ಅಸ್ಪೃಶ್ಯರೊಂದಿಗೆ [illegible] ಮತ್ತು ನ್ಯಾಯಸಮ್ಮತವಲ್ಲದ ಸಂಬಂಧವನ್ನೇ ಸೃಷ್ಟಿಸುತ್ತದೆ. ಒಂದು ವ್ಯವಸ್ಥೆಯಾಗಿ ಅಂಬೇಡ್ಕರ್ ಇದರ ಬಗ್ಗೆ ತೀವ್ರ ವಿರೋಧ ವ್ಯಕ್ತಪಡಿಸಿದರು. ಮೂರನೆಯದಾಗಿ ಜಾತಿಪದ್ಧತಿ ಆ ಸಂದರ್ಭದಲ್ಲಿ ಎದುರಿಸಬೇಕಿದ್ದ ತೀವ್ರ ಕ್ಷೋಭೆಯನ್ನು, ಅದರ ಎಲ್ಲ ಆಳ ವಿಸ್ತಾರಗಳಲ್ಲಿ ಗ್ರಹಿಸಲು ಅಂಬೇಡ್ಕರ್‌ರವರಿಗೆ ಸಾಧ್ಯವಾಗದೆ ಹೋದದ್ದು. ಪರಿಣಾಮಕಾರಿ ಮತ್ತು ತಂತ್ರೋಪಾಯದ ಪಡೆಯೊಂದನ್ನು ನಿರ್ಮಿಸಲೂ ಅಡ್ಡಿಯಾಯಿತು. ಅಸ್ಪೃಶ್ಯರ ನಡುವೆಯೇ ಹಂಚಿಹೋಗಿದ್ದ ವಿವಿಧ ಉಪಜಾತಿಗಳನ್ನು ಒಟ್ಟಿಗೆ ತರುವ ಯತ್ನದಲ್ಲಿ, ಹಲವು ಬಾರಿ ಕೈಗೊಟ್ಟ [illegible] ಪರಿಣಾಮವಾಗಿ ಬಹುಶಃ ಅಂತಹ ಮಾರ್ಗದ ಬಗ್ಗೆಯೇ ಅವರು ನಂಬಿಕೆ ಕಳೆದುಕೊಂಡಿದ್ದರು.

[illegible] ಎತ್ತಿಹಿಡಿದ [illegible] ಬಗ್ಗೆ ಅವರು ಮೂಲಭೂತ [illegible]. ಲಿಬರಲ್ ದರ್ಶನ ಮತ್ತು ಸಂವಿಧಾನವಾದಗಳಲ್ಲಿ ಬೇರೂರಿದ್ದ ಅವರ [illegible]ವಾಗಿ, ಸ್ವಾತಂತ್ರ್ಯ, ಮತ್ತು ವೈಯಕ್ತಿಕ ಆತ್ಮತೃಪ್ತಿ, ಅನ್ಯೋನ್ಯತೆಯ ಸಮಾಜ ವ್ಯವಸ್ಥೆಗೆ ಅತ್ಯಗತ್ಯ ಹಾಗೂ ಅತ್ಯಂತ ವಿಚಾರಶೀಲ ಆಧಾರ ಎಂಬುದು ಅವರ ಕಲ್ಪನೆಯಾಗಿತ್ತು. ಸಮಾಜ ವ್ಯವಸ್ಥೆಯೊಂದರ ರಚನೆ, ಅದನ್ನು ಒಡಿದಿಡುವಂತಹ ನೈತಿಕ ಆಧಾರ ಇಲ್ಲದಿದ್ದ ಸಂದರ್ಭದಲ್ಲಿ ಅತ್ಯಂತ ಶಿಥಿಲಗೊಳ್ಳುತ್ತದೆ ಮತ್ತು ಯುಕ್ತ ಧಾರ್ಮಿಕ ಆಧಾರ ಇಲ್ಲದ ಸಂದರ್ಭದಲ್ಲಿ ನೈತಿಕತೆ

ಅತ್ಯಂತ ಮುಸುಕಾಗಿ ತೋರತೊಡಗುತ್ತದೆ. ಧರ್ಮ ಮಾನವನ ವಿವೇಚನಾ ಶಕ್ತಿಗೆ ಅನುಗುಣವಾಗಿಯೇ ಇರಬೇಕಾಗುತ್ತದೆ. ತಾವು ಯಾವುದನ್ನು ಪವಿತ್ರ ಮತ್ತು ನ್ಯಾಯಸಮ್ಮತ ಎಂದು ಪತ್ತಿಹಿಡಿದಿದ್ದರೋ, ಅವೆಲ್ಲವನ್ನೂ ಕಮ್ಯುನಿಸ್ಟರು ವಿರೋಧಿಸುತ್ತಾರೆ ಎಂಬುದು ಅಂಬೇಡ್ಕರರ ಅನಿಸಿಕೆಯಾಗಿತ್ತು. ಸೋವಿಯತ್ ರಷ್ಯಾದಲ್ಲಿನ ಸಮಾಜವಾದವನ್ನು ತಮ್ಮ ಲಿಬರಲ್ ಪ್ರಜ್ಞೆಗೆ ಯಾವತ್ತೂ ವಿರೋಧವೆನಿಸಿದ ನಿರಂಕುಶಪ್ರಭುತ್ವದೊಂದಿಗೆ ಅಂಬೇಡ್ಕರ್ ಸಮೀಕರಿಸಿದರು. ಭಾರತೀಯ ಕಮ್ಯುನಿಸ್ಟರ ಬಗ್ಗೆ ಅವರಿಗೆ ಮೂರು ರೀತಿಯ ಆಕ್ಷೇಪಣೆಗಳಿದ್ದವು. ಭಾರತೀಯ ಕಮ್ಯುನಿಸ್ಟರ ಆಶಿಸಿಪ್ಪ ಸೋವಿಯತ್ ಒಕ್ಕೂಟದ ಪರವಾಗಿತ್ತು. ಎರಡನೆಯದಾಗಿ ಭಾರತೀಯ ಕಮ್ಯುನಿಸ್ಟರು ತಮ್ಮ ಜಾತೀಯ ಪೂರ್ವಗ್ರಹಗಳನ್ನು ಇನ್ನೂ ತೊಡೆದು ಹಾಕಿಲ್ಲ ಮತ್ತು ವರ್ಗಾಧಾರಿತ ಏಕತೆಗಾಗಿ ಶ್ರಮಿಸುವ ಹೆಸರಿನಲ್ಲಿ, ಜಾತೀಯ ಪೂರ್ವಗ್ರಹಗಳ ವಿರುದ್ಧ ಹೋರಾಡುವುದನ್ನು ಕಡೆಗಣಿಸಿದ್ದಾರೆ ಎಂದು ಅವರು ಭಾವಿಸಿದರು. ಅವರ ಪ್ರಕಾರ, ಇದು ಗಾಂಧೀಜಿಯ ನಿಲುವಿಗಿಂತ ಭಿನ್ನವಾಗಿರಲಿಲ್ಲ. ಬ್ರಿಟಿಷರ ವಿರುದ್ಧ ರಾಷ್ಟ್ರೀಯ ಏಕತೆಗಾಗಿ ಹೋರಾಡುವ ಭರದಲ್ಲಿ, ಅಸ್ಪೃಶ್ಯತೆಯ ವಿರುದ್ಧ ಹೋರಾಡಲು ಯಾವ ಕ್ರಮಂಗಳನ್ನೂ ಕೈಗೊಳ್ಳಲು ಗಾಂಧೀಜಿ ಸಿದ್ಧರಿರಲಿಲ್ಲ. ಜಾತಿವಾದಿ ಹಿಂದೂಗಳ ಮೇಲೆ ನೈತಿಕ ಒತ್ತಾಯ ತರುವ ಕಾರ್ಯಕ್ಕಷ್ಟೇ ತಮ್ಮನ್ನು ಸೀಮಿತಗೊಳಿಸಿಕೊಂಡಿದ್ದರು.8 ಅಷ್ಟೇ ಅಲ್ಲದೆ, ಕಮ್ಯುನಿಸ್ಟ್ ಪಾರ್ಟಿ ಬ್ರಾಹ್ಮಣರ ಹಿಡಿತಕ್ಕೆ ಒಳಗಾಗಿದ್ದು, ಅವರು ಅಸ್ಪೃಶ್ಯರನ್ನು ಸಮಾನರೆಂದು ಪರಿಗಣಿಸುವುದಿಲ್ಲ ಎಂಬ ಅವರ ಭಾವನೆ ದೃಢಗೊಂಡಿತ್ತು. ಮುಂಬಯಿಯ ಕಾರ್ಮಿಕ ಸಂಘಗಳ ಕ್ಷೇತ್ರದಲ್ಲಿ ದಿನದಿಂದ ದಿನಕ್ಕೆ ನಡೆಯುತ್ತಿದ್ದ ಹೋರಾಟಗಳಲ್ಲಿ, ಕಮ್ಯುನಿಸ್ಟ್ ಪಕ್ಷದವರು ಮಹೆರ್ ಜಾತಿಗೆ ಸೇರಿದ ನೌಕರರನ್ನು ಓಲೈಸತೊಡಗಿದ್ದರು.9 ಈ ಕಾರಣಕ್ಕಾಗಿ, ಅವರು ಕಮ್ಯುನಿಸ್ಟ್ ಪಕ್ಷದೊಂದಿಗೂ ಸಂಘರ್ಷಕ್ಕಿಳಿದರು. ನಂತರದ ದಿನಗಳಲ್ಲಿ ಮಾರ್ಕ್ಸ್‌ವಾದಕ್ಕಿಂತ ಮಿಗಿಲಾಗಿ ಬೌದ್ಧ ಧರ್ಮದಲ್ಲಿ ಹೆಚ್ಚು ವ್ಯಾಪಕವಾದ ವಿಮೋಚನೆಯ ಸಂದೇಶ ಅಡಗಿದೆಯೆಂದು ಅವರಿಗೆ ತೋರಿತು.10

ಲಿಬರಲ್ ದರ್ಶನ ಮತ್ತು ಪ್ರಜಾಸತ್ತಾತ್ಮಕ ಹಾಗೂ ಸಂವಿಧಾನಾತ್ಮಕ ಚಳವಳಿಗಳನ್ನು ಗಂಭೀರವಾಗಿ ಅಧ್ಯಯನ ಮಾಡಿದ ರೀತಿಯಲ್ಲಿ ಸಮಾಜವಾದಿ ಚಿಂತನೆಯ ಅಂತರ್ಯವನ್ನು ಶೋಧಿಸುವ ಅಥವಾ ದುಡಿಯುವ ವರ್ಗಗಳ ಚಳವಳಿಗಳನ್ನು ಅಧ್ಯಯನ ಮಾಡಲು ಅಂಬೇಡ್ಕರ್ ಪ್ರಯತ್ನಿಸಿದ ಬಗ್ಗೆ ಯಾವ ಪುರಾವೆಗಳೂ ದೊರೆತಿಲ್ಲ. ಮಾರ್ಕ್ಸ್‌ವಾದದ ವಿರುದ್ಧ ಅವರು ನಡೆಸಿದ ತೀವ್ರ ಟೀಕೆಗಳು ಅವರ ಲಿಬರಲ್ ಪೂರ್ವಗ್ರಹಗಳಲ್ಲಿ ಮತ್ತು ಭಾರತೀಯ ಕಮ್ಯುನಿಸ್ಟರನ್ನು ಅವರು ಗ್ರಹಿಸಿದ

ಶೂದ್ರ

ರೀತಿಯಲ್ಲಿ ಬೇರೂರಿದ್ದವು. ಭಾರತೀಯ ಕಮ್ಯೂನಿಸ್ಟರು ಕೂಡ ತಮ್ಮ ಬಣ್ಣದ ಕನ್ನಡಕದ ಮೂಲಕವೇ ಅಂಬೇಡ್ಕರರನ್ನು ನೋಡುತ್ತಿದ್ದರು. ನಿರ್ದಿಷ್ಟ ಜಾತಿಯೊಂದರ, ಅದರಲ್ಲೂ ಮುಖ್ಯವಾಗಿ ಮಹಾರಾಷ್ಟ್ರದ ಮಹರ್ ಜನಾಂಗದವರ ಹಿತಾಸಕ್ತಿಗಳನ್ನು ಎತ್ತಿ ಹಿಡಿಯುತ್ತಿರುವುದಾಗಿ ಕಮ್ಯೂನಿಸ್ಟರು ಭಾವಿಸಿದರು. ಬ್ರಿಟಿಷರೊಂದಿಗೆ ಸಂಧಾನ ಮಾಡುತ್ತ ಅಂಬೇಡ್ಕರ್ ಸ್ವಾತಂತ್ರ್ಯ ಚಳವಳಿಯನ್ನು ಶಿಥಿಲಗೊಳಿಸುತ್ತಿದ್ದಾರೆ ಎಂದು ಬಹಳಷ್ಟು ಮಂದಿ ಕಾಂಗ್ರೆಸ್ಸಿಗರಂತೆ ಅವರೂ ಭಾವಿಸಿದ್ದರು. ಸ್ವಾತಂತ್ರ್ಯಪೂರ್ವದಲ್ಲಿ ಕಾಂಗ್ರೆಸ್ಸಿನವರೊಡನೆ ಸಹಯೋಗ ಸಾಧಿಸುವ ಅವರ ಬಯಕೆಯಲ್ಲಿ ವ್ಯಕ್ತ ಸಮಯಸಾಧಕವರ್ತನೆಯಲ್ಲದೆ ಬೇರೇನನ್ನೂ ಅವರು ಕಾಣದಾದರು. ಅಂಬೇಡ್ಕರ್ ಮತ್ತು ಕಮ್ಯೂನಿಸ್ಟರ ನಡುವೆ ಯಾವ ಸಂಗಮಸ್ಥಾನಗಳೂ ಇರಲಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಹಾಗಿದ್ದರೂ, ಕಮ್ಯೂನಿಸ್ಟರ ಬಗೆಗಿನ ಅವರ ನಿರ್ಲಕ್ಷ್ಯ ಧೋರಣೆಯ ಹಿಂದೆ ಭಾರತದ ನಿರ್ದಿಷ್ಟ ಅಗತ್ಯಗಳಿಗೆ ಕಮ್ಯೂನಿಸ್ಟರು ಸ್ಪಂದಿಸುತ್ತಿಲ್ಲ ಎಂಬ ಆಳವಾದ ಅರಿವು ಅಡಗಿತ್ತು. ಭಾರತೀಯ ಕಮ್ಯೂನಿಸ್ಟರು ಸೈದ್ಧಾಂತಿಕ ಬಿಗಿಮುಷ್ಟಿಯೊಂದರಲ್ಲಿ ಸಿಲುಕಿದ್ದು, ಆ ಕಾರಣದಿಂದ ಭಾರತಕ್ಕೆ ಮಾತ್ರ ಅನ್ವಯವಾಗುವ ನಿರ್ದಿಷ್ಟ ಸತ್ಯವನ್ನು ಗ್ರಹಿಸಲು ಅವರಿಗೆ ಸಾಧ್ಯವಾಗಲಿಲ್ಲ ಎಂಬುದು ಅಂಬೇಡ್ಕರರ ನಿಲುವಾಗಿತ್ತು. ತಮ್ಮ ತತ್ವಗಳಲ್ಲಿ ಸೆರೆಸಿಕ್ಕ ಜನಸಮುದಾಯದ ಅನುಭವಗಳೊಂದಿಗೆ, ವಿಶೇಷವಾಗಿ ನಿಮ್ನ ವರ್ಗಗಳೊಂದಿಗೆ ಸಂವಹನವೇರ್ಪಡಿಸಲು ಕಮ್ಯೂನಿಸ್ಟರಿಗೆ ಸಾಧ್ಯವಾಗುವುದಿಲ್ಲ. ಅವರ ಕಡೆಯಿಂದ ಅಪಾಯವೇನಾದರೂ ಬರುತ್ತದೆಂದು ಅವರಿಗೆ ಎಂದೂ ಅನಿಸಲಿಲ್ಲ. ಸಾಮಾನ್ಯವಾಗಿ ಅವರು ಭಾರತೀಯ ರಾಜಕೀಯ ರಂಗದ ಅಂಚಿನಲ್ಲೇ ಉಳಿದು ಹೋಗುತ್ತಾರೆ ಎಂಬುದು ಅಂಬೇಡ್ಕರರ ಎಣಿಕೆಯಾಗಿತ್ತು. ಇವೆಲ್ಲಕ್ಕಿಂತ ಹೆಚ್ಚಾಗಿ ತಮಗೆ ಅತ್ಯಂತ ಪ್ರಿಯವಾಗಿದ್ದ ನಿಮ್ನ ವರ್ಗಗಳ ವಿಮೋಚನೆಗೆ ಕಮ್ಯೂನಿಸ್ಟರಿಂದ ಯಾವ ಗಮನಾರ್ಹ ಕೊಡುಗೆಯೂ ಅವರಿಗೆ ಕಾಣಲಿಲ್ಲ. ಎಂದರೆ ಅಂಬೇಡ್ಕರರ ಸಾಮಾಜಿಕ ರೋಗನಿದಾನ ಮೂಲಭೂತವಾಗಿ ಭಾರತೀಯ ಕಮ್ಯೂನಿಸ್ಟರ ನಿರ್ಣಯಕ್ಕಿಂತ ಭಿನ್ನವಾಗಿತ್ತು. ಅಂಬೇಡ್ಕರರ ಈ ಗ್ರಹಿಕೆ ಎಷ್ಟರ ಮಟ್ಟಿಗೆ ಭಾರತೀಯ ಕಮ್ಯೂನಿಸ್ಟರ ಸಿದ್ಧಾಂತ ಮತ್ತು ಆಚರಣೆಗಳೊಂದಿಗೆ ಹೊಂದಿಕೆಯಾಗುತ್ತಿತ್ತು ಎಂಬುದು ನಮ್ಮ ಮುಂದಿರುವ ಪ್ರಶ್ನೆ.

ಭಾರತೀಯ ಕಮ್ಯೂನಿಸ್ಟರ ಆಚರಣೆಗೆ ಮೂಲಾಧಾರವಾದ ಸೈದ್ಧಾಂತಿಕ ಸೂತ್ರಗಳಲ್ಲಿ ಭಾರತದಲ್ಲಿರುವ ಜಾತಿ ಸಂಬಂಧಗಳಿಗೆ ಗಂಭೀರವಾದ ಸ್ಥಾನವೇ ಇರಲಿಲ್ಲ. ಇದರ ಅರ್ಥ, ಪಕ್ಷದ ನಾಯಕರುಗಳು ಮತ್ತು ಚರಿತ್ರೆಯೊಳಕ್ಕೆ ಹೊಕ್ಕು ಶೋಧಿಸಿದರೆ. ಜಾತಿ ಪ್ರಶ್ನೆಗಳ ಸಾಂಸ್ಥಿಕ ಸ್ವರೂಪ ಅವರಿಗೆ ಗೊತ್ತಿಲ್ಲವೆಂದಲ್ಲ. ಆದರೆ ಅಂತಹ

ಪ್ರಶ್ನೆಗಳನ್ನು ಸೈದ್ಧಾಂತಿಕ ಚಿಂತನೆಯ ಮಟ್ಟಕ್ಕೆ ಪ್ರಜ್ಞಾಪೂರ್ವಕವಾಗಿ ತಂದ ಸಂದರ್ಭಗಳು ಮತ್ತು ಆಚರಣೆಯಲ್ಲಿ ಅವುಗಳನ್ನು ಪರಿಹರಿಸಲು ಮಾಡಿದ ಯತ್ನಗಳು ಅಥವಾ ಕೈಗೊಂಡ ಕ್ರಮಗಳು ಅಪರೂಪವೇ ಸರಿ. ವಾಸ್ತವವಾಗಿ, ಜಾತಿಯ ಪ್ರಶ್ನೆಗೆ, ಅದರಲ್ಲೂ ಮುಖ್ಯವಾಗಿ ನಿಮ್ನ ವರ್ಗಗಳ ಪರಿಸ್ಥಿತಿಯ ಬಗ್ಗೆ ಸೈದ್ಧಾಂತಿಕವಾಗಿ ಅಥವಾ ಆಚರಣೆಯಲ್ಲಿ ಯಾವುದೇ ಪರಿಣಾಮಕಾರಿ ಪ್ರತಿಕ್ರಿಯೆ ಬಾರದಿರುವುದು ಪರಸ್ಪರ ಅವಲಂಬಿತ ಪ್ರತಿಕ್ರಿಯೆಗಳಾಗಿದ್ದವು. ಜಾತಿಪ್ರಶ್ನೆಗೆ ಪ್ರತಿಕ್ರಿಯಿಸುವ ಯತ್ನಗಳು ಆಚರಣೆಯಲ್ಲಿ [illegible] ಇಲ್ಲ[illegible]. ಸೈದ್ಧಾಂತಿಕ ಸ್ಪಷ್ಟೀಕರಣದ ಅಗತ್ಯವೇ ಅವರಿಗೆ ಕಾಣಲಿಲ್ಲ [illegible]ಯಲ್ಲಿ. ಸಿದ್ಧಾಂತ ಈ ಪ್ರಶ್ನೆಯನ್ನು ಎತ್ತದಿದ್ದ ಕಾರಣ, ಆಚರಣೆಯಲ್ಲಿ ಅವನ್ನು ಸುಮ್ಮನೆ ಕಡೆಗಣಿಸಲಾಯಿತು. ತಮ್ಮ ಅಚ್ಚುಕಟ್ಟಾದ ಸೈದ್ಧಾಂತಿಕ ಚೌಕಟ್ಟಿನಿಂದ ಹೊರಬಂದು ಅಂತಹ ಎಡವಟ್ಟಿನ ಮತ್ತು ಕಿರಿಕಿರಿಯ ಪ್ರಶ್ನೆಗಳನ್ನು ಎದುರಿಸುವ ಪ್ರಮೇಯ ಅವರಿಗೆ ತಪ್ಪಿದ್ದರೆ, ಬಹುಶಃ ಅವರು ಸಂತೋಷಗೊಳ್ಳುತ್ತಿದ್ದರು. ಜಾತಿಪ್ರಶ್ನೆಯ ಪರಿಹಾರವನ್ನು ಕಮ್ಯುನಿಸ್ಟರು ಯಾವ ಸಮಸ್ಯೆಗೂ ಎಡೆಯಿಲ್ಲದಂತೆ ಚರಿತ್ರೆಯ ವಶಕ್ಕೊಪ್ಪಿಸಿದರು. ಗಾಂಧಿ, ಅಂಬೇಡ್ಕರ್ ಮತ್ತು ಅವರ ಸಮಕಾಲೀನರನ್ನು ಕಾಡುತ್ತಿದ್ದ ಜಾತಿ ಸಮಸ್ಯೆಗೆ, ಅಭಿವೃದ್ಧಿಶೀಲ ಬಂಡವಾಳಶಾಹಿ ಸಂಬಂಧಗಳು ತಂತಾನೇ ಪರಿಹಾರವೊದಗಿಸುತ್ತವೆ ಎಂಬುದು ಕಮ್ಯುನಿಸ್ಟರ ಭಾವನೆಯಾಗಿತ್ತು. ಆದ್ದರಿಂದ ಈ ಪ್ರಶ್ನೆಯನ್ನು ಪರಿಹರಿಸಲು ಯಾವುದೇ ಪ್ರಜ್ಞಾಪೂರ್ವಕ ಯತ್ನವಾಗಲೀ, ಜನಸಮುದಾಯವನ್ನು ಆ ಬಗ್ಗೆ ಸಂಘಟಿಸುವುದಾಗಲೀ ಅಗತ್ಯವಿಲ್ಲ ಎಂದು ಅವರು ಭಾವಿಸಿದರು. ಆಗಿಂದಾಗ್ಗೆ ದೊರೆಯುತ್ತಿದ್ದ ಮಾರ್ಕ್ಸ್‌ನ ಲೇಖನಗಳ ವಿಶ್ಲೇಷಣೆಯ ಮೂಲಕ ಭಾರತೀಯ ಕಮ್ಯುನಿಸ್ಟರು ತಮ್ಮ ಸಮಾಜವನ್ನು ವೀಕ್ಷಿಸುತ್ತಿದ್ದರು.

ಸಾಮ್ರಾಜ್ಯಶಾಹಿ ಮತ್ತು ವಸಾಹತುಶಾಹಿಗಳನ್ನು ಕುರಿತಂತೆ ಲೆನಿನ್‌ನ ವಿಶ್ಲೇಷಣೆ ಮತ್ತು ಕಾಲದಿಂದ ಕಾಲಕ್ಕೆ ಕಾಮಿನ್‌ಟರ್ನ್‌ನ ನಿಲುವು: ಭಾರತದಲ್ಲಿ ವಸಾಹತುಶಾಹಿಯ ಪ್ರವೇಶ ಬ್ರಿಟಿಷ್-ಪೂರ್ವ ಭಾರತದ ಅಡಿಪಾಯವನ್ನೇ ಅಲುಗಾಡಿಸಿ, ಅದನ್ನು ವಿಶ್ವ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಸುಳಿಯ ನಡುವಿಗೆ ಸೆಳೆದಿತ್ತು ಮತ್ತು ಉತ್ಪಾದನೆ ಹಾಗೂ ಸಾಮಾಜಿಕ ಸಂಬಂಧಗಳನ್ನು ಹೊಸ ತಳಹದಿಯ ಮೇಲೆ ರೂಪಿಸಲು ಯತ್ನಿಸಿತ್ತು ಎಂಬುದು ಮಾರ್ಕ್ಸ್‌ನ ವಾದವಾಗಿತ್ತು. ವಸಾಹತುಶಾಹಿ, ಭಾರತವನ್ನು ಹೊಸ ಹೊಸ ರೀತಿಯ ಶೋಷಣೆಗಳಿಗೆ ಗುರಿಪಡಿಸಿದ್ದರೂ, ಅದೇ ಸಮಯದಲ್ಲಿ ತೃಣೀಕೃತ ಗ್ರಾಮೀಣ ಘಟಕಗಳ ಪ್ರತ್ಯೇಕತೆಯನ್ನು ತೊಡೆದು ಹಾಕುವುದರ ಮೂಲಕ, ಒಂದೆಡೆ ಅವುಗಳ ನಡುವೆಯೇ, ಮತ್ತೊಂದೆಡೆ ಜಾಗತಿಕ ಅರ್ಥವ್ಯವಸ್ಥೆಯೊಂದಿಗೆ ಪರಸ್ಪರ ಕ್ರಿಯೆಯನ್ನು ಉಂಟು

ಮಾಡಿತ್ತು. ವಸಾಹತುಶಾಹಿ ತನ್ನ ಅನುಕೂಲಕ್ಕಾಗಿ ಈ ಪ್ರತ್ಯೇಕತೆಯನ್ನು ತೊಡೆದು ಹಾಕಿದ್ದರೂ, ವಸಾಹತುಶಾಹಿ ಆಡಳಿತಕ್ಕೆ ಮಾರಕವಾದ ಅಂಶವೂ ಇದೇ ಆಗಿತ್ತು. "ರೈಲ್ವೆ ವ್ಯವಸ್ಥೆಯಿಂದ ಜನಿಸಿದ ಆಧುನಿಕ ಕೈಗಾರಿಕಾ ವ್ಯವಸ್ಥೆ, ಭಾರತದ ಜಾತಿ ವ್ಯವಸ್ಥೆಯ ಅಡಿಗಲ್ಲಾದ ಅನುವಂಶೀಯ ಶ್ರಮವಿಭಜನೆಯನ್ನು ಇಲ್ಲವಾಗಿಸುತ್ತದೆ" ಎಂಬುದು ಮಾರ್ಕ್ಸ್‌ನ ವಾದವಾಗಿತ್ತು. ಭಾರತದ ಸಹಜ ಬೆಳವಣಿಗೆಯನ್ನು ತಡೆ ಹಿಡಿಯುವುದು ಮಾರ್ಕ್ಸ್‌ನ ಉದ್ದೇಶವಾಗಿರಲಿಲ್ಲ. ಬಂಡವಾಳಶಾಹಿ, ಭಾರತಕ್ಕೆ ಏನು ತಂದುಕೊಡಬಹುದು ಎಂಬುದನ್ನು ಸಕಾರಣವಾಗಿ ಅರ್ಥೈಸುವುದು ಮಾರ್ಕ್ಸ್‌ನ ಯತ್ನವಾಗಿತ್ತು. ಆದ್ದರಿಂದ ಸಾಮಾಜಿಕ ಪರಿವರ್ತನೆಯ ತಂತ್ರಗಳನ್ನು ಈ ವಿಶ್ಲೇಷಣೆಯ ಮೇಲೆ ಆಧರಿಸಲಾಗುತ್ತಿರಲಿಲ್ಲ, ಬದಲಾಗಿ ಬಂಡವಾಳ ತರ್ಕದ ಪರಿಣಾಮಕ್ಕೆ ಒಳಗಾದ ಭಾರತದ ನಿರ್ದಿಷ್ಟ ವಿಶ್ಲೇಷಣೆಯ ಮೇಲೆ ಆಧರಿಸಬಹುದಾಗಿತ್ತು. ಹಾಗಿದ್ದರೂ, ಭಾರತೀಯ ಕಮ್ಯುನಿಸ್ಟರು ತಾರ್ಕಿಕ ಆಧಾರವನ್ನೆ ಚಾರಿತ್ರಿಕ ಆಧಾರವೆಂದು ಪರಿಗಣಿಸಿ ತಮ್ಮ ನಿಲುವನ್ನು ಅದಕ್ಕನುಸಾರವಾಗಿ ರೂಪಿಸಿಕೊಂಡರು.

ಸಾಮ್ರಾಜ್ಯಶಾಹಿ ಮತ್ತು ವಸಾಹತುಶಾಹಿಗಳನ್ನು ಕುರಿತ ಲೆನಿನ್‌ನ ಬರಹಗಳಲ್ಲಿ, ವಸಾಹತುಗಳು ಹೆಚ್ಚಿನ ಮತ್ತು ತೀವ್ರತರವಾದ ಶೋಷಣೆಗೆ ಗುರಿಯಾಗುವುದರ ಜೊತೆಜೊತೆಗೇ ರಾಷ್ಟ್ರೀಯ ವಿಮೋಚನಾ ಚಳವಳಿಗಳನ್ನೂ ತೀವ್ರಗೊಳಿಸುತ್ತವೆ ಎಂಬ ವಾದವನ್ನು ಕಾಣಬಹುದು. ಅಂತಹ ಸಾಮೂಹಿಕ ರಾಷ್ಟ್ರೀಯ ಆಂದೋಲನಗಳನ್ನು ಪ್ರತ್ಯೇಕಿಸಿ ಹತ್ತಿಕ್ಕುವ ಸಲುವಾಗಿ, ಬಂಡವಾಳಶಾಹಿ ತನ್ನ ಸಾಮಾಜಿಕ ತಳಹದಿಯಾಗಿದ್ದ ಊಳಿಗಮಾನ್ಯವ್ಯವಸ್ಥೆಯ ವತಿಯಿಂದ ಹೆಚ್ಚು ಹೆಚ್ಚಿನ ನೆರವನ್ನು ಬಯಸಿತು. ಭಾರತೀಯ ಸಂದರ್ಭದಲ್ಲಿ ಊಳಿಗಮಾನ್ಯ ಪದ್ಧತಿಯ ಸ್ಥಾನವೇನಾಗಿತ್ತು? ಭಾರತೀಯ ಕಮ್ಯುನಿಸ್ಟರು ಆಗ ಅಸ್ತಿತ್ವದಲ್ಲಿದ್ದ ಭೂಮಾಲೀಕ–ರೈತರ ಸಂಬಂಧದಲ್ಲಿ ಮಾತ್ರ ಇದನ್ನು ಗುರುತಿಸಿದರು, ಅದೂ ಈ ಸಂಬಂಧದಲ್ಲಿ ಕೆಲವು ಆಯಾಮಗಳನ್ನು ಮಾತ್ರ ಪ್ರತ್ಯೇಕಿಸುವ ಮೂಲಕ ಗುರುತಿಸಿದರು.11

ರೈತ ಚಳವಳಿಗಳಿಗೆ ಸ್ಪಷ್ಟಧ್ವನಿ ನೀಡುವ ಮತ್ತು ಅವುಗಳ ಮುಂದಾಳತ್ವ ವಹಿಸುವ ಕೆಲಸವನ್ನು ತಮ್ಮ ಕಾರ್ಯಭಾರವೆಂದು ಕಮ್ಯುನಿಸ್ಟರು ಬಗೆದರು. ಲೆನಿನ್ ಊಳಿಗಮಾನ್ಯ ಪದ್ಧತಿಯನ್ನು ಇನ್ನೂ ಹೆಚ್ಚು ವಿಶಾಲವಾದ ಅರ್ಥದಲ್ಲಿ ಬಳಸಿದನು.12 ಜನಸಮೂಹವನ್ನು ಸಾಮೂಹಿಕ ಆಂದೋಲನಗಳಲ್ಲಿ ಭಾಗವಹಿಸದಿರುವಂತೆ ತಡೆಗಟ್ಟುವ, ಜನರನ್ನು ಪ್ರತ್ಯೇಕವಾಗಿ ಉಳಿಸುವ ಎಲ್ಲ ರಚನೆಗಳು ಮತ್ತು ಸಂಬಂಧಗಳು ಊಳಿಗಮಾನ್ಯ ಪದ್ಧತಿಯ ಆಂಶಿಕ ರೂಪ ಎಂದು ಲೆನಿನ್ ಅರ್ಥೈಸಿದನು.13 ಭಾರತದಲ್ಲಿ ಜಾತಿಸಂಬಂಧಗಳು ಮತ್ತು ಜಾತಿ ರಚನೆಗಳು ಸಾಮೂಹಿಕ ಚಳವಳಿಗಳ ಬೆಳವಣಿಗೆಗೆ ಅಡ್ಡಿಯಾಗಿ ಪರಿಣಮಿಸಿದವು ಅಥವಾ ಜಾತಿಗಳನ್ನು ಅವು

ಗಳ ಪರಿಮಿತಿಗಳಲ್ಲಿ ಉಳಿಸಲು ಯತ್ನಿಸಿದವು. ತಮ್ಮ ತಮ್ಮ ಪರಿಮಿತಿಗಳಲ್ಲಿ ಸೆರೆಸಿಕ್ಕಿದ್ದರೂ, ಈ ಅಂಶವನ್ನು ಗುರುತಿಸಿದ ಹಿರಿಮೆ ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರಿಗೂ ಸಲ್ಲುತ್ತದೆ.[14] ಕಮ್ಯುನಿಸ್ಟರಿಗೆ ದುಡಿಯುವ ವರ್ಗ, ರೈತ ಸಮೂಹ ಇತ್ಯಾದಿಗಳು ಅತ್ಯಂತ ಆದರ್ಶೀಕೃತ, ಶಾಸ್ತ್ರಾಧಾರಿತ ಪ್ರವರ್ಗಗಳಾಗಿ ಪರಿಣಮಿಸಿದ್ದರಿಂದ, ವಾಸ್ತವವಾಗಿ ಈ ವರ್ಗಗಳ ರಚನೆಗೆ ಸಂಬಂಧಿಸಿದ ಹಲವಾರು ಮುಖ್ಯ ಅಂಶಗಳನ್ನು ಕೈಬಿಟ್ಟರು. ಭಾರತದ ಅನುಕೂಲಾಗ್ರ ಪರಿವರ್ತನೆಗಾಗಿ ಅವರು ಚಳವಳಿಗಳ ಮುಂಚೂಣಿಯಲ್ಲಿದ್ದರೂ, ಕೆಲವು ಚಳವಳಿಗಳು ಮಾತ್ರ ತಮಗೆ ತಕ್ಕವೆಂದು ಮಾರ್ಕ್ಸಿಸ್ಟರು ಪರಿಗಣಿಸಿದ್ದರು ತಮ್ಮ ಆದರ್ಶೀಕೃತ ಪ್ರವರ್ಗಗಳಿಗೆ ತೀರ ಮಾರ್ಕ್ಸಿಸ್ಟೇತರ ಎಂದು ತೋರಿದ ಇತರ ಚಳವಳಿಗಳಿಂದ ತಮ್ಮನ್ನು ತಾವು ಮಲಿನಗೊಳಿಸಿಕೊಳ್ಳುವುದು ಅವರಿಗೆ ಬೇಕಿರಲಿಲ್ಲ. ತಾವು ಮುನ್ನಡೆಸಿದ ಚಳವಳಿಗಳಲ್ಲೂ ತಾವೇ ಸೃಷ್ಟಿಸಿದ ಆದರ್ಶ ಪ್ರವರ್ಗಗಳಿಂದ ಹುಟ್ಟಿ ಬಂದವರಾಗಿದ್ದರೇ ವಿನಃ ಚಾರಿತ್ರಿಕವಾಗಿ ಅಸ್ತಿತ್ವಕ್ಕೆ ಬಂದಿರುವ ಸಂಬಂಧಗಳ ಸಂಪೂರ್ಣತೆಯನ್ನು ಬಿಂಬಿಸುವ ಪ್ರತಿನಿಧಿಗಳಾಗಿ ಮೂಡಿ ಬರಲಿಲ್ಲ. ಚಾರಿತ್ರಿಕವಾಗಿ ಅಸ್ತಿತ್ವಕ್ಕೆ ಬಂದಿದ್ದ ನಿರ್ದಿಷ್ಟ ಸಮಾಜವೊಂದನ್ನು ಬಿಟ್ಟು, ತಮ್ಮ ಕಲ್ಪನೆಯಲ್ಲಿದ್ದ ಸಮಾಜವೊಂದನ್ನು ತೀವ್ರತರ ಪರಿವರ್ತನೆಗೆ ಗುರಿಪಡಿಸಲು ಯತ್ನಿಸುತ್ತಿದ್ದ ಮಾರ್ಕ್ಸ್‌ವಾದಿಗಳನ್ನು ಕಂಡು ಅಂಬೇಡ್ಕರ್ ನಗುತ್ತಿದ್ದರು. ಇತ್ತ ಕಮ್ಯುನಿಸ್ಟರು, ಜಾತಿಯ ಅನನ್ಯತೆಯನ್ನು ಮೂಲವಾಗಿರಿಸಿಕೊಂಡ ಬಗ್ಗೆ ಮತ್ತು ಹೊಸ ಸಾಮಾಜಿಕ ಶಕ್ತಿಗಳ ಮುನ್ನಡೆಯಿಂದಾಗಿ ಜಾತಿ ವ್ಯವಸ್ಥೆಯಲ್ಲಿ ಉಂಟಾಗಿರುವ ಮಾರ್ಪಾಟುಗಳನ್ನು ಕಾಣದೇ ಹೋದ ಬಗ್ಗೆ ಅಂಬೇಡ್ಕರರನ್ನು ಅಪಹಾಸ್ಯ ಮಾಡುತ್ತಿದ್ದರು.

ಅಡಿಟಿಪ್ಪಣಿಗಳು :

1. ನೋಡಿ : ಗಾಂಧಿಯವರ "Why I am a Hindu ?"
2. ನೋಡಿ 19 ಜನವರಿ 1921ರ 'ಯಂಗ್ ಇಂಡಿಯಾ', ನವಜೀವನ್ ಪ್ರೆಸ್ ಅಹಮದಾಬಾದ್.
3. ವೇದಗಳು, ಉಪನಿಷತ್ತುಗಳು, ಭಗವದ್ಗೀತೆ, ಸ್ಮೃತಿಗಳು ಇತ್ಯಾದಿ ಪವಿತ್ರ ಗ್ರಂಥಗಳು ಅಸ್ಪೃಶ್ಯತೆಗೆ ದೇವರ ಮನ್ನಣೆಯಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತವೆ ಎಂಬುದಾಗಿ ನನಗೆ ಕಂಡುಬಂದರೆ, ಆಗ ಜಗತ್ತಿನಲ್ಲಿರುವ ಯಾವುದೂ ನನ್ನನ್ನು ಹಿಂದೂಧರ್ಮಕ್ಕೆ ಕಟ್ಟಿಹಾಕಲಾರದು. ಕೊಳೆತು ಹೋಗಿರುವ ಸೇಬು ಹಣ್ಣನ್ನು ಎಸೆಯುವಂತೆ, ಅದನ್ನು ಎಸೆದು ಬಿಡುತ್ತೇನೆ. (ಗಾಂಧಿ, ಜನವರಿ 26, 1934ರ ಹರಿಜನ್, ನವಜೀವನ್ ಪ್ರೆಸ್, ಅಹಮದಾಬಾದ್).

4. "ನಿಯಮಗಳು ಮಾನವನ ವಿವೇಚನಾಶಕ್ತಿಗೆ ಹೊಂದುವಂತಿರಬೇಕೆ ಹೊರತು ಮಾನವ ಚೇತನವನ್ನು ಒಳಗಿನಿಂದಲೇ ಹಿಂಡಿ ಹಿಪ್ಪೆ ಮಾಡು ವಂಥದಾಗಿರಬಾರದು. ಅಸ್ಪೃಶ್ಯತೆಯು ಬಗೆಗಿನ ನಿಯಮಗಳು ಮನುಷ್ಯ ಚೇತನದ ಬೆಳವಣಿಗೆಗೆ ಮಾರಕವಾದಂಥವು ಎಂಬುದನ್ನು ನಿದರ್ಶನ ಸಹಿತ ಹಿಂದೆ ತೋರಿಸಲಾಗಿದೆ ಮತ್ತು ಮುಂದೂ ತೋರಿಸಬಹುದು. ಹಿಂದೂ ಧರ್ಮದಲ್ಲಿ ಅತ್ಯುತ್ತಮವಾದ ಹಾಗೂ ಉನ್ನತವಾದ ಎಲ್ಲ ಅಂಶ ಗಳಿಗೂ ಅದು ಸಂಪೂರ್ಣ ವಿರುದ್ಧವಾಗಿದೆ." (ಗಾಂಧಿ, 3ನೇ ಅಕ್ಟೋಬರ್ 1929ರ ಯಂಗ್ ಇಂಡಿಯಾ, ನವಜೀವನ್ ಪ್ರೆಸ್, ಅಹಮದಾಬಾದ್)

ಬೆಳಗಾವಿಯಲ್ಲಿ ಅಸ್ಪೃಶ್ಯರ ಸಭೆಯೊಂದನ್ನುದ್ದೇಶಿಸಿ ಮಾತನಾಡುತ್ತ, "ಇತರ ಜಾತಿಯ ಸದಸ್ಯರಿಗೆ ಅವಕಾಶವಿರುವ ಯಾವುದೇ ದೇವಸ್ಥಾನದಲ್ಲಿ ನಿಮಗೂ ಪ್ರಾರ್ಥಿಸಲು ಅವಕಾಶವಿರಬೇಕು. ಯಾವುದೇ ಭೇದಭಾವ ವಿಲ್ಲದೆ ಇತರ ಜಾತಿಯ ಮಕ್ಕಳೊಂದಿಗೆ, ನಿಮ್ಮ ಮಕ್ಕಳಿಗೂ ಶಾಲೆಯಲ್ಲಿ ಪ್ರವೇಶ ದೊರೆಯುವಂತಾಗಬೇಕು. ವೈಸರಾಯ್‌ನ ಹುದ್ದೆಯೂ ಸೇರಿ ದಂತೆ, ನಿಮಗೆ ದೇಶದ ಅತ್ಯುನ್ನತ ಹುದ್ದೆಗಳಿಗೆ ಅರ್ಹತೆ ಲಭಿಸಬೇಕು" (ಗಾಂಧಿ, 22ನೇ ಜನವರಿ 19ನೆಯ ಯಂಗ್ ಇಂಡಿಯಾ, ನವಜೀವನ್ ಪ್ರೆಸ್, ಅಹಮದಾಬಾದ್)

5. "ಹಿಂದೂಗಳು ಅದಕ್ಕಾಗಿ ಬೆಲೆ ತೆರಲೇಬೇಕು, ತಮ್ಮ ಆತ್ಮ ಶುದ್ಧಿಗೊಳಿಸಿ ಕೊಳ್ಳಬೇಕು, ತುಳಿತಕ್ಕೊಳಗಾಗಿರುವ ತಮ್ಮ ಅಣ್ಣ ತಮ್ಮಂದಿರು, ಅಕ್ಕ ತಂಗಿಯರಿಗೆ ಸಲ್ಲಿಸಬೇಕಾದ ಋಣವನ್ನು ಅವರು ತೀರಿಸಲೇಬೇಕು. ಆ ಕೃತ್ಯಗಳಿಂದುಂಟಾಗಿರುವ ಅವಮಾನ ಅವರದೇ, ಆ ಕರಾಳ ಪಾಪದಿಂದ ಮುಕ್ತಿ ಹೊಂದಿದಾಗ ಆ ಘನತೆಯೂ ಅವರದೇ ಆಗಬೇಕು. (ಗಾಂಧಿ, 1ನೇ ಮೇ 1924ರ ಯಂಗ್ ಇಂಡಿಯಾ, ನವಜೀವನ್ ಪ್ರೆಸ್, ಅಹಮದಾಬಾದ್)

6. ಟಿ. ಆರ್. ಶಾಂಪೈಯವರ Rise & Awakening of Depressed classes in India" ನವದೆಹಲಿ, ನ್ಯಾಷನಲ್ ಪಬ್ಲಿಷಿಂಗ್ ಹೌಸ್, 1979, ಪುಟ 156 ರಿಂದ ಅಂಬೇಡ್ಕರರ ಈ ಮಾತನ್ನು ಉದ್ಧರಿಸಲಾಗಿದೆ.

7. ಇಂಡಿಯಾ ಅಧಿನಿಯಮ 1919ರ ಜಾರಿಗೆ ಮುನ್ನ ತರಲಾದ ಮಾಂಟ್‌ಫೋರ್ಡ್ ವರದಿ ಜಾತಿವಾದಿ ಮತದಾರ ಸಮುದಾಯಕ್ಕೆ ಬಲವಾದ ವಿರೋಧ ವ್ಯಕ್ತಪಡಿಸಿತು. ಜವಾಬ್ದಾರಿಯುತ ಸರ್ಕಾರವೊಂದರ ಅಡಿಪಾಯ "ಸಮಾನ ಹಿತಾಸಕ್ತಿಗಳ ಪರಿಣಾಮಕಾರಿ ಧೋರಣೆ, ವಿವಿಧ ಜಾತಿ, ಧರ್ಮ ಮತ್ತು ಭಾಷೆಗಳ ಜನರನ್ನು ಬೆಸೆಯುವ ಒಂದು ಬಂಧವಾಗಿರಬೇಕು." ಚಾರಿತ್ರಿಕವಾಗಿ ಅದು ಜಾತಿ ಮತ್ತು ಧರ್ಮವನ್ನಾಧರಿಸಿದ ರಾಜಕೀಯ ಸಂಕಲ್ಪದ ವಿರುದ್ಧ ನಿಂತು, ಪ್ರಜೆಗಳ ನೇರ ರಾಷ್ಟ್ರನಿಷ್ಠೆಗೆ ಕರೆಕೊಟ್ಟಿತು. ಸ್ವರಾಜ್ಯದ ಪರಿಕಲ್ಪನೆಯನ್ನು ಬೆಳೆಸಿ, ವಿಶ್ವದಾದ್ಯಂತ ಹರಡಿದ ರಾಷ್ಟ್ರಗಳ ಸ್ವರಾಜ್ಯದ ಚರಿತ್ರೆ ರಾಷ್ಟ್ರ ಯಾವುದೇ ವಿಭಜಿತ ನಿಷ್ಠೆಯನ್ನು ಸ್ವೀಕರಿಸುವ ವಿರುದ್ಧ ನಿರ್ಣಾಯಕ ನಿಲುವು ತಳೆದಿತ್ತು. ತಮ್ಮನ್ನು ತಾವು ಪ್ರಾಥಮಿಕವಾಗಿ ರಾಷ್ಟ್ರಕ್ಕಿಂತ ಇನ್ನಾವುದೇ ಸಣ್ಣ ಘಟಕವೊಂದರ ಪ್ರಜೆಗಳು ಎಂದು ಭಾವಿಸುವ ಪ್ರವೃತ್ತಿಯನ್ನು ಪ್ರಜೆಗಳಲ್ಲಿ ಯಾವುದೇ ರೀತಿಯಲ್ಲಿ ಉತ್ತೇಜಿಸುವ ವಿರುದ್ಧ ಸರ್ಕಾರದ ಧೋರಣೆ ಸ್ಪಷ್ಟವಾಗಿತ್ತು. (ನೋಡಿ ಎ. ಸಿ. ಬ್ಯಾನರ್ಜಿಯವರ Indian Constitutional Documents 1946, ಸಂಪುಟ 2, ಪುಟ 220–225)

8, 1929ರಲ್ಲಿ ಮುಂಬಯಿಯಲ್ಲಿ ನಡೆದ ಮಹಾ ಚಳವಳಿಯಲ್ಲಿ ಎಸ್.ಎ. ಡಾಂಗೆಯವರು ಅಂಬೇಡ್ಕರರ ಸಹಕಾರ ಕೋರಿ ಅವರ ಬಳಿ ಹೋದರು, ಮಿಲ್ಲುಗಳ ನೇಯ್ಗೆಯ ವಿಭಾಗದಲ್ಲಿ, ಅಸ್ಪೃಶ್ಯತೆಯ ಪೂರ್ವಗ್ರಹಗಳಿಂದಾಗಿ ಅಸ್ಪೃಶ್ಯರಿಗೆ ಉದ್ಯೋಗ ನೀಡುತ್ತಿರಲಿಲ್ಲ. ಏಕೆಂದರೆ ಅಲ್ಲಿ ಕೆಲಸಗಾರನೊಬ್ಬನು ಉರುಳೆಯನ್ನು (ಬಾಬಿನ್) ಬಾಯೊಳಕ್ಕೆ ಎಳೆದುಕೊಂಡು ನಂತರ ದಾರ ಹಾಕಬೇಕಿತ್ತು. ಅದರ ವಿರುದ್ಧ ಚಳವಳಿ ಹೂಡಲು ಕಮ್ಯುನಿಸ್ಟರು ತಯಾರಿರುವರೇ ಎಂಬುದಾಗಿ ಡಾಂಗೆಯವರನ್ನು ಅಂಬೇಡ್ಕರ್ ಪ್ರಶ್ನಿಸಿದರು.

9, ನೋಡಿ ಹ್ಯಾರಿಸನ್‌ನ "India: the most Dangerous Decades" ಆಕ್ಸ್‌ಫರ್ಡ್, 1960, ಪುಟ 190–191.

10, ಅಂಬೇಡ್ಕರರ ಪರಿಶಿಷ್ಟ ಜಾತಿಗಳ ಒಕ್ಕೂಟ ರಾಷ್ಟ್ರೀಯ ಮಟ್ಟದಲ್ಲಿ ಸುಸಂಘಟಿತ ಪಕ್ಷವಾಗದಿದ್ದರೂ, ಮಹರ್ ಜನರ ಪೈಕಿ, ಅಂಬೇಡ್ಕರ್ ಸಾಕಷ್ಟು ಸಂಘಟಿತ ಬೆಂಬಲವನ್ನು ಹೊಂದಿದ್ದರು, ಮುಂಬಯಿ ಮತ್ತು

ಶೂದ್ರ

ಸಂಸ್ಥಾನಗಳಲ್ಲಿ ಮೆಂಬರ್ ಕಾರ್ಯಕರನ್ನು ನಿಯಂತ್ರಿಸಲು ಕಮ್ಯುನಿಸ್ಟರು ಮಾಡಿದ ಯತ್ನಗಳನ್ನು ಹತ್ತಿಕ್ಕಲುಬೇಕಾದದ್ದು ಬೆಂಬಲ ಅವರಿಗಿತ್ತು ಎಂದು ಡಾ ಲೆನಿನ್ ವಾದಿಸಿದ್ದಾರೆ. ಪುಟ 191).

11. ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಈ ಲೇಖನಗಳನ್ನು ಮಾರ್ಕ್ಸ್ ಮತ್ತು ಎಂಗೆಲ್ಸ್‌ರ The First Indian War of Independence, 1857-1859. ಪ್ರೋಗ್ರೆಸ್ ಪ್ರಕಾಶಕರು ಮಾಸ್ಕೋ, 1959 ರಲ್ಲಿ ಕಾಣ ಬಹುದು.

12. ಸಾಮ್ರಾಜ್ಯಶಾಹಿ ಮತ್ತು ವಸಾಹತುಶಾಹಿಗಳ ಬಗ್ಗೆ ಲೆನಿನ್‌ನ ಮೂಲ ನಿಲುವುಗಳನ್ನು ಲೆನಿನ್‌ನ ('Imperialism, The Highest Stage of The Development of Capitalism'-'Collected Works· 22ನೇ ಸಂಪುಟ), ಮಾಸ್ಕೋ, ಪ್ರೋಗ್ರೆಸ್ ಪ್ರಕಾಶಕರು 1960–70; ಪುಟ 185–304 ರಲ್ಲಿ ಮತ್ತು Collected Works ಸಂಪುಟ 31 ರಲ್ಲಿ, ದೊರೆಯುವ 'These for the Second Congress of the Communist International'ನಲ್ಲಿ ಮತ್ತು Collected Works ಸಂಪುಟ 31, ಪುಟ 184–201ರ, 'Second Congress of the Communist International'ನಲ್ಲಿ ಕಾಣಬಹುದು,

13. ವಸಾಹತುಶಾಹಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಕಾಮಿನ್‌ಟರ್ನ್‌ನ ನಿಲುವುಗಳನ್ನು The Communist International' (1919-1943) Documents ಜೇನ್ ಡಿಗ್ರಾ (ಸಂ) ಲಂಡನ್, 1956–65 ನಲ್ಲಿ ಕಾಣಬಹುದು.

14. ಮಾರ್ಕ್ಸ್ ಮತ್ತು ಎಂಗೆಲ್ಸ್..... ಪುಟ 33. (ವಿವರ ಮೊದಲಿನದೇ)

— ಅನು : ಸಿ. ಎಸ್. ಸರ್ವಮಂಗಳ

ಮಾನವೀಯ ಸಮಾಜವಾದ: ಅಂಬೇಡ್ಕರ್ ದೃಷ್ಟಿಕೋನ

— ಸಂದೀಪ್ ಶಾಸ್ತ್ರಿ

ರಾಷ್ಟ್ರವನ್ನು ಮುಂತ್ತಿರುವ ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯ ಸಮಸ್ಯೆಗಳ ವಿಶ್ಲೇಷಣೆ ಹಾಗೂ ಸೂಚಿಸಿದ ಪರಿಹಾರಗಳಲ್ಲಿ ಅಂಬೇಡ್ಕರ್ ಅವರು ತೋರಿಸಿರುವ ವಾಸ್ತವವಾದಿ ದೃಷ್ಟಿಕೋನ ಎದ್ದು ಕಾಣುತ್ತದೆ. ಅಂಬೇಡ್ಕರ್ ವಿಚಾರ ಧಾರೆಯಲ್ಲಿ ಸಾಮಾಜಿಕ ನ್ಯಾಯ, ಸಮಾನತೆ ಹಾಗೂ ಮಾನವನ ಘನತೆಗಳಿಗೆ ಇರುವ ಪ್ರಾಮುಖ್ಯತೆಯನ್ನು ಗಮನಿಸಿದರೆ, ಅವರು ಸಮಾಜ ವಾದವನ್ನು ಕುರಿತು ತಳೆದ ನಿಲುವುಗಳು ನಮ್ಮ ಸಂದರ್ಭದಲ್ಲಿ ತೀರಾ ಮುಖ್ಯವಾಗಿವೆ.

ಅಂಬೇಡ್ಕರ್ ವಿಚಾರ ಧಾರೆಯನ್ನು ಆಳವಾಗಿ ಪ್ರಭಾವಿಸಿದ ಶಕ್ತಿಗಳು ಹಾಗೂ ಅಂಶಗಳನ್ನು ಮೊದಲು ಗಮನಿಸಬೇಕು. ಅವರ ಇಡೀ ಬದುಕಿನ ಗುರಿಕಟ್ಟಕಡೆಯ ಮನುಷ್ಯನನ್ನು ಮೇಲೆತ್ತುವುದಾಗಿತ್ತು. ಈ ಹಿನ್ನಲೆಯಲ್ಲಿ ಅವರ ಸಮಾಜವಾದಿ ದೃಷ್ಟಿಕೋನವನ್ನು ಅಭ್ಯಸಿಸಬೇಕು. ಶಾಸನ ಸಭೆಯಲ್ಲಿ ಕೂಡ ತಾವಿಲ್ಲಿಗೆ ಸದಸ್ಯರಾಗಿ ಬಂದದ್ದು ಪರಿಶಿಷ್ಟ ಜಾತಿಗಳ ಹಿತವನ್ನು ಕಾಯುವ ಮುಖ್ಯ ಉದ್ದೇಶದಿಂದ ಎಂದು ಅವರು ಒತ್ತಿ ಹೇಳಿದ್ದರು.

ಅಂಬೇಡ್ಕರ್‌ರವರ ಮೇಲೆ ಪಾಶ್ಚಿಮಾತ್ಯ ತತ್ವಗಳು ಹಾಗೂ ಶಿಕ್ಷಣದ ಪ್ರಭಾವ ಹಾಗೂ ಅವನ್ನು ಭಾರತೀಯ ಸಂದರ್ಭಕ್ಕೆ ಅನ್ವಯಿಸಿಕೊಳ್ಳುವ ಬಗೆ ಇವು ಸ್ಪಷ್ಟವಾಗಿ ಅಂಬೇಡ್ಕರ್‌ರವರ ವಿಶ್ಲೇಷಣೆಗಳಿಗೆ ಕಾಣುತ್ತವೆ.

ಅವರು ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿದ್ದಾಗ ಅವರನ್ನು ಆಳವಾಗಿ ಪ್ರಭಾವಿಸಿದವರು ಅವರ ಗುರುಗಳಾದ ಪ್ರೊ. ಎಡ್ವಿನ್ ಆರ್.ಎ. ಸೆಲಿಗ್ ಮನ್.

ತಮ್ಮ ಸಂಶೋಧನೆಗಳ ವಿಧಾನಗಳನ್ನು ಮಾರ್ಗದರ್ಶಿಸುವಂತೆ ಅಂಬೇಡ್ಕರ್‌ರವರು ಪ್ರೊಫೆಸರನ್ನು ಕೇಳಿದಾಗ ಪ್ರೊ॥ ಸೆಲಿಗ್ ಮನ್‌ರವರು ಅಂಬೇಡ್ಕರ್‌ರವರು ಪ್ರಾಮಾಣಿಕವಾಗಿ ಅಭ್ಯಸಿಸಿ ತಮ್ಮದೇ ಆದ ಅಧ್ಯಯನ ವಿಧಾನವೊಂದನ್ನು ಕಂಡುಕೊಳ್ಳಬೇಕೆಂದು ಸೂಚಿಸಿದರು. ಈ ಬುದ್ಧಿವಾದವೇ ಅಂಬೇಡ್ಕರ್‌ರವರ ಬೌದ್ಧಿಕ

ಕ್ಷೇತ್ರ

ಹೋರಾಟದ ತಳಹದಿಯಾಗುತ್ತದೆ. ಸಮಾಜವಾದದ ವ್ಯಾಪ್ತಿಯನ್ನು ಪರಿಸರದಿಂದ ಬಿಡಿಸಿ ಆರ್ಥಿಕ, ಸಾಂಸ್ಕೃತಿಕ ಸಂಘರ್ಷಗಳನ್ನು ಗಮನದಲ್ಲಿಟ್ಟುಕೊಂಡು ನೋಡಲಾಗಿದೆ. ಸಮಾಜವಾದಿ ಇತಿಹಾಸಕಾರ ಕಾರ್ಲ್ ಲ್ಯಾಂಡುಯೇರ್ ಸಮಾಜವಾದವನ್ನು (ಸಾಮಾಜಿಕ) ಒಡೆತನದ ವ್ಯವಸ್ಥೆಯೆಂದೂ, ಆ ವ್ಯವಸ್ಥೆ ಆದಾಯ, ಸಂಪತ್ತು, ಅವಕಾಶಗಳು ಮತ್ತು ಆರ್ಥಿಕ ಅಧಿಕಾರವನ್ನು ಸಾಧ್ಯವಾದಷ್ಟು ಸಮಾನವಾಗಿ ಹಂಚುವ ಪ್ರಯತ್ನ ಮಾಡುತ್ತದೆ. ಎಂದು ವ್ಯಾಖ್ಯಾನಿಸುತ್ತಾನೆ.

ಯುಟೋಪಿಯನ್ ಸಮಾಜವಾದ, ಮಾರ್ಕ್ಸಿಸ್ಟ್ ಸಮಾಜವಾದ ಗಿಲ್ಡ್ ಸಮಾಜವಾದ, ಫೇಬಿಯನ್ ಸಮಾಜವಾದ ಮತ್ತು ಪ್ರಜಾಪ್ರಭುತ್ವವಾದಿ ಸಮಾಜವಾದ ಇವೇ ಮುಂತಾದ ಬಗೆಗಳು ಸಮಾಜವಾದದ ಹಲವು ಮುಖಗಳನ್ನು ಕುರಿತು ಹೇಳುತ್ತವೆ.

ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಭಾರತಕ್ಕಾಗಿ ರೂಪಿಸಬೇಕೆಂದಿದ್ದ ಸಮಾಜವಾದವನ್ನು ನೋಡಬೇಕು. ಮಾನವೀಯ ಮುಖವುಳ್ಳ ಸಮಾಜವಾದ ಶಕ್ತಿಗಳ ಸಂಶ್ಲೇಷಣೆಯ ಕನಸೂ ಇತ್ತು. ಇಂತಹ ದೃಷ್ಟಿಕೋನ ಮಾತ್ರ ಭಾರತೀಯ ವಾಸ್ತವಕ್ಕೆ ಒಗ್ಗುವ ಸಮಾಜವಾದವನ್ನು ಸೃಷ್ಟಿಸಬಲ್ಲದೆಂದು ಅಂಬೇಡ್ಕರ್ ನಂಬಿದ್ದರು. ಅವರ ಸಮಾಜವಾದದ ನೀಲನಕಾಶೆಯನ್ನು 'ಪರಕೀಯ ಶಕ್ತಿಯನ್ನು ಓಡಿಸಿ ಆರ್ಥಿಕ ಬದಲಾವಣೆಗೆ ಒತ್ತು ಕೊಟ್ಟರೆ, ಶಕ್ತಿಯುತ ಆಡಳಿತ ವ್ಯವಸ್ಥೆಯಿಂದ ಅನಿವಾರ್ಯವಾದ ಸಾಮಾಜಿಕ ಬದಲಾವಣೆಗಳನ್ನು ತರಬಲ್ಲದು' ಎಂಬ ಮಾತಿನಲ್ಲಿ ಕಾಣಬಹುದು.

ಅಂಬೇಡ್ಕರ್‌ರವರು ಅರ್ಥೈಸಿದ ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ಈ ಮೇಲೆ ಹೇಳಿದ ನೋಟಕ್ಕೆ ತಳಹದಿಯನ್ನಾಗಿ ನೋಡಬಹುದು. ಪ್ರಜಾಪ್ರಭುತ್ವ ಪದ್ಧತಿ ಒಂದು ವ್ಯವಸ್ಥೆಯಲ್ಲಿ ಆಳವಾಗಿ ಬೇರೂರಬೇಕೆಂದರೆ ಅದು ಮುಖ್ಯವಾಗಿ ಜನತೆಯ ಮನೋಧರ್ಮದಲ್ಲಿ ವ್ಯಕ್ತವಾಗಬೇಕು. ಇದಕ್ಕಾಗಿ ಮೊದಲು ಪರಸ್ಪರ ಗೌರವ, ಸ್ವಾತಂತ್ರ್ಯ ಹಾಗೂ ಸಮಾನತೆಗಳ ಮೇಲೆ ನಿಂತ ಸಾಮಾಜಿಕ ಸಂಬಂಧಗಳನ್ನು ಹುಟ್ಟು ಹಾಕಬೇಕು. ವ್ಯಕ್ತಿಯ ಘನತೆಯನ್ನು ಎತ್ತಿ ಹಿಡಿಯುವ ಸಮಾಜವನ್ನು ನಿರ್ಮಿಸುವುದು ನಿಜವಾದ ಪ್ರಜಾಪ್ರಭುತ್ವದ ಮೊದಲ ಲಕ್ಷಣ. ಪ್ರಜಾಪ್ರಭುತ್ವದ ಪರಂಪರೆಯನ್ನು ಒಪ್ಪಿಕೊಳ್ಳುವುದಾದರೆ ವರ್ಗ ಹಾಗೂ ಇತರ ಶ್ರೇಣಿಗಳ ಮೇಲೆ ನಿಂತ ಸಮಾಜವನ್ನು ಮೊದಲು ಅದರ ಸರಪಳಿಗಳಿಂದ ಬಿಡಿಸಬೇಕು. ಅಂಬೇಡ್ಕರ್‌ರವರ ಮಾತಿನಲ್ಲಿ ಹೇಳುವುದಾದರೆ, ಪ್ರಜಾಪ್ರಭುತ್ವ ಪದ್ಧತಿ ಯಶಸ್ವಿಯಾಗಲು ಬೇಕಾದ ಮುಖ್ಯ ಅಂಶವೆಂದರೆ ಅಂತಹ ಸಮಾಜದಲ್ಲಿ ಎದ್ದು ಕಾಣುವ ಅಸಮಾನತೆಗಳು ಇರಬಾರದು. ಒಂದು ವರ್ಗ ಎಲ್ಲ ಸವಲತ್ತುಗಳನ್ನು ಇಟ್ಟುಕೊಳ್ಳುವುದು ಮತ್ತು ಇನ್ನೊಂದು ವರ್ಗ ಎಲ್ಲ ಜವಾಬ್ದಾರಿಗಳ ಹೊಣೆಯನ್ನು ಹೊರುವ ವ್ಯವಸ್ಥೆ ಪ್ರಜಾಪ್ರಭುತ್ವಕ್ಕೆ ಮಾರಕ

ಇಂಥ ಸಮಾಜ ರಕ್ತ ಕ್ರಾಂತಿಯ ಬೀಜಗಳನ್ನು ತನ್ನೊಳಗೆ ಅಡಗಿಸಿಕೊಂಡಿರುತ್ತದೆ. ಮತ್ತು ಪ್ರಜಾಪ್ರಭುತ್ವ ಇದನ್ನು ತಡೆಯಲಾರದು.

ಅಂಬೇಡ್ಕರ್‌ರವರ ಪ್ರಕಾರ ಪ್ರಜಾಪ್ರಭುತ್ವವೊಂದು ವ್ಯಕ್ತಿಗಳು ಸಂಪೂರ್ಣ ಅರಳಲು ಸಾಧ್ಯವಾಗುವಂತಹ ವಾತಾವರಣವನ್ನು ನಿರ್ಮಿಸಬೇಕು. ಇದು ಅತ್ಯಂತ ಸೂಕ್ಷ್ಮ ಹಾಗೂ ಸಂಸ್ಕೃತಿವಂತ ಶಕ್ತಿಗಳ ಪರಸ್ಪರ ಕೊಡುಕೊಳ್ಳುವಿಕೆಯಿಂದ ಮಾತ್ರ ಸಾಧ್ಯ. ಸಮಾಜವೊಂದರಲ್ಲಿ ಬೌದ್ಧಿಕ ಹಾಗೂ ಸಾಂಸ್ಕೃತಿಕವಾದ ಉತ್ತಮ ಬದುಕು ಸಾಧ್ಯವಾಗಬೇಕಾದರೆ ವ್ಯಕ್ತಿಗಳು ವಿರಾಮವನ್ನು ಉಳಿಸಿಕೊಂಡಾಗ ಮಾತ್ರ ಸಾಧ್ಯ. ಈ ವಿರಾಮಕಾಲ ದಕ್ಕುವುದು ಪ್ರಜಾಪ್ರಭುತ್ವವೊಂದು ಕೈಗಾರೀಕರಣವನ್ನು ದೊಡ್ಡ ರೀತಿಯಲ್ಲಿ ಅಳವಡಿಸಿಕೊಂಡಾಗ ಮಾತ್ರ. ಕೈಗಾರೀಕರಣ ಮಾನವನ ಅವಶ್ಯಕತೆಗಳಿಗಾಗಿ ಪ್ರತಿವ್ಯಕ್ತಿಯು ದುಡಿಯಬೇಕಾದ ಸಮಯವನ್ನು ಕಡಿಮೆ ಮಾಡುತ್ತದೆ. ಆದ್ದರಿಂದ ಬೌದ್ಧಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆಗಳಿಗೆ ಸಮಯ ಹೆಚ್ಚು ಸಿಕ್ಕುತ್ತದೆ. ಆದರೂ, ಕೈಗಾರೀಕರಣದ ಸವಲತ್ತುಗಳೆಲ್ಲ ವರ್ಗವೊಂದಕ್ಕೆ ಮಾತ್ರ ಮೀಸಲಾಗದಂತೆ ತಡೆಯಲು ಸಾಮಾಜಿಕ ಸಂಬಂಧಗಳಲ್ಲಿ ಆಮೂಲಾಗ್ರ ಬದಲಾವಣೆ ಆಗಬೇಕೆಂದು ಅಂಬೇಡ್ಕರ್ ಎಚ್ಚರಿಸಿದ್ದರು. ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಶಕ್ತಿಗಳ Operational Dynamicsಗೆ ಪ್ರಾಮುಖ್ಯತೆ ಬರುವುದು ಈ ಘಟ್ಟದಲ್ಲೇ.

ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಆಯಾಮಗಳು ಹಾಗೂ ಅವುಗಳ ಒಳ ಸಂಬಂಧಗಳು ಅಂಬೇಡ್ಕರ್‌ರವರ ಪ್ರಜಾಪ್ರಭುತ್ವದ ವಿಶ್ಲೇಷಣೆಯಲ್ಲಿ ಮುಖ್ಯ ಸ್ಥಾನ ಪಡೆದಿದ್ದವು. ಸಾಮಾಜಿಕ, ಆರ್ಥಿಕ ವಿಷಯಕ್ಕೆ ಒತ್ತು ನೀಡಿದಾಗ ಮಾತ್ರ ರಾಜಕೀಯ ಪ್ರಜಾಪ್ರಭುತ್ವ ಅರ್ಥಪೂರ್ಣವಾಗುತ್ತದೆಂದು ಅವರು ನಂಬಿದ್ದರು. ಈ ಮೊದಲೇ ಹೇಳಿದ ಹಾಗೆ ಸಾಮಾಜಿಕ ಸಮಾನತೆಯ ತಳಹದಿಯ ಜೊತೆ ಜೊತೆಗೆ ಆರ್ಥಿಕ ಮುಖಕ್ಕೆ ಒತ್ತು ನೀಡಿದಾಗಲೇ ಸಮಾಜದಲ್ಲಿ ಪ್ರಜಾಪ್ರಭುತ್ವ ಪದ್ಧತಿ ಬೇರೂರಬಲ್ಲದು. ಡೈರೆಕ್ಟೀವ್ ತತ್ವಗಳ ಬಗ್ಗೆ ಮಾತಾಡುತ್ತಾ ಅಂಬೇಡ್ಕರ್‌ರವರು ಪ್ರಜಾಪ್ರಭುತ್ವದಲ್ಲಿ ಆರ್ಥಿಕ ಮುಖಕ್ಕೆ ನೀಡಬೇಕಾದ ಪ್ರಾಮುಖ್ಯತೆಯನ್ನು ಕುರಿತು ಒತ್ತಿ ಹೇಳಿದ್ದರು.

ಸಮಾಜವೊಂದರಲ್ಲಿ ಅಸಮಾನತೆಯನ್ನು ಪೋಷಿಸುವ ಆಸಕ್ತ ಹಿತಗಳ ಬಗೆಗೆ ಕುರುಡಾಗಿ ಹೊಸ ಸಮಾಜವೊಂದನ್ನು ಕಟ್ಟಲು ಹೊರಡುವುದು ಕೇವಲ ಹುಂಬತನವೆಂಬುದು ಅವರ ದೃಢ ನಂಬಿಕೆಯಾಗಿತ್ತು. ಕೇವಲ ಬೆರಳೆಣಿಕೆಯಷ್ಟು ಜನರು ಇಡೀ ಜನ ಸಮೂಹವನ್ನು ಶೋಷಿಸುವ ವ್ಯವಸ್ಥೆಯಲ್ಲಿ ಸಾಮಾಜಿಕ ಕ್ರಾಂತಿ ಅಸಾಧ್ಯವೆಂದೇ ಅವರು ನಂಬಿದ್ದರು, ಧರ್ಮ, ಸಾಮಾಜಿಕ ರಚನೆ ಹಾಗೂ ಆಸ್ತಿ ಈ ಮೂರು

ಕೇಂದ್ರಗಳು ಶೋಷಣೆಯನ್ನು ಮುಂದುವರಿಸುವ ಶಕ್ತಿಗಳಾಗಿರುವುದನ್ನು ಅಂಬೇಡ್ಕರ್ ಗುರುತಿಸಿದ್ದರು. ಶೋಷಣೆಯ ಬೇರುಗಳು ಸಾಮಾಜಿಕ ಹಾಗೂ ಆರ್ಥಿಕ ಅಂಶಗಳಲ್ಲಿ ಹುದುಗಿರುತ್ತವನ್ನು ಅವರು ಮನಗಂಡಿದ್ದರು. ಸಮಾಜವಾದಿಗಳನ್ನು ಕುರಿತು ಮಾತಾಡುತ್ತಾ 'ಸಾಮಾಜಿಕ ಸಂಧಾರಣೆಯನ್ನು ಮೊದಲು ಕೈಗೆತ್ತಿಗೊಳ್ಳದಿದ್ದರೆ ಸಮಾಜವಾದಿ ಕ್ರಾಂತಿ ಸಾಧ್ಯವಿಲ್ಲ ಎಂದು ಅವರು ಹೇಳಿದ್ದರು. ಅಂಬೇಡ್ಕರ್‌ರವರ ಪ್ರಕಾರ ಪ್ರಜಾಪ್ರಭುತ್ವವಾದಿ ಆಡಳಿತದ ಮುಖ್ಯ ಲಕ್ಷಣಗಳೆಂದರೆ ರಾಜಕೀಯ ಸ್ವಾತಂತ್ರ್ಯ, ಸಾಮಾಜಿಕ ವಿಮೋಚನೆ ಮತ್ತು ಆರ್ಥಿಕ ವಿಕೇಂದ್ರೀಕರಣ ಪ್ರಜಾಪ್ರಭುತ್ವ ಎನ್ನುವುದು ಅಧಿಕಾರದ ಹಂಚಿಕೆ. ಆದ್ದರಿಂದ ಆರ್ಥಿಕ ಹಾಗೂ ಸಾಮಾಜಿಕ ಅಸಮಾನತೆಯನ್ನು ತೊಡೆದು ಹಾಕಲು ಅಂಬೇಡ್ಕರ್‌ರವರು ಉತ್ಪಾದನೆಯ ಮೂಲಗಳಿಗೆ (ಭೂಮಿ ಹಾಗೂ ಕೈಗಾರಿಕೆ) ಸಾಮಾಜಿಕ ಸ್ವಾಮ್ಯವಿರಬೇಕೆಂದು ಬಯಸಿದ್ದರು. ಇದು ಅಂಬೇಡ್ಕರ್‌ರವರ ಪ್ರಕಾರ ನಿಜವಾದ ಸಮಾಜವಾದವಾಗಿತ್ತು. ಈ ಸಮಾಜವಾದದಲ್ಲಿ ಎಲ್ಲ ಪ್ರಜೆಗಳಿಗೂ ಸಮಾನ ಮೌಲ್ಯಗಳಿರುತ್ತವೆ. ಈ ತತ್ವವು ಆಚರಣೆಗೆ ಬಂದಾಗ ಅದು ಕೇವಲ ಮೂಲಭೂತ ಹಕ್ಕುಗಳನ್ನಲ್ಲದೆ ಉಳಿದ ಸ್ವಾತಂತ್ರ್ಯಗಳನ್ನೂ ದೊರಕಿಸಿ ಕೊಡುತ್ತದೆ. ಆಗ ಮಾತ್ರ ಭಯ, ಶೋಷಣೆ ಮತ್ತು ಅಭದ್ರತೆಗಳಿಂದ ಮುಕ್ತವಾದ ಸಮಾಜವನ್ನು ಕಟ್ಟಬಹುದೆಂದು ಅಂಬೇಡ್ಕರ್ ನಂಬಿದ್ದರು. ಈ ರೀತಿಯ ಸಮಾನತೆ ಹಾಗೂ ಸ್ವಾತಂತ್ರ್ಯಕ್ಕಾಗಿ ಪ್ರಭುತ್ವ ಸಮಾಜವಾದ (state socialism) ಪದ್ಧತಿಯನ್ನು ಅಂಬೇಡ್ಕರ್ ಬೆಂಬಲಿಸಿದ್ದರು. ಇದಕ್ಕಾಗಿ ಸರ್ವಾಧಿಕಾರವಿಲ್ಲದ ಪ್ರಭುತ್ವ ಸಮಾಜವಾದದ ಜೊತೆಗೆ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಅಗತ್ಯತೆಯನ್ನು ಅಂಬೇಡ್ಕರ್ ಮನಗಂಡಿದ್ದರು. ಈ ಬಗೆಯ ಸಮಾಜವಾದ ಸಂವಿಧಾನದ ತತ್ವವೇ ಆಗಿರತಕ್ಕದ್ದು. ಹಾಗೂ ಅದು ತಿದ್ದುಪಡಿ ಅಥವಾ ಬದಲಾವಣೆಗೆ ಒಳಗಾಗ ಕೂಡದು ಎಂದು ಅಂಬೇಡ್ಕರ್ ಹೇಳಿದ್ದರು. ಇಂಥ ಪದ್ಧತಿ ಮಾತ್ರ ಸರ್ವಾಧಿಕಾರವಿಲ್ಲದ ಸಮಾಜವಾದಿ ಸಮಾಜವನ್ನು ನಿರ್ಮಿಸಬಲ್ಲದೆಂಬುದು ಅವರ ಕನಸಾಗಿತ್ತು.

ಅಂಬೇಡ್ಕರ್ ವಾದದ ಪ್ರಕಾರ ಪ್ರಭುತ್ವ ಸಮಾಜವಾದ ಹಾಗೂ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಇವೆರಡರ ಸಂಶ್ಲೇಷಣೆ ಮಾತ್ರ ಭಾರತದಂತಹ ಸಮಾಜವನ್ನು ಮುನ್ನಡೆಸಬಲ್ಲದು. ಇದು ಮಾತ್ರ ಸಮಾನತೆ ಹಾಗೂ ಸಮಾನತೆಗಳನ್ನು ಸಾಧಿಸುತ್ತಲೇ ಸಮಾಜದ ಶೋಷಕ ಶಕ್ತಿಗಳನ್ನು ಮಟ್ಟಿ ಹಾಕಬಲ್ಲದು. ಜೊತೆಗೆ ಪಾರ್ಲಿಮೆಂಟರಿ ಪ್ರಜಾಪ್ರಭುತ್ವವು ಪ್ರಭುತ್ವ ಸಮಾಜವಾದದ ಸರ್ವಾಧಿಕಾರಿ ಮುಖಗಳನ್ನು ಹದ್ದುಬಸ್ತಿನಲ್ಲಿಡಬಲ್ಲದು.

1947 ರಲ್ಲಿ ಅಂಬೇಡ್ಕರ್‌ರವರು ತಯಾರಿಸಿದ ಮುನ್ನುಡಿಯಲ್ಲಿ ಈ ಬಗೆಯ

ಸಮಾಜವಾದ ನೀತಿ ನಾಂದಿಯಾಗಿತ್ತು. ಇದು ಭಾರತ ಸಂವಿಧಾನದ ಮೊದಲ ಕರಡೂ ಆಗಿತ್ತು. ಮುಂದೆ 'ಪ್ರಭುತ್ವ ಹಾಗೂ ಅಲ್ಪಸಂಖ್ಯಾತರು' ಎಂಬ ಪುಸ್ತಕದಲ್ಲಿ ಈ ವಿಚಾರಗಳು ಪ್ರಕಟವಾದವು. ಪುಸ್ತಕದ ಮುನ್ನುಡಿಯಲ್ಲಿ 'ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಅಸಮಾನತೆಗಳನ್ನು ತೊಡೆದು ಹಾಕಿ, ತುಳಿಯಲ್ಪಟ್ಟ ವರ್ಗಗಳಿಗೆ ಹೊಸ ಅವಕಾಶಗಳನ್ನು ತೆರೆಯಲು ಹೋರಾಡಿಸಲಾದ ಪ್ರಣಾಳಿಕೆ' ಎಂದು ಸೂಚಿಸಲಾಗಿತ್ತು. ಕೈಗಾರೀಕರಣದ ಕ್ಷಿಪ್ರ ಬೆಳವಣಿಗೆಗಾಗಿ ಪ್ರಭುತ್ವ ಸಮಾಜವಾದ ಅತ್ಯಗತ್ಯವೆಂದು ಅಂಬೇಡ್ಕರ್ ವಾದಿಸಿದ್ದರು. ಖಾಸಗಿ ಕ್ಷೇತ್ರಗಳಿಗೆ ಈ ಜವಾಬ್ದಾರಿಯನ್ನು ವಹಿಸುವುದೆಂದರೆ ಅಸಮಾನತೆ ಮತ್ತು ಸಂಪತ್ತಿನ ಕೇಂದ್ರೀಕರಣವನ್ನು ಮುಂದುವರಿಸುವುದೆಂದೇ ಅರ್ಥ. ಅಭಿವೃದ್ಧಿ ಶೀಲ ರಾಷ್ಟ್ರ ಪ್ರೇರದಲ್ಲಿ ತೊಡಗಿಸಬೇಕಾದ ಬಂಡವಾಳದ ಸ್ವರೂಪ ಹಾಗೂ ಅದು ತರಬೇಕಾದ ಆರ್ಥಿಕ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡರೆ ಖಾಸಗಿ ಕ್ಷೇತ್ರ ಅಂತಹ ಗುರಿ ಸಾಧಿಸಲು ಅಸಮರ್ಥವಾಗಿದೆ ಎಂಬುದು ಅವರ ನಿಲುವಾಗಿತ್ತು.

ಕೈಗಾರೀಕರಣದ ನಿಟ್ಟಿನಲ್ಲಿ ಅಂಬೇಡ್ಕರ್‌ರವರ ನಿಲುವುಗಳು ಹೀಗಿದ್ದವು:

1. ಮುಖ್ಯ ಕೈಗಾರಿಕೆಗಳನ್ನು ಪ್ರಭುತ್ವವೇ ನಡೆಸಬೇಕು.
2. ಮುಖ್ಯವಲ್ಲದಿದ್ದರೂ ಮೂಲಭೂತ ಎಂದು ಪರಿಗಣಿಸಲಾದ ಕೈಗಾರಿಕೆಗಳನ್ನು ಪ್ರಭುತ್ವ ತಾನೇ ವಹಿಸಿಕೊಂಡು ನಡೆಸಬೇಕು.
3. ಮುಖ್ಯ ಹಾಗೂ ಮೂಲಭೂತ ಕೈಗಾರಿಕೆಗಳನ್ನು ಖಾಸಗಿ ವ್ಯಕ್ತಿಗಳು ವಹಿಸಿಕೊಂಡಿದ್ದರೆ ಪ್ರಭುತ್ವ ವಶಪಡಿಸಿಕೊಂಡು ಸೂಕ್ತವಾದ ಪರಿಹಾರ ಧನವನ್ನು ಕೊಡಬೇಕು.
4. ವಿಮಾ ಯೋಜನೆಯನ್ನು ಪ್ರಭುತ್ವವೇ ವಹಿಸಿಕೊಳ್ಳಬೇಕು. ಪ್ರತಿ ವಯಸ್ಕನೂ ಅವನ ಸಂಬಳಕ್ಕನುಸಾರವಾಗಿ ವಿಮಾ ಯೋಜನೆಯನ್ನು ಪಾಲಿಸುವಂತೆ ಪ್ರಭುತ್ವ ನಿರ್ವಹಿಸಬೇಕು.
5. ಅಷ್ಟು ಪ್ರಾಮುಖ್ಯವಿಲ್ಲದ ಕೈಗಾರಿಕಾ ವಿಭಾಗಗಳನ್ನು ಖಾಸಗಿ ಕ್ಷೇತ್ರಗಳಿಗೆ ವಹಿಸಿಕೊಡಬೇಕು.
6. ಮಿಶ್ರ ಆರ್ಥಿಕ ನೀತಿಯನ್ನು ಪ್ರೋತ್ಸಾಹಿಸಬೇಕು.
7. ನೌಕರರ ಹಿತಗಳನ್ನು, ನೌಕರರ ಕ್ಷೇಮ ಯೋಜನಾ ಕಾನೂನು ಹಾಗೂ ಯೋಜನಾ ಕಾನೂನು ಹಾಗೂ ಅಗತ್ಯವಿದ್ದಾಗ ಪ್ರಭುತ್ವದ ಸಂಧಾನದ ಮೂಲಕ ರಕ್ಷಿಸಬೇಕು.

ಶೂದ್ರ

ಕೈಗಾರೀಕರಣವೇ ಆರ್ಥಿಕ ಉನ್ನತಿಯ ಮೊದಲ ಹೆಜ್ಜೆಯೆಂದು ಹಾಗೂ ಈ ಆರ್ಥಿಕ ಪ್ರಗತಿ ಅಂತರ ರಾಷ್ಟ್ರೀಯ ಮಾನ್ಯತೆಯ ರಹದಾರಿ ಎಂಬುದು ಅಂಬೇಡ್ಕರ್‌ರವರ ನಿಲುವು. ಅಂತರ ರಾಷ್ಟ್ರೀಯ ಸ್ಪರ್ಧೆಯಲ್ಲಿ ಗೆಲ್ಲಬಲ್ಲ ದಕ್ಷತೆ, ಉತ್ಪಾದನೆಯ ಗುಣವಂತ್ಕ, ಉತ್ಪಾದನೆಯ ಮೊತ್ತ ಇವು ತ್ವರಿತವಾದ ಆರ್ಥಿಕ ಪ್ರಗತಿಯನ್ನು ತರುತ್ತವೆ ಎಂದಿದ್ದ ಅಂಬೇಡ್ಕರ್‌ರವರ ನಿಲುವು ಅತ್ಯಂತ ವಾಸ್ತವವಾದದ್ದಾಗಿತ್ತು.

ಒಂದೆಡೆ ಕೃಷಿಯಲ್ಲಿ ಕ್ರಾಂತಿಕಾರಕ ಪ್ರಗತಿಯನ್ನು ತರುವುದು, ಇನ್ನೊಂದೆಡೆ ಕೃಷಿರಂಗದಲ್ಲಿನ ಶೋಷಣೆಯನ್ನು ತಪ್ಪಿಸುವುದು ಇವೆರಡೂ ಅಂಬೇಡ್ಕರ್‌ರವರ ಕಾಳಜಿಗಳಾಗಿದ್ದವು. ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಸ್ಥಾಪನೆಯಿಂದ ಕೆಳವರ್ಗಗಳ ಸ್ಥಿತಿ ಸುಧಾರಿಸಬಲ್ಲದೆಂಬ ನಂಬಿಕೆ ಅವರದು. ಕೃಷಿ ಕುರಿತು ಮಾತಾಡುವಾಗಲೂ ಅವರದು ಸಮಾಜವಾದಿ ದೃಷ್ಟಿಕೋನವಾಗಿತ್ತು. "ಪ್ರಭುತ್ವ ಮತ್ತು ಅಲ್ಪಸಂಖ್ಯಾತರು" ಎಂಬ ಪುಸ್ತಕದಲ್ಲಿ ಕೃಷಿ ಕುರಿತು ಅವರ ರೂಪುರೇಷೆಗಳು ಹೀಗಿದ್ದವು:

1. ಕೃಷಿಯು ಪ್ರಭುತ್ವದ ಅಧೀನದಲ್ಲಿರತಕ್ಕದ್ದು.
2. ಖಾಸಗಿ ವ್ಯಕ್ತಿಗಳ ವಶದಲ್ಲಿರುವ (ಜಮೀನುದಾರ, ಗೇಣಿದಾರ ಅಥವಾ ಗುತ್ತಿಗೆದಾರ) ಕೃಷಿ ಭೂಮಿಯನ್ನು ಪ್ರಭುತ್ವ ವಶಪಡಿಸಿಕೊಂಡು ಪರಿಹಾರ ಧನ ನೀಡಬೇಕು.
3. ಕೃಷಿಯನ್ನು ಈ ಕೆಳಗಿನ ತತ್ವಗಳ ಆಧಾರದ ಮೇಲೆ ಸಂಘಟಿಸಬೇಕು.

ಎ) ವಶಪಡಿಸಿಕೊಳ್ಳಲಾದ ಭೂಮಿಯನ್ನು ಸೂಕ್ತವಾಗಿ ಭಾಗಮಾಡಿ ಆಯಾ ಗ್ರಾಮವಾಸಿಗಳಿಗೆ ಉಳಲು ನೀಡಬೇಕು. ಆಗ ಈ ಕೆಳಗಿನ ನಿಬಂಧನೆಗಳಿರಬೇಕು.

ಅ) ಒಂದು ಸಾಮೂಹಿಕ ಪದ್ಧತಿಯಲ್ಲಿ ಕೃಷಿ ನಡೆಯಬೇಕು.

ಆ) ಕೃಷಿಯು ಸರ್ಕಾರದ ಕಾನೂನು ಹಾಗೂ ನಿರ್ದೇಶನಗಳ ಪ್ರಕಾರವಾಗಿರಬೇಕು.

ಇ) ಗೇಣಿದಾರರು ತಾವು ಉತ್ತ ನೆಲದ ಉತ್ಪಾದನೆಯನ್ನು ಲೆವಿ ಕೊಟ್ಟ ನಂತರ ಒಂದು ನಿಗದಿ ಮಾದರಿಯಲ್ಲಿ ಬೆಳೆಯನ್ನು ಹಂಚಿಕೊಳ್ಳಬೇಕು.

ಬಿ) ಕೃಷಿ ಭೂಮಿಯನ್ನು ಗ್ರಾಮಸ್ಥರಿಗೆ ನೀಡುವಾಗ ಜಾತಿ ಅಥವಾ ವರ್ಣಗಳ ಭೇದ ಇರಕೂಡದು. ಅಲ್ಲಿ ಜಮೀನುದಾರ ಅಥವಾ ಗೇಣಿದಾರ ಅಥವಾ ಕೂಲಿಕಾರ ಇರುವುದಿಲ್ಲ.

ಸಿ) ವ್ಯವಸಾಯಕ್ಕೆ ನೀರು, ಗೊಬ್ಬರ ಮುಂತಾದವುಗಳನ್ನು ಒದಗಿಸುವುದು ಪ್ರಭುತ್ವದ ಜವಾಬ್ದಾರಿ.

ಡಿ) ಪ್ರಭುತ್ವವು ಈ ಕೆಳ ಕಂಡ ಕಾರಣಗಳಿಗಾಗಿ ಲೆವಿ ಸಂಗ್ರಹಿಸಬಹುದು– ಕಂದಾಯ, ಒದಗಿಸಲಾದ ಸಹಾಯಕ್ಕಾಗಿ ಒಂದು ಭಾಗ ಮತ್ತು ಮಾಜಿ ಮಾಲೀಕನ ಪರಿಹಾರ ಧನಕ್ಕಾಗಿ ಒಂದು ಭಾಗ.

ಒಂದು ವೇಳೆ ಸಾಮೂಹಿಕ ಕೃಷಿಯಲ್ಲಿ ಉದ್ದೇಶ ಪೂರಿತ ನಿರ್ಲಕ್ಷ್ಯ ಅಥವಾ ನಿಬಂಧನೆಗಳ ಉಲ್ಲಂಘನೆ ಕಂಡುಬಂದಲ್ಲಿ ಪ್ರಭುತ್ವವು ದಂಡವನ್ನು ವಿಧಿಸಬಹುದು.

ಕೃಷಿ ಕುರಿತಂತೆ ಅಂಬೇಡ್ಕರ್ ವಿಚಾರಗಳು ಕೃಷಿರಂಗದಲ್ಲಿ ಪ್ರಭುತ್ವವು ವಹಿಸಬೇಕಾದ ಮುಖ್ಯ ಪಾತ್ರವನ್ನು ಕುರಿತು ಹೇಳುತ್ತವೆ. ಭೂರಹಿತ ರೈತರ ಶೋಷಣೆ ಹಾಗೂ ಜಮೀನ್ದಾರಿ ಪದ್ಧತಿಯ ಕಪಿಮುಷ್ಟಿಯನ್ನು ಕೊನೆಗಾಣಿಸಲು ಕೃಷಿಯನ್ನು ಸರ್ಕಾರಿ ಉದ್ಯಮವಾಗಿ ಪರಿಗಣಿಸಬೇಕೆಂಬುದು ಅಂಬೇಡ್ಕರ್‌ರವರ ನಿಲುವಾಗಿತ್ತು.

ಅಂಬೇಡ್ಕರ್‌ರವರ ದೃಷ್ಟಿಯಲ್ಲಿ ರಾಜಕೀಯ ಪ್ರಜಾಪ್ರಭುತ್ವ ಹಾಗೂ ಸಮಾನತೆಗಳು ಆರ್ಥಿಕ–ಸಾಮಾಜಿಕ ಪ್ರಜಾಪ್ರಭುತ್ವ ಮತ್ತು ಸಮಾನತೆಗಳ ತಳಹದಿಯ ಮೇಲೆ ನಿಂತಿರುತ್ತವೆ. ಆದರೂ ವಾಸ್ತವದಲ್ಲಿ ಇದು ಮೊದಲು ಹೊಸ ಪ್ರಜಾಪ್ರಭುತ್ವವಾದಿ ರಾಜಕೀಯ ಸಂರಚನೆಯನ್ನು ಮೊದಲು ಸೃಷ್ಟಿಸುವುದು; ಆ ನಂತರ ಸಾಮಾಜಿಕ–ಆರ್ಥಿಕ ಸುಧಾರಣೆಗಳನ್ನು ತರುವ ಪ್ರಯತ್ನ ಇದಾಗಿತ್ತು.

ಹೊಸ ಸಂವಿಧಾನ ಹಾಗೂ ಗಣರಾಜ್ಯದ ಜೊತೆ ಜೊತೆಗೆ ಭಾರತ ಹೊಸ ವಿರೋಧಾಭಾಸಗಳ ಮಜಲನ್ನೂ ಪ್ರವೇಶಿಸುತ್ತಿದೆ, ಎಂದು ಅಂಬೇಡ್ಕರ್ ಮೊದಲೇ ಎಚ್ಚರಿಸಿದ್ದರು. ಕೇವಲ ರಾಜಕೀಯ ಸಮಾನತೆಯನ್ನು ಘೋಷಿಸಿ, ಸಾಮಾಜಿಕ–ಆರ್ಥಿಕ ಅಸಮಾನತೆಯನ್ನು ಪೋಷಿಸುವುದೆಂದರೆ ರಾಜಕೀಯ ಪ್ರಜಾಪ್ರಭುತ್ವವನ್ನು ಬಲಿಗೊಟ್ಟಂತೆಯೇ ಎಂಬುದು ಅವರ ನಿಲುವು. ಮುಂಬರಲಿರುವ ರಾಜಕೀಯ ವ್ಯವಸ್ಥೆಯು ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವದ ಕನಸು ನನಸಾಗುವಂತೆ ಶ್ರಮಿಸುವುದೇ ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಎಂದು ಅಂಬೇಡ್ಕರ್ ಬರೆದರು.

ಅಂಬೇಡ್ಕರ್‌ವಾದದ ಪ್ರಕಾರ ನ್ಯಾಯಯುತ ಸಾಮಾಜಿಕ–ಆರ್ಥಿಕ ವ್ಯವಸ್ಥೆಯನ್ನು ಸೃಷ್ಟಿಸುವುದರಲ್ಲಿ ಪ್ರಭುತ್ವದ ಪಾತ್ರ ಮಹತ್ವದ್ದು. ಆದ್ದರಿಂದಲೇ ಮುಖ್ಯ ಕೈಗಾರಿಕೆಗಳು ಹಾಗೂ ಕೃಷಿ ಸರ್ಕಾರದ ಸ್ವಾಮ್ಯದಲ್ಲಿರಬೇಕೆಂದು ಅವರು ಹೇಳಿದ್ದರು. ಸರ್ವಾಧಿಕಾರಿ ಶಕ್ತಿಗಳ ಹುಟ್ಟನ್ನು ತಡೆಯಲು ಪಾರ್ಲಿಮೆಂಟರಿ ಪದ್ಧತಿಯನ್ನು ಪ್ರತಿಪಾದಿಸಿದ ಅಂಬೇಡ್ಕರ್, ಸಂವಿಧಾನವು ಸಮಾಜವಾದಿ ಸಮಾಜವನ್ನು ನಿರ್ಮಿಸಬೇಕೆಂಬ ಕನಸು ಕಂಡಿದ್ದರು.

ಶೂದ್ರ

ಭಾರತದ ಐಕ್ಯತೆ, ಶೋಷಿತರ ಹಿತಾಸಕ್ತಿ ಮತ್ತು ಆರ್ಥಿಕ–ಸಾಮಾಜಿಕ ಸಮಾನತೆಗಳನ್ನು ಗಮನದಲ್ಲಿಟ್ಟುಕೊಂಡು ಅಂಬೇಡ್ಕರ್‌ರವರು ಸಂಭದ್ರ ಕೇಂದ್ರ ಪ್ರಭುತ್ವವೊಂದು ಇರಬೇಕೆಂದು ಪ್ರತಿಪಾದಿಸಿದ್ದರು. 1935ರ ಕಾಯ್ದೆಗನುಗುಣವಾಗಿ ಭಾರತ ಸರ್ಕಾರ ಸೃಷ್ಟಿಸಿದ ಕೇಂದ್ರಕ್ಕಿಂತ ಬಲಿಷ್ಟವಾದ ಐಕ್ಯ ಕೇಂದ್ರವನ್ನು ಸೃಷ್ಟಿಸಬೇಕೆಂದು ಅವರು ಹೇಳಿದ್ದರು. ಭಾರತೀಯ ಪ್ರಜಾಪ್ರಭುತ್ವದಲ್ಲಿ ಗ್ರಾಮೀಣ ಸಮುದಾಯಗಳ ಪಾತ್ರವನ್ನು ಅವರು ಉಗ್ರವಾಗಿ ವಿಮರ್ಶಿಸಿದ್ದರು. 'ಗ್ರಾಮವೆಂದರೆ ಸ್ಥಳೀಯವಾದ, ದಡ್ಡತನ, ಸಂಕುಚಿತ ಬುದ್ಧಿ ಹಾಗೂ ಕೋಮುವಾದದ ತೊಟ್ಟಿ' ಎಂದು ಟೀಕಿಸಿದ ಅಂಬೇಡ್ಕರ್ ಗ್ರಾಮ ಸಮುದಾಯಗಳಿಗೆ ರಾಜಕೀಯ ಅಧಿಕಾರ ಕೊಡುವುದು ದೇಶವನ್ನು ಹಾಳು ಮಾಡಬಲ್ಲದು ಎಂದಿದ್ದರು.

ಆದರೂ ನಾಲ್ಕು ದಶಕಗಳ ಪಾರ್ಲಿಮೆಂಟರಿ ಪ್ರಜಾ ಪ್ರಭುತ್ವ, ಕೇಂದ್ರೀಕೃತ ಪ್ರಭುತ್ವ ಅಥವಾ ಸರ್ಕಾರಿ ಹಸ್ತಕ್ಷೇಪಗಳು ಆಸಕ್ತ ಹಿತಗಳ ಹಾಗೂ ಮೇಲು ಜಾತಿಗಳ ಸ್ವಾಮ್ಯವನ್ನು ತಪ್ಪಿಸಲಾಗಿಲ್ಲ. ಅಂಬೇಡ್ಕರ್ ಕಂಡ ಆರ್ಥಿಕ ಸಾಮಾಜಿಕ ಸಮಾನತೆ ಹಾಗೂ ಸ್ವಾತಂತ್ರ್ಯದ ಕನಸು ಇನ್ನೂ ಕನಸಾಗಿಯೇ ಉಳಿದಿದೆ. ಅನ್ಯಾಯದ ಅಡಿಗಲ್ಲಿನ ಮೇಲೆ ನಿಂತ ಸಾಮಾಜಿಕ ವ್ಯವಸ್ಥೆ ಹಾಗೂ ಆರ್ಥಿಕ ಅಸಮಾನತೆಗಳು ದೇಶದ ಜನಕೋಟಿಯನ್ನು ಈವರೆಗೆ ಹಿಡಿದಿರುವುದನ್ನು ಕಣ್ಣು ಕುಕ್ಕುವ ಕಟು ವಾಸ್ತವವೇ ಪ್ರತಿಬಿಂಬಿಸುತ್ತಿವೆ.

ಕನ್ನಡಕ್ಕೆ: ನಟರಾಜ್ ಹುಳಿಯಾರ್

ಡಾ॥ ಅಂಬೇಡ್ಕರ್ ಮತ್ತು
ಅಸ್ಪೃಶ್ಯರ ರಾಜಕೀಯ ಸಂಘಟನೆ :-

— ಡಾ॥ ಜಿ. ಎಸ್. ಸದಾನಂದ್

ಸಾಮಾನ್ಯವಾಗಿ ಡಾ॥ ಅಂಬೇಡ್ಕರ್‌ರವರನ್ನು ರಾಷ್ಟ್ರೀಯ ನಾಯಕ ಎಂಬುದಕ್ಕಿಂತಲೂ ಹೆಚ್ಚಾಗಿ ದಲಿತರ ನಾಯಕ ಎಂದೇ ಗುರುತಿಸಲಾಗುತ್ತದೆ. ಕಡೆಯಪಕ್ಷ ಇದು ಸಾಮಾನ್ಯವಾಗಿ ಬೇರೂರಿರುವ ಅಭಿಪ್ರಾಯವಾಗಿದೆ. ಜಾತಿ, ಪ್ರದೇಶ ಮತ್ತು ಧರ್ಮಗಳ ಎಲ್ಲೆಗಳನ್ನು ಮೀರಿ, ಭಾರತೀಯ ಜನತೆಯನ್ನು ರಾಷ್ಟ್ರೀಯ ಚಳವಳಿಯ ಉದ್ದೇಶಕ್ಕಾಗಿ ಸಂಘಟಿಸಬಲ್ಲವರಾಗಿದ್ದ ಇತರ ರಾಷ್ಟ್ರೀಯ ಚಳವಳಿಯ ಉದ್ದೇಶಕ್ಕಾಗಿ ಸಂಘಟಿಸಬಲ್ಲವರಾಗಿದ್ದ ಇತರ ರಾಷ್ಟ್ರೀಯ ನಾಯಕರೊಂದಿಗೆ, ವಿಶೇಷವಾಗಿ ಗಾಂಧಿ ಮತ್ತು ನೆಹರೂರೊಂದಿಗೆ ಅಂಬೇಡ್ಕರರನ್ನು ಹೋಲಿಸಲಾಗುತ್ತದೆ. ಈ ರಾಷ್ಟ್ರೀಯ ನಾಯಕರು ಜನರನ್ನು ಸಂಘಟಿಸಬಲ್ಲವರಾಗಿದ್ದರು ಎಂಬುದು ನಿಜವಾದರೂ, ದಲಿತವರ್ಗದ ಹಿತಾಸಕ್ತಿಯನ್ನು ಎತ್ತಿ ಹಿಡಿಯುವಲ್ಲಿ ಡಾ॥ ಅಂಬೇಡ್ಕರ್ ಅಷ್ಟೇನೂ ಪ್ರಮುಖವಲ್ಲದ ಪಾತ್ರ ವಹಿಸಿದರು- ಒಮ್ಮೊಮ್ಮೆ ಗಾಂಧಿಯ ನಾಯಕತ್ವದ ರಾಷ್ಟ್ರೀಯ ಚಳವಳಿಯ ಹಾದಿಯಲ್ಲಿ ಹೆಬ್ಬಂಡೆಯಾಗಿ ಪರಿಣಮಿಸಿದರು ಎಂಬ ಮಾತಿನ ಹಿಂದಿರುವ ಸೂಚನೆ ಮುಖ್ಯವಾದುದು. ಅಂಬೇಡ್ಕರ್ ಅಸ್ಪೃಶ್ಯರ ಅಗ್ರ ನಾಯಕರಾಗಿದ್ದಂತೆಯೇ, ಅಷ್ಟೇ ಮುಖ್ಯವಾದ ರಾಷ್ಟ್ರೀಯ ನಾಯಕರೂ ಆಗಿದ್ದರು. ಅವರ ಮಟ್ಟಿಗೆ ಅವೆರಡರ ನಡುವೆ ಯಾವ ವೈರುಧ್ಯವೂ ಇರಲಿಲ್ಲ. ಪೂನಾ ಒಪ್ಪಂದಕ್ಕೆ ಮುನ್ನ ನಡೆದ ಪೂರ್ವಭಾವಿ ಚರ್ಚೆಯ ಸಮಯದಲ್ಲಿ ಗಾಂಧಿಯವರು ಗುರುತಿಸಿದಂತೆ ಏನಾದರೂ ವೈರುಧ್ಯವಿದ್ದಲ್ಲಿ, ರಾಷ್ಟ್ರೀಯ ನಾಯಕತ್ವದಿಂದ ಹಿಂತೆಗೆಯುವ ನಿಲುವು ಅಂಬೇಡ್ಕರ್ ಅವರದಾಗಿತ್ತು. ಹೆಚ್ಚಿನ ಮಂದಿ ಅಂಬೇಡ್ಕರರನ್ನು ತಪ್ಪು ತಿಳಿದಿರುವುದು ಈ ಸಂಬಂಧದಲ್ಲಿಯೇ. ಸ್ವಾತಂತ್ರ್ಯವೆಂದರೆ ಅಂಬೇಡ್ಕರರಿಗೆ ಜನತೆಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯವೆಂದರೆ ಅಂಬೇಡ್ಕರರಿಗೆ ಜನತೆಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಗಳೆಲ್ಲವೂ ಕೂಡಿದುದಾಗಿತ್ತು.

ಇಲ್ಲಿ ಜನತೆಯೆಂದರೆ, ಶ್ರೇಣೀಕೃತ ಸಮಾಜವೊಂದರಲ್ಲಿ ಎಲ್ಲ ರೀತಿಯ ಅನ್ಯಾಯಗಳಿಗೂ ಒಳಗಾಗಿರುವ ನಿರ್ದಿಷ್ಟ ಜನಸಮುದಾಯವೇ ಆಗಿರುತ್ತದೆ. ಎಂದರೆ ಭಾರತೀಯ ಸಂದರ್ಭದಲ್ಲಿ ಅಸ್ಪೃಶ್ಯರು. ಅಸ್ಪೃಶ್ಯರ ವಿಮೋಚನೆಯ ಕಾರ್ಯಭಾರವನ್ನು ತಮ್ಮ ಜೀವನದ ಧ್ಯೇಯವನ್ನಾಗಿ ಆಯ್ದುಕೊಂಡವರು ಅಂಬೇಡ್ಕರ್. ಹಲವಾರು ಒತ್ತಡಗಳ ಮಧ್ಯೆ ಕಾರ್ಯನಿರ್ವಹಿಸಬೇಕಿದ್ದ ಸಂದರ್ಭದಲ್ಲೇ, ಈ ಧ್ಯೇಯವನ್ನು ಅವರು ಅನುಸರಿಸಬೇಕಿತ್ತು. ಇವುಗಳ ಪೈಕಿ ಅತಿ ಮುಖ್ಯವಾದ ಒತ್ತಡ ರಾಷ್ಟ್ರೀಯ ಚಳವಳಿಯದೇ ಆಗಿತ್ತು. ರಾಷ್ಟ್ರೀಯ ಸ್ವಾತಂತ್ರ್ಯದ ಉದ್ದೇಶದೊಂದಿಗೆ ಯಾವುದೇ ಬಗೆಯ ರಾಜಿ ಮಾಡಿಕೊಳ್ಳದೆ, ನಿಮ್ನ ವರ್ಗಗಳ ಉದ್ಧಾರಕ್ಕಾಗಿ ಹೋರಾಡಬೇಕಾದ ಒತ್ತಡ ಅವರಿಗಿತ್ತು. ತಾತ್ವಿಕವಾಗಿ ಮತ್ತು ಸಂಘಟನಾತ್ಮಕ ನೆಲೆಯಲ್ಲಿ ಅವರ ನಾಯಕತ್ವವನ್ನು ಅರ್ಥಮಾಡಿಕೊಂಡು ಒಪ್ಪಿಕೊಳ್ಳುವಷ್ಟು ಸಿದ್ಧತೆಯಿಲ್ಲದಿದ್ದ ಮಂದಿಯ ಸಲುವಾಗಿ ಅವರು ಹೋರಾಡಬೇಕಿತ್ತು.[1] ಅವರ ಮೇಲಿದ್ದ ಮತ್ತೊಂದು ನಿರ್ಬಂಧ ಅವರದೇ ಆದ ತಾತ್ವಿಕ ಬದ್ಧತೆಗೆ ಸಂಬಂಧಿಸಿದ್ದಾಗಿತ್ತು, ಉದಾರವಾದೀ ವಿಚಾರಗಳ ಪ್ರಭಾವ ಅವರನ್ನು ಸಂಪೂರ್ಣವಾಗಿ ಹಿಡಿದಿಟ್ಟಿತ್ತು. ಅಸ್ಪೃಶ್ಯರ ಸ್ವಾತಂತ್ರ್ಯ ಮತ್ತು ಸಮಾನತೆಯ ಸಾಧನೆಗೆ ಸಂಸದೀಯ ಪ್ರಜಾಸತ್ತೆಯ ರಾಜಕೀಯ ಮಾಧ್ಯಮದಲ್ಲಿ ಸಂಪೂರ್ಣ ನಂಬಿಕೆಯನ್ನಿಟ್ಟಿದ್ದರು, ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯ ಹುಟ್ಟು ಮತ್ತು ಬೆಳವಣಿಗೆಗಳ ವಿಶ್ಲೇಷಣೆಯನ್ನು ಈ ಉದಾರವಾದಿ ಚೌಕಟ್ಟಿನಲ್ಲೇ ಅಂಬೇಡ್ಕರ್ ಕೈಗೊಂಡರು.

ಪ್ರಾಚೀನ ಭಾರತದಲ್ಲಿ ಉಂಟಾದ ಜಾತಿಪದ್ಧತಿಯ ಉಗಮವನ್ನು ಶೋಧಿಸಲು ಅಂಬೇಡ್ಕರ್ ಸಾಹಿತ್ಯಕ, ಧಾರ್ಮಿಕ ಮೂಲಗಳ ಮೊರೆಹೋಗುತ್ತಾರೆ. ಮಾನವ ಶಾಸ್ತ್ರ ವಿಚಾರಸಂಕಿರಣವೊಂದರಲ್ಲಿ ಮಂಡಿಸಲಾದ ಅವರ ಪ್ರಬಂಧ ಜಾತಿಪದ್ಧತಿಯನ್ನು ಕುರಿತ ಅವರ ಮೊದಲ ಬರಹವಾಗಿತ್ತು. "ಭಾರತದಲ್ಲಿ ಜಾತಿಗಳು – ಅವುಗಳ ಸಂರಚನೆ, ರಚನಾಕ್ರಮ ಮತ್ತು ಬೆಳವಣಿಗೆ"[2] ಎಂಬುದು ವಿಷಯ. ಶೂದ್ರರು ಮತ್ತು ಅಸ್ಪೃಶ್ಯರ ಬಗ್ಗೆಯೂ ಅವರು ಎರಡು ಪುಸ್ತಕಗಳನ್ನು ಬರೆದರು.[3] ಈ ಕೃತಿಗಳಲ್ಲದೆ, 1936ರಲ್ಲಿ ಲಾಹೋರಿನಲ್ಲಿ ಜಟ್-ಪಟ್ ತೋಡಕ್ ಮಂಡಳಿಯ ನಡೆದ ವಾರ್ಷಿಕ ಅಧಿವೇಶನದಲ್ಲಿ undelivered ಭಾಷಣವನ್ನು 'Annihilation of Caste, with a Reply to Mahatma Gandhi' ಎಂಬ ಶೀರ್ಷಿಕೆ ಹೊತ್ತ ಕಿರುಹೊತ್ತಿಗೆಯ ರೂಪದಲ್ಲಿ ಪ್ರಕಟಿಸಿದ್ದಾರೆ. ಈ ಎಲ್ಲ ಕೃತಿಗಳಲ್ಲೂ, ಜಾತಿ ಮತ್ತು ಅಸ್ಪೃಶ್ಯತೆ ಶೂದ್ರರ ಮೇಲೆ ಎಸಗಲಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಭೇದಗಳ ಸರಮಾಲೆಯೆಂದು ಅರ್ಥೈಸಲಾಗಿದೆ. ನಿಸ್ಸಂದೇಹವಾಗಿ ಆರ್ಥಿಕ ಹಾನಿ ಮತ್ತು

ಶೋಷಣೆಗಳು ಅವರ ಹೀನಸ್ಥಿತಿಯನ್ನು ಇನ್ನೂ ಹದಗೆಡಿಸಿವೆ. ಆದರೆ ಆರ್ಥಿಕ ಅಸಮಾನತೆಯು ಕಾರಣ ಸಾಮಾಜಿಕ ಭೇದವೇ ಎಂಬ ಅಂಬೇಡ್ಕರ್ ಗುರುತಿಸುತ್ತಾರೆ. ಅಸ್ಪೃಶ್ಯತೆಯ ಮೂಲವನ್ನು ಶೋಧಿಸಲು ಅವರು ಹಿಂದೂ ಧಾರ್ಮಿಕ ಶಾಸ್ತ್ರಗ್ರಂಥಗಳ ಮೊರೆ ಹೋಗುತ್ತಾರೆ. ಅಂತೆಯೇ, ಮನುಸ್ಮೃತಿಯಲ್ಲಿ ಅಸ್ಪೃಶ್ಯತೆಯ ಆಚರಣೆಯ ಬಗ್ಗೆ ಯಾವುದೇ ಉಲ್ಲೇಖವಿಲ್ಲದ ಕಾರಣ, ಮನುವಿನ ಕಾಲದವರೆಗೆ ಅಸ್ಪೃಶ್ಯತೆಯ ಪಾಪಕರ ಆಚರಣೆ ಜಾರಿಯಲ್ಲಿದ್ದಿರಲು ಸಾಧ್ಯವೇ ಇಲ್ಲ ಎಂದು ವಾದಿಸುತ್ತಾರೆ. ಅಂತಹ ಆಚರಣೆಯ ಬಗ್ಗೆ ನಮಗೆ ದೊರೆಯುವ ಮೊದಲ ಉಲ್ಲೇಖಗಳು ಕ್ರಿ.ಶ. 200 ರಿಂದ ಕ್ರಿ.ಶ. 600ರ ಅವಧಿಯ ಚೀನೀ ದಾಖಲೆಗಳಲ್ಲಿ. ಆದ್ದರಿಂದ ಅಸ್ಪೃಶ್ಯತೆಯ ಉಗಮವನ್ನು ಕ್ರಿ.ಶ. 200 ರಿಂದ ಕ್ರಿ.ಶ. 600 ವರೆಗಿನ ಅವಧಿಯಲ್ಲಿ ಗುರುತಿಸಬಹುದೆಂಬ ಅಭಿಪ್ರಾಯವನ್ನು ಅಂಬೇಡ್ಕರ್ ತಳೆಯುತ್ತಾರೆ.[4] ಅಸ್ಪೃಶ್ಯರನ್ನು ಕುರಿತಂತೆ ಅಂಬೇಡ್ಕರರ ಸಿದ್ಧಾಂತವನ್ನು ''untouchables, who are they ?'' ಎಂಬ ಕೃತಿಗೆ ಬರೆದಿರುವ ಪ್ರಸ್ತಾವನೆಯಲ್ಲಿ ಕಾಣಬಹುದು. ಅದು ಈ ಮುಂದಿನಂತಿದೆ:

1. ಹಿಂದೂಗಳು ಮತ್ತು ಅಸ್ಪೃಶ್ಯರ ನಡುವೆ ಯಾವ ಜನಾಂಗೀಯ ವ್ಯತ್ಯಾಸವೂ ಇಲ್ಲ.
2. ಅಸ್ಪೃಶ್ಯತೆಯ ಆಚರಣೆ ಜಾರಿಗೆ ಬರುವ ಮುನ್ನ ಹಿಂದೂಗಳು ಮತ್ತು ಅಸ್ಪೃಶ್ಯರ ನಡುವೆ ಇದ್ದ ವ್ಯತ್ಯಾಸ ಮೂಲ ನೆಲಸುನಾಡಿಗರು ಮತ್ತು ಪರಕೀಯರ ನಡುವಿನ ವ್ಯತ್ಯಾಸ ಮಾತ್ರವೇ ಆಗಿತ್ತು.
3. ಅಸ್ಪೃಶ್ಯತೆ ಜನಾಂಗವನ್ನಾಗಲೀ, ವೃತ್ತಿಯನ್ನಾಗಲೀ ಆಧರಿಸಿಲ್ಲ.
4. ಅಸ್ಪೃಶ್ಯತೆಯ ಉಗಮಕ್ಕೆ ಎರಡು ಕಾರಣಗಳಿವೆ.
   ಎ) ಬೌದ್ಧರು ಮತ್ತು ಅಸ್ಪೃಶ್ಯರು ಬ್ರಾಹ್ಮಣರ ದ್ವೇಷ ಮತ್ತು ಅಸಡ್ಡೆಗೆ ಗುರಿಯಾಗಿದ್ದರು.
   ಬಿ) ಇತರರು ನಿಲ್ಲಿಸಿದ ಮೇಲೂ ಗೋಮಾಂಸವನ್ನು ತಿನ್ನುವ ಅಭ್ಯಾಸವನ್ನು ಅಸ್ಪೃಶ್ಯರು ಮುಂದುವರಿಸಿಕೊಂಡು ಬಂದರು.[5]

ಶೂದ್ರರನ್ನು ಕುರಿತಂತೆ ಡಾ॥ ಅಂಬೇಡ್ಕರರು ಪ್ರತಿಪಾದಿಸಿದ ಸಿದ್ಧಾಂತವನ್ನು ಈ ಮುಂದಿನಂತೆ ಕ್ರೋಢೀಕರಿಸಬಹುದು:

1. ಶೂದ್ರ ಜನಾಂಗವು ಆರ್ಯ ಜನಾಂಗಗಳ ಪೈಕಿ ಒಂದಾಗಿತ್ತು.
2. ಹಿಂದೂ-ಆರ್ಯ ಸಮಾಜದಲ್ಲಿ ಶೂದ್ರರನ್ನು ಕ್ಷತ್ರಿಯ ವರ್ಣದವರೆಂದು ಪರಿಗಣಿಸಲಾಗಿತ್ತು.

3. ಹಿಂದೂ ಆರ್ಯ ಸಮಾಜ ಮೂರೇ ವರ್ಣಗಳನ್ನು ಗುರುತಿಸುತ್ತಿದ್ದ ಕಾಲ ವೊಂದಿತ್ತು. ಶೂದ್ರರು ಒಂದು ಪ್ರತ್ಯೇಕ ವರ್ಣಕ್ಕೆ ಸೇರದೆ ಕ್ಷತ್ರಿಯ, ವೈಶ್ಯ ವರ್ಣಗಳ ಭಾಗವಾಗಿದ್ದರು.

4. ಶೂದ್ರ ರಾಜರು ಮತ್ತು ಬ್ರಾಹ್ಮಣರ ನಡುವೆ ನಿರಂತರ ತಿಕ್ಕಾಟ ನಡೆವೇ ಇತ್ತು. ಈ ಪ್ರಕ್ರಿಯೆಯಲ್ಲಿ ಬ್ರಾಹ್ಮಣರನ್ನು ಹಲವಾರು ರೀತಿಯ ದಬ್ಬಾಳಿಕೆ ಮತ್ತು ಅವಮಾನಗಳಿಗೆ ಗುರಿಪಡಿಸಲಾಗಿತ್ತು.

5. ಶೂದ್ರರ ದಬ್ಬಾಳಿಕೆಯ ಮತ್ತು ತುಳಿತಕ್ಕೊಳಗಾದ ಬ್ರಾಹ್ಮಣರಿಗೆ ಶೂದ್ರರ ಬಗ್ಗೆ ಹುಟ್ಟಿದ ದ್ವೇಷದ ಫಲವಾಗಿ, ಬ್ರಾಹ್ಮಣರು ಶೂದ್ರರಿಗೆ ಜನಿವಾರ ಧಾರಣೆಯನ್ನು ನಿರಾಕರಿಸಿದರು.

6. ಜನಿವಾರ ನಷ್ಟದ ಕಾರಣದಿಂದಾಗಿ ಸಾಮಾಜಿಕ ಅವನತಿಗೆ ಗುರಿಯಾದ ಶೂದ್ರರು ವೈಶ್ಯರ ದರ್ಜೆಗಿಂತಲೂ ಕೆಳಸ್ತರಕ್ಕೆ ಬಿದ್ದು ನಾಲ್ಕನೆಯ ವರ್ಣವನ್ನು ಅನುಸರಿಸತೊಡಗಿದರು.

ಅಸ್ಪೃಶ್ಯತೆಯ ಉಗಮವನ್ನು ಕೆಲವು ಸಾಂಕೇತಿಕ ಆಚಾರಗಳು ಮತ್ತು ಆಚರಣೆಗಳಲ್ಲಿ ಅಂಬೇಡ್ಕರ್ ಗುರುತಿಸಿದರು ಎಂಬುದು ಅವರ ವಿಶ್ಲೇಷಣೆಯಿಂದ ಸ್ಪಷ್ಟವಾಗುತ್ತದೆ. ನಂತರದಲ್ಲಿ ಈ ಆಚರಣೆಗಳಿಗೂ ಅಸ್ಪೃಶ್ಯರಿಗೂ ಸಂಬಂಧ ಕಲ್ಪಿಸಲಾಯಿತು. ಇದೇ ಪುಸ್ತಕದ ಮತ್ತೊಂದೆಡೆಯಲ್ಲಿ ಬ್ರಾಹ್ಮಣರು ಮತ್ತು ಬ್ರಾಹ್ಮಣರ ಹಿಂದೂಗಳು ತಮ್ಮ ಜೀವನದಲ್ಲಿ ಎರಡು ಮುಖ್ಯ ಕ್ರಾಂತಿಕಾರಿ ಮಾರ್ಪಾಟುಗಳನ್ನು ತಂದರು ಎಂಬ ವಾದವನ್ನು ಅಂಬೇಡ್ಕರ್ ಮಂಡಿಸುತ್ತಾರೆ. ಒಂದು, ಗೋಮಾಂಸ ಭಕ್ಷಣೆಯನ್ನು ಕೊನೆಗೊಳಿಸಿದ್ದು ; ಮತ್ತೊಂದು ಎಲ್ಲ ರೀತಿಯ ಮಾಂಸಭಕ್ಷಣೆಯನ್ನು ನಿಲ್ಲಿಸಿ, ಸಸ್ಯಾಹಾರಿ ಆಹಾರದ ಮೊರೆಹೋದದ್ದು. ಈ ಪರಿವರ್ತನೆಗಳು ಅವರಿಗೆ ಉನ್ನತ ಸಾಮಾಜಿಕ ಸ್ಥಾನಮಾನ ಗಳಿಸಲು ಸಹಕಾರಿಯಾದವು ಎಂದು ಸೂಚಿಸಿದ್ದಾರೆ. ತಮ್ಮ ಕೈಮೀರಿದ ಕೆಲವು ಕಾರಣಗಳಿಂದಾಗಿ ಅಸ್ಪೃಶ್ಯರಿಗೆ ಈ ಅಭ್ಯಾಸವನ್ನು ತೊರೆಯಲು ಸಾಧ್ಯವಾಗಲಿಲ್ಲ. ಹೀಗಾಗಿ ಅವರ ಸಾಮಾಜಿಕ ಅಂತಸ್ತು ಕೆಳಮಟ್ಟದಲ್ಲಿಯೇ ಉಳಿಯಿತು. ಈ ರೀತಿಯ ವಿಶ್ಲೇಷಣೆ ಹಲವಾರು ಪ್ರಶ್ನೆಗಳಿಗೆ ಎಡೆ ಮಾಡುತ್ತದೆ. ಸಮಾಜದ ರಚನೆಯಲ್ಲಿ ಮಹತ್ವದ ಪಾತ್ರ ವಹಿಸಿದ ಮುಖ್ಯ ಸ್ಥಿತಿಗತಿಗಳ ವಿಷಯವೇನು ? ಈ ರೀತಿ ಸಾಮಾನ್ಯ ಸೂತ್ರಗಳನ್ನೂ ಆಧರಿಸಿದ ವಿಶ್ಲೇಷಣೆಯನ್ನು ಇಡೀ ದೇಶಕ್ಕೆ ಅನ್ವಯಿಸಬಹುದೇ ? ಅಂಬೇಡ್ಕರ್ ತಮ್ಮ ವಾದವನ್ನು ಪುಷ್ಟೀಕರಿಸಲು ಬಳಸಿಕೊಂಡ ಎಲ್ಲ ಮೂಲಗಳೂ ಗಂಗಾಕಣಿವೆ ಮತ್ತು ಅವರ ಸುತ್ತಮುತ್ತಲ ಪ್ರದೇಶಗಳಲ್ಲಿ ವಾಸವಾಗಿರುವ ಜನರ ಜೀವನವನ್ನು ಮತ್ತು ಕೆಲಮಟ್ಟಿಗೆ

ಶೂದ್ರ

ಈಶಾನ್ಯ ಭಾರತದ ಜನರ ಜೀವನವನ್ನು ಮಾತ್ರ ಬಿಂಬಿಸುತ್ತದೆ. ಅಂಬೇಡ್ಕರ್ ಪರಿಹರಿಸಲು ಹೊರಟ ಅಸ್ಪೃಶ್ಯತೆಯ ರೋಗನಿರ್ಣಯ ಈ ಪ್ರಶ್ನೆಗಳನ್ನು ಆಧರಿಸಿರುವುದರಿಂದ ಇವು ಮುಖ್ಯವಾಗುತ್ತವೆ. ನಂತರದಲ್ಲಿ ಹಿಂದೂಧರ್ಮದ ಬಗ್ಗೆಯೇ ಅಂಬೇಡ್ಕರರು ಧ್ರುವನಿರಸನಗೊಂಡಿದ್ದೇಕೆ ಎಂಬ ಪ್ರಶ್ನೆಗಾಗಲಿ, ಹಿಂದೂ ಧರ್ಮದ ಚೌಕಟ್ಟಿನಲ್ಲಿ ಅಸ್ಪೃಶ್ಯರ ಸ್ಥಾನಮಾನಗಳಿಗೆ ಹೊಡೆದಾಡುವುದು ಅಸಾಧ್ಯ ಎಂಬ ನಿಲುವನ್ನು ತಲುಪಲು ಅಷ್ಟು ದೀರ್ಘ ಅನುಭವ ಬೇಕಾದದ್ದಾದರೂ ಏಕೆ ಎಂಬ ಪ್ರಶ್ನೆಗಾಗಲಿ ಇಲ್ಲಿ ಭಾಗಶಃ ಉತ್ತರ ದೊರೆಯುತ್ತದೆ. ಇಂತಹ ಸಂದರ್ಭದಲ್ಲಿ ಅಂಬೇಡ್ಕರರಿಗೆ ಬೇರೆ ರೀತಿಯಲ್ಲಿ ಸಮಸ್ಯೆಯನ್ನು ನಿಭಾಯಿಸಲು ಸಾಧ್ಯವಿಲ್ಲದೆ ಹೋಗಿರಬಹುದು.

ಅಸ್ಪೃಶ್ಯತೆಯ ಉಗಮವನ್ನು ಅರಸುವುದರಲ್ಲಿ ಅವರಿಗಿದ್ದ ಆಸಕ್ತಿ ಸೀಮಿತ ಸ್ವರೂಪದ್ದಾಗಿತ್ತು. ಪ್ರಸಕ್ತ ಅವಮಾನವೀಯ ಪರಿಸ್ಥಿತಿಯಿಂದ ಅವರನ್ನು ಮುಕ್ತಿಗೊಳಿಸುವ ಸೀಮಿತ ಉದ್ದೇಶದಿಂದ ಆ ಆಸಕ್ತಿ ರೂಪುಗೊಂಡಿತ್ತು. ಸೈಮನ್ ಆಯೋಗಕ್ಕೆ ವರದಿ ಸಲ್ಲಿಸಿದ ನಂತರ ಪ್ರಶ್ನಾವಳಿ ಅವಧಿಯಲ್ಲಿ, "ನೀವು ಆರ್ಯ-ಪೂರ್ವ ಸೇರಿದವರ ?" ಎಂಬ ಪ್ರಶ್ನೆಗೆ "ತಿಳಿಯದು, ಇದೊಂದು ದೃಷ್ಟಿಕೋನ." ಎಂದು ಹೇಳಿದರು.7 ಅಸ್ಪೃಶ್ಯತೆಯನ್ನು ಮೂಲತಃ ಒಂದು ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆಯಾಗಿ ನೋಡಿದ ಕಾರಣ, ಅಂಬೇಡ್ಕರ್ ಅರಸುತ್ತಿದ್ದ ಪರಿಹಾರಗಳೂ ಸಾಮಾಜಿಕ, ಸಾಂಸ್ಕೃತಿಕ ಸ್ವರೂಪದ್ದಾಗಿದ್ದವೆ ಹೊರತು, ಆರ್ಥಿಕ ಸ್ವರೂಪದ್ದಾಗಿರಲಿಲ್ಲ. ಇದರ ಅರ್ಥ ಅಸ್ಪೃಶ್ಯರ ಕಲ್ಯಾಣದಲ್ಲಿ ಆರ್ಥಿಕ ಪ್ರಗತಿಯ ಮಹತ್ವವನ್ನು ಅಂಬೇಡ್ಕರ್ ಮನಗಾಣಲಿಲ್ಲ ಎಂದಲ್ಲ. ಆದರೆ ಅಸ್ಪೃಶ್ಯತೆಯ ವಿರುದ್ಧ ಕೈಗೊಳ್ಳುವ ಹೋರಾಟ ಆರ್ಥಿಕ ಪ್ರಗತಿಯಿಂದಲೇ ಪ್ರಾರಂಭಗೊಳ್ಳಬೇಕು ಎಂದು ಅಂಬೇಡ್ಕರ್ ಪರಿಗಣಿಸಲಿಲ್ಲ. ಮತಾಂತರ ಚಳವಳಿಯ ಸಂದರ್ಭದಲ್ಲಿ ಮಾತನಾಡುತ್ತ, "ದೇವಾಲಯ ಪ್ರವೇಶದ ಗುರಿ ಒಳ್ಳೆಯದೇ. ಆದರೆ ಆಧ್ಯಾತ್ಮಿಕ ಸ್ವಾಸ್ಥ್ಯಕ್ಕಿಂತ ಹೆಚ್ಚಾಗಿ ಪ್ರಾಪಂಚಿಕ ಅಭಿವೃದ್ಧಿಗೆ ಹೆಚ್ಚು ಮಹತ್ವ ಕೊಡಬೇಕು." ಎಂದು ಹೇಳಿದರು.8

ಅಂಬೇಡ್ಕರರ ದೃಷ್ಟಿಯಲ್ಲಿ ಆರ್ಥಿಕ ಸಮಾನತೆ ಸಾಧಿಸುವ ಹಾದಿಯಲ್ಲಿ ಅಸ್ಪೃಶ್ಯರಿಗೆ ಎದುರಾಗುವ ತೊಡಕು ಸಾಮಾಜಿಕ ಅಸಮಾನತೆಯೇ ಎಂದು ಈ ಮಾತಿನಿಂದ ನಾವು ಗ್ರಹಿಸಬಹುದು. (ವಿರುದ್ಧ ಕ್ರಮದಲ್ಲಿ ಈ ವಾದ ನಿಲ್ಲದು) ಸಾಮಾಜಿಕ ಅಸಮಾನತೆಯ ಸಮಸ್ಯೆಯನ್ನು ಬಗೆಹರಿಸಿಕೊಂಡ ಕೂಡಲೆ, ಆರ್ಥಿಕ ಸಮಾನತೆ ತಾನೇ ತಾನಾಗಿ ಹಿಂಬಾಲಿಸಿ ಬರುತ್ತದೆ ಎಂಬುದು ಅವರ ಎಣಿಕೆಯಾಗಿತ್ತು. ಆರ್ಥಿಕ ಪ್ರಗತಿಗಿಂತ ಹೆಚ್ಚಾಗಿ ಅಸ್ಪೃಶ್ಯರ ಶಿಕ್ಷಣ ಮತ್ತು ಸಾಮಾಜಿಕ ಪ್ರಗತಿಗೆ ಅಂಬೇಡ್ಕರ್ ಹೆಚ್ಚಿನ ಆದ್ಯತೆ ನೀಡುತ್ತಿದ್ದರು. ಔರಂಗಾಬಾದಿನಲ್ಲಿ ಮಿಳಿಂದ ಮಹಾವಿದ್ಯಾಲಯದ ಶಂಕು ಸ್ಥಾಪನೆಯ ಸಂದರ್ಭದಲ್ಲಿ ಅಂಬೇಡ್ಕರ್ ಮಾಡಿದ ಭಾಷಣದ ಈ ವಿಷಯ ಸ್ಪಷ್ಟವಾಗಿ ತಿಳಿದುಬರುತ್ತದೆ.

"ಕೆಳವರ್ಗಗಳನ್ನು ಮೇಲೆತ್ತುವ ಕಾರ್ಯದಲ್ಲಿ ಎದುರಾಗುವ ಸಮಸ್ಯೆ ಆರ್ಥಿಕ ಸ್ವರೂಪದ್ದೆಂದು ಪರಿಗಣಿಸಲಾಗಿದೆ. ಇದೊಂದು ದೊಡ್ಡ ದೋಷ. ಅನ್ನ ಬಟ್ಟೆಗಳನ್ನು ಒದಗಿಸಿ, ಈ ದೇಶದ ಪ್ರಾಚೀನ ಮಾದರಿಯಲ್ಲೇ ಮುಂದುವರಿದು, ಮೇಲ್ವರ್ಗಗಳಿಗೆ ಸೇವೆ ಸಲ್ಲಿಸುತ್ತ ಬದುಕು ಸಾಗಿಸುವುದಾದರೆ, ಅದರಿಂದ ಕೆಳವರ್ಗಗಳನ್ನು ಮೇಲೆತ್ತಿದಂತಾಗುವುದಿಲ್ಲ. ಆಳವಾಗಿ ಬೇರೂರಿ, ಅವರ ಬೆಳವಣಿಗೆಯನ್ನು ಕುಂಠಿತಗೊಳಿಸಿ, ಅವರನ್ನು ದಾಸ್ಯಕ್ಕೆ ಗುರಿಪಡಿಸಿರುವ ಕೀಳರಿಮೆಯಿಂದ ಅವರನ್ನು ಮುಕ್ತಗೊಳಿಸುವುದೇ ನಮ್ಮ ಮುಂದಿರುವ ನಿಜವಾದ ಸವಾಲು. ತಮ್ಮ ಸಲುವಾಗಿ ಮತ್ತು ತಮ್ಮ ದೇಶದ ಸಲುವಾಗಿ ತಮ್ಮ ಜೀವನದ ಮಹತ್ವವೇನು ಎಂಬ ದಿಕ್ಕಿನಲ್ಲಿ ಪ್ರಜ್ಞೆ ಮೂಡಿಸಿ, ಪ್ರಸಕ್ತ ಸಾಮಾಜಿಕ ವ್ಯವಸ್ಥೆ ಅವರಿಂದ ಕಸಿದುಕೊಂಡಿರುವ ಈ ಪ್ರಜ್ಞೆಯನ್ನು ಮತ್ತೆ ನೀಡುವುದೇ ಆಗಿದೆ. ಉನ್ನತ ಶಿಕ್ಷಣದಿಂದಲ್ಲದೆ ಬೇರಾವುದರಿಂದಲೂ ಈ ಉದ್ದೇಶವನ್ನು ಸಾಧಿಸಲು ಸಾಧ್ಯವಿಲ್ಲ. ನನ್ನ ಅಭಿಪ್ರಾಯದಲ್ಲಿ ಸಾಮಾಜಿಕ ಸಮಸ್ಯೆಗಳಿಗೆ ಇದೇ ಶಾಶ್ವತ ಪರಿಹಾರ."[9]

ಒಂದು ವರ್ಗವಾಗಿ (ಮಾರ್ಕ್ಸಿಸ್ಟ್ ಅರ್ಥದಲ್ಲಿ ಅಲ್ಲ) ಅಸ್ಪೃಶ್ಯರನ್ನು ಒಗ್ಗೂಡಿಸುವುದು ಮತ್ತು ತಮ್ಮ ದುಃಸ್ಥಿತಿಯ ಬಗ್ಗೆ ಅವರಲ್ಲಿ ಅರಿವು ಮೂಡಿಸಿ, ತಮಗಾಗುತ್ತಿರುವ ಅನ್ಯಾಯ ಮತ್ತು ತಮ್ಮ ಬಗ್ಗೆ ತೋರಲಾಗುತ್ತಿರುವ ಭೇದಭಾವದ ವಿರುದ್ಧ ಹೋರಾಡಲು ಹುರಿದುಂಬಿಸುವುದು ತನ್ನ ಮುಂದಿರುವ ಮುಖ್ಯ ಸವಾಲು ಎಂದು ಅಂಬೇಡ್ಕರ್ ಬಗೆದರು. ವಿವಿಧ ವರ್ಗಗಳಿಗೆ ಸೇರಿದ ಅಸ್ಪೃಶ್ಯರನ್ನು ಒಂದುಗೂಡಿಸುವುದು ಅವರ ತತ್‌ಕ್ಷಣದ ಸಮಸ್ಯೆಯಾಗಿತ್ತು. ಉತ್ತಮ ಸಾಮಾಜಿಕ ಸ್ಥಾನಮಾನಗಳಿಗಾಗಿ ಹೋರಾಟ ನಡೆಸಿದ ದೀರ್ಘ ಚರಿತ್ರೆಯನ್ನು ಮಹರ್ ಜನಾಂಗದವರು ಹೊಂದಿದ್ದರು. ಇಂಥ ಮಹರ್ ಜನಾಂಗದವರನ್ನು ಸಂಘಟಿಸುವುದು ಸಾಧ್ಯವಿತ್ತು. ಆದರೆ ಇತರ ಅಸ್ಪೃಶ್ಯ ಜಾತಿ ಬಾಂಧವರು ಅಷ್ಟೇ ಮಟ್ಟಿನ ಉತ್ಸಾಹ ತೋರಲಿಲ್ಲ. ಒಂದೇ ರೀತಿಯ ಆರ್ಥಿಕ ಪರಿಸ್ಥಿತಿಯಿದ್ದಾಗ್ಯೂ, ವಿವಿಧ ಉಪಜಾತಿಗಳಲ್ಲಿ ಅವರು ಹಂಚಿ ಹೋಗಿದ್ದರು. ಅಂಬೇಡ್ಕರರು ಈ ಯತ್ನದಲ್ಲಿ ಅಪಾರ್ಥಕ್ಕೆ ಗುರಿಯಾದರು, ವಿಶೇಷವಾಗಿ ಕಮ್ಯುನಿಸ್ಟರು ಅವರನ್ನು ಅಪಾರ್ಥ ಮಾಡಿಕೊಂಡರು.

ಕಮ್ಯುನಿಸ್ಟರ ದೃಷ್ಟಿಯಲ್ಲಿ ಅಂಬೇಡ್ಕರರು ನಿರ್ದಿಷ್ಟ ಜಾತಿಯೊಂದರ, ಅದರಲ್ಲೂ ಮುಖ್ಯವಾಗಿ ಮಹಾರಾಷ್ಟ್ರದ ಮಹರ್ ಜಾತಿಯ ಜನರ ಹಿತಾಸಕ್ತಿಗಳನ್ನು ಎತ್ತಿ ಹಿಡಿಯುವವರಾಗಿದ್ದರು. ಬ್ರಿಟಿಷರೊಂದಿಗೆ ಒಂದಾಗಿ ಅಂಬೇಡ್ಕರರು ಸ್ವಾತಂತ್ರ್ಯ ಚಳವಳಿಯನ್ನು ದುರ್ಬಲಗೊಳಿಸುತ್ತಿದ್ದಾರೆ ಎಂದು ಅನೇಕ ಕಾಂಗ್ರೆಸ್ಸಿಗರು ಹೊಂದಿದ್ದ ಪೂರ್ವಗ್ರಹವನ್ನೇ ಕಮ್ಯುನಿಸ್ಟರೂ ಹೊಂದಿದ್ದರು.[10] ನಿಮ್ನ ವರ್ಗಗಳಿಗೆ ಸಹಾಯಕ

ಹಾಗೂ ಅಂಥ ಸಂಘಟನಾತ್ಮಕ ಜಾಲವೊಂದನ್ನು ರಚಿಸಲು ಭಾರತೀಯ ಕಮ್ಯುನಿಸ್ಟರು ಅಸಮರ್ಥರು ಎಂಬುದು ಅಂಬೇಡ್ಕರರ ಭಾವನೆಯಾಗಿತ್ತು. ಕಮ್ಯುನಿಸ್ಟರು ವರ್ಗಾಧಾರಿತ ಏಕತೆಯನ್ನು ಉಳಿಸಿಕೊಳ್ಳುವ ಯತ್ನದಲ್ಲಿ ಜಾತಿ ಪೂರ್ವಗ್ರಹಗಳ ವಿರುದ್ಧ ಹೊಡೆದಾಡಲು ಹಿಂತೆಗೆಯುತ್ತಿದ್ದಾರೆಂಬುದೂ ಅವರ ಅನಿಸಿಕೆಯಾಗಿತ್ತು. ಕಮ್ಯುನಿಸ್ಟರೊಂದಿಗೆ ಒಂದಾಗಲು ನಿರಾಕರಿಸಿದ ಅಂಬೇಡ್ಕರರ ನಿಲುವು, ತಮ್ಮ ಗುಂಪಿಗೆ ಸೇರಿದ ವ್ಯಕ್ತಿಯನ್ನೇ ಅಸ್ಪೃಶ್ಯರು ನಾಯಕನನ್ನಾಗಿ ಹೊಂದಿರಬೇಕೆಂಬ ಅಂಬೇಡ್ಕರರ ನೀತಿಗೆ ಅನುಸಾರವಾಗಿಯೇ ಇತ್ತು. ಅವರ ಪ್ರಕಾರ, ಕಮ್ಯುನಿಸ್ಟ್ ಪಾರ್ಟಿಯೂ ಬ್ರಾಹ್ಮಣರ ಪ್ರಾಬಲ್ಯಕ್ಕೆ ಸಿಕ್ಕಿದ ಮತ್ತೊಂದು ಸಂಸ್ಥೆಯಾಗಿದ್ದು, ಅಲ್ಲಿಯೂ ಅಸ್ಪೃಶ್ಯರನ್ನು ಸಮಾನರೆಂದು ಪರಿಗಣಿಸುವುದಿಲ್ಲ ಎಂದು ಅವರಿಗೆ ಬಲವಾಗಿ ಅನಿಸಿತ್ತು.11 ಮಹರ್ ಜಾತಿಗೆ ಸೇರಿದ ಕಾರ್ಮಿಕರ ಮನವೊಲಿಸುವಲ್ಲಿ ವಿಫಲರಾದ ಕಮ್ಯುನಿಸ್ಟರು ಅಂಬೇಡ್ಕರರೊಂದಿಗೆ ಸಂಘರ್ಷಕ್ಕೊಳಗಾದರು. ಹ್ಯಾರಿಸನ್‌ನ ವಾದ ಹೀಗಿದೆ:

ಅಂಬೇಡ್ಕರರು ನಿರ್ಮಿಸಿದ ಪರಿಶಿಷ್ಟ ಜಾತಿಗಳ ಒಕ್ಕೂಟ ರಾಷ್ಟ್ರೀಯ ಮಟ್ಟದಲ್ಲಿ ಸುಸಂಘಟಿತ ಪಕ್ಷವಾಗಿ ರೂಪುಗೊಳ್ಳದಿದ್ದರೂ, ಮಹರ್ ಜಾತಿ ಜನರ ಸುಸಂಘಟಿತ ಬೆಂಬಲ ಅಂಬೇಡ್ಕರರಿಗಿತ್ತು. ಈ ಬೆಂಬಲ ಎಷ್ಟು ಬಲವಾಗಿತ್ತೆಂದರೆ, ಮುಂಬಯಿ ಮತ್ತು ಮಹಾರಾಷ್ಟ್ರಗಳಲ್ಲಿ ಮಹರ್ ಕಾರ್ಮಿಕಶಕ್ತಿಯನ್ನು ನಿಯಂತ್ರಿಸುವ ಸಾಮರ್ಥ್ಯ ಅಂಬೇಡ್ಕರರಿಗೆ ಲಭಿಸಿತ್ತು.12

ಜಾತಿಯನ್ನು ನಿರ್ದಿಷ್ಟ ರಾಜಕೀಯ ಪ್ರವರ್ಗವೆಂದು ಪರಿಗಣಿಸಲು ನಿರಾಕರಿಸುವ ಮೂಲಕ, ಭಾರತೀಯ ಕಮ್ಯುನಿಸ್ಟರು ವಸ್ತುಸ್ಥಿತಿಯಿಂದ ದೂರವೇ ಉಳಿದಿದ್ದಾರೆ ಎಂದು ಅಂಬೇಡ್ಕರರಿಗೆ ಮನದಟ್ಟಾಗಿತ್ತು. ಅಂಬೇಡ್ಕರ್ ಮತ್ತು ಕಮ್ಯುನಿಸ್ಟರ ನಡುವಿನ ಸಂಬಂಧವನ್ನು ಈ ಮುಂದಿನ ಮಾತುಗಳಲ್ಲಿ ಸಂಕ್ಷಿಪ್ತವಾಗಿ ಹೇಳಲಾಗಿದೆ:

ಚಾರಿತ್ರಿಕವಾಗಿ ಅಸ್ತಿತ್ವಕ್ಕೆ ಬಂದಿದ್ದ ನಿರ್ದಿಷ್ಟ ಸಮಾಜವೊಂದನ್ನು ಬಿಟ್ಟು ತಮ್ಮ ಕಲ್ಪನೆಯಲ್ಲಿದ್ದ ಸಮಾಜವನ್ನು ತೀವ್ರತರ ಪರಿವರ್ತನೆಗೆ ಗುರಿಪಡಿಸಲು ಯತ್ನಿಸುತ್ತಿದ್ದ ಮಾರ್ಕ್ಸ್‌ವಾದಿಗಳನ್ನು ಕಂಡು ಅಂಬೇಡ್ಕರ್ ನಗುತ್ತಿದ್ದರೆ, ಜಾತಿಯ ಅನನ್ಯತೆಯನ್ನು ಮೂಲವಾಗಿರಿಸಿಕೊಂಡ ಬಗ್ಗೆ ಮತ್ತು ಹೊಸ ಸಾಮಾಜಿಕ ಶಕ್ತಿಗಳ ಮುನ್ನಡೆಯಿಂದಾಗಿ ಜಾತಿ ವ್ಯವಸ್ಥೆಯಲ್ಲಿ ಉಂಟಾಗಿರುವ ಮಾರ್ಪಾಟುಗಳನ್ನು ಕಾಣದೇ ಹೋದ ಬಗ್ಗೆ ಅಂಬೇಡ್ಕರರನ್ನು ಕಮ್ಯುನಿಸ್ಟರು ಅಪಹಾಸ್ಯ ಮಾಡುತ್ತಿದ್ದರು.13

ಕಮ್ಯುನಿಸಂನ ವಿರುದ್ಧ ಅಂಬೇಡ್ಕರ್ ಹೊಂದಿದ್ದ ಲಿಬರಲ್ ಪೂರ್ವಗ್ರಹದೊಂದಿಗೆ ಜಾತಿವಾದಿ ಹಿಂದೂಗಳ ನೇತೃತ್ವದಲ್ಲಿ ಅಸ್ಪೃಶ್ಯತೆಯ ವಿರುದ್ಧ ಸೆಣಸಲಾಗದು

ಟ ನಂಬಿಕೆಯೂ ಸೇರಿ ಅಂಬೇಡ್ಕರರು ಕಮ್ಯುನಿಸ್ಟರಿಂದಲೂ, ಕಾಂಗ್ರೆಸ್ಸಿನಿಂದಲೂ ರವೇ ಉಳಿದರು. ಜಾತಿವಾದಿ ಹಿಂದೂವೊಬ್ಬನಿಗೆ ಅಸ್ಪೃಶ್ಯರ ಮನಸ್ಸನ್ನು ಯಲಾಗದು ಎಂಬ ಸಿದ್ಧಾಂತವನ್ನು ಮುಂದಿರಿಸಿದರು.

ಜಾತಿವಾದಿ ಹಿಂದೂ ನಾಯಕತ್ವದ ಬಗ್ಗೆ ಅವರಿಗಿದ್ದ ಅಪನಂಬಿಕೆ ಯಾವ ರೂಪದ್ದಾಗಿತ್ತೆಂದರೆ, ಸೈಮನ್ ಕಮಿಷನ್‌ನಲ್ಲಿ ಭಾರತೀಯನೊಬ್ಬನನ್ನು ಒಳ ಳ್ಳದೆ ಹೋದದ್ದು ನಿರಾತಂಕವೆನಿಸಿದೆ, ಏಕೆಂದರೆ ಅಂತಹ ನಾಯಕನು ಎಲ್ಲ ಗುಂಪುಗಳ ಜ ಪ್ರತಿನಿಧಿಯಾಗಲಾರ ಎಂಬ ಮಾತನ್ನು ಸೈಮನ್ ಕಮಿಷನ್‌ಗೆ ತಿಳಿಸಿದರು.[15]

ಅಸ್ಪೃಶ್ಯತೆಯ ನಿವಾರಣೆಗಾಗಿ ಕೈಗೊಳ್ಳಬೇಕಾದ ಕ್ರಮಗಳು ಮತ್ತು ಮಾರ್ಗ ಳ ಬಗ್ಗೆ ಗಾಂಧಿಯವರೊಂದಿಗೆ ಅಂಬೇಡ್ಕರ್ ಹೊಂದಿದ್ದ ಭಿನ್ನಾಭಿಪ್ರಾಯಗಳು ಲ್ಲರಿಗೂ ತಿಳಿದಿರುವಂಥವೇ. ಸಮಸ್ಯೆಯನ್ನು ಗುರುತಿಸುವ ವಿಷಯದಲ್ಲಿ ಇಬ್ಬರ ನುವೆ ಹೆಚ್ಚಿನ ವ್ಯತ್ಯಾಸವೇನೂ ಇರಲಿಲ್ಲ. ಹಿಂದೂ ಧರ್ಮ ಮೂಲಭೂತವಾಗಿ ಸ್ಪೃಶ್ಯತೆಯನ್ನು ಸಮ್ಮತಿಸಿಲ್ಲ ಎಂದೂ ಶಾಸ್ತ್ರದ ವಿಕೃತ ಓದಿನಿಂದಾಗಿ ಅಸ್ಪೃಶ್ಯತೆ ಗಮಿಸಿತು ಎಂದೂ ಇಬ್ಬರೂ ಭಾವಿಸಿದ್ದರು. ಆದರೆ ಅದಕ್ಕೆ ಪರಿಹಾರ ಹುಡುಕು ಲ್ಲಿ ಇಬ್ಬರೂ ಭಿನ್ನ ನಿಲುವು ತಳೆದರು. ಮತ್ತು ಪ್ರಮುಖವಾದ ವ್ಯತ್ಯಾಸಗಳನ್ನೇ ಹೊಂದಿದ್ದರು. ಅಸ್ಪೃಶ್ಯತೆ ನೈಜ ಹಿಂದೂಧರ್ಮ (ಅವರ ಪ್ರಕಾರ ವರ್ಣಾಶ್ರಮ ರ್ಮ)ದ ಅಂಗವಾಗದೆ ವಿಕೃತ ಆಚಾರವಾದ್ದರಿಂದ, ಜಾತಿವಾದಿ ಹಿಂದೂಗಳಲ್ಲಿ ನೆಮಾಡಿರುವ ಉತ್ತಮ ಪ್ರಜ್ಞೆಯನ್ನು ತಟ್ಟುವ ಮೂಲಕ, ಅಸ್ಪೃಶ್ಯತೆಯನ್ನು ವಾರಿಸಬಹುದು ಎಂದು ಗಾಂಧೀಜಿ ಮತ್ತೊಂದೆಡೆಯಲ್ಲಿ ಅಂಬೇಡ್ಕರರಿಗೆ ಈ ರ್ಗದ ನಿಷ್ಫಲತೆಯ ಬಗ್ಗೆ ಮನದಟ್ಟಾಗಿತ್ತು. ತಮ್ಮ ಅನುಭವದ ಮೂಲಕವೇ ವರು ಈ ನಿಲುವನ್ನು ತಳೆದಿದ್ದರು. ಅಸ್ಪೃಶ್ಯರ ಸ್ಥಿತಿಗತಿಗಳ ಸುಧಾರಣೆ ಜಾತಿ ದಿ ಹಿಂದೂಗಳ ಕೃಪಾಭಿಕ್ಷೆಗಾಗಿ ಕಾದುಕುಳಿತಿರಲು ಸಾಧ್ಯವಿಲ್ಲ; ಅಸ್ಪೃಶ್ಯರೇ ತಮ್ಮ ರವಾಗಿ ತಾವು ಹೋರಾಡುವಂತಾದಾಗ ಮಾತ್ರ ಸಮಾನತೆಯನ್ನು ಸಾಧಿಸಲು ಸಾಧ್ಯ ದು ಅಂಬೇಡ್ಕರ್ ವಾದಿಸಿದರು. ವಿಮೋಚನೆಯೆಂಬುದು ಮೂಲತಃ ಅವರಿಗೆ ತ್ಮ ವಿಮೋಚನೆಯಾಗಿತ್ತು.[16]

ಕಾಂಗ್ರೆಸ್ಸಿನ ಕಾರ್ಯಸೂಚಿಯಲ್ಲಿ ಅಸ್ಪೃಶ್ಯತೆಯ ನಿವಾರಣೆಗಾಗಿ ಕ್ರಮಗಳನ್ನೇ ಗೊಳ್ಳುವ ವಿಚಾರಕ್ಕೆ ಗಾಂಧಿ ಆದ್ಯತೆ ದೊರಕಿಸಿಕೊಟ್ಟಿಲ್ಲ ಎಂಬುದು ಅಂಬೇಡ್ಕರರ ಪಾದನೆಯಾಗಿತ್ತು. ಕಾಂಗ್ರೆಸ್‌ನಲ್ಲಿ ನೂಲುವ ಚಟುವಟಿಕೆಯನ್ನು ಮತದಾನಕ್ಕೊಂದು ರ್ವ ನಿಯಮವಾಗಿ ವಿಧಿಸಿದ್ದಂತೆ, ಕಾಂಗ್ರೆಸ್ ಪ್ರವೇಶಕ್ಕೆ ಅಸ್ಪೃಶ್ಯತೆಯ ನಿವಾರಣೆ ಯನ್ನು ಪೂರ್ವ ನಿಯಮವಾಗಿ ಮಹಾತ್ಮ ಗಾಂಧಿ ವಿಧಿಸಬೇಕಿತ್ತು ಎಂಬುದು

ಅಂಬೇಡ್ಕರರ ಬಲವಾದ ಭಾವನೆಯಾಗಿತ್ತು. ಆದರೂ ಅಂಬೇಡ್ಕರರು ಮಹಾತ್ಮ ಬಗ್ಗೆ ಗೌರವ ಹೊಂದಿದ್ದರು ಮತ್ತು ಈ ದಿಕ್ಕಿನಲ್ಲಿ ಅವರು ಮಾಡಿದ ಕೆಲಸದ ಬಗ್ಗೆ ಮೆಚ್ಚುಗೆ ಹೊಂದಿದ್ದರು. "....ಬೇರಾರೂ ನಮ್ಮ ಬಳಿ ಬರದಿದ್ದಾಗ, ಮಹಾತ್ಮ ಗಾಂಧಿಯವರ ಅನುಕಂಪವೂ ಅತ್ಯಂತ ಮಹತ್ವದ್ದಾಗಿರುತ್ತದೆ."17

1930 ರಲ್ಲಿ ಮೊದಲ ದುಂಡು ಮೇಜಿನ ಪರಿಷತ್ತಿನ ನಂತರ, ಅಂಬೇಡ್ಕರರು ಪ್ರತ್ಯೇಕ ಮತದಾರ ಸಮುದಾಯಕ್ಕಾಗಿ ಒತ್ತಾಯ ತಂದಾಗ, ಅಲ್ಪಸಂಖ್ಯಾತ ಆಯೋಗ 'ಕಮ್ಯುನಲ್ ಅವಾರ್ಡ್' ಅನ್ನು ಜಾರಿಗೆ ತಂದಿತು. ಪರಿಶಿಷ್ಟ ಜಾತಿಗಳಿಗೂ ಸೇರಿದಂತೆ, ಎಲ್ಲ ಅಲ್ಪ ಸಂಖ್ಯಾತರಿಗೆ ಪ್ರತ್ಯೇಕ ಮತದಾರ ಸಮೂಹವನ್ನು ನಿರ್ಣಯ ಮಂಜೂರು ಮಾಡಿತು. ಯರವಾಡ ಜೈಲಿನಲ್ಲಿ ಆಮರಣಾಂತ ಉಪವಾಸ ಕೈಗೊಳ್ಳುವ ಮೂಲಕ ಗಾಂಧೀಜಿ ಇದರ ವಿರುದ್ಧ ಪ್ರತಿಭಟಿಸಿದರು. ಗಾಂಧೀಜಿಯವರ ಈ ಕೃತ್ಯ ದಿಂದಾಗಿ ಪ್ರತ್ಯೇಕ ಮತದಾರ ಸಮುದಾಯಬೇಕೆಂಬ ಒತ್ತಾಯವನ್ನು, ಅಂಬೇಡ್ಕರ್ ಕೈಬಿಡಬೇಕಾಗಿ ಬಂತು. ಒಪ್ಪಂದ ಕರಾರೊಂದರ ಮೂಲಕ ನಿಮ್ನ ವರ್ಗಗಳ ಹಕ್ಕು ಗಳನ್ನು ಕಾದಿರಿಸಬೇಕು ಎಂಬ ನಿಬಂಧನೆಯೊಂದಿಗೆ ಅಂಬೇಡ್ಕರ್ ಇದಕ್ಕೆ ಸಮ್ಮತಿಸಿದರು. ನಿಮ್ನ ವರ್ಗಗಳು ಮತ್ತು ಜಾತಿವಾದಿ ಹಿಂದೂಗಳ ನಡುವೆ ಪೂನಾ ಒಪ್ಪಂದವನ್ನು ಸಹಿ ಮಾಡಲಾಯಿತು. 26ನೇ ಸೆಪ್ಟೆಂಬರ್ 1932 ರಂದು ದೆಹಲಿಯಲ್ಲಿ ನಡೆದ ಹಿಂದೂ ಮಹಾಸಭೆಯ ಅಧಿವೇಶನದಲ್ಲಿ ಸರ್ವಾನುಮತದಿಂದ ಕೈಗೊಂಡ ನಿರ್ಣಯದ ಮೂಲಕ ಈ ಒಪ್ಪಂದವನ್ನು ಅನುಸಮರ್ಥಿಸಲಾಯಿತು. ಈ ಸಮಸ್ಯೆಗೆ ಯಾವುದೇ ರಾಜಕೀಯ ಪರಿಹಾರವನ್ನು ಗಾಂಧೀಜಿಯವರು ಸ್ವಾಗತಿಸಿರಲಿಲ್ಲ ಎಂಬುದು 13ನೇ ನವೆಂಬರ್ 1931 ರಂದು, ಎರಡನೇ ದುಂಡು ಮೇಜಿನ ಸಭೆಯ ಅಲ್ಪಸಂಖ್ಯಾತ ಸಮಿತಿಯ ಸಮ್ಮುಖದಲ್ಲಿ ಗಾಂಧಿಯವರು ಮಾಡಿದ ಪ್ರಖ್ಯಾತ ಭಾಷಣದಲ್ಲಿ ಸುಸ್ಪಷ್ಟ ವಾಗಿದೆ. "ನನಗೆ ನೀಡಲು ಸಾಧ್ಯವಾಗುವ ಸಕಲ ಒತ್ತಿನೊಂದಿಗೆ ನಾನು ಹೇಳ ಬಯಸುವುದೇನೆಂದರೆ ಇದನ್ನು (ಪ್ರತ್ಯೇಕ ಮತದಾರ ಸಮುದಾಯ) ವಿರೋಧಿಸುವ ಒಬ್ಬನೇ ವ್ಯಕ್ತಿ ನಾನಾಗಿದ್ದರೂ ನನ್ನ ಸರ್ವಶಕ್ತಿಯೊಂದಿಗೆ ವಿರೋಧಿಸುತ್ತೇನೆ."18

ಈ ಕ್ರಮ ಹಿಂದೂಗಳನ್ನು ವಿಭಜಿಸುತ್ತದೆ ಎಂಬುದು ಗಾಂಧೀಜಿಯವರ ಭಯ ವಾಗಿತ್ತು. ಮತ್ತೊಂದು ಕಡೆ ಅಸ್ಪೃಶ್ಯ ಅಲ್ಪಸಂಖ್ಯಾತರಿಗೆ ರಾಜಕೀಯ ಅಧಿಕಾರ ಕಡ್ಡಾಯವಾಗಿ ದೊರೆಯುವಂತಾಗಬೇಕೆಂಬುದು ಅಂಬೇಡ್ಕರರ ಅಭಿಪ್ರಾಯವಾಗಿತ್ತು. ಅಂತಹ ಅಧಿಕಾರಗಳನ್ನು ನೀಡುವ ಮೂಲಕ ಪ್ರತ್ಯೇಕತೆಯನ್ನು ಪೋಷಿಸಿದಂತಾದರೂ ರಾಜಕೀಯ ಅಧಿಕಾರ ದೊರೆಯುವಂತಾಗಬೇಕೆಂಬುದು ಅಂಬೇಡ್ಕರರ ನಿಲುವಾಗಿತ್ತು. ಸಮಾನತೆಯ ಬಗ್ಗೆ ಅಂಬೇಡ್ಕರ್ ಮತ್ತು ಗಾಂಧಿ ಇಬ್ಬರಿಗೂ ತಮ್ಮದೇ ಆದ ದೃಷ್ಟಿ

ುತ್ತು. 'ವರ್ಣ' ವ್ಯವಸ್ಥೆಯನ್ನು ಉಳಿಸಿಕೊಂಡೂ, ನ್ಯಾಯ ಮತ್ತು ಸಮಾನತೆ ಧಾರದ ಮೇಲೆ ರೂಪಿಸಲಾದ ಸಮಾಜವನ್ನು ಹೊಂದಲು ಸಾಧ್ಯ ಎಂದು ಗಾಂಧಿ ಂಬಿದ್ದರೆ, ಅಂಬೇಡ್ಕರರ ಪ್ರಕಾರ ಸಮಾನತೆಯೆಂಬುದು ವರ್ಣಗಳ ನಡುವಿನ ಮಾನತೆಯಲ್ಲ ಆದರೆ ಎಲ್ಲರಿಗೂ ದೊರೆಯಬೇಕಾದ ಸಮಾನ ರೀತಿಯ ಸಾಮಾಜಿಕ, ಜಕೀಯ ಮತ್ತು ಆರ್ಥಿಕ ಅವಕಾಶವೇ ಆಗಿತ್ತು. ಜಾತಿ ಪದ್ಧತಿ ಅಸ್ತಿತ್ವದಲ್ಲಿರುವ ರೆಗೂ ಇಂತಹ ಸಮಾನತೆ ಸಾಧಿಸುವುದು ಸಾಧ್ಯವಿಲ್ಲ ಎಂದು ಅಂಬೇಡ್ಕರ್ ನಂಬಿದ್ದರು. ಮನ್ ಆಯೋಗದ ಮುಂದಿರಿಸಿದ ಅವರ ಹಕ್ಕೊತ್ತಾಯಗಳು ಈ ಧೋರಣೆಗೆ ನುಗುಣವಾಗಿಯೇ ಇದ್ದವು. ಎಲ್ಲ ಸಾರ್ವಜನಿಕ ಸಂಸ್ಥೆಗಳಲ್ಲಿ ಭಾಗವಹಿಸುವ ಮತ್ತು ಮ್ಮ ಮೇಲೆ ಪರಿಣಾಮ ಬೀರುವ ಯಾವುದೇ ಶಾಸನದ ರಚನೆಯನ್ನು ನಿಯಂತ್ರಿಸುವ ಗತ್ಯ ಅಸ್ಪೃಶ್ಯರಿಗಿದೆ ಎಂಬ ನಿಲುವು ಅಂಬೇಡ್ಕರರದು. ಅಸ್ಪೃಶ್ಯರಿಗಿದ್ದ ಈ ಗತ್ಯವನ್ನೂ ಮತ್ತು ಈ ಬಗ್ಗೆ ನಿಮ್ನ ವರ್ಗಗಳಿಗಿದ್ದ ಇಚ್ಛೆಯನ್ನೂ ಅಂಬೇಡ್ಕರರ ಕ್ಕೊತ್ತಾಯಗಳು ಪ್ರತಿಬಿಂಬಿಸುತ್ತವೆ. ರಾಷ್ಟ್ರೀಯ ಚಳವಳಿಗೆ ಪೂರ್ಣ ಬೆಂಬಲ ಡುವ ಬಗ್ಗೆ ಅಂಬೇಡ್ಕರರು ಹೊಂದಿದ್ದ ಆಕ್ಷೇಪಗಳಿಗೆ ಕಾರಣವಿತ್ತು. ರಾಷ್ಟ್ರೀಯ ಳವಳಿಯ ನಾಯಕರು ಸಾಮಾಜಿಕ ಸುಧಾರಣೆಗಿಂತ ಸ್ವಾತಂತ್ರ್ಯಕ್ಕೆ ಹೆಚ್ಚಿನ ಆದ್ಯತೆ ಡುತ್ತ ಬಂದರೆ, ನಿಮ್ನ ವರ್ಗಗಳ ನ್ಯಾಯಸಮ್ಮತ ಹಕ್ಕುಗಳಿಗೆ ಚ್ಯುತಿಯೊದಗುತ್ತದೆ ಂಬ ಹೆದರಿಕೆಯಿಂದ ಹುಟ್ಟಿದಂಥವು ಈ ಆಕ್ಷೇಪಗಳು. ಮೊದಲ ದುಂಡು ಮೇಜಿನ ರಿಷತ್ತಿಗೆ ಮುನ್ನ 1930 ರಲ್ಲಿ, ನಾಗಪುರದಲ್ಲಿ ನಡೆದ ಅಖಿಲ ಭಾರತ ನಿಮ್ನ ವರ್ಗ ಳ ಒಕ್ಕೂಟದ ಸಭೆಯಲ್ಲಿ ಅಂಬೇಡ್ಕರರು ನುಡಿದ ಮಾತುಗಳಿವು:

"ಯಾವುದೇ ದೇಶದವರು ಮತ್ತೊಂದು ದೇಶವನ್ನು ಆಳಲು ತಕ್ಕವರಲ್ಲ. ನ್ನುವ ಕಾಂಗ್ರೆಸ್ಸಿನವರ ಮಾತನ್ನು ನಾನು ಒಪ್ಪುತ್ತೇನೆ. ಆ ಹೇಳಿಕೆ ಅಲ್ಲಿಗೇ ಂತ್ಯಗೊಳ್ಳುವುದಿಲ್ಲ ಎಂಬುದನ್ನು ನೇರವಾಗಿ ಹೇಳುವ ಸ್ವಾತಂತ್ರ್ಯವನ್ನೂ ಳಿಸಿಕೊಳ್ಳುತ್ತೇನೆ. ಯಾವುದೇ ವರ್ಗ ಮತ್ತೊಂದು ವರ್ಗದ ಮೇಲೆ ಅಧಿಕಾರ ಲಾಯಿಸಲು ತಕ್ಕುದಲ್ಲ ಎಂಬುದೂ ಅಷ್ಟೇ ಸತ್ಯ."[12] ಕಾಂಗ್ರೆಸ್ ತನ್ನ ಕಾರ್ಯ ೂಚಿಯಲ್ಲಿ ಅಸ್ಪೃಶ್ಯತೆಯ ನಿವಾರಣೆಗೆ ಮೊದಲ ಆದ್ಯತೆ ನೀಡುವುದಾದಲ್ಲಿ ವಾಸ್ತವ ಾಗಿ ಕಾಂಗ್ರೆಸ್‌ನ ಸ್ವಾತಂತ್ರ್ಯ ಚಳವಳಿಯನ್ನು ಸೇರಲು ಅಂಬೇಡ್ಕರ್ ತಯಾರಿದ್ದರು. ಟಿಷರು ನಮ್ಮ ದೇಶವನ್ನು ಬಿಟ್ಟು ಹೊರಗಾವಂತೆ ಒತ್ತಾಯಿಸಿದ ಮೊದಲ ಅಸ್ಪೃಶ್ಯ ಾಯಕ ಅಂಬೇಡ್ಕರ್.

ರಾಜಕೀಯ ಪಕ್ಷವೊಂದನ್ನು ನಿರ್ಮಿಸುವ ಅಂಬೇಡ್ಕರರ ನಿರ್ಧಾರವನ್ನು, ನಿಮ್ನ ರ್ಗಗಳ ಘನತೆ ಮತ್ತು ಸಮಾನತೆಗಾಗಿ ನಡೆಸಿದ ಇನ್ನೊಂದು ಹೋರಾಟದ ಯತ್ನ

ವಾಗಿ ನೋಡಬಹುದು. ರಾಜಕೀಯ ಅಧಿಕಾರದ ಬೆಂಬಲವಿಲ್ಲದೆ ಸಾಮಾಜಿಕ ಸುಧಾರಣಾ ಕ್ರಮಗಳಿಂದ ಮಾತ್ರ ಈ ಸಮಸ್ಯೆ ಬಗೆಹರಿಯುವುದಿಲ್ಲವೆಂದು ಮನಗಂಡ ಅಂಬೇಡ್ಕರರು ಇಂಡಿಪೆಂಡೆಂಟ್ ಲೇಬರ್ ಪಾರ್ಟಿ ಎಂಬ ರಾಜಕೀಯ ಪಕ್ಷವೊಂದನ್ನು ನಿರ್ಮಿಸಿದರು. ತಮ್ಮ ಕ್ಷೇತ್ರವನ್ನು ವಿಸ್ತರಿಸಲು ಅವರು ಯತ್ನಿಸಿದರು. ಈ ಪಕ್ಷ ಅಸ್ಪೃಶ್ಯರ ಹಿತಾಸಕ್ತಿಗಳ ರಕ್ಷಣೆ ಮಾತ್ರವಲ್ಲದೆ ಸಮಸ್ತ ಶ್ರಮಿಕ ವರ್ಗಗಳ ಹಿತಾ ಸಕ್ತಿಯ ಧ್ವನಿಯಾಯಿತು. ಈ ಪ್ರಯೋಗ (ಮತ್ತು ನಂತರದ ರಿಪಬ್ಲಿಕನ್ ಪಾರ್ಟಿಯ ಪ್ರಯೋಗ) ಉತ್ತೇಜಕವಾಗೇನೂ ಇರಲಿಲ್ಲ.[22]

"ಹಿಂದೂಧರ್ಮ"ದ ವಲಯದಲ್ಲಿ ಸಮಾನತೆ ಸಾಧಿಸುವ ಎಲ್ಲ ಯತ್ನಗಳೂ ವಿಫಲಗೊಂಡ ಬಳಿಕ ಬೌದ್ಧ ಧರ್ಮಕ್ಕೆ ಮತಾಂತರ ಹೊಂದುವ ನಿರ್ಧಾರವನ್ನು ಅಂಬೇಡ್ಕರರು ಕೈಗೊಂಡರು. ಆದರೆ ಇತರ ಧರ್ಮಗಳನ್ನು ಬಿಟ್ಟು ಬೌದ್ಧ ಧರ್ಮ ವನ್ನೇ ಆರಿಸಲು ಕಾರಣವೇನು? ಈ ಬಗ್ಗೆ ಹಲವಾರು ಸಿದ್ಧಾಂತಗಳನ್ನು ಪ್ರತಿ ಪಾದಿಸಲಾಗಿದೆ. ಗೈಲ್ ಓಂವಿಟ್‌ಸ (Gail Omvde) ಪ್ರಕಾರ ಬೌದ್ಧ ಧರ್ಮದ ದರ್ಶನ ಅಂಬೇಡ್ಕರರ ಲಿಬರಲ್ ಆಲೋಚನಾಕ್ರಮಕ್ಕೆ ಹೊಂದುವಂತಿತ್ತು. ಆಕೆಯ ಮಾತುಗಳಲ್ಲಿ :

ಸಾಮೂಹಿಕ ಸಮತಾಭಾವ ಮತ್ತು ವಿಚಾರಶೀಲ ಸಂಪ್ರದಾಯಗಳು ಬೌದ್ಧ ಸಂಯೋಗದಲ್ಲಿ ಹೆಚ್ಚಿನ ಪ್ರಾಮುಖ್ಯ ಪಡೆದಿದ್ದು, ಇವು ಬೌದ್ಧಧರ್ಮದ ರಕ್ಷೆಯಲ್ಲೇ 'ವಿಮೋಚನೆಯ ಧರ್ಮಶಾಸ್ತ್ರವೊಂದಕ್ಕೆ ತಳಹದಿಯಾಗುವ ಸಾಮರ್ಥ್ಯ ಹೊಂದಿದ್ದವು. ಬೌದ್ಧ ಧರ್ಮಕ್ಕೆ ಪರಿವರ್ತನೆಗೊಳ್ಳುವ ಮೂಲಕ ಮತ್ತು ಅವರ ವ್ಯಾಖ್ಯಾನಗಳ ಮೂಲಕ ಅಂಬೇಡ್ಕರ್ ನಿರ್ಮಿಸುತ್ತಿದ್ದ ವಿಮೋಚನೆಯ ಮಾರ್ಗವೂ ಇದೇ ಮಾದರಿಯದಾಗಿತ್ತು.[23]

ಈ ದೃಷ್ಟಿಕೋನದ ಪ್ರಕಾರ, ಹಿಂದೂಧರ್ಮದ ಒಳಗೆ ಜಾತಿ ಪದ್ಧತಿ ಮತ್ತು ಬ್ರಾಹ್ಮಣ ಅಧಿಕಾರವನ್ನು ಪ್ರಶ್ನಿಸದ ಸಮಾಜವಾದಿ ಅಥವಾ ವಿಮೋಚನಾ ಧರ್ಮ ಶಾಸ್ತ್ರವನ್ನು ಊಹಿಸುವುದು ಕಷ್ಟವೇ ಸರಿ. ಅಂಬೇಡ್ಕರರೂ ಸೇರಿದಂತೆ ಎಲ್ಲ ತೀವ್ರ ಸುಧಾರಕರೂ ಈ ಕಾರಣಕ್ಕಾಗಿಯೇ ಹಿಂದೂಧರ್ಮದಿಂದ ದೂರ ಸರಿದಿದ್ದಾರೆ.[24] ಜಾತಿವಾದಿ ಹಿಂದೂಗಳನ್ನು ಬೆಚ್ಚಿಬೀಳಿಸುವ ಸಲುವಾಗಿ ಅಂಬೇಡ್ಕರರು ಬೌದ್ಧ ಧರ್ಮಕ್ಕೆ ಪರಿವರ್ತನೆಗೊಂಡರು ಎಂದು ಎಲೀನರ್ ಜೇಲಿಯಟ್ ಭಾವಿಸುತ್ತಾರೆ.[25] ಇಸ್ಲಾಂ ಅಥವಾ ಕ್ರೈಸ್ತ ಧರ್ಮವನ್ನು ಬಿಟ್ಟು ಬೌದ್ಧ ಧರ್ಮವನ್ನೇ ಅಂಬೇಡ್ಕರರು ಆರಿಸಿದ್ದೇಕೆ? ಇದಕ್ಕೆ ಉತ್ತರವಾಗಿ ಅಂಬೇಡ್ಕರರ ಮಾತುಗಳನ್ನೇ ಉದ್ಧರಿಸಲಾಗಿದೆ:- ಬೌದ್ಧಧರ್ಮವನ್ನು ಸ್ವೀಕರಿಸಲು ಕಾರಣ. ಅದು ಭಾರತೀಯ ಸಂಸ್ಕೃತಿಯ ಭಾಗವೇ

ಆಗಿದೆ. ಇಸ್ಲಾಂ ಅಥವಾ ಕ್ರಿಶ್ಚಿಯನ್ ಧರ್ಮವನ್ನು ತಾನು ಸ್ವೀಕರಿಸಿದ್ದೇ ಆಗಿದ್ದಲ್ಲಿ, ಭಾರತ ದೇಶ ಐದು ವರ್ಷಗಳ ಒಳಗಾಗಿ ಸಂಪೂರ್ಣ ನಾಶಗೊಳ್ಳುತ್ತಿತ್ತು. ಆದರೆ ಬೌದ್ಧ ಧರ್ಮಕ್ಕೆ ಪರಿವರ್ತನೆ ಹೊಂದುವುದರಿಂದ ಭಾರತ ದೇಶದ ಸಂಸ್ಕೃತಿ ಮತ್ತು ಚರಿತ್ರೆಗೆ ಧಕ್ಕೆಯೊದಗುವುದಿಲ್ಲ ಎಂಬುದು ಅವರ ವಾದವಾಗಿತ್ತು. ಹಿಂದೂ ನಾಯಕರು ಮತ್ತು ಜನಾಭಿಪ್ರಾಯ ಈ ಪರಿವರ್ತನೆಯನ್ನು ಗಂಭೀರವಾಗಿ ಮತ್ತು ಆತಂಕದಿಂದ ಪರಿಗಣಿಸಿದವು. ಕೆಲವರು ಈ ಪರಿವರ್ತನೆಯನ್ನು "ಆಧುನಿಕ ಯುಗದಲ್ಲಿ ಭಾರತ ಕಂಡಿರುವ ಅತ್ಯಂತ ಮಹತ್ವದ ಧಾರ್ಮಿಕ ಕ್ರಾಂತಿ" ಎಂದು ವ್ಯಾಖ್ಯಾನಿಸಿದ್ದಾರೆ.27 ಹಿಂದೂಧರ್ಮವನ್ನು ಸುಧಾರಿಸುವ ಯತ್ನದಲ್ಲಿ ಭ್ರಮನಿರಸನಗೊಂಡ ಅಂಬೇಡ್ಕರರು, ಅದರಿಂದ ಹೊರಬರುವ ದಾರಿಯೆಂದರೆ ಹಿಂದೂಧರ್ಮದ ನಿರಾಕರಣೆಯೊಂದೇ ಎಂಬ ನಿಲುವನ್ನು ತಲುಪಿ, ಪರಿವರ್ತನೆಯ ನಿರ್ಧಾರವನ್ನು ಕೈಗೊಂಡರು. ಆದರೆ ಇಲ್ಲಿ ಅವರು ಎರಡು ವಿಷಯಗಳನ್ನು ಗಮನಿಸಬೇಕಾದ ಅಗತ್ಯವಿತ್ತು. ಮೊದಲಿಗೆ ಅಸ್ಪೃಶ್ಯರು ತಮ್ಮ ಸ್ಥಾನಮಾನದ ಬಗ್ಗೆ ಅಸಂತುಷ್ಟಗೊಂಡಿದ್ದರೂ, ತಮ್ಮ ಧರ್ಮದಿಂದ ದೂರ ಸರಿಯಲು ಮಾನಸಿಕವಾಗಿ ತಯಾರಿರಲಿಲ್ಲವಾದ್ದರಿಂದ, ಅಂಬೇಡ್ಕರರ ನಿರ್ಧಾರ ಅವರಿಗೆ ಒಪ್ಪಿತವಾಗಬೇಕಿತ್ತು. ಎರಡನೆಯದಾಗಿ, ಅವರ ನಿರ್ಧಾರಗಳು ರಾಷ್ಟ್ರೀಯ ನಾಯಕರನ್ನು ಬೆಚ್ಚಿಬೀಳಿಸುತ್ತಲೇ, ರಾಷ್ಟ್ರೀಯ ಚಳವಳಿಯ ಉದ್ದೇಶಗಳ ಮೇಲೆ ಯಾವುದೇ ದುಷ್ಪರಿಣಾಮವನ್ನು ಬೀರದಂತಿರಬೇಕಿತ್ತು. ಕ್ರಿಶ್ಚಿಯನ್ ಅಥವಾ ಇಸ್ಲಾಂ ಧರ್ಮಕ್ಕೆ ಪರಿವರ್ತನೆಗೊಳ್ಳಲು ಅಂಬೇಡ್ಕರ್ ನಿರ್ಧರಿಸಿದ್ದರೆ, ಅವರ ಅನುಯಾಯಿಗಳಿಗೆ ಅದನ್ನು ಒಪ್ಪಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ಈ ಎರಡೂ ಧರ್ಮಗಳು ಭಾರತೀಯ ಸಂಸ್ಕೃತಿಗೆ ಪರಕೀಯವಾದವು ಎಂಬ ಭಾವನೆ ಸಾಮಾನ್ಯವಾಗಿ ಬೇರೂರಿತ್ತು. ಅಂತಹ ನಿರ್ಧಾರ, ಘರ್ಷಣೆಗಳನ್ನು ಹುಟ್ಟುಹಾಕಿ ರಾಷ್ಟ್ರೀಯ ಚಳವಳಿಯ ಏಕತೆಗೆ ಧಕ್ಕೆಯುಂಟುಮಾಡುವ ಸಂಭವವಿತ್ತು. ಬಹುಶಃ 1935ರಷ್ಟು ಹಿಂದೆಯೇ ಅಂಬೇಡ್ಕರ್ ಹಿಂದೂಧರ್ಮವನ್ನು ತ್ಯಜಿಸುವ ನಿರ್ಧಾರವನ್ನು ಕೈಗೊಂಡಿರಬೇಕು. ಇಯೋಲಾದ ಸಮಾವೇಶವೊಂದರಲ್ಲಿ ಅವರು ಹೀಗೆ ಘೋಷಿಸಿದ್ದರು :

"ನಾನು ಹಿಂದೂವಾಗಿ ಸಾಯುವುದಿಲ್ಲವೆಂದು ಶ್ರದ್ಧಾಪೂರ್ವಕವಾಗಿ ಭರವಸೆ ನೀಡುತ್ತೇನೆ." ಸೂಕ್ತ ಸಮಯಕ್ಕಾಗಿ ಮತ್ತು ಲಭ್ಯವಿದ್ದ ಇತರ ಎಲ್ಲ ಮಾರ್ಗಗಳಲ್ಲೂ ಯತ್ನಿಸಿ ನಂತರ ಈ ಹೆಜ್ಜೆಯಿರಿಸಲು ಅಂಬೇಡ್ಕರ್ ಕಾಯುತ್ತಿದ್ದರು.

ಸಾಧಿಸಲು ಹೊರಟ್ಟಿದ್ದನ್ನು ಅಂಬೇಡ್ಕರ್ ಸಾಧಿಸಿದರೇ ? ಅವರು ತೀರಿಕೊಂಡ 35 ವರ್ಷಗಳ ನಂತರವೂ ಈ ಪ್ರಶ್ನೆಗೆ ನಿಖರವಾದ ಉತ್ತರ ನೀಡಲು ಸಾಧ್ಯವಿಲ್ಲ.

ಅಸ್ಪೃಶ್ಯತೆ, ಶೋಷಣೆ ಮತ್ತು ಭೇದಭಾವಗಳ ವಿರುದ್ಧದ ಹೋರಾಟದ ಪ್ರತೀಕವಾಗಿ ಅಂಬೇಡ್ಕರ್ ಉಳಿದಿದ್ದಾರೆ. ಭಾರತದಾದ್ಯಂತ (ಎಲ್ಲ ದಲಿತರು) ವಿವಿಧ ಪಂಗಡಗಳಲ್ಲಿ ಹಂಚಿಹೋಗಿದ್ದರೂ, ಅಂಬೇಡ್ಕರರನ್ನು ಮಾತ್ರ ಭಾರತದಲ್ಲಿ ಆಗಿಹೋದ ಏಕಮಾತ್ರ ದಲಿತ ನಾಯಕನೆಂದು ಎತ್ತಿ ಹಿಡಿದಿದ್ದಾರೆ. ಕಮ್ಯುನಿಸ್ಟರು ಮತ್ತು ಬಿ.ಜೆ.ಪಿ. ಯವರೂ ಸೇರಿದಂತೆ ಎಲ್ಲ ರಾಜಕೀಯ ಪಕ್ಷದವರೂ, ಕಡೇ ಪಕ್ಷ ಸಾರ್ವಜನಿಕ ವೇದಿಕೆ ಗಳಲ್ಲಿ, ಗಾಂಧಿ ಮತ್ತು ನೆಹರುರಂತೆ ಅಂಬೇಡ್ಕರರನ್ನೂ ರಾಷ್ಟ್ರೀಯ ನಾಯಕರೆಂದು ಪರಿಗಣಿಸುತ್ತಾರೆ. ಇಂದು ದಲಿತರು ಶೋಷಣೆ ಮತ್ತು ಭೇದ ಭಾವಗಳಿಗೆ ತುತ್ತಾ ಗಿರುವ ನಿಷ್ಕ್ರಿಯ ಮಂದಿಯಲ್ಲ. ಅವರು ಪ್ರತಿಭಟಿಸಲು ಅರಿತಿದ್ದಾರೆ. ರಾಜಕೀಯ ವಾಗಿ ತಮ್ಮನ್ನು ತಾವು ಸಂಘಟಿಸಿಕೊಳ್ಳುವುದರ ಮಹತ್ವವನ್ನು ಅರಿತಿದ್ದಾರೆ. ಆತ್ಮಾಭಿ ಮಾನವನ್ನು ಬೆಳೆಸಿಕೊಂಡು, ಸಾಂಪ್ರದಾಯಿಕವಾಗಿ ಅವರಿಗೆ ಅಂಟಿಬಂದಿದ್ದ ಅಸ್ಪೃಶ್ಯ ತೆಯ ಕೀಳರಿಮೆಯಿಂದ ಬಿಡುಗಡೆ ಹೊಂದಿದ್ದಾರೆ. ಎಲ್ಲ ಸ್ತರಗಳಲ್ಲೂ ದಲಿತರ ಪ್ರಾತಿನಿಧ್ಯವಿರಬೇಕೆಂದು ಎಲ್ಲ ರಾಜಕೀಯ ಪಕ್ಷಗಳೂ ಒಪ್ಪಿಕೊಂಡಿವೆ. ಸಮಾಜ ಯಾವ ಜನರನ್ನು ಶಿಕ್ಷಣ ಮತ್ತು ಉದ್ಯೋಗಾವಕಾಶಗಳಿಂದ ವಂಚಿಸಿದೆಯೋ, ಅವರಿ ಗಾಗಿ ಹಕ್ಕುಗಳನ್ನು ಸೃಷ್ಟಿಸುವ ಪೂರ್ಣ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳ ಬೇಕು ಎಂಬ ದಲಿತರ ಪ್ರಮುಖ ಹಕ್ಕೊತ್ತಾಯವನ್ನೂ ಎಲ್ಲ ರಾಜಕೀಯ ಪಕ್ಷಗಳೂ ಒಪ್ಪಿಕೊಂಡಿವೆ. ನಿಸ್ಸಂಶಯವಾಗಿ ಈ ಎಲ್ಲ ಸಾಧನೆಗಳ ಗೌರವ ಸಲ್ಲಬೇಕಾದುದು ಅಂಬೇಡ್ಕರರಿಗೆ.

ಮತ್ತೊಂದೆಡೆಯಲ್ಲಿ, ಇಂದು ದಲಿತ ಚಳವಳಿಗೆ ಎಲ್ಲರನ್ನೂ ಹಿಡಿದಿಡುವಂಥ ತಾತ್ವಿಕ ಚೌಕಟ್ಟಿನ ಅಭಾವವಿದೆ. ಪ್ರಸಕ್ತ ರಾಜಕೀಯ ವ್ಯವಸ್ಥೆಯಲ್ಲಿ ದಲಿತರು ಬಹಳ ಹೆಚ್ಚೆಂದರೆ ಒಂದು ಒತ್ತಡ ತಂಡವಾಗಿ ಉಳಿದಿದ್ದಾರೆ. ನಮ್ಮ ಸಂವಿಧಾನದಲ್ಲಿ ನೀಡಲಾಗಿರುವ ಹಲವಾರು ಭರವಸೆಗಳನ್ನು ಪೂರೈಸುವಲ್ಲಿ ವಿಫಲವಾಗಿರುವ ಪ್ರಸಕ್ತ ರಾಜಕೀಯ ವ್ಯವಸ್ಥೆಯನ್ನು ವಿರೋಧಿಸಬಲ್ಲ ಶಕ್ತಿಶಾಲಿ ರಾಜಕೀಯ ಐಡಿಯಾಲಜಿ ಯೊಂದನ್ನು ಅವರು ಹೊಂದಿಲ್ಲ. ದಲಿತವರ್ಗ ಹಲವಾರು ಪಂಗಡಗಳಾಗಿ ಹರಿದು ಹಂಚಿಹೋಗಿದೆ. ಅವರಲ್ಲಿ ಕೆಲವರು ಹೊಂದಾಣಿಕೆ ರಾಜಕೀಯಕ್ಕೆ ಬಲಿಯಾಗಿದ್ದಾರೆ. ವಿಧಾನಮಂಡಲ, ಸರ್ಕಾರಿ ಸೇವೆ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಪ್ರಾತಿನಿಧ್ಯ ಮುಂತಾದ ವನ್ನು ಗಣನೀಯ ಸಮಾನತೆ ಸಾಧಿಸಬಲ್ಲ ಸಾಧನಗಳನ್ನಾಗಿ ರೂಪಿಸಲಾಗಿದೆ. ಆದರೀಗ ಅವೇ ಅಂತಿಮ ಗುರಿಗಳಾಗಿ ಪರಿಣಮಿಸಿವೆ. ಕುತೂಹಲದ ಸಂಗತಿಯೆಂದರೆ ಇಂದಿಗೂ ಗಾಂಧಿಯ ತತ್ವ ಮುಖ್ಯವಾಗಿ ಮೇಲ್ಜಾತಿಯವರ ಮನಮುಟ್ಟುವಂಥದ್ದಾಗಿದೆ ಮತ್ತು ಅಂಬೇಡ್ಕರರನ್ನು ನಿಮ್ನ ವರ್ಗದವರ, ವಿಶೇಷವಾಗಿ ದಲಿತರ ನಾಯಕನೆಂದೇ ಪರಿಗಣಿಸ

ಶೂದ್ರ

ಲಾಗಿದೆ. ಈ ರೀತಿಯ ಬೆಳವಣಿಗೆಗೆ ಕಾರಣಗಳನ್ನು 'ಮಹಾರಾಷ್ಟ್ರದಲ್ಲಿ ರಾಜಕೀಯ ಮತ್ತು ಬೌದ್ಧ ಧರ್ಮ' ಎಂಬ ಲೇಖನದಲ್ಲಿ ಗೋಪಾಲಗುರು ಗುರುತಿಸುತ್ತಾರೆ. 1956 ರಿಂದೀಚೆ, ಅಂಬೇಡ್ಕರರ ನಿಧನಾನಂತರ ದಲಿತರನ್ನು ಸಂಘಟಿಸುವಲ್ಲಿ ದಲಿತ ನಾಯಕರು ವಿಫಲಗೊಂಡಿದ್ದನ್ನೇ ಅವರು ಮುಖ್ಯ ಕಾರಣವಾಗಿ ಗುರುತಿಸುತ್ತಾರೆ. 1959 ಮತ್ತು 1964 ರಲ್ಲಿ ನಡೆದ ಭಾರಿ ಸತ್ಯಾಗ್ರಹಗಳು ಏನೇ ಇದ್ದರೂ ಕಾನೂನಿನ ಚೌಕಟ್ಟಿನ ಹೊರಗೆ ದಲಿತರನ್ನು ರಾಜಕೀಯವಾಗಿ ಸಂಘಟಿಸುತ್ತಿದ್ದ ಅಂಬೇಡ್ಕರರ ಸಂಪ್ರದಾಯವನ್ನು ಆರ್‌ಪಿಐ ನಾಯಕರು ಮುಂದುವರಿಸಿಲ್ಲವೆಂದೇ ಹೇಳಬಹುದು. 28 ಭೂಸುಧಾರಣೆ, ಕನಿಷ್ಠ ಕೂಲಿದರ ಮುಂತಾದ ಪ್ರಮುಖ ಆರ್ಥಿಕ ವಿಷಯಗಳು, ಏಕರೂಪ ಕಡ್ಡಾಯ ಶಿಕ್ಷಣ, ಇಂತಹ ವಿಷಯಗಳ ಬಗ್ಗೆ ದಲಿತರನ್ನು ಸಂಘಟಿಸದಿರುವುದೇ ಅವರ ಪ್ರಮುಖ ವೈಫಲ್ಯವಾಗಿದೆ. ಇಂದಿಗೂ ಕೂಡ ಪರಿಶಿಷ್ಟ ಜಾತಿಗಳ ಮೇಲಿನ ದೌರ್ಜನ್ಯ, ಅಂಬೇಡ್ಕರರ ಪ್ರತಿಮೆಗಳ ಸ್ಥಾಪನೆ, ವಿಶ್ವವಿದ್ಯಾನಿಲಯಗಳಿಗೆ ಅಂಬೇಡ್ಕರರ ಹೆಸರನ್ನಿಡುವುದು ಇತ್ಯಾದಿ ಸಾಮಾಜಿಕ ವಿಷಯಗಳ ಬಗ್ಗೆ ಮಾತ್ರ ದಲಿತರನ್ನು ಸಂಘಟಿಸಲಾಗುತ್ತಿದೆ. ಇವು ವಿವಾದಾತ್ಮಕ ವಿಷಯಗಳಲ್ಲ ಎಂಬುದು ಈ ಮಾತಿನ ಅರ್ಥವಲ್ಲ. ಚಳವಳಿಯೊಂದನ್ನು ನಿರ್ಮಿಸುವಲ್ಲಿ ಇಂತಹ ವಿಷಯಗಳ ಮಹತ್ವ ದೊಡ್ಡದು. ಆದ್ದರಿಂದ ಅವುಗಳನ್ನು ಜೀವಂತವಾಗಿರಿಸಿಕೊಳ್ಳಬೇಕು. ಆದರೆ ಅಂತಹ ವಿಷಯಗಳಿಗೆ ಮಾತ್ರ ಒತ್ತು ಕೊಡುವುದರಿಂದಾಗಿ, ದಲಿತರ ವ್ಯಾಖ್ಯೆಯನ್ನೇ ಮಿತಿಗೊಳಿಸಿದಂತಾಗುತ್ತದೆ. ಇಂದಿನ ದಲಿತರು ಯಾರು? ಮೇಲ್ವರ್ಗದವರು ದಲಿತರಲ್ಲ. ಹಿಂದುಳಿದ ವರ್ಗದವರು ದಲಿತರಲ್ಲ. ಇನ್ನುಳಿದವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು. ಆರ್ಥಿಕೇತರ ವಿಷಯಗಳ ಸುತ್ತ ಮತ್ತು ಜಾತಿಯ ಆಧಾರದ ಮೇಲೆ ಮಾತ್ರ ದಲಿತರನ್ನು ಸಂಘಟಿಸುವ ಕಾರ್ಯ ಮುಂದುವರಿಯುವವರೆಗೂ, ಅವರನ್ನು ಸಮಾಧಾನಗೊಳಿಸುವುದು ವ್ಯವಸ್ಥೆಗೆ ಸುಲಭವೇ ಆಗಿರುತ್ತದೆ. ವಾಸ್ತವವಾಗಿ ಮಹಾರಾಷ್ಟ್ರದಲ್ಲಿ ಬೌದ್ಧಧರ್ಮಕ್ಕಾಗಿ ನಡೆದ ಸಾಂಸ್ಕೃತಿಕ ಚಳವಳಿಯಲ್ಲಿ ಘನ ಘೋಷಣೆ ಮಾಡಿದವರು ಮೇಲುಜಾತಿಯ ಜನರೇ. ಗೋಪಾಲಗುರು ಇದಕ್ಕೆ ಎರಡು ಕಾರಣಗಳನ್ನು ನೀಡುತ್ತಾರೆ. "ಮೊದಲನೆಯದಾಗಿ ಈ ನೆರವು ಚುನಾವಣಾ ಉದ್ದೇಶಗಳಿಗಾಗಿ ಬೌದ್ಧರ ಪೈಕಿ ರಾಜಕೀಯ ತಳಹದಿಯನ್ನು ಗಳಿಸಿಕೊಳ್ಳಲು ಮೇಲು ಜಾತಿಯ ನಾಯಕರಿಗೆ ಸಹಾಯಕವಾಯಿತು. ಎರಡನೆಯದಾಗಿ, ಈ ರೀತಿಯ ಬೌದ್ಧ ಚಟುವಟಿಕೆಗಳಿಗೆ ಬೆಂಬಲ ನೀಡುವ ಮೂಲಕ, ಬೌದ್ಧ ಭೂಹೀನ ಕಾರ್ಮಿಕರನ್ನು ಭೂಮಿ ಮತ್ತು ವೇತನದಂತಹ ಮೂಲಭೂತ ವಿಷಯಗಳಿಂದ ಅಷ್ಟೇನೂ ಪ್ರಮುಖವಲ್ಲದ ಧರ್ಮ ಮತ್ತು ಸಂಸ್ಕೃತಿಯಂಥ ವಿಷಯಗಳತ್ತ ಅವರನ್ನು ತಿರುಗಿಸಿದವು." ಮೇಲ್ಜಾತಿಯ ನಾಯಕರ ಪೈಕಿ ಪಟ್ಟಭದ್ರ ಹಿತಾಸಕ್ತಿಗಳು ಜಾತಿ ಪದ್ಧತಿಯನ್ನು ಶಾಶ್ವತವಾಗಿ

ಮುಂದುವರಿಸುತ್ತಲೇ ಬಂದರು ಎಂಬುದು ಚಾರಿತ್ರಿಕ ಸತ್ಯವೇ ಆಗಿದೆ. ಹೊಂದಾಣಿಕೆ ರಾಜಕೀಯವನ್ನು ಕಾನೂನು ಸಮ್ಮತಗೊಳಿಸಿದ ಕೂಡಲೆ, ದಲಿತ ನಾಯಕರ ಪೈಕಿ ಯಿರುವ ಪಟ್ಟಭದ್ರ ಹಿತಾಸಕ್ತಿಗಳು ನವ ಜಾತಿ ಪದ್ಧತಿಯನ್ನು ಜೀವಂತವಾಗಿಟ್ಟವೆ. ಆರ್ಥಿಕ ವ್ಯವಸ್ಥೆಯ ಪರಿವರ್ತನೆಯತ್ತ ಗಮನವನ್ನು ಕೇಂದ್ರೀಕರಿಸದೆ, ಬದಲಾಗಿ ತಮ್ಮ ಜಾತಿಗಳನ್ನು ಪ್ರತ್ಯೇಕವಾಗಿ ಉಳಿಸಿಕೊಳ್ಳುವುದರ ಬಗ್ಗೆ ಶ್ರಮವಹಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಕೂಡಲೆ ಕೈಗೆತ್ತಿಕೊಳ್ಳಬೇಕಾದ ಕೆಲವು ಪ್ರಶ್ನೆಗಳು ಏಳುತ್ತವೆ. ಅಂಬೇಡ್ಕರರು ಅಸ್ಪೃಶ್ಯರ ಆರ್ಥಿಕ ಸಮಸ್ಯೆಗಳಿಗಿಂತ ಸಾಮಾಜಿಕ–ಸಾಂಸ್ಕೃತಿಕ ಸಮಸ್ಯೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದು ಸರಿಯೆ ? ಅಸ್ಪೃಶ್ಯರ ನಾಯಕತ್ವವನ್ನು ಅಸ್ಪೃಶ್ಯರೇ ವಹಿಸಬೇಕೆಂಬ ಅಂಬೇಡ್ಕರರ ಸಿದ್ಧಾಂತವನ್ನು ಒಪ್ಪಬೇಕೆ? ಅಂಬೇಡ್ಕರರು ಅಗಾಧ ನಂಬಿಕೆ ಮತ್ತು ಭರವಸೆ ಹೊಂದಿದ್ದ ಮತ್ತು ಅಂಬೇಡ್ಕರರೇ ರೂವಾರಿಯಾಗಿ ರೂಪಿಸಿದ ಲಿಬರಲ್ ಪ್ರಜಾಸತ್ತಾತ್ಮಕ ಚೌಕಟ್ಟು ಫಲಕಾರಿಯಾಗದೆ ಹೋಯಿತೇಕೆ ? ಅಥವಾ ಅದು ಫಲಕಾರಿಯಾಗದೆ ಹೋಗಿರುವುದು ನಿಜವೇ ? ಈ ಪ್ರಶ್ನೆಗಳನ್ನು ತೃಪ್ತಿಕರವಾಗಿ ಉತ್ತರಿಸುವವರೆಗೂ, ಅಂಬೇಡ್ಕರರ ಪ್ರತಿಸಿದ್ಧಾಂತ ಬಿಡಿ ಬಿಡಿಯಾಗಿಯೇ ಉಳಿಯುತ್ತದೆ, ಅದರ ದಿಕ್ಕು ಸರಿಯಾದ ಮಾರ್ಗದಲ್ಲಿ ನಿರ್ದೇಶಿತಗೊಳ್ಳದೆ ಹೋಗುತ್ತದೆ. ಅಷ್ಟೇ ಅಲ್ಲ, ಅಂಬೇಡ್ಕರರ ಪ್ರತಿಸಿದ್ಧಾಂತ ಸಾಂಸ್ಕೃತಿಕ ಮತ್ತು ತಾತ್ವಿಕ ಯಾಜಮಾನತ್ವಕ್ಕೆ ಕೊಡುವ ಒತ್ತು ಕೂಡ ದುರ್ಬಲವಾಗೇ ಉಳಿದು ಹೋಗುತ್ತದೆ.

ಉಲ್ಲೇಖಗಳು :

1. ಡಾ॥ ಅಂಬೇಡ್ಕರರಿಗೆ ಈ ಬಗ್ಗೆ ಚೆನ್ನಾಗಿ ತಿಳಿದಿತ್ತು. ಸೌತ್‌ಬರೋ ಸಮಿತಿಗೆ ಅವರು ನೀಡಿದ ಸಾಕ್ಷ್ಯದಲ್ಲಿ, ಅಸ್ಪೃಶ್ಯರನ್ನು ಸೇವಕರು', 'ಅಮಾನವೀಯರು' ಮತ್ತು "ಸೊಲ್ಲೆತ್ತದಂಥ ಸಮಾಜಾಧೀನರು" ಮುಂತಾಗಿ ಚಿತ್ರಿಸಿದ್ದಾರೆ. ನೋಡಿ : ಜೆಲಿಯಲ್ ಎಲೀನರ್‌ನ "Learning the use of Political Means", ರಜನಿ ಕೊಠಾರಿ (ಸಂ)–"Caste in Indian Politics"ನಲ್ಲಿ ಓರಿಯೆಂಟ್ ಲಾಂಗ್‌ಮನ್, 1986, ಪುಟ 41.
2. 9ನೇ ಮೇ 1910, ಡಾ॥ ಎ. ಎ. ಗೋಲ್ಡನ್ ವೈಸರ್, ಕೊಲಂಬಿಯಾ ವಿಶ್ವವಿದ್ಯಾನಿಲಯ, ನ್ಯೂಯಾರ್ಕ್. ಇಂಡಿಯನ್ ಆಂಟಿಕ್ವೇರಿ, ಸಂಪುಟ xxvi ರಲ್ಲಿ ಪ್ರಕಟಿತ, 1917, ಪುಟ 81–95,

3. ಡಾ॥ ಅಂಬೇಡ್ಕರ್ ಬಿ.ಆರ್. "Who were the Shudras? How they came to be the Fourth Varna in the Indo-Aryan Society?" ಥ್ಯಾಕರ್ ಮತ್ತು ಕಂ. ಮುಂಬಯಿ, 1986.

4. ಡಾ॥ ಅಂಬೇಡ್ಕರ್ ಬಿ.ಆರ್. "The untouchables, who are they? and why they became untouchables? ಅಮೃತ್ ಬುಕ್ ಕಂ. ನವದೆಹಲಿ, 1948, ಪುಟ 163–178 (ಕನ್ನಡ ಆವೃತ್ತಿ).

5. ಅದೇ ಪುಟ 6.

6. ಡಾ॥ ಅಂಬೇಡ್ಕರ್ "Who were the Shudras?"ನಲ್ಲಿ ಉದ್ಧರಿಸಲಾಗಿದೆ. ಪುಟ 155.

7. ಜೆಲಿಯಟ್ ಎಲೀನರ್, ರಜನಿ ಕೊಠಾರಿಯಂ ಕೃತಿ ಪುಟ 63 ರಿಂದ ಉದ್ಧರಿಸಲಾಗಿದೆ.

8. ಕೀರ್ ಧನಂಜಯ್ – "Dr. Ambebkar - Life and Mission", ಮುಂಬಯಿ, ಪಾಪ್ಯುಲರ್ ಪ್ರಕಾಶನ, 1954, ಪುಟ 25.

9. ಜೆಲಿಯಟ್‌ನಿಂದ ಉದ್ಧೃತ ಪುಟ 172-173.

10. ಸುಭಾಷ್ ಚಂದ್ರಬೋಸ್‌ರವರ ಮಾತುಗಳಲ್ಲಿ "1930ರಲ್ಲಿ ಮತ್ತು ಅಂಬೇಡ್ಕರ್ ಕರುಣಾಮಯಿಯಾದ ಬ್ರಿಟಿಷ್ ಸರ್ಕಾರದಿಂದ ನಾಯಕತ್ವವನ್ನು ಹೇರಿಸಿಕೊಂಡ ನಂತರ...." ಸುಭಾಷ್ ಚಂದ್ರಬೋಸ್‌ರವರ "The Indian Struggle Part] 2 - Netajis Life and Writings", ಕಲ್ಕತ್ತಾ, ಥ್ಯಾಕರ್, ಸ್ಪಾಂಕ್ ಅಂಡ್ ಕೋ, 1948, ಪುಟ 40,

11. ಸೆಲಿಗ್ ಹ್ಯಾರಿಸನ್ "India: The Most Dangerous Decades" ಆಕ್ಸ್‌ಫರ್ಡ್, 1960, ಪುಟ 190-191.

12. ಅದೇ ಪುಟ 191.

13. ವಲೇರಿಯನ್ ರಾಡ್ರಿಗ್ಸ್–"ಭಾರತದಲ್ಲಿ ಜಾತಿ, ಸಮಾಜ ಮತ್ತು ಸಾಮಾಜಿಕ ಪರಿವರ್ತನೆ: ಗಾಂಧಿ, ಅಂಬೇಡ್ಕರ್ ಮತ್ತು ಭಾರತೀಯ ಕಮ್ಯುನಿಸ್ಟರ ನಿಲುವು" ಅಪ್ರಕಟಿತ ಲೇಖನ.

14. ಜೆಲಿಯಂಟ್ ಎಲೀನರ್ ಕೃತಿಯಿಂದ ಉದ್ಧೃತ ಪುಟ 43.

15. ಅದೇ ಪುಟ 45.

16. ರಾಡ್ರಿಗ್ಸ್ ವಲೇರಿಯಾನ್ ಮೇಲಿನ ಲೇಖನದಿಂದ ಉದ್ಧರಿಸಲಾಗಿದ.

17. ಜೆಲಿಯಂಟ್ ಎಲೀನರ್ ಮೇಲಿನ ಕೃತಿಯೀಂದ ಉದ್ಧರಿಸಲಾಗಿದೆ - ಪುಟ 46.

18. ಒಪ್ಪಂದದ ವಿವರವಾದ ವಿಶ್ಲೇಷಣೆಗಾಗಿ, ನೋಡಿ ಯೋಗೇಂದ್ರ ಮಂಕ್ವಾನರವರ "Reservation, Does it promote class war"? ಲಿಂಕ್. 21ನೇ ಏಪ್ರಿಲ್ 1985.

19. ಗ್ಯಾಲಂಟರ್ ಮಾರ್ಕ್‌ರವರ "Competing Equalities, Law and Backward Classes in India" ನವದೆಹಲಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 1984. ಪುಟ 30.

20. ಡಶ್ಕಿನ್ ಲೀಲಾ "Scheduled Caste Politics"ನಲ್ಲಿ ಮೈಕೇಲ್ ಮಂಹರ್ (ಸಂ.) ಕೃತಿ "The untouchability in contemporary India"ನಲ್ಲಿ ಅಂಜೋನಾ, ಅಂಜೋನಾ ಪ್ರೆಸ್ ವಿಶ್ವವಿದ್ಯಾನಿಲಯ, 1972, ಪುಟ 77.

21. ಜೆಲಿಯಂಟ್ ಎಲೀನರ್ - ಮೇಲಿನ ಕೃತಿಯಿಂದ ಉದ್ಧರಿಸಲಾಗಿದೆ. ಪ್ರಟ 46.

22. ವಿವರಗಳಿಗಾಗಿ ನೋಡಿ ಜೆಲಿಯಂಟ್ ಎಲೀನರ್ ಲೇಖನ: "The Social and Political thought of Ambedkar" ಥಾಮಸ್ ಪ್ಯಾಂಥಮ್ ಮತ್ತು ಕೆನ್‌ತ್ ಎಲ್ ಡಾಯ್‌ಶ್ (ಸಂ) ರವರ "Political thought in Modern India" ಕೃತಿಯಲ್ಲಿ.

23. ಓಂವಿಟ್, ಗೈಲ್ "Hinduism and Politics" - ಮೊಯಿನ್ ಶಕೀರ್ (ಸಂ) ಕೃತಿ 'Religion, Caste and Politics in India", ನವದೆಹಲಿ ಅಜಂತಾ ಪ್ರಕಾಶಕರು, 1989, ಪುಟ 6.

24. ಅದೇ ಪುಟ 7.

25. ಜೆಲಿಯಂಟ್ ಎಲೀನರ್ - ಥಾಮಸ್ ಪ್ಯಾಂಥಮ್ ಮತ್ತು ಕೆನೆತ್ ಡಾಯ್ (ಸಂ) ರಿಂದ ಉದ್ಧರಿಸಲಾಗಿದೆ, ಪುಟ 63,

6. ಕೀರ್, ದಂಜನ್‌ನಿಂದ ಉದ್ಧರಿಸಲಾಗಿದೆ. ಪುಟ 495.

7. ಮ್ಯಾಥ್ಯೂ ಜಾರ್ಜ್ "Politicisation of Religion in Tamil Nadu" ಮೊಯಿನ್ ಶಕೀರ್ (ಸಂ) ಕೃತಿಯಿಂದ ಉದ್ಧರಿಸಲಾಗಿದೆ ಪುಟ 282.

8. ಮಹಾರಾಷ್ಟ್ರದ ದಲಿತ ಚಳುವಳಿಯ ಮೇಲೆ ಪರಿವರ್ತನೆಯಿಂದ ಉಂಟಾದ ಪರಿಣಾಮದ ವಿವರವಾದ ವಿಶ್ಲೇಷಣೆಗೆ ನೋಡಿ ಗೋಪಾಲ ಗುರುರವರ "Politics & Buddhism in Maharashtra" ಮೊಯಿನ್ ಶಕೀರ್ (ಸಂ) ಕೃತಿಯಿಂದ ಉದ್ಧರಿಸಲಾಗಿದೆ ಪುಟ 417-428.

9. ಗೋಪಾಲ ಗುರು – ಉದ್ಧರಣೆ - ಪುಟ 422.

ಪ್ರಶ್ನೋತ್ತರಗಳು

ಪ್ರಶ್ನೆಗಳು

1. ಅಂಬೇಡ್ಕರ್ ವಿಚಾರಗಳನ್ನು ನೀವು ಅರ್ಥೈಸುವ ಕ್ರಮವನ್ನು ವಿವರಿಸುವಿರಾ ?

2. ಭಾರತದ ರಾಜಕಾರಣದ ಮೇಲೆ ಅಂಬೇಡ್ಕರ್ ಹೋರಾಟಗಳ ಪ್ರಭಾವವನ್ನು ಹೇಗೆ ಗುರುತಿಸುತ್ತೀರಿ ?

3. ನಿಮ್ಮ ಕಲ್ಪನೆಯ ದಲಿತ ಹೋರಾಟದ ಸ್ವರೂಪವೇನು ?

4. ಎಡ ಪಂಥೀಯ ಚಿಂತನೆ; ಹೋರಾಟಗಳು ಮತ್ತು ದಲಿತ ಚಳವಳಿಯ ನಡುವಣ ಸಹಯೋಗವನ್ನು ನೀವು ಬಯಸುವುದಾದರೆ ಅದರ ಸ್ವರೂಪ ಹೇಗಿರಬೇಕೆಂದು ನೀವು ಭಾವಿಸುತ್ತೀರಿ ?

5. ದಲಿತರು, ಹಿಂದುಳಿದವರು, ಅಲ್ಪ ಸಂಖ್ಯಾತರು ಇವರ ಒಗ್ಗಟ್ಟನ್ನು ಕುರಿತ ಪ್ರಯತ್ನಗಳು ಉಪಯುಕ್ತವೆ ? ಈ ಬಗೆಗೆ ನಿಮ್ಮ ವಿಚಾರಗಳೇನು ?

ರಾಜಕೀಯ ಅಧಿಕಾರ ಮತ್ತು ದಲಿತ ಹೋರಾಟ

– ಮರಿಸ್ವಾಮಿ

1. ಒಬ್ಬ ವ್ಯಕ್ತಿಗೆ ಒಂದು ಮತ; ಒಂದು ಮತಕ್ಕೆ ಒಂದೇ ಬೆಲೆ ಇರಬೇಕು. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಸಾಮಾಜಿಕ ಜೀವನದ ನೆಲೆಗಟ್ಟಾಗಬೇಕು. ಸಮಾನತೆ ಕೇವಲ ರಾಜಕೀಯ ನಡವಳಿಕೆಗಳಿಗೆ ಸೀಮಿತವಾಗಿರದೆ ಸಾಮಾಜಿಕ ಆರ್ಥಿಕ ಜೀವನದಲ್ಲಿ ಹಾಸುಹೊಕ್ಕಾದಾಗ ಮಾತ್ರ ಅದು ಅರ್ಥಪೂರ್ಣ. ರಾಜಕೀಯ ಅಧಿಕಾರ ದಕ್ಕಿದಾಗ ಮಾತ್ರ ಇತರ ಬದಲಾವಣೆಗಳನ್ನು ತರಲು ಸಾಧ್ಯ, ಆದ್ದರಿಂದ ರಾಜಕೀಯ ಅಧಿಕಾರ ಎಲ್ಲರಿಗೆ ಎಟುಕುವಂತಿರಬೇಕು. ಧರ್ಮ ಸಮಾಜ ಜೀವನಕ್ಕೆ ಅತ್ಯವಶ್ಯಕ ವಿದ್ದು ಅದು ನೀತಿಯ ನೆಲೆಯಾಗಿರಬೇಕು. ಕಡೆಗಣಿಸಲ್ಪಟ್ಟವರ ಹೋರಾಟದಿಂದ ಮಾತ್ರ ಆ ಸಮೂಹದ ಉದ್ಧಾರ ಸಾಧ್ಯ. ವ್ಯಕ್ತಿಯ ಭವಿಷ್ಯ ಅವನ ಕೈಯಲ್ಲೇ ಇದೆ. ಆದ್ದರಿಂದ ತನ್ನ ಶಕ್ತಿಯಲ್ಲಿ ತಾನು ನಂಬಿಕೆಯಿಟ್ಟು ಮುಂದುವರಿಯಬೇಕು. ಸಮಾಜ ಪರಿವರ್ತನೆಯಾಗಬೇಕಾದರೆ ಎಲ್ಲರಿಗೆ ಶಿಕ್ಷಣ ದೊರೆಯಬೇಕು. ಸಮಾಜ ಗುಲಾಮನನ್ನು ಗುಲಾಮನೆಂದು ಕರೆಯಿರಿ. ಅವನು ಎಚ್ಚೆತ್ತುಕೊಳ್ಳುತ್ತಾನೆ. ಇವು ಅಂಬೇಡ್ಕರ್ ವಿಚಾರ ಮಾಡಿದ ಮತ್ತು ತಮ್ಮ ಜೀವನದಲ್ಲಿ ತಳೆದ ನಿಲುವುಗಳು. ಸಾಮಾಜಿಕ, ಆರ್ಥಿಕ, ರಾಜಕೀಯ ತಜ್ಞರಾಗಿದ್ದ ಅಂಬೇಡ್ಕರ್ ಜೀವನ ದುದ್ದಕ್ಕೂ ತುಳಿತಕ್ಕೊಳಗಾದವರ ವಿಮೋಚನೆಗೆ ಬೇಕಾದ ಚಿಂತನೆ, ಹೋರಾಟ ನಡೆಸಿದರು. ಆದರೆ ಅವರ ಚಿಂತನೆ, ಹೋರಾಟ ಶೋಷಿತರಿಗೆ ಮಾತ್ರ ಸೀಮಿತವಾಗಿರಲಿಲ್ಲ. ದೇಶದಲ್ಲಿ ಶತಮಾನಗಳಿಂದ ನೆಲೆ ಮಾಡಿದ್ದ ತಾರತಮ್ಯ, ಶೋಷಣೆ, ಅಂಧಶ್ರದ್ಧೆ, ಇವುಗಳನ್ನು ತೊಡೆದು ಹಾಕಿ, ವೈಜ್ಞಾನಿಕವಾಗಿ ಎಲ್ಲ ರಂಗಗಳಲ್ಲಿ ಅಭಿವೃದ್ಧಿ ಹೊಂದಿ, ಎಲ್ಲರಿಗೆ ಸುಖ ಜೀವನ ಕೊಡಬಲ್ಲಂತ ಸರ್ವಾಂಗ ಸುಂದರ ಭಾರತಕ್ಕಾಗಿ ಅವರು ಹೋರಾಡುತ್ತ ಬಂದರು.

2. ಅಂಬೇಡ್ಕರ್ ಸಾರ್ವಜನಿಕ ಜೀವನಕ್ಕೆ ಬರುವ ಮೊದಲು ನಮ್ಮ ಸ್ವಾತಂತ್ರ್ಯ ಹೋರಾಟ ಕೇವಲ ಬ್ರಿಟೀಷರನ್ನು ಈ ದೇಶ ಬಿಟ್ಟು ತೊಲಗುವಂತೆ ಮಾಡುವುದೇ ಆಗಿತ್ತು. ಬ್ರಿಟಿಷರಿಂದ ಸ್ಥಳೀಯರಿಗೆ ಅಧಿಕಾರ ಹಸ್ತಾಂತರವಾದ

---

* ಹಿರಿಯ ಪೋಲೀಸ್ ಅಧಿಕಾರಿ, ಕರ್ನಾಟಕ ಸರ್ಕಾರ

ಮೇಲೆ ಏನಾಗುತ್ತದೆ ಎಂಬುದರ ಬಗ್ಗೆ ಯಾರೂ ತಲೆಕೆಡಿಸಿಕೊಂಡಿರಲಿಲ್ಲ. ಅಂದಿನ ನಾಯಕರು ಒಮ್ಮೆ ಸ್ವಾತಂತ್ರ್ಯ ಸಿಕ್ಕಿದರೆ ಎಲ್ಲವೂ ಸರಿಯಾಗುತ್ತದೆ ಎಂದೇ ನಂಬಿದ್ದರು. ಅವರಲ್ಲನೇಕರು ಭಾರತೀಯ ಸಮಾಜ ಜೀವನದಲ್ಲಿ ಒಂದು ಸಣ್ಣ ಬದಲಾವಣೆಯನ್ನೂ ಮಾಡಲು ಸಿದ್ಧರಿರಲಿಲ್ಲ. ಕ್ರೂರ ತಾರತಮ್ಯ, ಶೋಷಣೆಗಳಿಂದ ತುಂಬಿಹೋಗಿದ್ದ ನಮ್ಮ ಸಮಾಜದಲ್ಲಿ ಇದು ಕೇವಲ ಯಜಮಾನರ ಬದಲಾವಣೆಯಾಗುತ್ತಿತ್ತು. ಮೇಲ್ವರ್ಗದವರು, ಉಳ್ಳವರು ಅಧಿಕಾರ ಹಿಡಿಯುತ್ತಿದ್ದರು. ಶೋಷಣೆ, ಕ್ರೌರ್ಯ ಅವ್ಯಾಹತವಾಗಿ ಮುಂದುವರಿಯುತ್ತಿತ್ತು. ಇಂತಹ ಒಂದು ಪರಿಸ್ಥಿತಿಯಲ್ಲಿ ಅಂಬೇಡ್ಕರ್ ಸಾರ್ವಜನಿಕ ಜೀವನಕ್ಕೆ ಪಾದಾರ್ಪಣೆ ಮಾಡಿದರು. ಮತ್ತು ತಮ್ಮ ಜತೆ ಭಾರತೀಯ ರಾಜಕೀಯಕ್ಕೆ ಆಳವಾದ ಸಾಮಾಜಿಕ ಕಳಕಳಿಯನ್ನು ತಂದರು. ಅವರೆಲ್ಲ ಹೋರಾಟ ಒಬ್ಬ ವ್ಯಕ್ತಿಗೆ ಒಂದೇ ಬೆಲೆಯನ್ನು ಕೊಡುವತ್ತ ಇತ್ತು. ವ್ಯಕ್ತಿ ತನ್ನ ನಿತ್ಯ ಜೀವನದ ಗೊಂದಲಗಳಿಂದ ವಿಮೋಚನೆ ಹೊಂದಿ, ಸುಖ ಜೀವನ ನಡೆಸುವಂತಾಗ ಬೇಕು. ವ್ಯಕ್ತಿ ನಡುವಿನ ಸಂಬಂಧಗಳಲ್ಲಿ ಭ್ರಾತೃತ್ವ ನೆಲೆಸಬೇಕು. ಯಾವ ತಾರ ತಮ್ಯವೂ ಇಲ್ಲದ ಸಮೃದ್ಧ ಆಧುನಿಕ ಭಾರತದ ನಿರ್ಮಾಣವಾಗಬೇಕು. ಇವು ಅವರು ಹೋರಾಡುತ್ತಾ ಬಂದ ಗುರಿಗಳು. ನಮ್ಮ ರಾಜ್ಯಾಂಗದಲ್ಲಿ ಈ ಗುರಿಗಳು ಸ್ಥಾನ ಪಡೆದುಕೊಂಡಿವೆ. ಇದಕ್ಕೆ ಕಾರಣ ಅಂಬೇಡ್ಕರ್ ಅವರೇ. ದೀನದಲಿತರು, ಮಹಿಳೆ ಯರು, ಕಾರ್ಮಿಕರು, ಅಲ್ಪ ಸಂಖ್ಯಾತರು, ಇಂತಹ ಶೋಷಿತ ಅಥವಾ ಶೋಷಣೆ ಗೊಳಗಾಗಬಹುದಾದ ವರ್ಗಗಳ ಬಗ್ಗೆ ಕಳಕಳಿ ನಮ್ಮ ರಾಜ್ಯಾಂಗದಲ್ಲಿ ಕಂಡರೆ ಅದು ಅಂಬೇಡ್ಕರರ ಸತತ ಹೋರಾಟದ ಫಲವೇ.

3. ದಲಿತ ಹೋರಾಟಗಳು ದಲಿತರ ಮತ್ತು ಎಲ್ಲ ಶೋಷಿತರ ಸರ್ವತೋ ಮುಖ ಬೆಳವಣಗೆಗೆ ಶ್ರಮಿಸಬೇಕು. ನಮ್ಮ ಈಗಿನ ಹೋರಾಟಗಳು ಕೆಲ ನ್ಯೂನತೆ ಗಳಿಂದ ಕೂಡಿವೆ. ಅವು ದಲಿತರ ಎಲ್ಲ ದುರದೃಷ್ಟಗಳಿಗೂ ಇತರರೇ ಕಾರಣ ಎಂಬ ಒಂದು ನಂಬಿಕೆಯನ್ನು ಸಾಧಾರಣವಾಗಿ ಬೆಳೆಸಿಕೊಂಡಿವೆ. ದಲಿತರು ಇದ್ದಲ್ಲೇ ಇದ್ದು ವಂಶ ಪಾರಂಪರ್ಯವಾಗಿ ಬಂದ ಕಸುಬನ್ನೇ ಮಾಡಿಕೊಂಡಿರಲಿ. ಅಲ್ಲಿಯೇ ಅವರಿಗೆ ಗೌರವ ತಂದುಕೊಡಬಹುದು ಎಂದು ಅವು ನಂಬಿದಂತಿದೆ. ವಿಶಾಲ ತಳಹದಿಯ ಮೇಲೆ ವಿಮುಕ್ತಿಯ ಬಗ್ಗೆ ದೂರಾಲೋಚನೆ ಹೊಂದಿದ ಹೋರಾಟಕ್ಕೆ ಬದಲಾಗಿ ಅಲ್ಲಲ್ಲಿ ಸಣ್ಣ ಸಣ್ಣ ಘಟನೆಗಳ ಬಗ್ಗೆ ಅಧಿಕಾರಿಗಳಲ್ಲಿ ವಿನಂತಿಸಿ ಪರಿಹಾರ ಕೋರುವಷ್ಟ ರಲ್ಲಿ ಅವರ ಹೋರಾಟ ಪರ್ಯವಸನಗೊಂಡಿದೆ. ಸರ್ಕಾರ ದಲಿತರ ಆರ್ಥಿಕ ಅಭಿ ವೃದ್ಧಿಗಾಗಿ ವರ್ಷಕ್ಕೆ 150 ಕೋಟಿ ರೂಪಾಯಿ ಖರ್ಚು ಮಾಡುತ್ತೇವೆಂದು ಹೇಳಿ ಕೊಂಡು ಅದರಲ್ಲಿ ಕೇವಲ ಸ್ವಲ್ಪ ಭಾಗ ಮಾತ್ರ ಅವರಿಗೆ ದಕ್ಕುತ್ತಿದ್ದರೂ ಅದರ ಕಡೆಗೆ

ಶೂದ್ರ

ನಮ್ಮ ಹೋರಾಟಗಳ ಗಮನ ಹರಿದಂತೆ ಕಾಣುವುದಿಲ್ಲ. ದಲಿತರಲ್ಲೇ ತುಂಬಿ ಹೋಗಿರುವ ಅನೇಕ ನ್ಯೂನತೆಗಳನ್ನು ತೊಲಗಿಸುವಲ್ಲಿ ಸಹ ಇವರ ಪ್ರಯತ್ನ ಏನೂ ಇಲ್ಲ ಎಂದೇ ಹೇಳಬೇಕು. ಆದ್ದರಿಂದ ದಲಿತ ಹೋರಾಟಗಳು ನಮ್ಮ ದುಸ್ಥಿತಿಗೆ ಸಮಾಜ ಎಷ್ಟು ಜವಾಬ್ದಾರಿ, ನಾವೆಷ್ಟು ಜವಾಬ್ದಾರಿ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಇತರರನ್ನು ತಿದ್ದುತ್ತಾ ತಮ್ಮನ್ನೂ ತಿದ್ದಿಕೊಳ್ಳಬೇಕು. ಜಾತಿಯ ಗೋಜಿಗೆ ಹೋಗದೆ ಒಂದೇ ಸಮನಾದ ಶಿಕ್ಷಣ ಎಲ್ಲರಿಗೆ ಸಿಗುವುದಕ್ಕಾಗಿ ಹೋರಾಡಬೇಕು. ಮತ್ತು ಪ್ರತಿ ಮಗುವನ್ನು ಶಾಲೆಗೆ ಕಳುಹಿಸುವಂತೆ ತಂದೆ–ತಾಯಿಗಳನ್ನು ಪ್ರೇರೆಪಿಸಬೇಕು. ಕುಡಿತ, ಅತಿ ಸಂತಾನ, ದುಂದು ವೆಚ್ಚ, ಸಾಲದಲ್ಲಿ ಸಿಕ್ಕಿಹಾಕಿಕೊಳ್ಳುವುದು, ಇಂತಹವುಗಳ ಬಗ್ಗೆ ಅರಿವು ಮೂಡಿಸಬೇಕು. ಹಿಂದೂ ಸಮಾಜ ಜಾತಿಗೊಂದು ಕಸುಬನ್ನು ಗಂಟು ಹಾಕಿ, ಅದನ್ನು ಕೈಗೊಂಡ ವ್ಯಕ್ತಿ ಆರ್ಥಿಕವಾಗಿ, ಸಮಾಜಿಕವಾಗಿ ಮೇಲೇಳದಂತೆ ಮಾಡಿ ಸಮಾಜವನ್ನು ಒಡೆದು ಆಳುವ ವ್ಯವಸ್ಥೆ ಹೊಂದಿರುವುದರಿಂದ, ಕುಲ ಕಸುಬನ್ನು ಬಿಡಿಸುವ, ಭೌಗೋಳಿಕ ಚಾಲನೆ ಹೆಚ್ಚಿಸುವ, ಹಾಗೂ ದಲಿತರು ವ್ಯಾಪಾರ, ಕೈಗಾರಿಕೆ ಮತ್ತು ಸೇವೆಗಳ ಕಡೆ ಹೆಚ್ಚು ಹೆಚ್ಚು ಗಮನ ಹರಿಸುವಂತೆ ಕೆಲಸ ಮಾಡಬೇಕು. ಹಾಗೆಯೇ ದಲಿತ ಚಳವಳಿಗಳು ದಲಿತರಿಗಾಗಿ ಮೀಸಲಿಟ್ಟ ಒಂದೊಂದು ಚಿಕ್ಕಾಸೂ ಅವರಿಗೆ ಸೇರಿ ಅವರು ಆರ್ಥಿಕವಾಗಿ ಮುಂದು ಬರುವಂತೆ ಮಾಡಲು ಕಾರ್ಯಕ್ರಮ ರೂಪಿಸಿಕೊಳ್ಳಬೇಕಾಗುತ್ತದೆ.

4. ಎಡ ಪಂಥೀಯ ಚಿಂತನೆ ಮತ್ತು ಹೋರಾಟಗಳು ಹಾಗೂ ದಲಿತ ಚಳವಳಿಯ ಗುರಿ ಒಂದೆ, ದುಡಿಯುವ ವರ್ಗಗಳಿಗೆ ನ್ಯಾಯ ದೊರಕಿಸಿಕೊಡುವುದು. ಇವೆರಡೂ ಜೊತೆಯಾಗಿ ಕೆಲಸ ಮಾಡಿದರೆ ಬಹಳ ಒಳ್ಳೆಯದು. ಆದರೆ ಇದಕ್ಕೆ ಸಂಪೂರ್ಣ ತತ್ವನಿಷ್ಠೆ ಅಗತ್ಯ. ಹಾಗೇ ಈ ಸಹಯೋಗ ಮತ್ತು ಸಹಕಾರ ವರ್ಗ ಅಥವಾ ಜಾತಿಗಳ ಆಧಾರದ ಮೇಲೆ ಬರುವುದು ತಪ್ಪು. ಈ ಎರಡೂ ಸಂಘಟನೆಗಳು ಒಪ್ಪಬಹುದಾದಂತಹ ಕನಿಷ್ಠ ಕಾರ್ಯಕ್ರಮ ರೂಪಿಸಿ, ಅದನ್ನು ಕಾರ್ಯಗತಗೊಳಿಸಲು ಹೋರಾಡುವುದರಿಂದ, ಅಂತಹ ಸಹಕಾರ, ಸಹಯೋಗ ಸಾಧ್ಯ.

5. ದಲಿತರು, ಹಿಂದುಳಿದವರು ಮತ್ತು ಅಲ್ಪ ಸಂಖ್ಯಾತರು ಒಗ್ಗಟ್ಟಾದರೆ ಒಂದು ಸಮಾನ, ಜಾತ್ಯಾತೀತ ಸಮಾಜಕ್ಕಾಗಿ ಶ್ರಮಿಸಿದರೆ, ಅದು ಸ್ವಾಗತಾರ್ಹವಾದುದು. ಆದರೆ ಇದು ಸಾಧ್ಯವೇ? ಮುಖ್ಯವಾಗಿ ಎಲ್ಲ ರಾಜಕೀಯ ಪಕ್ಷಗಳೂ ಈ ವರ್ಗಗಳನ್ನು ತಮ್ಮ ತಮ್ಮ ಕಡೆ ಆಕರ್ಷಿಸಲು ಪ್ರಯತ್ನಿಸುತ್ತಿರುವುದರಿಂದ, ಹಾಗೂ ಎಲ್ಲ ಪ್ರಶ್ನೆಗಳೂ ಅಂತಿಮವಾಗಿ ನಾಯಕತ್ವದ ಪ್ರಶ್ನೆಯಿಂದಲೇ ಕೊನೆಗೊಳ್ಳಬೇಕಾಗಿರುವುದರಿಂದ, ತಮ್ಮಲ್ಲಿ ಒಂದು ನಾಯಕತ್ವವನ್ನು ಒಪ್ಪಿ, ಈ ಎಲ್ಲ ವರ್ಗಗಳು

ಶೂದ್ರ

ಒಂದು ಕಡೆ ಸೇರುತ್ತವೆ ಎಂದು ಯೋಚಿಸುವುದು ಕಲ್ಪನಾ ಪ್ರಪಂಚಕ್ಕೆ ಸೇರಿದ್ದಾಗು ತ್ತದೆ. ಉದಾಹರಣೆಗೆ, ವಿ.ಪಿ. ಸಿಂಗ್ ಮತ್ತು ಕಾನ್ಸಿರಾಮ್ ಈ ಮೂರೂ ವರ್ಗ ದವರನ್ನೂ ಒಟ್ಟುಗೂಡಿಸಿ, ಒಂದು ಶಕ್ತಿಯಾಗಿ ರೂಪಿಸುವಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದುಕೊಂಡರೆ, ಸಾಮಾನ್ಯವಾಗಿ ಇವರಿಬ್ಬರೂ ಜತೆಯಲ್ಲಿರುತ್ತಾರೆ ಎಂದು ಯೋಚಿಸು ವುದು ತಪ್ಪಾಗಲಾರದು. ಆದರೆ, ಇಂದು ಬದ್ಧ ವೈರಿಗಳಂತೆ ಇವರು ಒಬ್ಬರ ನ್ನೊಬ್ಬರು ದೂಷಿಸುತ್ತಿದ್ದಾರೆ. ವಿ.ಪಿ. ಸಿಂಗ್ ಬಹಳ ಕಡಿಮೆ ಸಮಯದಲ್ಲಿ ಈ ವರ್ಗಗಳಿಗೆ ಮಾಡಿದ ಕೆಲಸವನ್ನು ಮರೆತು ಕಾನ್ಸಿರಾಮ್ ವಿ.ಪಿ. ಸಿಂಗ್ ಸರ್ಕಾರ ತಾನೆ ಉರುಳಿಸಿದ್ದೆಂದು ಜಂಬ ಕೊಚ್ಚಿಕೊಳ್ಳುತ್ತಿದ್ದಾರೆ. ಮುಂದೆ ಸಹ ಇಂತಹ ಅನೇಕ ನಾಯಕರು ಹುಟ್ಟಿಕೊಂಡು ಈ ಸಮೂಹಗಳು ಒಟ್ಟಾಗುವುದು ಸಾಧ್ಯವಿಲ್ಲದಿರ ಬಹುದು. ಜತೆಗೆ ನಮ್ಮ ಸಮಸ್ಯೆ ಕೇವಲ ಇರುವುದನ್ನು ಹಂಚಿಕೊಳ್ಳುವುದಕ್ಕೆ ಸಂಬಂಧಿಸಿದ್ದಲ್ಲ. ಹೆಚ್ಚು ಉತ್ಪತ್ತಿ, ಕಡಿಮೆ ಜನಸಂಖ್ಯೆ, ಸಮಾನ ವಿತರಣೆಗೆ ಸಂಬಂಧಿ ಸಿದ್ದು. ಯಾವುದೇ ಜಾತಿ, ಜನ, ವರ್ಗಗಳಿಂದ ಈ ಸಮಸ್ಯೆಗಳನ್ನು ನಿವಾರಿಸಲಾಗು ವುದಿಲ್ಲ. ಸಮಸ್ಯೆಗಳನ್ನು ಸರಿಯಾಗಿ ಗುರುತಿಸಿ, ಅವುಗಳನ್ನು ಕೈಗೆತ್ತಿಕೊಂಡು ತೀವ್ರ ಕ್ರಮಗಳಿಂದ ಅವುಗಳನ್ನು ನಿವಾರಿಸುವ ಪ್ರಯತ್ನಗಳಾಗಬೇಕು. ದಲಿತರು, ಹಿಂದು ಳಿದವರು ಮತ್ತು ಅಲ್ಪಸಂಖ್ಯಾತರ ಹೊಂದಾಣಿಕೆ ಸೀಮಿತ ಕಾಲಕ್ಕೆ ಸಾಧ್ಯವಾಗಬಹುದು ಮತ್ತು ಅದರಿಂದ ತಾತ್ಕಾಲಿಕ ಪ್ರಯೋಜನವನ್ನೂ ಪಡೆದುಕೊಳ್ಳಬಹುದು. ಆದರೆ, ದೀರ್ಘಾವಧಿಯಲ್ಲಿ ಇದು ಸಾಧ್ಯವಿಲ್ಲ. ಇದು ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಹ ಸೋಲುತ್ತದೆ. ಕಾರ್ಯಕ್ರಮದ ಮೇಲೆ ಪಕ್ಷಗಳು ಹುಟ್ಟಿ ಕೆಲಸ ಮಾಡುವುದು ಅನಿವಾರ್ಯ.

●

ದಲಿತರು ಹಾಗೂ ಎಡಪಕ್ಷಗಳು

— ಡಾ|| ಕೆ. ಗೋಪಾಲನ್ ಕುಟ್ಟಿ

ಭಾರತದ ಸ್ವಾತಂತ್ರ್ಯ ಚಳುವಳಿಯ ಮೇಲೆ ಅಂಬೇಡ್ಕರರ ಪ್ರಭಾವ ಸೀಮಿತವಾದದ್ದಕ್ಕೆ ಪ್ರಾಯಶಃ ಎರಡು ಕಾರಣಗಳಿದ್ದವು. ಡಾ. ಅಂಬೇಡ್ಕರ್ ಬ್ರಿಟಿಷ್ ಪರ ಹಾಗೂ ಕಾಂಗ್ರೆಸ್ ವಿರೋಧಿ ಎಂಬ ತಪ್ಪು ಅಭಿಪ್ರಾಯ. ಗಾಂಧಿಯನ್ ಮಾದರಿಗೆ ಹೆಚ್ಚು ರಾಜಕೀಯ ಮಹತ್ವವಿದ್ದದ್ದು ಹಾಗೂ ಅದರಿಂದಾಗಿ ವರ್ಗಗಳ ಮೇಲೆ ಕಾಂಗ್ರೆಸ್ಸಿನ ಪ್ರಭಾವ ಹೆಚ್ಚಾದದ್ದು. ಈ ಅಭಿಪ್ರಾಯಗಳನ್ನು ಈಗ ತೀವ್ರ ವಿಮರ್ಶೆಗೊಳಪಡಿಸಬೇಕಾಗಿದೆ. ವಸಾಹತೋತ್ತರದ ಈ ಘಟ್ಟದಲ್ಲಿ ಅಂಬೇಡ್ಕರರನ್ನು ಸರಿಯಾಗಿ ಅರ್ಥೈಸುವ ಪ್ರಯತ್ನಗಳು ಈಗ ಆರಂಭವಾಗಿವೆ.

ದಲಿತ ಚಳುವಳಿಗಳು, ಅಂಬೇಡ್ಕರ್ ವಿಚಾರ ಧಾರೆಯಿಂದ ಪ್ರಭಾವಿತವಾಗಿರುವುದು ನಿಜ ; ಆದರೆ, ಎಷ್ಟರಮಟ್ಟಿಗೆ ಎಂಬ ಪ್ರಶ್ನೆಗೆ ಉತ್ತರ ಸಿಗುವುದು ಸ್ವಲ್ಪ ಕಷ್ಟ. ಅಂಬೇಡ್ಕರ್ ವಿಚಾರಧಾರೆಯ ಬಹುಮುಖ್ಯ ಅಂಶವೆಂದರೆ, ಹರಿಜನರು ಭಿನ್ನವಾದ ಗುಂಪಾಗಿ ಉಳಿದಿದ್ದಾರೆ ಹಾಗೂ ಅವರು ಹಿಂದೂ ಧರ್ಮದ ಭಾಗವಲ್ಲ ಎಂಬುದು. ಹಿಂದೂ ಕೋಮುವಾದಿ ಶಕ್ತಿಗಳು ಈ ನಿಲುವನ್ನು ಈಚಿನ ದಿನಗಳಲ್ಲಿಯೂ ಉಗ್ರವಾಗಿ ಟೀಕಿಸುತ್ತಿವೆ. ಅಲ್ಲದೆ, ಮತಾಂತರ ಕೂಡ ಅಸ್ಪೃಶ್ಯತೆಗೆ ಪರಿಹಾರವಾಗಿ ಉಳಿದಿಲ್ಲ. ಕಾರಣ, ಮತಾಂತರಗೊಂಡ ಧರ್ಮದಲ್ಲೂ ಆ ಅಸ್ಪೃಶ್ಯತೆಯೇ ಮುಂದುವರಿಯುವುದು. ಹೀಗಾಗಿ, ಮತಾಂತರಗೊಂಡವರು ಮತ್ತೆ ಹಿಂದೂ ಧರ್ಮಕ್ಕೆ ಬಂದರೆಂದರೆ, ಅದೇನೂ ಆಶ್ಚರ್ಯದ ಮಾತಲ್ಲ. ಆದ್ದರಿಂದ ಜಾತಿ ಪದ್ಧತಿಯನ್ನೇ ನಾಶಮಾಡದೆ, ಸಮಸ್ಯೆಗೆ ಪರಿಹಾರವಿಲ್ಲ.

ಆದರೆ, ಎಡಪಂಥೀಯರು ಹೇಳುವ ಐಕ್ಯತೆಯನ್ನು ಕೇವಲ ಆರ್ಥಿಕ ಪಾತಳಿಯಲ್ಲಿ ತರುವುದು ಸಾಧ್ಯವೇ ಇಲ್ಲ ಎಂಬುದು ಸಾಬೀತಾಗಿ ಹೋಗಿದೆ. ಅಂಬೇಡ್ಕರ್ ಸೂಚಿಸುವಂತೆ, ಸಾಮಾಜಿಕ ಬದಲಾವಣೆಯಿಲ್ಲದೆ ಆರ್ಥಿಕ ಸುಧಾರಣೆ ಸಾಧ್ಯವಾಗ

* ಮಲಬಾರ್ ಕ್ರಿಶ್ಚಿಯನ್ ಕಾಲೇಜ್, ಕಲ್ಲಿಕೋಟೆ, ಕೇರಳ

ಲಾರದು. ಹೀಗಾಗಿ ಒಟ್ಟು ಸಾಂಸ್ಕೃತಿಕ ಕ್ರಾಂತಿಯೇ ನಮ್ಮ ಇಂದಿನ ಮುಖ್ಯ ಗುರಿ. ಯಾಕೆಂದರೆ, ಆಳುವ ವರ್ಗದ ಸಂಸ್ಕೃತಿ ಹಾಗೂ ಯಜಮಾನ್ಯವನ್ನು ಧಿಕ್ಕರಿಸದಿದ್ದರೆ ಮಾತ್ರ ಕಾರ್ಮಿಕ ಹಾಗೂ ರೈತ ಸಮುದಾಯಗಳು ತಾವು ಯಾವ ಸಂಸ್ಕೃತಿಯನ್ನು ನಾಶಮಾಡಬೇಕಾಗಿದೆಯೋ ಅದೇ ಸಂಸ್ಕೃತಿಯ ಬಲೆಯಲ್ಲಿ ಸಿಕ್ಕಿಕೊಳ್ಳಬೇಕಾಗುತ್ತದೆ. ಈಗಲೂ ಟ್ರೇಡ್ ಯೂನಿಯನ್, ಕಿಸಾನ್ ಸಂಘಗಳು ಹಾಗೂ ಎಡಪಕ್ಷಗಳಲ್ಲಿ ಶ್ರೇಣೀಕರಣದ ಮಾದರಿಗಳು ಉಳಿದುಕೊಂಡಿರುವುದು ಈ ಕಾರಣಕ್ಕಾಗಿಯೇ. ಎಡ ಐಕ್ಯತೆ ಸಾಧ್ಯವಾಗುವುದೇನಿದ್ದರೂ ದುಡಿಯುವ ವರ್ಗಗಳನ್ನೂ-ಕಾರ್ಮಿಕ, ರೈತ ಹಾಗೂ ಇತರ ತುಳಿಯಲ್ಪಟ್ಟ ವರ್ಗಗಳನ್ನೂ ಒಂದು ವೇದಿಕೆಯ ಮೇಲೆ ತರುವುದರ ಮೂಲಕ ಸೋಷಲಿಸ್ಟ್ ಸಮಾಜವನ್ನು ನಿರ್ಮಿಸುವುದನ್ನು ತನ್ನ ಗುರಿಯಾಗಿಸಿ ಕೊಂಡಾಗ ಮಾತ್ರ.

ದಲಿತರು ಹೆಚ್ಚೂ ಕಡಿಮೆ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೇ ಸೇರುವವ ರಾದ್ದರಿಂದ ಹಾಗೂ ಈ ಕಾರಣಕ್ಕಾಗಿಯೇ ಹೆಚ್ಚು ಶೋಷಣೆಗೊಳಗಾಗುವುದರಿಂದ ಅವರನ್ನು ಈ ವೇದಿಕೆಗೆ ತರುವುದು ಸಾಧ್ಯವಾಗುತ್ತದೆ. ಕೋಮುವಾದಿ ಹಾಗೂ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಹೋರಾಟಕ್ಕೀಗ ತುರ್ತಾಗಿ ಬೇಕಾಗಿರುವುದು ಎಲ್ಲ ದಮನಕ್ಕೊಳಪಟ್ಟ ವರ್ಗಗಳ ಸಂಘಟನೆ.

— ಕನ್ನಡಕ್ಕೆ : ನಟರಾಜ್ ಹುಳಿಯಾರ್

ಎಲ್ಲ ಪ್ರಶ್ನೆಗಳಿಗೂ ಒಂದೇ ಉತ್ತರ

— ಡಿ. ಆರ್. ನಾಗರಾಜ್

ಅಂಬೇಡ್ಕರ್‌ರ ವಿಚಾರಗಳಲ್ಲಿ ಎರಡು ಭಾಗಗಳಿವೆ. ಒಂದು, ಬಂಡವಾಳಶಾಹಿ ಪೂರ್ವ ಭಾರತಕ್ಕೆ ಸಂಬಂಧಿಸಿದ್ದು. ಎರಡು, ಬಂಡವಾಳಶಾಹಿ ಭಾರತಕ್ಕೆ ಸಂಬಂಧಿಸಿದ್ದು. ದಲಿತರ ನೋವು ಮತ್ತು ಸಿಟ್ಟು ಅತ್ಯಂತ ತೀವ್ರವಾಗಿ ಅಂಬೇಡ್ಕರರ ಬಂಡವಾಳಶಾಹಿ ಪೂರ್ವದ ಭಾರತ ವಿಶ್ಲೇಷಣೆಯಲ್ಲಿ ಕಂಡುಬರುತ್ತದೆ. ಗ್ರಾಮೀಣ ಭಾರತವನ್ನು ಅಂಬೇಡ್ಕರ್ ಅರ್ಥಮಾಡಿಕೊಂಡಷ್ಟು ಖಚಿತವಾಗಿ ಗಾಂಧಿಯೂ ಅರ್ಥಮಾಡಿಕೊಂಡಿಲ್ಲ. ಗಾಂಧೀಜಿಗೆ ಹಳ್ಳಿಗಳ ಒಳ್ಳೆಯತನದ ಬಗ್ಗೆ ಅಪಾರ ಭರವಸೆ. ಅದರ ಕ್ರೌರ್ಯದ ಬಗೆಗೆ ಮುಜುಗರ. ಆ ಕ್ರೌರ್ಯದ ಬಗೆಗೆ ಗಾಂಧೀಜಿ ಅಂಬೇಡ್ಕರರಷ್ಟು ನೇರವಾಗಿ ಮಾತನಾಡಲಿಲ್ಲ ಎಂದೇ ಅವರ ಬಗೆಗೆ ಶೂದ್ರಾತಿ ಶೂದ್ರರ, ದಲಿತರ ಅಸಹನೆ ಬೆಳೆಯಿತು. ಗಾಂಧೀಜಿಯದು ಗ್ರಾಮೀಣ ಕ್ರೌರ್ಯದ ಬಗೆಗೆ ಪರೋಕ್ಷ ಮಾತುಗಾರಿಕೆ. ಗ್ರಾಮಸ್ವರಾಜ್ಯದ ಬಗೆಗಿನ ಚಿಂತನೆಯಲ್ಲಿ ಆತ ಹಳ್ಳಿಗಳಿಗೆ ಕಕ್ಕಸ್ಸಿಗೆ ಹೇಗೆ ಹೋಗಬೇಕೆಂಬುದರಿಂದ ಹಿಡಿದು ದೊಡ್ಡ ಮಟ್ಟದ ಜನತಂತ್ರಗಳ ತನಕ ಕಲಿಸಲು ಪ್ರಯತ್ನಿಸಿದರು. ನೇರ ಸಿಟ್ಟಿನ ಗುಣವಿಲ್ಲದ್ದರಿಂದ ಅದು ತಲುಪಲಿಲ್ಲ.

ಆದರೆ, ಅಂಬೇಡ್ಕರರ ಗ್ರಾಮ ವಿಶ್ಲೇಷಣೆಯಲ್ಲಿ ಜಾತಿ, ಸಂಪತ್ತು, ಅಧಿಕಾರ, ಅವಮಾನ, ಅಂತಸ್ತುಗಳೆಲ್ಲ ಹೇಗೆ ಜಟಿಲವಾಗಿ ಬೆರೆತಿದೆ ಎಂಬ ಗ್ರಹಿಕೆ ಅದ್ಭುತವಾಗಿ ವ್ಯಕ್ತವಾಗುತ್ತದೆ. ದಲಿತರ ಮತ್ತು ಇತರ ಅವಮಾನಿತರ ಮಟ್ಟಿಗೆ ಹಳ್ಳಿಗಳು ನರಕ ಎಂಬ ಮಾತು ನಮಗೆ ತೀವ್ರವಾಗಿ ಹೊಳೆದದ್ದೆ ಅಂಬೇಡ್ಕರರಿಂದ. ಆದರೆ, ಈ ಬಗೆಗೆ ನಾವು ಇನ್ನೂ ಪೂರ್ಣವಾಗಿ ವಿಶ್ಲೇಷಿಸದ ಸತ್ಯವೊಂದು ಅಂಬೇಡ್ಕರರ ವಿಚಾರಗಳಲ್ಲಿ ಮೊಸರಿನಲ್ಲಿನ ಬೆಣ್ಣೆಯಂತೆ ಅಂತರ್ಗತವಾಗಿದೆ. ಅದು ದಲಿತರ ಸಂಪೂರ್ಣ ವಿಮೋಚನೆಗಾಗಿ ಅವರನ್ನು ಗ್ರಾಮಭಾರತದಿಂದಲೇ ಹೊರಗೆ ಒಯ್ಯಬೇಕು ಎಂಬ ಕನಸು. ಈ ವಿಮೋಚನಾ ವಲಸೆ ಕಾರ್ಯಕ್ರಮವನ್ನು ಅಂಬೇಡ್ಕರರು ಸ್ಪಷ್ಟವಾಗಿ ವಿವರಿಸದಿದ್ದರೂ ಅದು ಮತ್ತೆ ಮತ್ತೆ ಅಸ್ಪಷ್ಟವಾಗಿ ಹಾಯುತ್ತದೆ. ಕೆಲವು ಅಂಬೇಡ್ಕರ್ ವಾದಿಗಳು ಈ ಬಗ್ಗೆ ನೇರವಾಗಿಯೇ ಮಾತನಾಡುತ್ತಾರೆ.

ಶೂದ್ರ

ಆದರೆ, ಈ ವಿಮೋಚನಾ ವಲಸೆ ವಿಚಾರವನ್ನು ಅನೇಕ ಕಾರಣಗಳಿಗಾಗಿ ಒಪ್ಪುವುದು ಕಷ್ಟ. ಚರಿತ್ರೆಯಲ್ಲಿ ಯಾವಾಗಲೂ ಈ ರೀತಿಯ ವಿರಾಟ್‌ವಲಸೆ ಹೇಳಲಾಗದ ದುರಂತದಲ್ಲಿ ಕೊನೆಯಾಗಿದೆ. ಅಂಬೇಡ್ಕರ್ ಮತ್ತು ಗಾಂಧಿ ಬೆರೆಯ ಬೇಕಾದದ್ದು ಈ ನೆಲೆಯಲ್ಲಿಯೇ. ಇಡೀ ಗ್ರಾಮಭಾರತವನ್ನು ಸಮಗ್ರವಾಗಿ ಪುನರು ಜ್ಜೀವಿಸಬೇಕಾದ ಅವಶ್ಯಕತೆ ಇಲ್ಲಿ ಕಂಡುಬರುತ್ತದೆ. ದಲಿತರ ಸಮಗ್ರ ವಿಮೋಚನೆ ಯಾಗದೆ ಗ್ರಾಮೀಣ ಭಾರತದ ವಿಮೋಚನೆ ಹಗಲುಗನಸು. ಭಾರತೀಯ ಬಂಡವಾಳ ಶಾಹಿ ಬೆಳೆಯುತ್ತಿರುವ ರೀತಿ ನಿಸ್ಸಂಶಯವಾಗಿ ಹಳ್ಳಿಗಳನ್ನು ನಾಶಮಾಡುವಂಥದ್ದು. ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ಬೆಳೆಯುವ ಕೃಷಿ ಬಂಡವಾಳಶಾಹಿ ವರ್ಗ ಕೂಡಾ ಈ ಪ್ರಕ್ರಿಯೆಗೆ ಪೂರ್ಣ ಬೆಂಬಲ ಕೊಡುತ್ತದೆ.

ಅಂಬೇಡ್ಕರರ ವಿಚಾರಗಳ ಮಿತಿ ನಮಗೆ ಸ್ಪಷ್ಟವಾಗುವುದು ಇಲ್ಲಿಯೇ. ಭಾರತೀಯ ಬಂಡವಾಳಶಾಹಿ ಮತ್ತು ಜಾತಿಪದ್ಧತಿಗಳ ನಡುವಣ ಸಂಕೀರ್ಣ ಸಂಬಂಧ ವನ್ನು ಅಂಬೇಡ್ಕರರು ಅಷ್ಟು ಪ್ರಖರವಾಗಿ ಗ್ರಹಿಸಲಾಗಲಿಲ್ಲ. ಭಾರತೀಯ ಬಂಡವಾಳ ಶಾಹಿ ಕೆಳಜಾತಿಗಳ ಜೀವನದಲ್ಲಿ ಆಧುನೀಕರಣದ ಪ್ರಕ್ರಿಯೆಯ ಮೂಲಕ ತಂದ ಬದಲಾವಣೆ ಗುಣಾತ್ಮಕವಾಗಿ ಮುಖ್ಯವಾದದ್ದು. ಸಾಮಾಜಿಕ ಮೌಲ್ಯಗಳು ಮತ್ತು ಸಮಗ್ರ ಬದಲಾವಣೆಗಳ ನಡುವಣ ಅಂತರ ಜಾಸ್ತಿಯಾಗುತ್ತಲೇ ಹೋಯಿತು. ಇನ್ನಷ್ಟು ನಿರ್ದಿಷ್ಟವಾಗಿ ಹೇಳಬೇಕೆಂದರೆ, ಭಾರತೀಯ ಬಂಡವಾಳಶಾಹಿಯ ತರ್ಕ ಮೂಲಭೂತವಾಗಿ ಮೇಲುಜಾತಿಗಳನ್ನು ಬಲಪಡಿಸುವಂಥದ್ದು. ಭಾರತೀಯ ಬಂಡವಾಳಶಾಹಿ ದಲಿತರಿಗೆ ಕೆಲವು ತುಣುಕು ನೀಡಿ, ಮೇಲುಜಾತಿಗಳಿಗೆ ಭರ್ಜರಿ ಔತಣ ವನ್ನು ಮುಂದುವರಿಸಿತು. ಭಾರತೀಯ ಬಂಡವಾಳಶಾಹಿ ಸಮಾಜದ ಆಯಕಟ್ಟಿನ ಕ್ಷೇತ್ರಗಳ ನಾಯಕತ್ವ ಮೇಲುಜಾತಿಗಳಲ್ಲೇ ಮುಂದುವರಿಯಿತು. ಮೀಸಲಾತಿ ಕಾರಣಕ್ಕಾಗಿ ಸಾಮಾಜಿಕ ಆ ತಳಿತದಲ್ಲಿ ಅಷ್ಟಿಷ್ಟು ದಲಿತರಿಗೆ ಪ್ರಾತಿನಿಧ್ಯ ಸಿಕ್ಕಿತು. ಆಂಶಿಕ ಬದಲವಣೆ ಮಾತ್ರ ಇದು. ಮೇಲುಜಾತಿಗಳು ಮತ್ತು ಬಂಡವಾಳಶಾಹಿಯ ಹೊಂದಾಣಿಕೆಯನ್ನು ಅಂಬೇಡ್ಕರರಿಗಿಂತ ಲೋಹಿಯಾ ಹೆಚ್ಚು ಸೂಕ್ಷ್ಮವಾಗಿ ಗಮನಿಸಿದ್ದರು.

ಹೀಗಾಗಿ, ಈ ಹಿನ್ನೆಲೆಯಲ್ಲಿ ದಲಿತ ಚಳುವಳಿ ಮತ್ತು ಅಂಬೇಡ್ಕರ್ ವಾದಿಗಳು ತಮ್ಮ ಸೈದ್ಧಾಂತಿಕ ನೆಲೆಗಳನ್ನು ಈಗ ತೀಕ್ಷ್ಣವಾಗಿ ಪುನರ್‌ವಿಮರ್ಶಿಸಿಕೊಳ್ಳಬೇಕಾಗಿದೆ. ಆಧುನೀಕರಣದ ಪ್ರಕ್ರಿಯೆ ಬಗ್ಗೆ ಇಟ್ಟುಕೊಂಡಿದ್ದ ಭ್ರಮೆಯನ್ನು ತೊರೆದು ಹೊಸ ಪರ್ಯಾಯಗಳ ಬಗ್ಗೆ ಚಿಂತಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಕಡೆಗಾಲದ ಅಂಬೇಡ್ಕರ್ ನನಗೆ ಮತ್ತಷ್ಟು ಮುಖ್ಯರೂ,

ಆಕರ್ಷಕರೂ ಆಗಿ ಕಾಣುತ್ತಾರೆ. ಬೌದ್ಧ ಧರ್ಮ ಸ್ವೀಕರಿಸಿದ ನಂತರ ಅಂಬೇಡ್ಕರರಿಗೆ ಬಂಡವಾಳಶಾಹಿ ಬಗ್ಗೆ ಇದ್ದ ಭರವಸೆ ಪೂರ್ಣವಾಗಿ ಮಾಯವಾಗಿ ಬಿಟ್ಟಿತ್ತು. ಆದರೆ, ಇಲ್ಲಿನ ಸಮಸ್ಯೆ ಎಂದರೆ ಅಲ್ಲಿಯ ತನಕ ಪಾಶ್ಚಾತ್ಯವಿಚಾರವಾದದ ಪರಿಭಾಷೆಯಲ್ಲಿ ಮಾತನಾಡುತ್ತಿದ್ದ ಅಂಬೇಡ್ಕರ್ ತಮ್ಮ ಅತ್ಯಂತ ಮುಖ್ಯ ಕೃತಿಯಲ್ಲಿ ಆ ರೀತಿಯ ಮಾತುಗಾರಿಕೆಯ ಕ್ರಮವನ್ನೇ ಬಿಟ್ಟುಬಿಟ್ಟರು. "ಬುದ್ಧ ಮತ್ತು ಆತನ ಧಮ್ಮ" ಎಂಬ ಕೃತಿಯ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಅಂಬೇಡ್ಕರರು ಅಲ್ಲಿಯತನಕ ಲೆನಿನ್‌ನ ಹಾಗೆ, ಲೋಹಿಯಾ ಹಾಗೆ ಆಧುನಿಕ ಸೈದ್ಧಾಂತಿಕ ಪರಿಭಾಷೆಯಲ್ಲಿ ಮಾತನಾಡುತ್ತಿದ್ದವರು ಇದ್ದಕ್ಕಿದ್ದ ಹಾಗೆ ಭಾರತೀಯ ಧರ್ಮಗುರುಗಳ, ಅನುಭಾವಿಗಳ "ದೃಷ್ಟಾಂತ"ಗಳ ಪರಿಭಾಷೆಯಲ್ಲಿ ಮಾತನಾಡಲು ಪ್ರಾರಂಭಿಸಿದರು. ಆಧುನಿಕ ಭಾರತದಲ್ಲಿ ರಾಮಕೃಷ್ಣ ಪರಮಹಂಸರ ನಂತರ ಪೂರ್ಣವಾಗಿ ದೃಷ್ಟಾಂತದಲ್ಲಿ ಮಾತನಾಡಿದ ವ್ಯಕ್ತಿ ಎಂದರೆ ಅಂಬೇಡ್ಕರರೇ. ಈ ಕೃತಿಯಲ್ಲಿ ಬೌದ್ಧ ಪರಂಪರೆಯ ಕಥೆಗಳು, ದೃಷ್ಟಾಂತಗಳಲ್ಲಿಯೇ ಮಾತನಾಡುತ್ತಾರೆ. ಆಧುನಿಕ ಕ್ರಾಂತಿಕಾರಿಯೊಬ್ಬ ಹೀಗೆ ಹಠಾತ್ತನೆ ದೇಶೀ ಮಾದರಿಗೆ ತಿರುಗಿದ್ದು ಅತ್ಯಂತ ಮಹತ್ವದ ಸಂಗತಿ ಎಂದೇ ನನ್ನ ನಂಬಿಕೆ. ಆದರೆ, ಈ ಕೃತಿಯಲ್ಲಿ ತಮ್ಮ ಹಿಂದಿನ ವಾದ-ವಿವಾದಗಳನ್ನು ಅಂಬೇಡ್ಕರರು ಬಿಟ್ಟುಕೊಡಲಿಲ್ಲ. ಗಾಂಧಿಯ ಹಾಗೆ ತಾವು ಕೂಡಾ ಧಾರ್ಮಿಕರಾಗಿ ಬಿಟ್ಟಿದ್ದರ ಬಗ್ಗೆ ಅವರಿಗೆ ಪೂರ್ಣವಾಗಿ ಅರಿವಿತ್ತು. ಹೀಗಾಗಿ, ಅಲ್ಲೂ ಕೂಡಾ ಗಾಂಧಿಯವರಿಗಿಂತ ಭಿನ್ನವಾಗಿರಲು ಪ್ರಯತ್ನಿಸಿದರು. ಗಾಂಧಿಯನ್ ಧಾರ್ಮಿಕತೆಯಲ್ಲಿ ಇದ್ದ ಅಪಾಯ ಎಂದರೆ ಬಡತನದ ಪವಿತ್ರೀಕರಣ. ಇದರಿಂದಾಗಿ ಬಡತನ ಮಾನವನಿರ್ಮಿತ ಶೋಷಣೆಯ ಫಲ ಎಂಬ ಅರಿವು ಹೋಗಿ ಯಥಾಸ್ಥಿತಿವಾದಿ ಭಾವನೆ ದಟ್ಟವಾಗಿ ಮೂಡುತ್ತದೆ. ಧರ್ಮ ಎನ್ನುವುದು ಶೋಷಣೆಯ ಸಮರ್ಥನೆ ಅಥವಾ ಮೌನವಾಗ ಬಾರದು. ಹೀಗೆ ಅನೇಕ ಬಗೆಯ ಸಂವಾದಗಳನ್ನು ಅಂಬೇಡ್ಕರರು ಈ ಕೃತಿಯಲ್ಲಿ ಮುಂದುವರಿಸಿದರು.

ಈ ಎಲ್ಲದರ ಮೂಲಕ ಅಥವಾ ಸಮಗ್ರ ವಿಮೋಚನೆಯ ಪ್ರಶ್ನೆಗೆ ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಯ ಪ್ರಶ್ನೆಗಳು ಕೇಂದ್ರ ಎಂಬ ಗ್ರಹಿಕೆಯನ್ನು ಅಂಬೇಡ್ಕರರು ತಂದರು. ಆದರೆ, ಅದು ಆರ್ಥಿಕ-ಸಾಮಾಜಿಕ ಪ್ರಶ್ನೆಗಳನ್ನು ಬಿಟ್ಟುಕೊಟ್ಟ ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆ ಅಲ್ಲ. ಈ ನಿಲುವು ಸಾಂಪ್ರದಾಯಿಕ ಮಾರ್ಕ್ಸ್‌ವಾದಕ್ಕಿಂತ ಎಷ್ಟು ಭಿನ್ನ ಎಂಬುದನ್ನು ಬೇರೆ ವಿವರಿಸಬೇಕಿಲ್ಲ. ಮತೀಯ ಹಿಂಸೆಯಲ್ಲಿ ಹೊತ್ತಿ ಉರಿಯುತ್ತಿರುವ ಭಾರತಕ್ಕೀ ಸಾಮಾಜಿಕ, ರಾಜಕೀಯ ಆಯಾಮಗಳನ್ನುಳ್ಳ ಸಂಸ್ಕೃತಿ, ಆಧ್ಯಾತ್ಮಿಕತೆ ಮತ್ತಷ್ಟು ತೀವ್ರವಾಗಿ ಪ್ರಸ್ತುತವಾಗಿದೆ.

ಈ ಹಿನ್ನೆಲೆಯಲ್ಲಿ ದಲಿತ ಚಳುವಳಿ ಅಂಬೇಡ್ಕರರ ಶಕ್ತಿ ಮತ್ತು ರೀತಿಗಳನ್ನು ಅರ್ಥ ಮಾಡಿಕೊಂಡು ಹೊಸ ಹೋರಾಟಗಳ ಸಖ್ಯವನ್ನು ಬೆಳೆಸಿಕೊಳ್ಳಬೇಕಾಗಿದೆ. ದಲಿತ ಚಳುವಳಿಗೆ ಇವತ್ತು ನಿಜವಾದ ಸಖ್ಯ ಇರುವುದು ಪರಿಸರ ಚಳುವಳಿಯಲ್ಲಿ, ರೈತ ಚಳುವಳಿಯಲ್ಲಿ, ಸ್ತ್ರೀ ಚಳುವಳಿಯಲ್ಲಿ.

ಈ ಚಳುವಳಿಗಳ ಜತೆಗಿನ ಸಖ್ಯ ತುಂಬ ಸಲೀಸಾಗಿ ಸಾಧ್ಯವಾಗುತ್ತದೆ ಎಂದೇನಲ್ಲ. ಅವುಗಳಲ್ಲಿ ಅನೇಕ ರೀತಿಯ ತೀವ್ರ ಬಿಕ್ಕಟ್ಟುಗಳಿವೆ. ಆಂತರಿಕ ವೈರುಧ್ಯಗಳಿವೆ. ದಲಿತ ಚಳುವಳಿ ತನ್ನ ನಿರ್ದಿಷ್ಟ ಒತ್ತಡಗಳಿಂದ ಆ ಹೋರಾಟಗಳನ್ನು ಬದಲಿಸಬೇಕಿದೆ. ತಾನೂ ಬದಲಾಗಬೇಕಿದೆ.

ನಾನು ಕಂಡ ಗಾಂಧಿ ಮತ್ತು ಅಂಬೇಡ್ಕರ್

— ಯು. ಆರ್. ಅನಂತಮೂರ್ತಿ

1 ಅಂಬೇಡ್ಕರ್ ಇಲ್ಲದಿದ್ದರೆ ಗಾಂಧಿ ನಿಜವಾಗುತ್ತಿರಲಿಲ್ಲ. ಗಾಂಧಿ ಇಲ್ಲದಿದ್ದರೆ ಅಂಬೇಡ್ಕರ್ ಕನಸು ಸಾರ್ಥಕವಾಗುತ್ತಿರಲಿಲ್ಲ.

2 ಅಂಬೇಡ್ಕರ್ ಇಲ್ಲದಿದ್ದರೆ ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯ ದೇಶಪ್ರೇಮ ಕೇವಲ ಬಾಯಿ ಬಡುಕತನವೋ ಅಥವಾ ಭಾರತೀಯ ಮಾದರಿಯ ಇಂಪೀರಿಯಲಿಸಮ್ಮೋ ಆಗಿಬಿಡುತ್ತಿತ್ತು. ಅಂಬೇಡ್ಕರ್‌ರ ಉತ್ಕಟತೆಯಿಂದಾಗಿ ರಾಷ್ಟ್ರೀಯ ಚಳವಳಿಗೆ ಸಾಮಾಜಿಕ ನ್ಯಾಯದ ತಿರುಳು ಸಿಕ್ಕಿತು.

3 ಗಾಂಧಿಯ ಕನಸಿನ ವಿಕೇಂದ್ರೀಕೃತ ವ್ಯವಸ್ಥೆ ಸದ್ಯದಲ್ಲಿ ತಮಗೆ ಅಪಾಯಕಾರಿ ಎನ್ನಿಸಿದರೂ, ಕಾಲಾನುಕ್ರಮದಲ್ಲಿ ತಮ್ಮ ಪೂರ್ಣ ವಿಕಾಸಕ್ಕೆ ಅಗತ್ಯವೆಂದು ದಲಿತರು ಮನಗಾಣುವುದು.

4 ಎಡಪಂಥೀಯರು ಐರೋಪ್ಯ ಮಾದರಿಯ ಆಧುನೀಕರಣದ ಆದರ್ಶವನ್ನು ಕೈಬಿಡಬೇಕು. ಮಾರ್ಕ್ಸ್‌ವಾದ ಐರೋಪ್ಯ ಸಂದರ್ಭದಲ್ಲಿ ಹುಟ್ಟಿದ್ದೆಂದು ಮನಗಂಡು ನಮ್ಮ ಭಾರತೀಯ ಸಂದರ್ಭಕ್ಕೆ ಗಾಂಧಿಯಂತೆ ಸ್ಪಂದಿಸಿ ಸಮಾನತೆಯ ಆಸೆಗೆ ಹೊಸ ಜೀವ ತರಬೇಕು. ದಲಿತರು ಆಧುನೀಕರಣದಲ್ಲಿ ಮಾತ್ರ ತಮ್ಮ ವಿಮೋಚನೆಯೆಂದು ತಿಳಿಯಬಾರದು. ಸದ್ಯದ ಒತ್ತಡ ಮೀರಿ ದಾರ್ಶನಿಕರಾಗಿ ದಲಿತರೂ, ಎಡಪಂಥೀಯರೂ ಯೋಚಿಸಬಲ್ಲರಾದರೆ ಆಗ ಈ ಹೋರಾಟದ ಸ್ವರೂಪ ಪರ್ಯಾಯ ನಾಗರಿಕತೆಯಾಗಿ ಮೂಡುವುದಕ್ಕೆ ಅವಕಾಶವಾದೀತು.

5 ಈ ಮೂವರಿಗೂ ಐರೋಪ್ಯ ಮಾದರಿಯ ಆಧುನೀಕರಣ ತಮ್ಮ ಬಿಡುಗಡೆಗೆ ಅಗತ್ಯವೆನ್ನುವ ಭಾವನೆ ಹೋಗುವಂತಹ ವಿದ್ಯಮಾನ ನಮ್ಮ ದೇಶಕ್ಕೆ ಒದಗಿದಾಗ, ಅವರ ನಡುವೆ ಪೈಪೋಟಿಯಿರುವುದಿಲ್ಲ. ಆಗ ಈ ಜನ ತಮ್ಮ ನೋವಿನಿಂದ ದಾರ್ಶನಿಕರಾದಾರು; ಒಟ್ಟಾದಾರು ಪರ್ಯಾಯ ವ್ಯವಸ್ಥೆಗೆ ಬುನಾದಿಹಾಕಿಯಾರು.

●

‘ಜನಪಂಥೀಯ’ ರಾಜಕಾರಣ ಬೇಕು

— ಬರಗೂರು ರಾಮಚಂದ್ರಪ್ಪ

1. ಡಾ॥ ಅಂಬೇಡ್ಕರ್ ಅವರ ವಿಚಾರಗಳು ಇಂಡಿಯಾದ ಸಾಮಾಜಿಕ ಬದುಕಿನಲ್ಲಿ ಸಂಭವಿಸಿದ ಸಂಕಟಗಳ ಸ್ಫೋಟ ಮಾದರಿ ಎಂದು ನಾನು ಭಾವಿಸುತ್ತೇನೆ. ಒಮ್ಮೊಮ್ಮೆ ಅವರ ವಿಚಾರಗಳಲ್ಲಿ ಪ್ರವಹಿಸುವ ಆಕ್ರೋಶಕ್ಕೂ, ಭಾವಾವೇಶಕ್ಕೂ ಈ ಸಾಮಾಜಿಕ ಸಂಕಟಕ್ಕೂ ಸಂಬಂಧವಿದೆ. ಸಾವಿರಾರು ವರ್ಷಗಳ ಸಾಮಾಜಿಕ ಸಂಕಟಗಳ ಹಿನ್ನೆಲೆಯಲ್ಲಿ ಅವರ ವಿಚಾರಗಳನ್ನು ಅರ್ಥೈಸಿಕೊಳ್ಳುವ ಕ್ರಮ ನನಗೆ ಸಂಗತವೆನ್ನಿಸುತ್ತದೆ. ಈ ಕ್ರಮದಲ್ಲಿ ವೈಭವೀಕರಣಕ್ಕೆ ಅವಕಾಶವಿರಬಾರದು. ನನ್ನ ಮಟ್ಟಿಗೆ ಇರುವುದಿಲ್ಲ.

2. ಅಂಬೇಡ್ಕರ್ ಅವರ ಹೋರಾಟಗಳ ಪ್ರಭಾವ ಇಂದಿನ ದಲಿತ ನಾಯಕತ್ವದ ಮೇಲೆ ಇದ್ದೇ ಇದೆ. ಆದರೆ ಅದನ್ನು ಅರಗಿಸಿಕೊಂಡು ಈ ನಾಯಕತ್ವ ಬೆಳೆದಿದೆಯೇ ಎಂಬ ಬಗ್ಗೆ ನನಗೆ ಅನುಮಾನವೂ ಇದೆ. ಇಷ್ಟಂತೂ ನಿಜ; ಅಂಬೇಡ್ಕರ್ ಹೋರಾಟದ ಫಲವಾಗಿ ರಾಜಕಾರಣದಲ್ಲಿ ದಲಿತ ಪ್ರಜ್ಞೆಯ ನೆಲೆಗಳು ನಿರ್ಮಾಣವಾಗಿವೆ.

3. ಇವತ್ತಿನ ಸಂದರ್ಭ ಅತ್ಯಂತ ಸೂಕ್ಷ್ಮವಾದುದು. ದಲಿತ ಹೋರಾಟಗಳು ಹುಟ್ಟು ದಲಿತರ ಆಶೋತ್ತರಗಳನ್ನು ಅತ್ಯಂತ ಪ್ರಾಮಾಣಿಕವಾಗಿ ಪ್ರತಿನಿಧಿಸಬೇಕು. ಪ್ರತಿಭಟನೆಗೆ ಪ್ರಬುದ್ಧತೆ, ಹೋರಾಟಗಳ ಹೊಣೆಗಾರಿಕೆ ಇರಬೇಕು. ಸಾಮಾಜಿಕ ದ್ವೀಪಗಳನ್ನು ದಾಟುವ ಧೀಮಂತಿಕೆಯನ್ನು ತೋರಬೇಕು. ಹುಟ್ಟಾ ದಲಿತರಲ್ಲದ ಪ್ರಗತಿಪರರ ಜೊತೆ ಆಪ್ತ ಸಂಬಂಧವನ್ನು ಸ್ಥಾಪಿಸುತ್ತಲೇ ಹೋರಾಟವನ್ನು ಕಟ್ಟಬೇಕು. ಪರಸ್ಪರ ಅಪನಂಬಿಕೆಯ ವಾತಾವರಣದಿಂದ ನಾವೆಲ್ಲ ವಿಮೋಚಿತರಾಗಬೇಕು. — ಹೀಗೆ ಅನೇಕ ‘ಬೇಕು’ಗಳ ಬೆಸುಗೆಯಲ್ಲಿ ನನ್ನ ಕಲ್ಪನೆಯ ದಲಿತ ಹೋರಾಟದ ಸ್ವರೂಪ ಕಟ್ಟಿಕೊಳ್ಳುತ್ತದೆ.

4. ನಮ್ಮ ಸಂದರ್ಭ ಹೇಗಿದೆಯೆಂದರೆ ಪ್ರಗತಿಪರ ಶಕ್ತಿಗಳಿಗಿಂತ ಪ್ರತಿಗಾಮಿ ಹಾಗೂ ಯಥಾಸ್ಥಿತಿವಾದಿ ಶಕ್ತಿಗಳಲ್ಲೇ ಭಾವನಾತ್ಮಕವಾಗಿ ಹೆಚ್ಚು ಒಗ್ಗಟ್ಟಿದೆ. ಹೀಗಾಗಿ ಅವರ ಶಕ್ತಿಯೂ ವೃದ್ಧಿಯಾಗುತ್ತಿದೆ. ಪ್ರಗತಿಪರ ಶಕ್ತಿಗಳು ಮಾರ್ಕ್ಸ್, ಅಂಬೇಡ್ಕರ್, ಗಾಂಧಿ, ಲೋಹಿಯಾಗಳಾದಿ ಎಷ್ಟರಮಟ್ಟಿಗೆ ಒಡೆದಿವೆಯೆಂದರೆ– ಸಾಂಪ್ರದಾಯಿಕ ದಾಯಾದಿತನ ಎದ್ದು ಕಾಣುತ್ತದೆ, ಪರಸ್ಪರ ಪ್ರೀತಿಸಲಾಗದ

ಶೂದ್ರ

ಈ 'ವಾದಿ'ಗಳು (ವಾದಗಳು) ಎಂಥ ಹೋರಾಟ ಕಟಲು ಸಾಧ್ಯ. ನಮ್ಮ ವೈಚಾರಿಕ ನೆಲೆಗಳು ಮಾರ್ಕ್ಸ್‌ನಲ್ಲೇ ಮುಕ್ತಾಯವಾಗುವುದಿಲ್ಲ. ಅಂಬೇಡ್ಕರ್ ಅಂತಿಮವಲ್ಲ. ಹಾಗೆಯೇ ಲೋಹಿಯಾ ಮತ್ತು ಗಾಂಧಿ. ಪರಸ್ಪರ ಮಾತನಾಡುತ್ತ, ಬೆಳೆಯುತ್ತ, ಒಟ್ಟಾರೆ ಎಡಪಂಥೀಯ ಆಶಯಗಳನ್ನು ಬೆಳೆಸುವ ಪ್ರೀತಿಯ ಸೆಳೆತ ನಮ್ಮ ಸಿದ್ಧಾಂತಗಳಲ್ಲಿ ಮಿಡಿಯಬೇಕೆಂದು ನಾನು ಬಯಸುತ್ತೇನೆ. ಇದರರ್ಥ ಎಲ್ಲವೂ ಸೇರಿದ ಸಮನ್ವಯ ಸಿದ್ಧಾಂತವೊಂದನ್ನು ರೂಪಿಸಬೇಕೆಂದಲ್ಲ. ಎಡಪಂಥೀಯತೆಯು ಉಳಿದ ಪ್ರಗತಿಪರ ವಿಚಾರಗಳಿಂದ ಉಪಯುಕ್ತವಾದುದನ್ನು ಸ್ವೀಕರಿಸುತ್ತ ಸಮೃದ್ಧಗೊಳ್ಳಬೇಕು: ದೃಢಗೊಳ್ಳಬೇಕು. ನಮ್ಮ ನಾಡಿನ ಎಡಪಂಥೀಯ ಚಳುವಳಿಗಳು ಹೆಚ್ಚು ಸೃಜನಶೀಲವಾಗಬೇಕು. ಅಂದರೆ ಬಾಯಿಪಾಠದ ಪ್ರವೃತ್ತಿಯನ್ನು ಮೀರಿ, ಜಾತಿ ಮತ್ತು ವರ್ಗಗಳ ವೈಜ್ಞಾನಿಕ ನೆಲೆಗಳಿಗೆ ನಾಲಿಗೆಯಾಗಬೇಕು. ಈ ನಾಲಿಗೆಯು ಮಾರುದ್ದ ಚಾಚುವ ಮಾತು ಮಾತ್ರವಾಗದೆ, ಮೌನವೂ ಆಗಬೇಕು. ಮಾತು ಮತ್ತು ಮೌನಗಳ ನಡುವಿನ ತಳಮಳದಲ್ಲಿ ಬಾಳುವ ಬೆಳಕಾಗಬೇಕು. ಮಾತಿಗೆ ಮೌನದ ಮಹತ್ವ, ಮೌನಕ್ಕೆ ಮಾತಿನ ಮಹತ್ವ ಗೊತ್ತಾಗುತ್ತ ಹೋದಂತೆ ನಾಲಿಗೆಯೂ ಸಲಿಗೆ ಮತ್ತು ಮೈಲಿಗೆಯಿಂದ ಮುಕ್ತವಾದ ಮಾನವೀಯ ಮಿಡಿತವಾಗುತ್ತದೆ. ಈ ನೆಲೆಯಲ್ಲಿ ಎಡಪಂಥೀಯ ಚಿಂತನೆ ಚಿಮ್ಮಬೇಕು. ದಲಿತ ಚಿಂತನೆಗೂ ಇದು ಅನ್ವಯಿಸುತ್ತದೆ. ನಿಜವಾದ ಎಡಪಂಥೀಯ ಚಿಂತನೆಯು ದಲಿತ ಕಾಳಜಿಯನ್ನಷ್ಟೇ ಅಲ್ಲ. ಜನಸಂಸ್ಕೃತಿ ಮತ್ತು ಜನ ಚಳುವಳಿಗಳ ಅಂತಃಶಕ್ತಿಯನ್ನು ಒಳಗೊಂಡ 'ಜನ ಪಂಥೀಯ' ಚಿಂತನೆಯಾಗಬೇಕು. ನಮ್ಮ ರಾಜಕಾರಣವು 'ಜನಪಂಥೀಯ ರಾಜಕಾರಣ'ವಾಗಬೇಕು. ನಮ್ಮ ಹೋರಾಟಗಳು 'ಜನಪಂಥೀಯ ಹೋರಾಟ'ಗಳಾಗಬೇಕು. ಅಂದರೆ ನನ್ನ ದೃಷ್ಟಿಯಲ್ಲಿ ಎಡಪಂಥ, ದಲಿತ ಪಂಥಗಳ ಅಂತರ್ ಸಂಬಂಧವುಳ್ಳ ಜನಪಂಥೀಯತೆಯು ಪರಿಕಲ್ಪನೆ ಮುಖ್ಯ.

5. ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಇವರ ಒಗ್ಗಟ್ಟು ಉಪಯುಕ್ತವಾದುದು. ಈ ಬಗ್ಗೆ ಎರಡನೇ ಮಾತಿಗೆ ಆಸ್ಪದವಿಲ್ಲವಾದರೂ ಸದ್ಯಕ್ಕೆ ಇದೊಂದು ಆದರ್ಶವಾಗಿ ಮಾತ್ರ ಕಾಣಿಸುತ್ತಿದೆ. ಯಾಕೆಂದರೆ–ದಲಿತರಲ್ಲೇ ಇರುವ ಒಳ ಪಂಗಡಗಳ ಮುಸುಕಿನ ಮುನಿಸು, ದಲಿತರು ಮತ್ತು ಹಿಂದುಳಿದ ವರ್ಗದವರ ನಡುವೆ ಬಹಳಷ್ಟು ಅಸಾಧ್ಯವಾಗೇ ಉಳಿದಿರುವ ಭಾವ ಸಂಬಂಧ ಮತ್ತು ದಲಿತರು ಹಾಗೂ ಹಿಂದುಳಿದ ವರ್ಗದ ಅನೇಕರಲ್ಲಿ ಬೆಳೆದಿರುವ ಅಲ್ಪಸಂಖ್ಯಾತ ವಿರೋಧಿ ಮತೀಯ ಭಾವ, ಅಲ್ಪಸಂಖ್ಯಾತರಲ್ಲಿ ಹಿಂಬೆಸುತ್ತಿದ ಬಿಟ್ಟ

ಕುದ್ರು

ಬದುಕು—ಈ ಎಲ್ಲ ವೈರುಧ್ಯಗಳ ನಡುವೆ ಒಂದಾಗಿ ಹೋರಾಟಕ್ಕಿಳಿಯುವ ಕೇಂದ್ರ ಪ್ರಜ್ಞೆ ಮೂಡುವುದೇ ಕಷ್ಟ ಸಾಧ್ಯವಾದ ಕನಸಾಗಿದೆ. ಹಾಗೆ ನೋಡಿದರೆ ದಲಿತರು, ಹಿಂದುಳಿದವರು ಮತ್ತು ಅಲ್ಪ ಸಂಖ್ಯಾತರಲ್ಲಿ ಪ್ರಗತಿಪರ ನೆಲೆಯ ಆತ್ಮವಿಮರ್ಶೆ ಮತ್ತು ಆತ್ಮಸಂವಾದದ ಶಕೆ ಪ್ರಾರಂಭವಾಗಬೇಕಾಗಿದ. ಎಂಥದೇ ಐತಿಹಾಸಿಕ ಕಾರಣಗಳಿರಲಿ, ಅಲ್ಪಸಂಖ್ಯಾತರನ್ನು ಒಳಗೊಂಡಂತೆ ಎಲ್ಲ ಜಾತಿಜನಾಂಗಗಳ ಒಳಗೇ ಹುತ್ತಗಟ್ಟಿದ ಮತೀಯತೆ ಬುಸುಗುಡುತ್ತಿರುವಾಗ, ಅದಕ್ಕೆ ಕೊನೆ ತರುವ ಕ್ರಿಯೆಯಲ್ಲಿ ನಾವೆಲ್ಲ ತೊಡಗಬೇಕಾಗಿದೆ. ಇತ್ತೀಚೆಗೆ ಹೆಚ್ಚು ಹೆಡೆಯೆತ್ತುತ್ತಿರುವ ಈ ಸಮಸ್ಯೆಗಿಂತ ಮುಂಚಿನಿಂದಲೂ, ದಲಿತರು, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರಲ್ಲಿ ಹೇಳಿಕೊಳ್ಳುವಂಥ ಸಾಮರಸ್ಯವೇನೂ ಇರಲಿಲ್ಲ. ವಿದ್ಯಾವಂತ ವರ್ಗದಲ್ಲಿ ಮೇಲ್‌ನೋಟಕ್ಕೆ ಹೊಂದಾಣಿಕೆಯಿರುವಂತೆ ಕಂಡರೂ ಒಳಗೊಳಗೆ ಅಪನಂಬಿಕೆ, ಅಸಹನೆಗಳು ತಾಂಡವವಾಡುತ್ತಿವೆ. ಸರ್ಕಾರಿ ಸವಲತ್ತುಗಳ ವಿಷಯ ಬಂದಾಗ ಈ ಅಸಹನೆ ಅಸಹ್ಯಕರವುಗಳನ್ನು ತೆಗೆದುಕೊಂಡು ಮನಸ್ಸುಗಳನ್ನು ಮಲಿನಗೊಳಿಸುತ್ತ ಬಂದಿದೆ. ಇದು ವಸ್ತುಸ್ಥಿತಿ. ಹಾಗೆಂದು ಹತಾಶೆಯಲ್ಲಿ ಹೂತು ಹೋಗ ಬೇಕಾಗಿಲ್ಲ. ಒಗ್ಗಟ್ಟನ್ನು ಸಾಧಿಸುವ ಸಂವೇದನಾತ್ಮಕ ಪ್ರಯತ್ನಗಳು ನಡೆಯಲೇ ಬೇಕು. ಕೆಲವು ಕಡೆ ನಡೆಯುತ್ತಲೂ ಇವೆ. ಆದರೆ ನಾನು ಪ್ರತಿಪಾದಿಸುವ 'ಜನಪಂಥೀಯ' ನೆಲೆಯ ಪರಿಕಲ್ಪನೆಯಲ್ಲಿ ಪರಂಪರೆಯೊಂದನ್ನು ನಿರ್ಮಿಸುವ ಪ್ರಯತ್ನಗಳು ದೃಢವಾಗಿ ನಡೆದಿಲ್ಲ. ಎಡಪಂಥೀಯ ನೆಲೆಯನ್ನು ಇಂಡಿಯಾದ ಸಂದರ್ಭದಲ್ಲಿ ವಿಸ್ತರಿಸಿ, ಜಾತಿ, ವರ್ಗ, ಧರ್ಮ ಇತ್ಯಾದಿಗಳಲ್ಲಿ 'ಜನ' ಎನ್ನು ವುದು ಒಂದು ಮೌಲ್ಯವಾಗಿ, ಶಕ್ತಿಯಾಗಿ, ಸಿದ್ಧಾಂತವಾಗಿ ಸದಾ ಕಾಡಿಸುವ ಸಂವೇದನೆಯಾಗಿ ರೂಪುಗೊಳ್ಳುವ 'ಜನಪಂಥೀಯತೆ'ಯನ್ನು ಸಾಧಿಸಿದರೆ ಒಗ್ಗಟ್ಟಿಗೆ ಅರ್ಥ ಬಂದೀತು. 'ಜನ' ಎನ್ನುವುದನ್ನು ಇಲ್ಲೀವರೆಗೆ ಜಾತಿಯಾಗಿ, ವರ್ಗವಾಗಿ ಧರ್ಮವಾಗಿ ವಿಭಜಿಸಿದ ಅವೈಚಾರಿಕ ಹಾಗೂ ಅಮಾನವೀಯ ಅಂಶಗಳನ್ನು ಮನುಷ್ಯನ ಚರಿತ್ರೆಯಿಂದ ಧಿಕ್ಕರಿಸುವ ಧೀಮಂತ ನೆಲೆಯಲ್ಲಿ ಹಾಗೂ ಸಾಮಾಜಿಕ ಸಾಂಸ್ಕೃತಿಕ ಸಂಕಟಗಳ ಸಂವೇದನೆಯಲ್ಲಿ 'ಜನಪಂಥೀಯ ತೆ'ಯ ಕಲ್ಪನೆ ಹುಟ್ಟುತ್ತದೆ. ಈ ಕಲ್ಪನೆ, ಪರಿಕಲ್ಪನೆಯಾಗಿ, ದೃಷ್ಟಿದರ್ಶನ ವಾಗಿ ನಮ್ಮೊಳಗೆ ಬೆಳೆದು, ಬಹಿರಂಗದೊಂದಿಗೆ ಮಾತನಾಡಿದಾಗ ನಮ್ಮ ಆಶಯ ಗಳಿಗೆ ಅರ್ಥ ಬರುತ್ತದೆ. ಅಂಥ ದಿನಕ್ಕಾಗಿ ಕಾಯೋಣ; ಕ್ರಿಯಾಶೀಲವಾಗೋಣ.

●

ಕೂಡಿ ನಡೆಸಬೇಕಾದ ಹೋರಾಟ

— ರಮೇಶ್ ಬಂದಗದ್ದೆ

1. ಜಾತಿ ಪದ್ಧತಿಯಿಂದಾಗಿ ಶತಶತಮಾನಗಳ ಕಾಲ ಭಾರತೀಯ ಸಮಾಜ ವಿಘಟನೆಗೊಂಡಿತ್ತು. ಜಾತಿ ಒಂದು ವರ್ಗವೇ ಆಗಿ ಸಾಮಾಜಿಕ ಚಲನೆ ಅಸಾಧ್ಯ ಎನ್ನುವಂತಹ ಪರಿಸ್ಥಿತಿ. ಇಡೀ ಸಮಾಜವೇ ನಿಶ್ಚೇಷ್ಟಿತ ಎನ್ನುವಂತಹ ವಾತಾವರಣ. ಬುದ್ಧಿಗೆ ಗರ ಬಡಿದಿತ್ತು. ಭಾವನೆಗಳಿಗೆ ಬರ ಎನ್ನುವ ಮಾತು ಭಾರತೀಯ ಸಮಾಜಕ್ಕೆ ಒಪ್ಪುತ್ತಿತ್ತು.

ಇಂಥ ಒಂದು ನಿರ್ಣಾಯಕ ಕಾಲ ಘಟ್ಟದಲ್ಲಿ ಹುಟ್ಟಿ, ಬೆಳೆದವರು ಡಾ॥ ಬಾಬಾ ಸಾಹೇಬ ಅಂಬೇಡ್ಕರ್. ಅತ್ಯಂತ ಪ್ರತಿಕೂಲ ಸನ್ನಿವೇಶದಲ್ಲಿ ಎಲ್ಲ ಆತಂಕಗಳನ್ನು ಮೀರಿ ಬೆಳೆದು ನಿಂತ ವ್ಯಕ್ತಿತ್ವ ಅಂಬೇಡ್ಕರ್ ಅವರದು.

ಈ ಮಹಾನ್ ವ್ಯಕ್ತಿತ್ವ ಅಂದಿನ ಸ್ಥಿತಿಗತಿಗಳನ್ನು ವಿಚಾರಿಸಿ, ವಿಶ್ಲೇಷಿಸಿದ ರೀತಿ ಅಂದಿನಂತೆ ಇಂದಿಗೂ ಪ್ರಸ್ತುತ. ಸಮಾಜದ ಯಾರೊಬ್ಬರನ್ನೂ ದ್ವೇಷಿಸದೆ, ಎಲ್ಲರ ಒಳಿತಿಗಾಗಿ ಸಾಮಾಜಿಕ ಅನಿಷ್ಟಗಳ ವಿರುದ್ಧ ಅವರು ಸಾರಿದ ವೈಚಾರಿಕ ಹಾಗೂ ಸಾಮಾಜಿಕ ಸಮರ ಇಂದಿಗೂ ನಮಗೆ ದಾರಿದೀಪ.

ಅತ್ಯಂತ ಹೀನ ಸ್ಥಿತಿಯಲ್ಲಿದ್ದ ಪಂಚಮರಿಗೆ ಸಮಾನತೆ ಮತ್ತು ತಲೆ ಎತ್ತಿ ನಿಂತು ಬದುಕುವ ಆತ್ಮ ವಿಶ್ವಾಸವನ್ನು ಕೊಟ್ಟ ಅವರ ಧೀಮಂತ ವಿಚಾರ ಮತ್ತು ನೇತೃತ್ವ ಕಾರ್ಯಗತವಾಗುವವರೆಗೂ ಪ್ರಸ್ತುತ.

2. ಅಂಬೇಡ್ಕರ್‌ರ ನಿಚ್ಚಳ, ಮಾತು ಹಾಗೂ ಕಾರ್ಯಕ್ರಮ ನಿಷ್ಠ ಪ್ರಭಾವ ಭಾರತದ ರಾಜಕಾರಣದ ಮೇಲೆ ಹೆಚ್ಚು ಆಗಿಲ್ಲ. ಅಂಬೇಡ್ಕರ್ ಅವರ ವಿಚಾರಗಳನ್ನು ಒಪ್ಪುವವರು ಮೂಲಭೂತವಾದಿ ರಾಜಕೀಯ ಪಕ್ಷಗಳ ಹೊರತಾಗಿ ಎಲ್ಲ ರಾಜಕೀಯ ಪಕ್ಷಗಳಲ್ಲೂ ಇದ್ದಾರೆ. ಆದರೆ ಎಲ್ಲ ರಾಜಕೀಯ ಪಕ್ಷಗಳೂ ತಮ್ಮದೇ ಆದ ರಾಜಕೀಯ, ಸಾಮಾಜಿಕ, ಆರ್ಥಿಕ ನೀತಿಯನ್ನು ಹೊಂದಿರು

ತ್ತವೆ. ಈ ಪೈಕಿ ಹೆಚ್ಚಿನಂಶ ಎಡಪಕ್ಷಗಳು, ಅದಕ್ಕೂ ಹೆಚ್ಚಾಗಿ ಸಮಾಜವಾದಿ ಪಕ್ಷದ ಸಾಮಾಜಿಕ ಸ್ಥಿತಿಗತಿಯ ಗ್ರಹಿಕೆ, ವಿಶ್ಲೇಷಣೆ ಅಂಬೇಡ್ಕರ್ ಅವರ ವಿಶ್ಲೇಷಣೆಗೆ ಸಂವಾದಿಯಾಗಿದೆ ಎನ್ನಬಹುದು. ಉಳಿದಂತೆ ಅವರ ರಾಜಕೀಯ, ಆರ್ಥಿಕ ವಿಶ್ಲೇಷಣೆ ಈ ಯಾವುದೇ ರಾಜಕೀಯ ಪಕ್ಷಗಳ ವಿಶ್ಲೇಷಣೆಗೆ ಅಷ್ಟು ಸಂವಾದಿಯಾಗಿಲ್ಲ. ಅಂಬೇಡ್ಕರ್ ಅವರ ವಿಚಾರಗಳನ್ನೇ ಆಧಾರವಾಗಿಟ್ಟು ಕೊಂಡ ರಿಪಬ್ಲಿಕನ್ ಪಕ್ಷ ಕೇವಲ ವ್ಯಕ್ತಿಗತ ರಾಜಕಾರಣದಂತೆ ಆಗಿ ಅಥವಾ ಹೋಳು ಹೋಳಾಗಿ ಹೋದುದಕ್ಕೆ ಇದೇ ಕಾರಣ ಇರಬಹುದು ಎನಿಸುತ್ತದೆ.

3. ದಲಿತ ಹೋರಾಟ ನಮ್ಮ ರಾಜ್ಯದಲ್ಲಿ ಎರಡು ದಶಕಕ್ಕೂ ಹಿಂದಿನಿಂದ ನಡೆಯುತ್ತ, ಆಕಾರ, ಸ್ವರೂಪಗಳನ್ನು ಪಡೆಯುತ್ತ ಬಂದಿದೆ. ದಲಿತ ಹೋರಾಟದ ಗುರಿ ದಲಿತರಿಗೆ ಸಾಮಾಜಿಕ, ಆರ್ಥಿಕವಾಗಿ ಸಂಪೂರ್ಣ ಸಮಾನತೆ ತರುವುದರ ಜೊತೆ ಅವರು ರಾಷ್ಟ್ರದ ಮುಖ್ಯವಾಹಿನಿಯಲ್ಲಿ ಗುರುತಿಸಲಾಗದ ರೀತಿಯಲ್ಲಿ ಬೆಳೆಯುವಂತಾಗಬೇಕು. ಹೀಗಾದಾಗ ಅಸಮಾನ ವ್ಯವಸ್ಥೆಯ ಫಲವಾಗಿ ಶೋಷಣೆಗೆ ಗುರಿಯಾದವರೆಲ್ಲ ದಲಿತ ಹೋರಾಟದಲ್ಲಿ ಪಾಲ್ಗೊಳ್ಳು ವಂತಾಗುತ್ತದೆ. ನಮ್ಮ ಸಮಾಜದಲ್ಲಿ ಜಾತಿ, ಹಣ, ಇಂಗ್ಲಿಷ್ ಭಾಷೆ ಸಮಾಜದ ನಡುವೆ ಎದ್ದಿರುವ ಗೋಡೆಗಳು. ಇವನ್ನು ಒಡೆಯಲು ಬಯಸುವವರನ್ನೆಲ್ಲ ದಲಿತ ಹೋರಾಟ ಒಳಗೊಳ್ಳಬೇಕು.

4. ಮೇಲಿನ ಪ್ರಶ್ನೆಗೆ ಪ್ರಶ್ನೆ 3ಕ್ಕೆ ನೀಡಿರುವ ಉತ್ತರದಲ್ಲೇ ಕೆಲವು ಹೊಳಹು ಗಳಿವೆ. ಎಡಪಂಥೀಯರು ಕಮ್ಯೂನಿಷ್ಟರು, ಸಮಾಜವಾದಿಗಳು ಸೈದ್ಧಾಂತಿಕ ವಾಗಿ ಮಧ್ಯಸ್ಥಿತಿಯಲ್ಲಿರುವ ರಾಜಕೀಯ ಪಕ್ಷಗಳು–ಹಾಗೂ ದಲಿತ ಚಳುವಳಿಗೆ ಕೆಲವು ಸಮಾನ ಉದ್ದೇಶಗಳಿವೆ. ಆ ಉದ್ದೇಶ ಸಾಧನೆಯ ಮಾರ್ಗ ಕೂಡ ಸಮಾನವಾಗಿದೆ.

ಈ ಕಾರಣದಿಂದಾಗಿ ಎಡಪಂಥೀಯರು ದಲಿತ ಚಳುವಳಿಯ ಜೊತೆ ಕನಿಷ್ಠ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು. ತತ್‌ಕ್ಷಣದ ರಾಜಕೀಯ ಫಲಾಪೇಕ್ಷೆ ಗಳಿಲ್ಲದೇ ರಾಜಕೀಯ ಪಕ್ಷಗಳು ಈ ಕಾರ್ಯಕ್ರಮಗಳಲ್ಲಿ–ವಾಸ್ತವವಾಗಿ ಇದು ಹೋರಾಟದ ಕಾರ್ಯಕ್ರಮಗಳು–ಅವುಗಳಲ್ಲಿ ಪಾಲ್ಗೊಳ್ಳುವಂತಾಗಬೇಕು.

ವಾಸ್ತವವಾಗಿ ಸಮಾನತೆಯ ಸಮಾಜ ನಿರ್ಮಾಣವನ್ನು ಬಯಸುವ ಜನರ ನಡುವೆ ಸಂವಾದಗಳು ನಡೆಯುತ್ತಿಲ್ಲ. ಅವರು ರಚನಾತ್ಮಕವಾಗಿ ಬಹಳ ಕ್ರಿಯಾ

ಶೀಲರಾಗಿಯೂ ಇಲ್ಲ. ಆದ್ದರಿಂದ ಈ ಸಂವಾದ ಸಾಧ್ಯವಾಗುವಂತಹ ಚರ್ಚೆ, ವಿಚಾರ ಸಂಕಿರಣ, ಪ್ರಚಾರ ಪ್ರಕಟಣೆ, ರಚನಾತ್ಮಕ ಕೆಲಸಗಳು ಆಗಬೇಕು.

5. ಖಂಡಿತ ಉಪಯುಕ್ತ: ಏಕೆಂದರೆ ದಲಿತರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ಎಲ್ಲರೂ ಸಮಾನವಾಗಿ ನಮ್ಮ ಸಮಾಜ ವ್ಯವಸ್ಥೆಯಲ್ಲಿ ಶೋಷಣೆಗೆ ಗುರಿಯಾದವರು. ಇವರುಗಳ ಜೊತೆಗೆ ಮಹಿಳೆಯರನ್ನೂ ಸೇರಿಸಿಕೊಳ್ಳಬೇಕು. ಈ ಒಗ್ಗಟ್ಟಿನ ಉದ್ದೇಶ ಏನಾಗಿರಬೇಕು ಎಂಬುದು ಬಹಳ ಮುಖ್ಯ. ಈ ಒಕ್ಕೂಟ ಹೆಚ್ಚಿನಂಶ ಸಾಂಸ್ಕೃತಿಕ ಎನ್ನಬಹುದಾದ ಚಟುವಟಿಕೆಗಳತ್ತ ಲಕ್ಷ್ಯ ವಹಿಸಬೇಕು. ಅಂತರಜಾತೀಯ, ಅಂತರ ಧರ್ಮೀಯ, ವಿವಾಹಗಳು, ಪರಸ್ಪರರು ಸೇರಿ ಪರಿಸ್ಪರರ ಹಬ್ಬ ಹರಿದಿನಗಳನ್ನು ಆಚರಿಸುವುದು, ಸಾಮೂಹಿಕವಾಗಿ ಎಲ್ಲರೂ ಪಾಲ್ಗೊಳ್ಳುವಂತಹ ಕಾರ್ಯಕ್ರಮಗಳನ್ನು ರೂಪಿಸುವುದು ಈ ಒಕ್ಕೂಟದ ಉದ್ದೇಶ ಆಗಬೇಕು,

ಹೋರಾಟ ಬಲಗೊಳ್ಳುವುದು ವಿವೇಕ ಮತ್ತು ಸಜ್ಜನಿಕೆಯಿಂದ

— ಪಿ. ಲಂಕೇಶ್

1. ಜಾತೀಯತೆಯ ದುರಂತವನ್ನು ಸ್ವಂತ ಅನುಭವದಿಂದ, ಆಳವಾದ ಅಧ್ಯಯನದಿಂದ ಕಲಿತವರು ಡಾ॥ ಅಂಬೇಡ್ಕರ್. ಒಂದು ರೀತಿಯಲ್ಲಿ ಅಂಬೇಡ್ಕರರ ಎಲ್ಲ ವಾದಗಳನ್ನು ಮೀರಿದ್ದು ಅವರ ವ್ಯಕ್ತಿತ್ವ.

2. ಒಂದು ಮಟ್ಟದಲ್ಲಿ ರಾಜಕಾರಣ ಆತ್ಮಸಾಕ್ಷಿಯ ದೃಷ್ಟಿಯಿಂದ ಅಂಬೇಡ್ಕರ್ ಹೋರಾಟ ಮತ್ತು ಒಳತೋಟಿಯನ್ನು ಮರೆಯುವಂತಿಲ್ಲ; ಜನತೆ ಅಂಬೇಡ್ಕರ್ ಅವರ ದೇಶಪ್ರೇಮ ಮತ್ತು ಒಟ್ಟಾರೆ ಜನತೆಯ ಬಗೆಗಿನ ಕಾಳಜಿಯನ್ನು ಕಡೆಗಣಿಸುವಂತಿಲ್ಲ. ಆದರೆ ಅನೇಕ ರಾಜಕಾರಣಿಗಳಿಗೆ ತಮ್ಮ ತಪ್ಪನ್ನು ಮರೆಸುವ ರಕ್ಷಾಕವಚವನ್ನಾಗಿ ಡಾ॥ ಅಂಬೇಡ್ಕರ್ ಅವರನ್ನು ಮಾಡಿಕೊಂಡಿದ್ದು ನಿಚ್ಚಳವಾಗಿದೆ. ಹಾಗೆಯೇ ನಮ್ಮ ಎಲ್ಲ ಮುಖ್ಯ ಚಿಂತಕರಂತೆ ಡಾ॥ ಅಂಬೇಡ್ಕರ್ ಕೂಡ ವಂಚಕರಿಗೆ ಲಾಭದಾಯಕ ಹೆಸರಾದರೆ ಆಶ್ಚರ್ಯವಿಲ್ಲ.

3. ನನ್ನ ಪ್ರಕಾರ ದಲಿತ ಹೋರಾಟ ತನ್ನ ಕಠೋರ ನಿಲುವು ಕಳೆದುಕೊಂಡಂತಿದೆ, ದುರ್ಬಲವಾಗುತ್ತಿದೆ; ಆದರೆ ಎಲ್ಲ ಕಠೋರ ನಿಲುವೂ ಬೇರೆ ಮೌಲ್ಯಗಳ ಜೊತೆಗೆ ಸೇರದಿದ್ದರೆ ಬರಡಾಗುತ್ತ ಹೋಗುತ್ತದೆ, ಇದು ಇಲ್ಲಿಯ ದ್ವಂದ್ವ. ಆದ್ದರಿಂದ ದಲಿತ ಹೋರಾಟಗಾರರು ತಮ್ಮ ನಿಷ್ಠುರ ನಿಲುವು ಬಿಟ್ಟುಕೊಡದೆ ಶಿಸ್ತು, ವಿವೇಕ, ಸಜ್ಜನಿಕೆ ಬೆಳೆಸಿಕೊಳ್ಳಬೇಕು; ಈ ಕಠೋರ ನಿಲುವು ಜಾತೀಯತೆಯ ಅನ್ಯಾಯವನ್ನೊಳಗೊಂಡ ಎಲ್ಲ ಭ್ರಷ್ಟತೆ, ಅದಕ್ಷತೆ, ಮೋಸದ ವಿರುದ್ಧ ಕೂಡ ಇರಬೇಕು. ಇದು ನನ್ನ (ಕಲ್ಪನೆಯಲ್ಲ) ಆಶಯ.

4. ಎಡ, ಬಲ ಎಂಬುದೆಲ್ಲ ಹಾಸ್ಯಾಸ್ಪದವಾಗುತ್ತಿದೆ; ಇವು ತಾನೆ ತಗುಲಿದ ಎಲ್ಲ ರೋಗಗಳಿಗೂ ದಲಿತ ಚಳವಳಿಗೂ ತಗುಲುವುದು ಸ್ಪಷ್ಟವಾಗಿದೆ, ಆದ್ದರಿಂದ ಎಲ್ಲ ಸಿದ್ಧಾಂತಗಳನ್ನು ಬಳಸಿಕೊಂಡು (ಅಥವಾ ಎಲ್ಲ ಸಿದ್ಧಾಂತಗಳಿಂದ ಮುಕ್ತವಾಗಿ) ರೂಪಿಸುವ ಕಾರ್ಯಕ್ರಮ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.

5. ಇಂಥದನ್ನು ಉತ್ತರ ಭಾರತದಲ್ಲಿ ಖನ್ಸಿ ರಾಮ್ ಮುಂತಾದವರು ಮಾಡುತ್ತಿರುವುದನ್ನು ನೋಡುತ್ತಿದ್ದೇವೆ. ಅಧಿಕಾರದ ಹತ್ತಿರ ಬಂದೊಡನೆ ಉಳಿಯುವುದೇ ಸ್ವಾರ್ಥ ಮತ್ತು ನೀಚತನ ಎಂಬುದನ್ನು ಕಂಡುಕೊಂಡೂ ಅವರೆಲ್ಲರ ಒಗ್ಗಟ್ಟಿಗೆ ಪ್ರಯತ್ನಿಸುವುದರಲ್ಲಿ ತಪ್ಪೇನಿಲ್ಲ. ಎಲ್ಲಕ್ಕಿಂತ ಮೊದಲು ಈ ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರಿಗೆ ಸಮಾನವಾಗಿರುವ ಅವಮಾನ, ನೋವು, ಬಡತನ–ಅದೇ ಕ್ರಮದಲ್ಲಿ–ಕಂಡುಕೊಂಡು ಮುಂದುವರಿದರೆ ಒಳ್ಳೆಯದು. ಈ ದುರಂತಮಯ ದೇಶದಲ್ಲಿ 'ಜಾತ್ಯಾತೀತ' ಅಂದೊಡನೆ 'ಮುಂದುವರಿದವರು' ಎಂದು ಅರ್ಥವಾಗಿದ್ದನ್ನು ಹೆಗಡೆ, ದೇವೇಗೌಡ, ಬೊಮ್ಮಾಯಿ ದರ್ಬಾರಿನಲ್ಲಿ ನೋಡಿದ್ದೇವೆ. ಮನುಷ್ಯನ ನಡವಳಿಕೆ ಮತ್ತು ಭಾಷೆಯ ಅರ್ಥಗಳನ್ನೆಲ್ಲ ತಿರುಚಿ ಹಾಕಿದರೆ ಆಶ್ಚರ್ಯವಿಲ್ಲ.

ದಲಿತರ ಅಂತರಂಗದ ಸಂಘರ್ಷ

— ಡಾ॥ ಸಿದ್ದಲಿಂಗಯ್ಯ

1) ದೇಶದ ಸರ್ವತೋಮುಖ ಅಭಿವೃದ್ಧಿ ಮತ್ತು ಆರೋಗ್ಯದ ದೃಷ್ಟಿಯಿಂದ ಅಂಬೇಡ್ಕರ್ ವಿಚಾರಧಾರೆ ತುಂಬಾ ಅಗತ್ಯವಾಗಿದೆ. ವಿವಿಧ ಅಭಿವೃದ್ಧಿಯ ನೆಲೆಗಳನ್ನು ನಾವು ನೋಡುತ್ತಿರುವಾಗ ದಲಿತರ ಪುರೋಭಿವೃದ್ಧಿ ಕೈಬಿಟ್ಟುಹೊದರೆ ಅದು ಅರ್ಥಹೀನ ಪ್ರಗತಿ, ಆದ್ದರಿಂದ ಅಂಬೇಡ್ಕರ್ ವಿಚಾರಧಾರೆಗೆ ವಿಶೇಷವಾದ ಸ್ಥಾನವಿದೆ. ಅಂಬೇಡ್ಕರ್‌ರವರು ದಲಿತ ವರ್ಗದವರನ್ನು ಒಳಗೊಂಡು ಉಳಿದ ಶೋಷಿತ ವರ್ಗಗಳ ವಿಮೋಚನೆಯನ್ನು ಕುರಿತು ನಡೆಸಿದ ಚಿಂತನೆ ಉಪಯುಕ್ತವಾಗಿದೆ. ಮಹಿಳೆಯರು ಕಾರ್ಮಿಕರು ರೈತರು ಎದುರಿಸುತ್ತಿರುವ ಸಮಸ್ಯೆಯ ಜೊತೆಗೆ ದೇಶದ ಗಡಿ ಸಮಸ್ಯೆ, ಭಾಷಾ ಸಮಸ್ಯೆಯನ್ನು ಕುರಿತಂತೆ ಅವರ ಚಿಂತನೆಗಳನ್ನು ಅವಲೋಕಿಸುವುದು ಅಗತ್ಯವಾಗಿದೆ.

2) ಭಾರತದ ರಾಜಕಾರಣಕ್ಕೆ ಅಂಬೇಡ್ಕರ್ ನೀಡಿದ ಕೊಡುಗೆ ಮತ್ತು ತಿರುವು ಬಹು ಮುಖ್ಯವಾದದ್ದು. ಅಸ್ಪೃಶ್ಯತೆಯ ಸಮಸ್ಯೆಯನ್ನು ಮಾನವ ಹಕ್ಕುಗಳ ಉಲ್ಲಂಘನೆಯ ಸಮಸ್ಯೆಯನ್ನಾಗಿ ಅವರು ಗ್ರಹಿಸಿದರು. ಆ ಕಾಲದ ಕಾಂಗ್ರೆಸ್ಸಿಗರಿಗೆ ಅಸ್ಪೃಶ್ಯತೆಯ ಸಮಸ್ಯೆಯ ಅರಿವಿತ್ತಾದರೂ ಅದರ ನಿರ್ಮೂಲನಕ್ಕೆ ಈಗಿನಂತೆಯೇ ಆದ್ಯತೆಯನ್ನು ನೀಡಿರಲಿಲ್ಲ. ಅಂಬೇಡ್ಕರ್ ಈ ಸಮಸ್ಯೆಯನ್ನು ಕೈಗೆತ್ತಿಕೊಂಡದ್ದೇ ದೇಶದ ಹಲವು ಹೋರಾಟಗಳ ಸ್ವರೂಪಗಳನ್ನು ಬದಲಾಯಿಸಲು ಸಾಧ್ಯವಾಯಿತು. ಗಾಂಧೀಜಿಯವರು ಅಸ್ಪೃಶ್ಯರ ವಿಷಯದಲ್ಲಿ ಪ್ರಾರಂಭದಿಂದಲೂ ಅಂತಃಕರಣ ಉಳ್ಳವರಾಗಿದ್ದರೂ ಕೂಡ ಅಂಬೇಡ್ಕರ್ ರವರು ಉಂಟುಮಾಡಿದ ಪ್ರಭಾವದನಂತರ ಹೆಚ್ಚು ಪರಿಣಾಮಕಾರಿಯಾಗಿ ಈ ವಿಷಯದಲ್ಲಿ ಕೆಲಸ ಮಾಡಿದರು.

3) ದಲಿತ ಹೋರಾಟ ವಿಕೃತ ಮನಸ್ಸಿನ ಕೂಗಾಟವಲ್ಲ. ಮೌಲ್ಯಗಳ ಸಾರಾಸಗಟು ನಿರಾಕರಣೆಯೂ ಅಲ್ಲ. ಅದು ಚೂರುಚೂರಾಗಿರುವ ದಲಿತ ವ್ಯಕ್ತಿತ್ವದ ಪುನರ್‌ಸೃಷ್ಟಿ, ಜಾಗೃತಿ ಮತ್ತು ಜವಾಬ್ದಾರಿಯ ಸಮ್ಮಿಲನ,

ದಲಿತ ವರ್ಗದವರ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸುವ ಪ್ರೇರಕಶಕ್ತಿ. ಇದು ಕೇವಲ ಸಂಘರ್ಷವಲ್ಲ, ಪ್ರತಿಯೊಬ್ಬ ದಲಿತನ ಅಂತರಂಗದ ಸಂಘರ್ಷವೂ ಹೌದು.

4) ಈ ಸಹಯೋಗ ಅಗತ್ಯವಾದದ್ದು. ಎಲ್ಲ ಜಾತಿಮತಗಳಲ್ಲಿರುವ ನೊಂದ ಜೀವಿಗಳ ಕಂಬನಿಯನ್ನು ತೊಡೆದುಹಾಕುವುದೇ ದಲಿತ ಚಳವಳಿಯ ಗುರಿ ಹಸಿವು ಅಸ್ಪೃಶ್ಯತೆಯ ಅಪಮಾನದ ಅನುಭವದ ಕಹಿಯಿಂದ ದಲಿತ ವರ್ಗ ಸಮಾಜದ ಒಟ್ಟು ವಿಮೋಚನೆಯನ್ನು ಬಯಸುವುದು ಸಹಜ. ಇದು ಎಲ್ಲ ಶೋಷಿತ ವರ್ಗಗಳ ಐಕ್ಯತೆಯಿಂದ ಮಾತ್ರ ಸಾಧ್ಯ.

5) ಈ ಒಗ್ಗಟ್ಟು ಉಪಯುಕ್ತವಾದದ್ದೇ. ಈ ವರ್ಗಗಳ ಮೂಲಭೂತ ಸಮಸ್ಯೆಯ ಪರಿಹಾರಕ್ಕೆ ಕಾರಣವಾಗಬೇಕು. ಕೇವಲ ರಾಜಕೀಯ ಲಾಭ ಗಳಿಸುವ ತಾತ್ಕಾಲಿಕ ಹೊಂದಾಣಿಕೆಯಾಗಬಾರದು.

(ಇದು ದೂರವಾಣಿಯಿಂದ ಪಡೆದ ಉತ್ತರ)

●

ಶೂದ್ರಕ್ಕೆ ಶುಭಾಶಯಗಳು

ಕಾರ್ಪೊರೇಷನ್ ಬ್ಯಾಂಕ್

ಬೆಂಗಳೂರು

ಶೂದ್ರಕ್ಕೆ ಶುಭಾಶಯಗಳು

ಹೋಟೆಲ್ ಶ್ರೀ

ಹಳೆ ಮದರಾಸು ರಸ್ತೆ, ಅಲಸೂರು, ಬೆಂಗಳೂರು-8.

ಹಾರ್ದಿಕ ಶುಭಾಶಯಗಳು

ಪಂಜಾಬ್ ಕ್ರಾಕರಿ ಹೌಸ್

ನಂ. 55/28, 4ನೇ ಕ್ರಾಸ್, ಲಾಲ್‌ಬಾಗ್ ರೋಡ್, ಬೆಂಗಳೂರು–560 027

ಹಾರ್ದಿಕ ಶುಭಾಶಯಗಳು

ಪಿ. ಸಿ. ಎಚ್. ಮಾರ್ಕೆಟಿಂಗ್ ಸರ್ವಿಸಸ್

ಬೆಂಗಳೂರು

With Best Compliments From :

The Sandur Manganese & Iron Ores Ltd.

(Regd. Office : 'Lohadri Bhavan'
Yeshwanthnagar–583 124)

56, Palace Road, Bangalore–560 052

With Best Compliments From :

Indira Hegde M.A.,

Ph: 35 22 44
(R) 35 36 33

Karavali Traders

Dealers in Sanitary & Building Materials

826, 5th Main,
Vijayanagar,
Bangalore-560 040.

Res. : 872, 4th Cross, 5th Main,
MC Layout, Vijayanagar,
Bangalore-560 040.

With Best Compliments From :

Atul Agencies

Shilwanth Galli, Menasinkai Oni, Hubli-20.

Dealers for :

Jarda, Quiwam, Chewing Tobaco

With Best Compliments From :

Narayan C.

Jayanti Steel, Suragimath Oni,
Belgaumgalli Cross, Hubli.

ಸೂಚನೆ :

ಶೂದ್ರದ ಓದುಗರಲ್ಲಿ ವಿನಂತಿ
ಪ್ರೆಸ್ಸನ್ನು ಕಾರಣಾಂತರಗಳಿಂದ ಸ್ಥಳಾಂತರಿಸಬೇಕಾಯಿತು
ಆದ್ದರಿಂದ ಶೂದ್ರ ತಡವಾಯಿತು ಕ್ಷಮಿಸಿ
ಜೂನ್ ಸಂಚಿಕೆಯೂ ಸಿದ್ಧವಾಗಿದೆ

— ಸಂ.

FNP/KRNJ/72 No. M (2) PRB 211/73/7

SHOODRA Kannada Monthly

ಶೂದ್ರ

DEVU PATTAR
GUTTIPETH,
SHAHAPUR-585223

ಜೂನ್ 1993ರ ಸಂಚಿಕೆಯಲ್ಲಿ :

ಸುಬ್ಬಣ್ಣ ರಂಗನಾಥ ಎಕ್ಕುಂಡಿ–ಸರಿತಾ ಅನಂತ ಕುಲಕರ್ಣಿ–ನರೇಶ ಮೆಹತಾ ಮುಕುಂದ ಜೋಷಿ – ನಿರ್ಮಲಾ ವಿನಾಯಕ್ – ಸತ್ಯಕಾಮ – ವೈದೇಹಿ ಸಿದ್ದು ಬಿ. ಯಾಪಲಪರವಿ – ಮಹಾದೇವ ಶಂಕನಪುರ – ಆರ್. ನಿರ್ಮಲ ಎಚ್.ಎಸ್. ಭೀಮನಗೌಡರ–ಬಿಳಿಮಲೆ ರಾಮದಾಸ್–ಮಮತಾ ಜಿ. ಸಾಗರ ಕಪ್ಪಣ್ಣ – ಶ್ರೀನಿವಾಸ ಜೋಕಟ್ಟೆ – ಕನಸಿಗೊಂದು ಕಣ್ಣು – ಪುಸ್ತಕ ವಿಮರ್ಶೆ ಈಗ ಕಂಡ ಪುಸ್ತಕಗಳು – ಒಳನೋಟ – ಸುದ್ದಿಯ ಮುಂದೆ – ಇತ್ಯಾದಿ.

M. Srinivas, Editor for Shoodra, Printed at :
Pallavi Printers, 261/3, Muniyappa Building
Jaraganahalli, Kanakapura Road, Bangalore–560 078